8 ಭಾಷಗಳಲ್ಲಿ 200,000 ಕ್ಕಿಂತ ಹಚ್ಚು ಪ್ರತಿಗಳು ಅಚ್ಚಾಗಿವೆ



# ವಿಶ್ವಾಸಕ್ಕಾಗಿ ಆಹಾರ

ಬೈಬಲಿನ ಒಂದು ಕೈಪಿಡಿ

ರಿಚರ್ಡ್ ಎ. ಬೆನ್ನೆಟ್ಟ ಅವರು ವೈಯಕ್ತಿಕವಾಗಿ ಸಭೆಗಳಲ್ಲಿ, ಸಮ್ಮೇಳನ ಗಳಲ್ಲಿ ಮತ್ತು ಬೈಬಲ್ ಕಾಲೇಜುಗಳಲ್ಲಿ, ಮುಖ್ಯವಾಗಿ ಅಮೇರಿಕಾ, ಕ್ಯಾನಡಾ, ಯುರೋಪ ಮತ್ತು ಆಫ್ರಿಕಾಗಳಲ್ಲಿ ನಲವತ್ತೈದು ವರ್ಷಗಳಿಗಿಂತಲೂ ಹೆಚ್ಚು ಸಮಯ ಸೇವೆ ಮಾಡಿರುವರು. ಅವುಗಳ ಇಪ್ಪತ್ತು ವರ್ಷಗಳಲ್ಲಿ ಅವರ ಬೈಬಲ್ ಬೋಧನೆಯು ಕ್ರಮಪ್ರಕಾರ ವಾಗಿ ಐದು ಖಂಡಗಳಲ್ಲಿ Trans World Radio ಮತ್ತು Far East Broadcasting Corporation ಮಿಶನರಿ ರೇಡಿಯೊ ಸ್ಟೇಶನ್ನಗಳಿಂದ ಬಿತ್ತರಿಸಲ್ಪಟ್ಟಿತು. ಯೋಚನಾ ಪರ ಸೇವೆಗಳ ಮುಖಾಂತರ, ರಿಚರ್ಡ ಮತ್ತು ಅವರ ಪತ್ನಿ ಡೊರೊತಿಯವರು, ಉತ್ಥಾನವಾದ ಕರ್ತನಾದ ಯೇಸು ಕ್ರಿಸ್ತನನ್ನು ತಿಳಿಯಲು ಬಂದ ಜನರಿಗೆ ಹೆಚ್ಚು ನಿಕಟವಾದ ರೀತಿಯಲ್ಲಿ ಸಹಾಯ ಮಾಡಲು ಆಸಕ್ತಿಯಿಂದ ಅಪೇಕ್ಷಿಸುತ್ತಾರೆ.

*ಪರಮಾವಧಿ ಲಾಭಕ್ಕಾಗಿ ಆತ್ಮಿಕ ಆಹಾರವು ಮೆಚ್ಚಿ ಕೊಳ್ಳಲ್ಪಡ ತಕ್ಕದ್ದು, ಮೀಸಲಾಗಿಡಲ್ಪಡತ್ತದ್ದು ಮತ್ತು ಜೀರ್ಣಿಸಿಕೊಳ್ಳಲ್ಪಡತಕ್ಕದ್ದು. ಈ ವಿಧಾನವು ಹೇಗೆ ನಡೆಯುತ್ತದೆಂಬುದನ್ನು ಡಾ// ಬೆನ್ನೆಟ್ಟ ತೋರಿಸುತ್ತಾರೆ.*

Dr. Stephen F. Olford

ISBN-13: 978-81-7362-383-7
ISBN-10: 81-7362-383-X
9 788173 623837 00350

Authentic

Food for faith *(Kannada)*

ವಿಶ್ವಾಸಕ್ಕಾಗಿ ಆಹಾರ

ರಿಚರ್ಡ್ ಎ. ಬೆನ್ನೆಟ್ಟ

# ವಿಶ್ವಾಸಕ್ಕಾಗಿ ಆಹಾರ



ರಿಚರ್ಡ್ ಎ. ಬೆನ್ನೆಟ್ಟ

## ಆರಾಧನೆ :

ನಿಜವಾದ ಆರಾಧನೆಯು ದೇವರ ವಾಕ್ಯದಲ್ಲಿ ಪ್ರಕಟಿಸಲ್ಪಟ್ಟಂತೆ ಪರಮಶ್ರೇಷ್ಠ ಸಜೀವಿಯಾದ ಕರ್ತನಾದ ಯೇಸು ಕ್ರಿಸ್ತನ ಮೇಲೆ ಮನಸ್ಸು ಮತ್ತು ಹೃದಯವನ್ನು ದೀನತೆಯಿಂದ ಕೇಂದ್ರಿಕರಿಸುವುದಾಗಿದೆ. ಅದು ಸಂಭವಿಸುವಾಗಲೆಲ್ಲಾ, ಆತನ ಮುಂದೆ ಸಮರ್ಪಣೆಯಲ್ಲಿಯೂ ಸ್ತೋತ್ರದಲ್ಲಿಯೂ ಆಂತರಿಕ ಅಡ್ಡ ಬೀಳುವಿಕೆ ಇರುವುದು.

## ಸಾಕ್ಷಿ :

ಪರಿಣಾಮಕಾರಿಯಾದ ಸುವಾರ್ತಾ ಸೇವೆಯು ಹೊರ ಸೂಸುವದರಿಂದ - ಆತ್ಮನಿಂದ ತುಂಬಿಸಲ್ಪಟ್ಟ ವಿಶ್ವಾಸಿಯ ಜೀವನದಿಂದ ಪವಿತ್ರಾತ್ಮನ ಹೊರ ಸೂಸುವಿಕೆಯಿಂದ, ಹೀಗೆ ಇತರರಿಗೆ ಆಂತರ್ಯದಲ್ಲಿರುವ ಕ್ರಿಸ್ತನ ವಾಸ್ತವಿಕತೆಯನ್ನು ಪ್ರಕಟಿಸುವದರಿಂದ ಪರಿಣಾಮ ಗೊಳ್ಳುವುದು.

## ಯುದ್ಧ :

ದೇವರ ವಾಕ್ಯಕ್ಕೆ ಅನುಗುಣವಾಗಿ ನೀವು ಪ್ರಾರ್ಥಿಸುವಾಗ, ದೇವರ ಚಿತ್ತಕ್ಕೆ ಅನುಗುಣವಾಗಿ ನೀವು ಪ್ರಾರ್ಥಿಸುವಿರಿ ಮತ್ತು ನಿಮಗಾಗಿ ದೇವರ ಚಿತ್ತವು. ನೀವು ಸೈತಾನನ ಮೇಲೆ ಮತ್ತು ನಿಮ್ಮ ಆತ್ಮಿಕ ಜೀವನದ ಹಾದಿ ತಪ್ಪಿಸುವದರಲ್ಲಿ ಅವನ ಪ್ರಯತ್ನದ ಮೇಲೆ ಜಯವನ್ನು ತಿಳಿಯುವುದು ಆಗಿದೆ.

# ವಿಶ್ವಾಸಕ್ಕಾಗಿ ಆಹಾರ

# ವಿಶ್ವಾಸಕ್ಕಾಗಿ ಆಹಾರ

## ಬೈಬಲಿನ ಒಂದು ಕೈಪಿಡಿ

ರಿಚರ್ಡ್ ಎ. ಬೆನ್ನೆಟ್ಟ

ಅನುವಾದಕರು : ಜಯವಂತ ಎಮ್. ಜೋಗುಳ

Authentic

HYDERABAD • COLORADO SPRINGS • LONDON

*Viswaasakkagi Aahaara*
(Kannada)

**Food for Faith**
by Richard A.Bennett
Copyright © 1994, 1998 by Cross Currents Intl. Ministries

First Kannada edition 2002
Revised edition 2007
ISBN-13: 978-81-7362-383-7
ISBN-10: 81-7362-383-X

Published by Authentic India

| | |
|---|---|
| India | P. O. Box 2190, Secunderabad 500 003, Andhra Pradesh.<br>www.authenticindia.in |
| UK | 9 Holdom Avenue, Bletchley, Milton Keynes, MK1 1QR, UK<br>www.authenticmedia.co.uk |
| USA | 1820 Jet Stream Drive, Colorado Springs, CO 80921, USA.<br>www.authenticbooks.com |

All rights reserved.
No part of this publication may be reproduced in any form or by any means, electronic, or mechanical, including photocopying, recording, or any information storage and retrieval system, without permission in writing from the publisher.

The sociological, political, doctrinal views of the author may not necessarily be those of the publisher.

Authentic Books is an imprint of Authentic India, the publishing division of STL OM Books India.

The Gospel through Cross Currents International Ministries ದ ಸೇವೆಯಲ್ಲಿ ನನ್ನ ಪತ್ನಿಯೊಂದಿಗೂ ಮತ್ತು ನನ್ನೊಂದಿಗೂ ನಂಬಿಗಸ್ತಿಕೆ ಯಿಂದ ಸೇವೆ ಮಾಡಿದ ಪ್ರತಿಯೊಬ್ಬ ಜೊತೆ ಕೆಲಸದವರಿಗೆ ಈ ಪುಸ್ತಕವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಪ್ರೀತಿ ಪೂರ್ವಕವಾಗಿ ಸಮರ್ಪಿಸಲ್ಪಟ್ಟಿದೆ.

Food for Faith ಪುಸ್ತಕವು ಈಗಾಗಲೇ, Cross Currents International Ministries ಮತ್ತು International Prison Ministry ಯ ಮಿಶನರಿ ವಿಸ್ತರಣೆ ಯಾಗಿ ಇತರ ಭಾಷೆಗಳಲ್ಲಿ ಅಚ್ಚಾಗಿರುತ್ತದೆ. ಇನ್ನೂ ಹೆಚ್ಚಿನ ಮಿಶನರಿ ಭಾಷಾಂತರಗಳೂ ಅಚ್ಚುಹಾಕಿಸುವಿಕೆಗಳೂ ಆಗ ಬೇಕಾಗಿರುತ್ತದೆ.

# ಅನುಕ್ರಮಣಿಕೆ


| | | |
|---|---|---|
| | **ಮುನ್ನುಡಿ** | **11** |
| | **ಪ್ರಸ್ತಾವನೆ** | **13** |
| **1.** | **ಅನುದಿನದ ಆನಂದ** | **21** |
| **2.** | **ತಲೆ ಮತ್ತು ಹೃದಯ** | **31** |
| | ತಲೆ | 34 |
| | ಹೃದಯ | 38 |
| **3.** | **ಪ್ರಾರ್ಥನಾ ಪೂರ್ವಕವಾದ ಸಿದ್ಧತೆ** | **47** |
| | ನಿನ್ನ ಮೊಣಕಾಲುಗಳನ್ನೂರು | 50 |
| | ನಿನ್ನ ಹೃದಯವನ್ನು ತೆರೆ | 53 |
| | ನನ್ನ ಪಾರಲೌಕಿಕ ದೃಷ್ಟಿಕೋನ | 67 |
| | ನನ್ನ ಭೂಲೋಕದ ಸಮಸ್ಯೆ | 73 |
| **4.** | **ಒಂದುಗೂಡಿ ಬರುವ ಸಮಯ** | **83** |
| | ವಿಧೇಯತೆಯ ಒಂದು ಕೃತ್ಯ | 86 |
| | ವಿಶ್ವಾಸದ ಪ್ರತ್ಯುತ್ತರ | 89 |
| | ಆರಾಧನೆಯಲ್ಲಿ ವಾಸ್ತವಿಕತೆ | 94 |
| | ಸೈತಾನನಿಗೆ ಎಚ್ಚರಿಕೆಯಿಂದಿರುವುದು | 96 |
| **5.** | **ವಿಶ್ವಾಸದ ಸಂಗತಿ** | **107** |
| **6.** | **ಹೇಳುವದಕ್ಕೆ ಸಮಯ** | **121** |
| | ಸುವಾರ್ತೆಯ ಹೊರಸೂಸುವಿಕೆ. | 126 |
| **7.** | **ಫಲ ಇಲ್ಲವೇ ಬೆಂಕಿ** | **135** |
| | ಬಿಳಿ ಪುಟಗಳು | 138 |
| | ಹಾಳು ಮಾಡಲ್ಪಟ್ಟ ವರ್ಷಗಳು | 140 |
| | ನಿತ್ಯವಾದ ಬೆಳಕು | 142 |

| | | |
|---|---|---|
| **8.** | **ಬಂದು, ಊಟ ಮಾಡು** | **145** |
| | **ಪುರವಣಿಗಳು** | **164** |
| | ಎ. ಬೈಬಲ್ ಅಧ್ಯಯನ | 164 |
| | ಬಿ. ಒಂದುಗೂಡಿಬರುವ ಸಮಯ | 165 |
| | ಸಿ. ದೈನಂದಿನ ಪ್ರಾರ್ಥನಾ ಮಾರ್ಗದರ್ಶಿ | 166 |

# ಮುನ್ನುಡಿ

ಡಾ II ರಿಚರ್ಡ್ ಎ. ಬೆನ್ನೆಟ್ಟ ಅವರ ನೂತನ ಪುಸ್ತಕ, Food for Faith ಎಂಬುದನ್ನು ಪ್ರಶಂಸಿಸುವುದು ಒಂದು ಸುಯೋಗವಾಗಿದೆ. ಅವರ ಮೊದಲಿನ ಪುಸ್ತಕ Your Quest for God ಎಂಬುದಕ್ಕೆ ಇದು ಯೋಗ್ಯವಾದ ಮುಂದಿನ ಕೃತಿಯಾಗಿದೆ. ಮನುಷ್ಯನು ನಂಬಿಕೆಯಿಲ್ಲದೆ ದೇವರ ಬಳಿಗೆ ಬರಲಾರನು (ಇಬ್ರಿಯ 11:6) ಮತ್ತು ನಂಬಿಕೆಯಿಲ್ಲದೇ ಅವನು ದೇವರಿಗಾಗಿ ಜೀವಿಸಿರಲಾರನು. (ರೋಮಾಪುರ 1:17) ಇದು ಸಾಧ್ಯವಾಗಬೇಕಾದರೆ, ವಿಶ್ವಾಸವು ಪ್ರಾರಂಭಿಕವಾಗಿಯೂ (ರೋಮಾಪುರ 10:17) ಮತ್ತು ಸತತವಾಗಿಯೂ (1 ಪೇತ್ರ 2:1-3 ; ಇಬ್ರಿಯ 5:12-14) ಉಣ್ಣಿಸಲ್ಪಡಬೇಕು. ''ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು'' (ಮತ್ತಾಯ 4:4) ಎಂದು ಕರ್ತನಾದ ಯೇಸು ಹೇಳಿದಾಗ ಆತನು ಈ ವಿಷಯವನ್ನು ಅಂತ್ಯಗೊಳಿಸಿದನು. ''ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು, ನಿನ್ನ ನುಡಿಗಳು

ನನಗೆ ಹರ್ಷವೂ ಹೃದಯಾನಂದವೂ ಆದವು ; ಸೇನಾಧೀಶ್ವರನಾದ ದೇವರೇ, ಯೆಹೋವನೇ, ನಾನು ನಿನ್ನ ಹೆಸರಿನವನಲ್ಲವೇ :'' (ಯೆರಮೀಯ 15:16) ಎಂದು ಯೆರಮೀಯನು ಬರೆದಾಗ ಈ ತತ್ವವು ಮೊದಲೇ ದೃಢಪಡಿಸಲ್ಪಟ್ಟಿತು.

ಪರಿಮಾವಧಿ ಲಾಭಕ್ಕಾಗಿ, ಆತ್ಮಿಕ ಆಹಾರವು ಮೆಚ್ಚಿಕೊಳ್ಳಲ್ಪಡತಕ್ಕದ್ದು, ಮೀಸಲಾಗಿಡಲ್ಪಡತಕ್ಕದ್ದು ಆಮೇಲೆ ಜೀರ್ಣಿಸಿಕೊಳ್ಳಲ್ಪಡತಕ್ಕದ್ದು, ದೇವರೊಂದಿಗೆ ''ಒಂದಾಗಿ ಕೂಡಿ ಬರುವಿಕೆಯ'' ನಮ್ಮ ಸಮಯಗಳಲ್ಲಿ ಈ ವಿಧಾನವು ಹೇಗೆ ತೆಗೆದುಕೊಳ್ಳಲ್ಪಡುತ್ತದೆ ಎಂಬುದನ್ನು ಡಾ. ಬೆನ್ನೆಟ್ಟ ನಮಗೆ ತೋರಿಸುತ್ತಾರೆ. ಅಧ್ಯಾಯ 8, ಪ್ರತ್ಯೇಕವಾಗಿ, ಈ ವಿಷಯದಲ್ಲಿ ಅತೀ ಹೆಚ್ಚು ಸಹಾಯಕವಾದದ್ದಾಗಿದೆ.

ಪ್ರಾಪಂಚಿಕ ಮಾನವತಾ ಸಿದ್ಧಾಂತದ ದಿನದಲ್ಲಿ, ಸಾಮಾನ್ಯ ಕ್ರೈಸ್ತನು ಆಂತರ್ಯದಲ್ಲಿ ವಾಸಿಸುವ ಕ್ರಿಸ್ತನ ಮೇಲೆ ಸಂಪೂರ್ಣ **ನಂಬಿಕೆಯ ಅವಲಂಭನೆಯಿಲ್ಲದೆ** ದೇವರಿಗಾಗಿ ಅವನು ಜೀವಿಸಬಹುದು ಎಂದು ಯೋಚಿಸಲು ಒತ್ತಾಯಿಸಲ್ಪಡುತ್ತಿರುವಾಗ (ಗಲಾತ್ಯ 2:20), Food for Faith ದಂಥ ಪುಸ್ತಕವು ನಮ್ಮೆಲ್ಲರಿಗೆ ಪರಲೋಕದಿಂದ ಒಂದು ಸಂದೇಶವಾಗಿದೆ. ಈ ಪುಸ್ತಕವು ತನ್ನ ಸೇವೆಯಲ್ಲಿ ಮುಂದೆ ಹೋಗುತ್ತಿರುವಂತೆ ಈ ಪುಸ್ತಕದ ಸೇವೆಯನ್ನು ದೇವರು ಆಶೀರ್ವದಿಸಲಿ.

**ಡಾ ॥ ಸ್ಟೀಫನ್ ಎಫ್. ಓಲ್‌ಫೋರ್ಡ್**

ಮೆಂಫಿಸ್, ಟೆನೆಸ್ಸೀ

# ಪ್ರಸ್ತಾವನೆ

Food for Faith (ವಿಶ್ವಾಸಕ್ಕಾಗಿ ಆಹಾರ) ಎಂಬುದು, ನನ್ನ ಪತ್ನಿ ಮತ್ತು ನಾನು, ನಮ್ಮ ಇಪ್ಪತ್ತೈದನೆಯ ವಿವಾಹದ ವಾರ್ಷಿಕೋತ್ಸವವನ್ನು ಸಮೀಪಿಸಿದಾಗ ನಾನು ಬರೆದ Your Quest for God (ದೇವರಿಗಾಗಿ ನಿನ್ನ ಅನ್ವೇಷಣೆ) ಎಂಬ ಪುಸ್ತಕಕ್ಕೆ ನಿಜವಾದ ಸಂಗಾತಿಯಾಗಿದೆ. ಆ ಸಮಯದಲ್ಲಿ, ಸುವಾರ್ತೆಯ ಸಂದೇಶದ ಈ ಮೊದಲಿನ ಕೊಡುಗೆಯನ್ನು ಬರೆಯುವದರಿಂದ, ಅಚ್ಚು ಹಾಕಿಸುವದರಿಂದ ಮತ್ತು ಪ್ರಕಟಿಸುವದರಿಂದ ದೇವರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಯಸಿದೆವು.

Your Quest for God ಪ್ರಥಮ ಮುದ್ರಣವು ಇಪ್ಪತ್ತೈದು ಸಾವಿರ ಪ್ರತಿಗಳು. ಅಂದಿನಿಂದ, ದೇವರು ತನಗೆ ನಮ್ಮ ಸರಳವಾದ ಪ್ರೀತಿಯ ಕೊಡುಗೆಯನ್ನು ಬಹಳ ಗಮನಾರ್ಹದ ರೀತಿಯಲ್ಲಿ ಆಶೀರ್ವದಿಸುವುದು ಯೋಗ್ಯವೆಂದು ನೋಡಿದ್ದಾನೆ.

ಇಂದು, ಸುಮಾರು ಮೂರು ಮಿಲಿಯ ಪ್ರತಿಗಳು ಜಗತ್ತಿನಲ್ಲೆಲ್ಲಾ ಐವತ್ತಕ್ಕಿಂತಲೂ ಹೆಚ್ಚು ಭಾಷೆಗಳಲ್ಲಿ ವಿವರಿಸಲ್ಪಟ್ಟಿವೆ, ಮತ್ತು ಈ ಪುಸ್ತಕಕ್ಕಾಗಿ ಬೇಡಿಕೆಯು ನಾಟಕೀಯವಾಗಿ ಬೆಳೆಯುತ್ತಲೇ ಇದೆ. ನಮ್ಮ

ಅತೀ ದೊಡ್ಡ ಆನಂದಗಳಲ್ಲಿ ಈ ಪುಸ್ತಕವನ್ನು ಓದಿದ್ದರ ಪರಿಣಾಮವಾಗಿ ಜಗತ್ತಿನ ಅನೇಕ ಭಾಗಗಳಲ್ಲಿ ಹೊಸದಾಗಿ ಹುಟ್ಟಿದ ಜನರ ಬಗ್ಗೆ ಕೇಳುವುದಾಗಿದೆ.

ಅನಂತರದಲ್ಲಿ ನಾವು ನಮ್ಮ ಮೂವತ್ತೈದನೆಯ ವಿವಾಹದ ವಾರ್ಷಿಕೋತ್ಸವವನ್ನು ಆಚರಿಸಲಿಕ್ಕಿದ್ದೆವು. ಮಧ್ಯದಲ್ಲಿಯ ವರ್ಷಗಳಲ್ಲಿ ಸುವಾರ್ತೆಗೆ ಬಾಗಿಲುಗಳು ತೆರೆಯಲ್ಪಟ್ಟವು. ಹತ್ತು ವರ್ಷಗಳ ಮೊದಲು Your Quest for God ಎಂಬುದರ ವಿತರಣೆಯ ಬಗ್ಗೆ ನಾವು ಈ ರೀತಿಯಲ್ಲಿ ಯೋಚಿಸಲೇ ಇಲ್ಲ. ಅದರ ಪರಿಣಾಮವಾಗಿ, ನಮ್ಮ ಪರಲೋಕದ ತಂದೆಗೆ ನಮ್ಮ ಬೆಳೆಯುತ್ತಿರುವ ಪ್ರೀತಿಯನ್ನು ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಲು, Food for Faith ಎಂಬುದನ್ನು ಅಚ್ಚು ಹಾಕಿಸಿ, ಪ್ರಕಟಿಸುವದನ್ನು ಬಿಟ್ಟರೆ ಬೇರೆ ಯಾವ ಉತ್ತಮ ಮಾರ್ಗವನ್ನು ನಾವು ಯೋಚಿಸಲಿಲ್ಲ. Your Quest for God ಪುಸ್ತಕವನ್ನು ದೇವರು ಆಶೀರ್ವದಿಸಿದ ರೀತಿಯಲ್ಲಿಯೇ, ಆತನು ಈ ಎರಡನೆಯ ಪುಸ್ತಕವನ್ನು, ಇಲ್ಲಿಯೂ ಹಾಗೂ ಜಗತ್ತಿನಲ್ಲಿಯ ದೇಶಗಳಲ್ಲಿಯೂ, ಕ್ರಿಸ್ತನಲ್ಲಿ ನೂತನ ಜೀವನ ಕಂಡು ಕೊಳ್ಳುತ್ತಿರುವ ಅನೇಕ ಜನರಿಗೆ ಸಹಾಯ ಮಾಡಲು ಆತನು ಉಪಯೋಗಿಸಲಿ.

ಹೀಗಿದ್ದರೂ, Food for Faith ಪುಸ್ತಕವು Your Quest for God ಪುಸ್ತಕಕ್ಕೆ ಕೇವಲ ಉತ್ತರ ಭಾಗವಾಗಿರುವದಿಲ್ಲ. ಇದು ಕರ್ತನೊಂದಿಗೆ ಇನ್ನೂ ಹೆಚ್ಚು ನಿಕಟ ಸಂಬಂಧವಿರಲು ಬಯಸುವ ವಿಶ್ವಾಸಿಗಳಿಗೆ ಅಗತ್ಯವಾದ ಸಹಾಯಕವಾಗ ಬಹುದೆಂದು ಡೊರೊತಿ ಮತ್ತು ನಾನು ನಂಬುತ್ತೇವೆ. ಇದನ್ನು ಓದುವ ಪ್ರತಿಯೊಬ್ಬನು ತನ್ನ ಕ್ರೈಸ್ತ ಜೀವಿತದಲ್ಲಿ ವಿಶೇಷ ಸಹಾಯವನ್ನು ಪ್ರೋತ್ಸಾಹವನ್ನೂ ಕಂಡುಕೊಳ್ಳಲಿ ಎಂಬ ಪ್ರಾರ್ಥನೆಯೊಂದಿಗೆ ಇದು ಬರೆಯಲ್ಪಟ್ಟಿದೆ.

**Food for Faith ಪುಸ್ತಕವು ಸಾಧಾರಣ ರೀತಿಯಲ್ಲಿ ಓದುವ ಉದ್ದೇಶಕ್ಕಾಗಿ ಇರುವದಿಲ್ಲ ; ಒಮ್ಮೆ ಓದಿ ಪಕ್ಕಕ್ಕೆ ಇಟ್ಟು ಬಿಡುವ ಉದ್ದೇಶಕ್ಕಾಗಿಯೂ ಬರೆಯಲ್ಪಟ್ಟಿರುವದಿಲ್ಲ. ಗಮನವಿಟ್ಟು ಓದಿದ ತರುವಾಯ ಉಲ್ಲೇಖ ಕೈಪಿಡಿಯಂತೆ ಕೈಗೆಟಕುವಂತೆ ಇಡಬೇಕು. ಈ ಪುಸ್ತಕದಲ್ಲಿಯ ತತ್ವಗಳು ನಂಬಿಗಸ್ಥಿಕೆಯಿಂದ ನಮ್ಮ ಜೀವಿತಗಳಿಗೆ ಅನ್ವಯಿಸಲ್ಪಡುವಂತೆ, ದೇವರೊಂದಿಗೆ ಹೆಚ್ಚು ಸ್ಥಿರವಾದ ಮತ್ತು ನಿಕಟವಾದ ನಡಿಗೆಯನ್ನು ಬೆಳೆಸಿಕೊಳ್ಳುವದನ್ನು ನಾವು ಕಲಿತುಕೊಳ್ಳುತ್ತೇವೆ.**

ನಮ್ಮಲ್ಲಿ ಅನೇಕರು ಆಗಾಗ ವೈದ್ಯಕೀಯ ''ತಪಾಸಣೆ'' ಇರಬೇಕೆಂದು ಯೋಚಿಸುತ್ತೇವೆ. ಇದನ್ನು ಮಾಡಲಿಕ್ಕೆ ಹಣವನ್ನು ಅಲ್ಪ ಸಮಯವನ್ನೂ ವಿನಿಯೋಗಿಸುತ್ತೇವೆ. ಯಾವುದೇ ದೈಹಿಕ ಸಮಸ್ಯೆಯನ್ನು ಸರಿಯಾಗಿ ಗುರುತಿಸುವುದೂ ಆನಂತರ ಅದಕ್ಕೆ ಚಿಕಿತ್ಸೆ ಪಡೆಯುವುದೂ ವೈದ್ಯರು ಕೇಳುವ ಪ್ರಾರಂಭದ ಪ್ರಶ್ನೆಗಳ ಮೇಲೆ ಅವಲಂಭಿಸಿರುತ್ತದೆ. ಕ್ರೈಸ್ತರಿಗೆ ಕಾಲಕಾಲಕ್ಕೆ ಆತ್ಮಿಕ ''ತಪಾಸಣೆಯೂ'' ಇರುವುದು ಬುದ್ಧಿವಂತಿಕೆಯದಾಗಿರುತ್ತದೆ. ದೇವರೊಂದಿಗೆ ಏಕಾಂಗಿಗಳಾಗಿರಲು ಪ್ರತ್ಯೇಕವಾಗಿರುವದಕ್ಕೆ ಯತಾರ್ಥವಾದ ಪ್ರಾಮಾಣಿಕತೆಯೂ ಸಮಯವನ್ನು ತೆಗೆದಿಡುವುದೂ ಅಗತ್ಯವಾಗಿರುತ್ತದೆ! ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ, ನಮ್ಮ ಸ್ವಂತ ವೈಯಕ್ತಿಕ ''ಆತ್ಮಿಕ ತಪಾಸಣೆಗಾಗಿ'' ಕೆಲವು ಸಹಾಯಕರವಾದ ಪ್ರಶ್ನೆಗಳು ಸೂಚಿಸಲ್ಪಟ್ಟಿವೆ. ಈ ಪ್ರಶ್ನೆಗಳಲ್ಲಿ ಕೆಲವು ನಿಮಗೆ ಹಿತಕರವಾಗಿ ಭಾವಿಸುವಂತೆ ಮಾಡಲಿಕ್ಕಿಲ್ಲ. ದೈಹಿಕ ತಪಾಸಣೆಯಲ್ಲಿ ಮುಟ್ಟಲು ಯಾವ ಸ್ಥಳಗಳು ಬಹಳ ನೋವಿನಿಂದ ತುಂಬಿರುವವೋ ಅವು ಸಾಮಾನ್ಯವಾಗಿ ಸಮಸ್ಯೆಯಿರುವ ಸ್ಥಳಗಳಾಗಿರುತ್ತವೆ.

ಈ ಪುಸ್ತಕವನ್ನು ಬರೆಯುವದರಲ್ಲಿ, ನನ್ನ ಸ್ನೇಹಿತರಾದ, ದಿವಂಗತ ಡಾ. ಜೆ. ಎಡ್ವಿನ್ ಓರ್ರ ಅವರು ಹೇಳಿದ ಒಂದು ಘಟನೆ ನನ್ನ ನೆನಪಿಗೆ ಬರುತ್ತದೆ, ತಮ್ಮೊಂದಿಗೆ ಹಾಗೂ ಇತರ ಕ್ರೈಸ್ತ ನಾಯಕರರೊಂದಿಗೆ ಒಂದು ಮಹತ್ವದ ಕೂಟದಲ್ಲಿ ಭಾಗವಹಿಸಲು ಒಬ್ಬ ಪ್ರಸಿದ್ಧ ಭಾಷಣಕಾರನು ಆಮಂತ್ರಿಸಲ್ಪಟ್ಟನು. ಆ ಕೂಟವು ಪ್ರತ್ಯೇಕವಾಗಿ ಪರಾರ್ಥ ಪ್ರಾರ್ಥನೆಯ ಉದ್ದೇಶಕ್ಕಾಗಿ ಮಹತ್ವದ ರಾಷ್ಟ್ರೀಯ ಕೂಟವಾಗಿತ್ತು. ಎಡ್ವಿನ್ ಅವರು ಆ ಭಾಷಣಕಾರನ ಹೆಸರು ಹೇಳಲಿಲ್ಲ. ಆ ಭಾಷಣಕಾರನು ನಯವಾಗಿ ಆಮಂತ್ರಣವನ್ನು ತಿರಸ್ಕರಿಸಿದನು. ಪ್ರಾರ್ಥನಾ ಕೂಟಗಳಿಗೆ ಬರಲಾಗದಷ್ಟು ಕಾರ್ಯ ನಿರತನಾಗಿದ್ದೇನೆಂದು ಹೇಳಿದನು. ಅದೇ ಸಮಯದಲ್ಲಿ ತನ್ನ ನಿರಾಕರಣೆಯ ಪತ್ರದೊಂದಿಗೆ, ಪ್ರಾರ್ಥನೆಯ ಬಗ್ಗೆ ತನ್ನಲ್ಲಿ ಒಂದು ಬಹಳ ಉತ್ತಮವಾದ ಸಂದೇಶವಿದೆ ಮತ್ತು ಮುಂದಿನ ಅಂಥ ಕೂಟದಲ್ಲಿ ಬಂದು ಅದನ್ನು ಪ್ರಸಂಗಿಸಲು ತನಗೆ ಸಂತೋಷವಿದೆಯೆಂದು ಸೂಚಿಸಿ ಬರೆದಿದ್ದನು. ಇದನ್ನು ಎಡ್ವಿನ್ ಅವರು ನನಗೆ ಹೇಳಿದರು. ನಿಜವಾಗಿ ಪ್ರಾರ್ಥಿಸುವುದಕ್ಕಿಂತ ಪ್ರಾರ್ಥನೆಯ ಬಗ್ಗೆ ಬರೆಯುವುದು ಇಲ್ಲವೇ ಪ್ರಸಂಗಿಸುವುದು ಎಷ್ಟು ಸುಲಭ ಎಂದು ನಾನು ಅರಿತು ಕೊಂಡೆನು. ಆದುದರಿಂದ ನಾನು ಒಬ್ಬ ತಜ್ಞನಂತೆ ಬರೆಯುವದಿಲ್ಲ, ಆದರೆ ಹಸಿದ ಜನರಿಗೆ ಅವರು ಎಲ್ಲಿ ಆಹಾರವನ್ನು ಕಂಡುಕೊಳ್ಳಬಹುದು ಎಂದು ಹೇಳುವ ಹಸಿದ ವ್ಯಕ್ತಿಯಂತೆ ನಾನು ಬರೆಯುತ್ತಿದ್ದೇನೆ.

Food for Faithನ್ನು ನಾನು ಬರೆಯುವದರಲ್ಲಿ ನನ್ನ ಪತ್ನಿ ಡೊರೊತಿ ಬಹಳವಾಗಿ ನನ್ನನ್ನು ಪ್ರೋತ್ಸಾಹಿಸಿದವಳು ಮಾತ್ರವೇ ಆಗಿರದೇ, ಹೆಚ್ಚಾದ ಮಹತ್ವದೊಂದಿಗೆ ಸತತವಾಗಿ ದೇವರೊಂದಿಗಿನ ನನ್ನ

ಏಕಾಂತ ಸಮಯವನ್ನು ಕಾಪಾಡಿದಳು ಮತ್ತು ಪ್ರೋತ್ಸಾಹಿಸಿದಳು. ನಾನು ಡೊರೊತಿಯನ್ನು ಸಂದರ್ಶಿಸುವ ಮೊದಲು, ನಾನೂ ಸಹ ಪ್ರಾರ್ಥಿಸಿದ, ಸಿ.ಟಿ. ಸ್ಟಡ್ ಅವರ ಪ್ರಾರ್ಥನೆಗಳನ್ನು ಓದಿದ್ದನ್ನು ಸ್ಪಷ್ಟವಾಗಿ ಜ್ಞಾಪಿಸಿಕೊಳ್ಳುತ್ತೇನೆ. ಅದು ಒಂದು ರೀತಿಯಲ್ಲಿ ಹೀಗಿತ್ತು : ''ಕರ್ತನೇ, ನಿನ್ನಲ್ಲಿ ನನಗಾಗಿ ಒಬ್ಬ ಹೆಂಡತಿಯಿದ್ದರೆ, ನಾನು ಬಿದ್ದು ಹೋಗಲು ಶೋಧಿಸಲ್ಪಡುವಾಗ ಆಕೆಯು ನನ್ನನ್ನು ಚುಚ್ಚುವ ಕಾದು ಕೆಂಪಾದ ಚುಚ್ಚುಗದಂತೆ ಇರುವವಳಾಗಿರಲಿ'' ಅಂಥ ಹೆಂಡತಿಯೊಂದಿಗೆ ವಿವಾಹಿತನಾಗಿರುವುದು ಎಂಥಾ ಭಾಗ್ಯವಲ್ಲವೇ ! ದೇವರಿಗೆ ಸ್ತೋತ್ರವಾಗಲಿ !

ಕ್ರಿಸ್ತನಲ್ಲಿ ನನ್ನ ತಂದೆಯವರಾದ ಡಾ। ಸ್ಟೀಫನ್ ಓಲ್ಫೋರ್ಡ್ ಅವರು ನನ್ನನ್ನು ರಕ್ಷಕನ ಬಳಿಗೆ ನಡಿಸಿದ್ದು ಈಗ ಐವತ್ತಕ್ಕಿಂತಲೂ ಹೆಚ್ಚು ವರ್ಷಗಳಾಯಿತು. ಆ ಸಮಯದಲ್ಲಿ ಸ್ಟೀಫನ್ ಅವರು, ಬೈಬಲನ್ನು ಓದುವದರ ಮತ್ತು ಪ್ರಾರ್ಥನೆಯ ಕ್ರಮಪ್ರಕಾರವಾದ ಸಮಯದ ಅತಿಶ್ರೇಷ್ಠವಾದ ಮಹತ್ವವನ್ನು ನನ್ನೊಂದಿಗೆ ಹಂಚಿಕೊಂಡದ್ದಕ್ಕಾಗಿ ನಾನು ಬಹಳವಾಗಿ ಕೃತಜ್ಞನಾಗಿದ್ದೇನೆ.

ಈ ಪುಸ್ತಕದಲ್ಲಿ ವ್ಯಕ್ತಪಡಿಸಿರುವ ಅನೇಕ ವಿಚಾರಗಳು ದೇವರ ವಾಕ್ಯದ ಮೇಲಿನ ನನ್ನ ಸ್ವಂತ - ಅಧ್ಯಯನದಿಂದ ಬಂದವುಗಳಾಗಿವೆ. ಇತರವುಗಳು, ನನ್ನ ಮಾರ್ಗದಲ್ಲಿ ಕರ್ತನು ಕೃಪೆಯಿಂದ ತಂದ, ದೇವರಾದುಕೊಂಡ ಶ್ರೇಷ್ಠ ಸೇವಕರ ಅನೇಕ ಬೈಬಲಿನ ಆಂತರಿಕ ದೃಷ್ಟಿಗಳಿಂದ ಬಂದ ಸತ್ಯಗಳೊಳಗಿಂದ ಆಯ್ದುಕೊಂಡಂಥವುಗಳಾಗಿವೆ. ಇಂಥ ಚಿಕ್ಕ ಹಾಗೂ ವ್ಯಾವಹಾರಿಕ ಪ್ರಕಟಣೆಯ ಹಿನ್ನೆಲೆಯಲ್ಲಿ ಅಗಣಿತ ನಂಬಿಗಸ್ಥ ಪುರುಷರನ್ನು ಸ್ತ್ರೀಯರನ್ನೂ ಗುರುತಿಸುವುದು

ಅಸಾಧ್ಯವಾಗಿದ್ದರೂ, ಅವರಲ್ಲಿ ಒಬ್ಬೊಬ್ಬರಿಗಾಗಿ, ಪ್ರತಿಯೊಬ್ಬರಿಗಾಗಿ ಕರ್ತನಿಗೆ ಸ್ತೋತ್ರ ಹೇಳುತ್ತೇನೆ.

ಈಗ Food for Faith ದ ಪ್ರಕಟಿಸುವಿಕೆಯ ಮುಖಾಂತರ, ಅದಕ್ಕೆ ಪ್ರತಿಯಾಗಿ, ನಂಬಿಕೆಯಲ್ಲಿ ತನ್ನ ಮಗನಾದ ತಿಮೊಥೆಯನಿಗೆ ಪೌಲನ ಅಪ್ಪಣೆಗೆ ವಿಧೇಯನಾಗುವೆನು: **''ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು.'' (2 ತಿಮೊಥೆ 2:2).**

ಈ ಪುಸ್ತಕವು ಕರ್ತನಾದ ಯೇಸುವಿನೊಂದಿಗೆ ಸ್ಥಿರವಾದ ಅನ್ಯೋನ್ಯತೆಯನ್ನು ಅನುಭವಿಸಲು ವಿಶ್ವಾಸಿಗಳಿಗೆ ಸಹಾಯ ಮಾಡುವದಕ್ಕಾಗಿ ಬರೆಯಲ್ಪಟ್ಟಿದ್ದರೂ, ಪಾಪಗಳು ಕ್ಷಮಿಸಲ್ಪಟ್ಟ ಆನಂದವನ್ನು ಮತ್ತು ನಿತ್ಯಜೀವದ, ಅತ್ಯಾಶ್ಚರ್ಯಕರವಾದ ಭರವಸೆಯನ್ನು ಇನ್ನೂ ತಿಳಿಯದೇ ಈ ಪುಟಗಳನ್ನು ಓದುತ್ತಿರುವವರು ಇರುವರು. ನೀವು ಅಂಥ ವ್ಯಕ್ತಿಯಾಗಿದ್ದರೆ, ನಿನ್ನ ಬೈಬಲಿನಲ್ಲಿಯ ಯೋಹಾನನ ಸುವಾರ್ತೆಗೆ ತಿರುಗಿಸಬೇಕೆಂದು ನಿನ್ನನ್ನು ಒತ್ತಾಯಿಸುತ್ತೇನೆ. ಈ ಸುವಾರ್ತೆಯು ನಿನಗೆ ಯಾಕೆ ವಿಶೇಷ ಸಹಾಯವಾಗಿರುವದೆಂಬುದನ್ನು ಓದುವಿ : ''ಆದರೆ ಯೇಸು ದೇವರ ಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ'' (ಯೋಹಾನ 20:31).

**ಆರ್.ಎ.ಬಿ.**

# ವಿಶ್ವಾಸಕ್ಕಾಗಿ ಆಹಾರ

ನಿನ್ನ ನುಡಿಗಳು ನನ್ನ ನಾಲಿಗೆಗೆ ಎಷ್ಟೋ
ರುಚಿಯಾಗಿವೆ ; ಅವು ನನ್ನ ಬಾಯಿಗೆ
ಜೇನುತುಪ್ಪಕ್ಕಿಂತಲೂ ಸಿಹಿಯಾಗಿವೆ.....
ನಿಜವಾಗಿ ನಿನ್ನ ಆಜ್ಞೆಗಳು ಬಂಗಾರಕ್ಕಿಂತಲೂ
ಅಪರಂಜಿಗಿಂತಲೂ ನನಗೆ ಬಹು ಪ್ರಿಯವಾಗಿವೆ.

**ಕೀರ್ತನೆ 119:103,127**

# ಅಧ್ಯಾಯ 1

# ಅನುದಿನದ ಆನಂದ

ಸ್ವಲ್ಪ ಸಮಯದ ಹಿಂದೆ ಬಹಳ ಸೌಜನ್ಯವುಳ್ಳ ಒಬ್ಬ ಕ್ರೈಸ್ತ ಮಹಿಳೆ ಗಂಭೀರತೆಯಿಂದ ಬೇಡಿಕೊಂಡಳು : ''ಕರ್ತನೊಂದಿಗೆ ನನಗೆ ಇನ್ನೂ ಹೆಚ್ಚು ನಿಕಟವಾದ ಸಂಬಂಧ ಇರಲಿಕ್ಕಾಗುವಂತೆ, ದಯವಿಟ್ಟು ಪ್ರಾರ್ಥಿಸಿರಿ''. ಹೌದು, ಯಾವುದೇ ಪರಸ್ಪರ ವ್ಯಕ್ತಿಗತ ಸಂಬಂಧದಲ್ಲಿ ನಿಕಟತೆಯ ಭಿನ್ನವಾದ ಹಂತಗಳಿರುವವು. ಅದು ಕರ್ತನಾದ ಯೇಸು ಕ್ರಿಸ್ತನೊಂದಿಗೆ ಅವರ ಸಂಬಂಧದಲ್ಲಿ ಕ್ರೈಸ್ತರಿಗಾಗಿ ಪ್ರತ್ಯೇಕವಾಗಿ ಸತ್ಯವಾಗಿರುವುದು.

ಮಾನವ ಸಂಬಂಧಗಳಲ್ಲಿಯೂ ಸಹ, ಭಾವನಾತ್ಮಕ ಬಂಧನಗಳ ನಿಜವಾದ ಒಂದುಗೂಡುವಿಕೆಯು ಚಿತ್ತಗಳ ಬೆರೆಸುವಿಕೆಯಿಂದ ಜೊತೆಗೂಡಿದಾಗ ಮಾತ್ರವೇ ಅರಳುವುದು ; ಮೌಲ್ಯದ ಪದ್ಧತಿಗಳನ್ನು ಹಂಚಿಕೊಳ್ಳುವುದು; ಹುದುವಾದ ಆಸಕ್ತಿಗಳನ್ನು ಅನುಭವಿಸುವುದು; ಬಹಿರಂಗ ಸಂಪರ್ಕಿಸುವಿಕೆಯ ಪ್ರಾಮಾಣಿಕತೆ, ಮತ್ತು ಮನಸ್ಸುಗಳ ಒಂದು ಕೂಟ.

ಉದಾಹರಣೆಗಾಗಿ, ನನ್ನ ಪತ್ನಿ ಡೊರೊತಿ ಮತ್ತು ನಾನು ಇತ್ತೀಚಿಗೆ ನಮ್ಮಿಬ್ಬರಿಗೂ ಅಸಾಧಾರಣವಾದ ಆನಂದವನ್ನು ತಂದ ಒಂದು ಪತ್ರವನ್ನು ಸ್ವೀಕರಿಸಿದೆವು. ಅದು ಇಬ್ಬರು ಆಫ್ರಿಕಾನರಿಂದ ಬಂದಿತ್ತು. ''ನಿನ್ನೆ ನಾವು ಶಿಶು ಡೊರೊತಿ ಯನ್ನು ಆಸ್ಪತ್ರೆಯಿಂದ ಮನೆಗೆ ತಂದೆವು ; ತನ್ನ ಹೆಸರಿಗೆ ತಕ್ಕಂತೆ,

ಆಕೆ ಸಕಾಲದಲ್ಲಿದ್ದಳು. ಬೇಬಿ ಡೊರೊತಿ ಸುರಕ್ಷಿತವಾಗಿ ತಲಪಿದಳು, ಆಕೆಯ ತೂಕ 3 KG, ಸುಮಾರು $6^1/_2$ lbs'' ಎಂದು ಆ ಪತ್ರದಲ್ಲಿತ್ತು. ಅವರಿಗೆ ಮತ್ತು ಅವರ ಕುಟುಂಬಕ್ಕೆ ಎಂಥಾ ಮಾತನಾಡಲಾಗದಂಥ ಆನಂದ.

ತಮ್ಮ ಹೊಸದಾಗಿ ಹುಟ್ಟಿದ್ದನ್ನು ಮೃದುವಾಗಿ ಮನೆಗೆ ತೆಗೆದುಕೊಂಡು ಹೋಗುತ್ತಿರುವಾಗ ಹೆಮ್ಮೆಯ ತಂದೆ ತಾಯಿಗಳ ಆನಂದದೊಂದಿಗೆ ಗುರುತಿಸುವುದು ಎಷ್ಟು ಸುಲಭವಾಗಿರುತ್ತದಲ್ಲವೇ. ಮಗು ಬೆಳೆದಂತೆ ಆನಂದವು ಮುಂದುವರಿಯುತ್ತದೆ. ಶಿಶುವು ಮೊದಲು ಒದೆಯಲು ಇಲ್ಲವೇ ನಗಲು ಪ್ರಯತ್ನಿಸುವಾಗ ಆನಂದದಿಂದ ತುಂಬಿಕೊಳ್ಳುತ್ತೇವೆ ! ಚಿಕ್ಕ ಕಾಲ್ಬೆರಳುಗಳು, ಮೊಣಕಾಲುಗಳು, ಮೊದಲನೆಯ ಹೆಜ್ಜೆ, ಆನಂತರ ''ಡಾಡಾ'' ಇಲ್ಲವೇ ''ಮಮ್ಮ'' ಎಂಬ ಮೊದಲ ಮಾತುಗಳನ್ನು ಕೇಳುವಾಗ ಎಷ್ಟು ಚಕಿತರಾಗುತ್ತೇವೆ ಅಲ್ಲವೇ !

ನಿಶ್ಚಯವಾಗಿ ಹೊಸ ಶಿಶುವು. ಬೆಳವಣಿಗೆಗಾಗಿ ಎಲ್ಲಾ ಸಾಧ್ಯತೆಗಳೊಂದಿಗೆ, ಮನುಷ್ಯನ ಗ್ರಹಿಕೆಯನ್ನು ದಾಟಿದ ಒಂದು ಅದ್ಭುತವಾಗಿದೆ ಮತ್ತು ಇದಕ್ಕಿಂತ ಇನ್ನೂ ಹೆಚ್ಚು ಅದ್ಭುತಕರವಾದದ್ದು ಈಗಲೇ ಹೊಸದಾಗಿ ಹುಟ್ಟಿದ ಆತ್ಮಿಕ ಜನನದಿಂದ ಆತ್ಮಿಕ ಪ್ರೌಢತೆಯ ಪ್ರಮಾಣದಲ್ಲಿ ಪ್ರಥಮ ಹೆಜ್ಜೆ ತೆಗೆದುಕೊಂಡ ಒಬ್ಬ ವ್ಯಕ್ತಿಯಾಗಿದ್ದಾನೆ.

ಹೀಗಿದ್ದರೂ, ದುರ್ದೈವದಿಂದ, ಜೀವನವು ಯಾವಾಗಲೂ ಜನನದ ಆನಂದ ದಿಂದ ಪ್ರೌಢಾವಸ್ಥೆಯ ಬೆಳವಣಿಗೆಗೆ ಅನುಸರಿಸಿ ಹೋಗುವದಿಲ್ಲ. ದುಃಖಕರ ಸಂಗತಿ, ಬೇಬಿ ಡೊರೊತಿಯ ಜನನದ ಬಗ್ಗೆ ತಿಳಿಸಿದ ಪತ್ರವನ್ನು ಸ್ವೀಕರಿಸಿದ ವಾರದಲ್ಲಿಯೇ, ಓಹಿಯೋದ ಸಿನ್ ಸಿನಾತಿಯಲ್ಲಿ ನಮ್ಮ ಹಳೇ ಸ್ನೇಹಿತನ ಇಪ್ಪತ್ತೊಂದು ವರ್ಷ ವಯಸ್ಸಿನ ಮಗಳು ತೀರಿ ಹೋದ ಸುದ್ದಿಯನ್ನು ನಾನು ಮತ್ತು ಡೊರೊತಿ ಸ್ವೀಕರಿಸಿದೆವು. ದುಃಖಕರವಾಗಿ, ತನ್ನ ಇಪ್ಪತ್ತೊಂದು ವರ್ಷಗಳಲ್ಲಿ ಆಕೆ ಎಂದೂ ಬಾಲ್ಯ ತನದಿಂದ ಬೆಳವಣಿಗೆ ಹೊಂದಲಿಲ್ಲ ; ಮಾನಸಿಕವಾಗಿಯೂ, ದೈಹಿಕವಾಗಿಯೂ ಇಲ್ಲವೇ ಸಾಮಾಜಿಕವಾಗಿಯೂ ಆಕೆ ಬೆಳವಣಿಗೆ ಹೊಂದಿರಲಿಲ್ಲ. ಆಕೆಯ ತಂದೆತಾಯಿಗಳು ಪ್ರೀತಿಯಿಂದ ಆಕೆಗೆ. ;Carol Joy( ಆನಂದದ ಸಂಗೀತ) ಎಂದು ಹೆಸರಿಟ್ಟಿದ್ದರೂ, ಕ್ಯಾರೊಲ್ ಸತ್ತು

ಹೋದಾಗ ಆಕೆ ಇನ್ನೂ ಶಿಶುವಾಗಿದ್ದಳು - ಇಪ್ಪತ್ತೊಂದು ವರ್ಷದ ಶಿಶುವಾಗಿದ್ದಳು ! ತನ್ನ ತಂದೆ ತಾಯಿಗಳೊಂದಿಗೆ ಮಾತಾಡುವ ಆಕೆಯ ಸಾಮರ್ಥ್ಯ ಕುಂದಿ ಹೋಗಿತ್ತು. ಮಾನವ ದೃಷ್ಟಿಕೋನದಿಂದ, ಆಕೆಯ ಜೀವನ ಪ್ರಯಾಣವು ಉಗ್ರವಾಗಿ ಕೆಟ್ಟುಹೋಗಿತ್ತು.

ಕ್ಯಾರಲ್ ಶೈಶವಾವಸ್ಥೆಯನ್ನು ದಾಟಿ ಎಂದೂ ಹೆಚ್ಚು ಬೆಳೆಯದೇ ಇದ್ದಂತೆ, ಇಂದು ಸಭೆಯಲ್ಲಿ ಅನೇಕ ಜನರು ಆತ್ಮಿಕ ಶಿಶುವಾಗಿರುವದನ್ನು ದಾಟಿ ಬೆಳೆದಿರುವಂತೆ ಕಂಡು ಬರುವದಿಲ್ಲ. ಅನೇಕ ವರ್ಷಗಳಿಂದ ಅವರು ಕ್ರೈಸ್ತರಾಗಿದ್ದರೂ, ಅವರು ಎಂದೂ ನಿಜವಾಗಿ ಕರ್ತನಲ್ಲಿ ಬೆಳೆದಿರುವದಿಲ್ಲ. ಆದಾಗ್ಯೂ, ದೇವರು ಆತ್ಮಿಕ ಪೋಷಣೆಯನ್ನು ಒದಗಿಸಿಕೊಟ್ಟಿರುವನು, ಅದನ್ನು ಯೋಗ್ಯವಾಗಿ ಅರಗಿಸಿಕೊಂಡರೆ, ಪ್ರತಿಯೊಬ್ಬ ಹೊಸದಾಗಿ ಹುಟ್ಟಿದ ದೇವರ ಮಗುವಿನ ಜೀವನದಲ್ಲಿ ಆತ್ಮಿಕ ಬೆಳವಣಿಗೆಯನ್ನು ಪ್ರಚೋದಿಸುವುದು.

ಬೈಬಲು ನಿನ್ನ ಕ್ರೈಸ್ತ ಜೀವಿತವನ್ನು ಆತ್ಮಿಕವಾಗಿ ಕುಗ್ಗಿಸಲ್ಪಡುವಿಕೆಯನ್ನು ತಡೆಗಟ್ಟುವ ದೇವರ ಪೋಷಕವಾಗಿದೆ. ಬಾಲ್ಯಪ್ರಾಯದ ಆತ್ಮಿಕ ಕುತೂಹಲದಿಂದ ಯೌವನದ ಆತ್ಮಿಕ ಸ್ಥಿರತೆಗೆ ಮತ್ತು ಅಂತಿಮವಾಗಿ ಪ್ರಾಯಸ್ಥನ ಆತ್ಮಿಕ ಪ್ರೌಢಾವಸ್ಥೆಗೆ ನೀನು ಬೆಳೆಯಬೇಕಾದರೆ, ನೀನು ದೇವರ ವಾಕ್ಯದಿಂದ, ಬೈಬಲಿನಿಂದ ಅನುದಿನವೂ ಪೋಷಣೆಯನ್ನು ಹೊಂದಿಕೊಳ್ಳುವ ಅವಶ್ಯಕತೆಯಿಂದ ಮತ್ತು ಬೈಬಲನ್ನು ಓದುವುದು ಕರ್ತವ್ಯದ ಕೇವಲ ಒಂದು ವಿಷಯಕ್ಕಿಂತ ಹೆಚ್ಚಾದದ್ದಾಗಿರಬೇಕೆಂಬುದು ದೇವರ ಉದ್ದೇಶವಾಗಿದೆ; ಅದು ದೇವರು ಸಿದ್ಧಪಡಿಸಿದ ಆಹಾರದ ಪಾಲು ತೆಗೆದುಕೊಳ್ಳುವ ಪ್ರತಿಯೊಬ್ಬ ಹಸಿದ ಕ್ರೈಸ್ತನ ಜೀವನದಲ್ಲಿ ಹೊಸ ಚೈತನ್ಯ ಕೊಡುವ ಆನಂದಕ್ಕಾಗಿರುತ್ತದೆ.

ಹೌದು, ದೇವರ ವಾಕ್ಯವನ್ನು ನಿಮ್ಮ ಸ್ವಂತ ಆತ್ಮಿಕ ಪೋಷಣೆಯಂತೆ ಹೇಗೆ ಅರಗಿಸಿಕೊಳ್ಳಬೇಕೆಂಬುದನ್ನು ನೀವು ಅರ್ಥಮಾಡಿಕೊಳ್ಳುವಾಗ, ಅದು ಸತತವಾದ ಮತ್ತು ಬೆಳೆಯುವ ಆನಂದದ ಮೂಲವಾಗುವುದು.

ಪ್ರವಾದ ಯೆಶಾಯನ ಮುಖಾಂತರ, ದೇವರು ಕೃಪೆಯಿಂದ ಆತ್ಮಿಕ ಆಹಾರಕ್ಕಾಗಿ ಹಸಿವೆ ಮತ್ತು ಬಾಯಾರಿಕೆಯಿರುವವರನ್ನು ತನ್ನೊಂದಿಗೆ ಊಟ ಮಾಡಲು ತನ್ನ ಔತಣಕ್ಕೆ ಆಮಂತ್ರಿಸುತ್ತಾನೆ :

''ಎಲೈ, ಬಾಯಾರಿದ ಸಕಲ ಜನರೇ,
ನೀರಿನ ಬಳಿಗೆ ಬನ್ನಿರಿ, ಹಣವಿಲ್ಲದವನು
ಸಹ ಬರಲಿ ! ಬನ್ನಿರಿ, ಕೊಂಡು ಕೊಳ್ಳಿರಿ,
ಉಣ್ಣಿರಿ....... ಆಹಾರವಲ್ಲದ್ದಕ್ಕೆ
ಹಣವನ್ನು ಏಕೆ ವ್ರಯ ಮಾಡುತ್ತೀರಿ ?
ತೃಪ್ತಿಗೊಳಿಸದ ಪದಾರ್ಥಕ್ಕೆ ನಿಮ್ಮ
ದುಡಿತವನ್ನು ವೆಚ್ಚ ಮಾಡುವದೇಕೆ ?
ಕಿವಿಗೊಟ್ಟು ನನ್ನ ಮಾತನ್ನು ಕೇಳಿರಿ,
ಒಳ್ಳೇದನ್ನೇ. ಉಂಡು ಮೃಷ್ಠಾನ್ನದಲ್ಲಿ
ಆನಂದಪಡಿರಿ, ಕಿವಿಯನ್ನು ಇತ್ತ
ತಿರುಗಿಸಿರಿ, ನನ್ನ ಬಳಿಗೆ ಬನ್ನಿರಿ ;
ಆಲಿಸಿದರೆ ಬದುಕಿ ಬಾಳುವಿರಿ ....
.....'' (ಯೆಶಾಯ 55:1-3).

ಅನೇಕ ಜನರು ತಾವು ದೇವರ ವಾಕ್ಯವನ್ನು ನೇರವಾಗಿ ಓದುವಾಗ ತಮ್ಮ ವಿಶ್ವಾಸಕ್ಕಾಗಿ ಆಹಾರವನ್ನು ಅವರು ಹೇಗೆ ಹೊಂದುವರು ಎಂಬುದನ್ನು ಅರ್ಥ ಮಾಡಿಕೊಳ್ಳುವದಿಲ್ಲವಾದ ಕಾರಣದಿಂದ, ಅವರು ನಿಜವಾಗಿಯೂ ಬೈಬಲನ್ನೇ ಓದುವದಕ್ಕಿಂತ ಬೈಬಲಿನ ಬಗೆಗೆ ಇರುವ ಪುಸ್ತಕಗಳನ್ನು ಓದುವುದು ಬಹಳ ಸುಲಭವಾದದ್ದೆಂದು ಕಂಡು ಕೊಳ್ಳುತ್ತಾರೆ. ನಿಮ್ಮ ಕೈಯಲ್ಲಿರುವ ಈ ಪುಸ್ತಕವು ಬೈಬಲನ್ನು ವಿವರಿಸುವ ಉದ್ದೇಶಕ್ಕಾಗಿರುವದಿಲ್ಲ, ಬೈಬಲು ತನ್ನಷ್ಟಕ್ಕೆ ತಾನೇ ವಿವರಿಸುವ ರೀತಿಯಲ್ಲಿ ಅದನ್ನು ಓದಲು ನಿಮ್ಮನ್ನು ಪ್ರೋತ್ಸಾಹಿಸುವದಕ್ಕಾಗಿ ಇರುತ್ತದೆ. ಅದರ ಪರಿಣಾಮವಾಗಿ ನಿಮ್ಮ ಪರಲೋಕದ ತಂದೆಯೊಂದಿಗೆ ಪಾರದರ್ಶಕ ವಾದ ಮತ್ತು ನಿಕಟವಾದ ಅನ್ಯೋನ್ಯತೆಯಲ್ಲಿ ಜೀವಿತವನ್ನು ಹೆಚ್ಚಾಗಿ ಅನುಭವಿಸುವಂತೆ ಮಾಡುವುದು.

ತಮ್ಮ ವಿಶ್ವಾಸಕ್ಕಾಗಿ ಆಹಾರದಂತೆ ಬೈಬಲನ್ನು ಓದಲು ಪ್ರಾರಂಭಿಸುವವರಿಗೆ ನಾನು ಆಗಾಗ ಹೇಳುತ್ತಿರುವೆನು :

**ನೀವು ಅರ್ಥಮಾಡಿಕೊಳ್ಳುವದನ್ನು ಓದಿರಿ ಮತ್ತು ನೀವು ಬೇಗನೇ ಅರ್ಥ ಮಾಡಿಕೊಳ್ಳಲಾರದಂಥದ್ದರ ಬಳಿಗೆ ಬರುವಿರಿ. ಓದುತ್ತಲೇ ಇರ್ರಿ. ಸ್ವಲ್ಪ ಸಮಯ ದಲ್ಲಿಯೇ, ನೀವು ಅರ್ಥ ಮಾಡಿಕೊಳ್ಳುವಂಥದ್ದರ ಬಳಿಗೆ ಬರುವಿರಿ. ಕ್ರಮೇಣವಾಗಿ, ನೀವು ಅರ್ಥ ಮಾಡಿಕೊಳ್ಳುವಂಥದ್ದು ನೀವು ಅರ್ಥ ಮಾಡಿಕೊಳ್ಳದೇ ಇರುವಂಥದ್ದನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಸಹಾಯ ಮಾಡುವುದು.**

ಇದರ ಅರ್ಥ ನಿಮಗಾಗುವುದೋ ? ಎಂದೂ ಬಿಟ್ಟು ಕೊಡಬೇಡಿರಿ ಎಂದು ಬೇರೆ ಮಾತಿನಲ್ಲಿ ಹೇಳಬಹುದು.

ಜಗತ್ತಿನಲ್ಲೆಲ್ಲಾ - ಕ್ಲಾಸರೂಮಗಳಲ್ಲಿ, ಭಾಷಣ ಕೋಣೆಗಳಲ್ಲಿ ಮತ್ತು ಲೈಬ್ರರಿಗಳಲ್ಲಿ - ''ಯೋಚನೆಗಾಗಿ ಆಹಾರ''ವನ್ನು ಒದಗಿಸುವ ಶೈಕ್ಷಣಿಕ ಮಾಹಿತಿ ಯನ್ನು ಜನರು ಅರಗಿಸಿಕೊಳ್ಳುತ್ತಿರುವರು. ಅದೇ ರೀತಿಯಲ್ಲಿ ನಾವು ಬೈಬಲನ್ನು ಒಂದು ಧಾರ್ಮಿಕ ಪಠ್ಯಪುಸ್ತಕದಂತೆ ಉಪಯೋಗಿಸಿದರೆ, ನಾವೆಲ್ಲರೂ ಅದೇ - ''ವಿಚಾರಕ್ಕಾಗಿ ಆಹಾರವನ್ನು'' ಹೊಂದಿಕೊಳ್ಳುವೆವು. ''ಜ್ಞಾನವು ಉಬ್ಬಿಸುತ್ತದೆ, ಪ್ರೀತಿಯು ಭಕ್ತಿವೃದ್ಧಿ ಯನ್ನುಂಟು ಮಾಡುತ್ತದೆ'' (1 ಕೊರಿಂಥ 8:1) ಎಂದು ಬೈಬಲ್ ಎಚ್ಚರಿಕೆಯನ್ನು ಕೊಡುತ್ತದೆ.

ಹೌದು, ದೇವರ ವಾಕ್ಯವನ್ನು ಹೇಗೆ ಯೋಗ್ಯವಾಗಿ ಜೀರ್ಣಿಸಿಕೊಳ್ಳ ಬೇಕೆಂಬುದನ್ನು ನಾವು ಅರ್ಥಮಾಡಿಕೊಳ್ಳದಿದ್ದರೆ, ಬೈಬಲಿನ ಜ್ಞಾನವೂ ಸಹ ಬೌದ್ಧಿಕ ಗರ್ವದೊಂದಿಗೆ ನಮ್ಮನ್ನು ಉಬ್ಬಿಸುತ್ತದೆ ; ನಮ್ಮನ್ನು ನಮ್ಮ ಆತ್ಮೀಕ ಜೀವನದಲ್ಲಿ ಕಟ್ಟುವದಿಲ್ಲ. ನಮ್ಮ ಕರ್ತನೊಂದಿಗೆ ಒಂದಾಗಿ ಬರುವ ಅನುದಿನದ ಸಮಯದಲ್ಲಿ ಕೇವಲ ಜ್ಞಾನವನ್ನು ಪಡೆದುಕೊಳ್ಳದೇ, ''ವಿಶ್ವಾಸಕ್ಕಾಗಿ ಆಹಾರವನ್ನು'' ನಮಗೆ ಒದಗಿಸುವ ಆತನ ಔತಣ ಮೇಜಿನಿಂದ ಪೋಷಣೆಯನ್ನು ಹೊಂದುವ ಅವಶ್ಯಕತೆಯಿದೆ.

ಬೈಬಲನ್ನು ಕೇವಲ ಶೈಕ್ಷಣಿಕ ಅಭ್ಯಾಸದಂತೆ ಓದುವವರಿಗೆ ವಿರುದ್ಧವಾಗಿ, ತಮ್ಮ ಜೀವಿತದಲ್ಲಿ ವ್ಯಾವಹಾರಿಕವಾದ ಮತ್ತು ನಿಜವಾದ ಆತ್ಮಿಕ ಪೋಷಣೆಯ ಸಜೀವ ಮೂಲವಾಗಿ ಆಗುವಂತೆ ದೇವರ ವಾಕ್ಯದ ಓದುವಿಕೆಯ

ರಹಸ್ಯವನ್ನು ಕಂಡುಕೊಂಡ ಅನೇಕ ಆನಂದಭರಿತ ವಿಶ್ವಾಸಿಗಳು ಇದ್ದಾರೆ. ಈ ಕ್ರೈಸ್ತರು ದೇವರೊಂದಿಗೆ ಅನ್ಯೋನ್ಯತೆಯ ಜೀವನವು ಬೆಳೆಯುತ್ತಿರುವದನ್ನು ಅನುಭವಿಸುತ್ತಿದ್ದಾರೆ ಮತ್ತು ಈ ಪ್ರಗತಿಯಲ್ಲಿ ಯತಾರ್ಥವಾದ ಆರಾಧನೆಯ ಮತ್ತು ನಂಬಿಗಸ್ಥಿಕೆಯ ಸೇವೆಯ ಮಾರ್ಗವನ್ನು ಕಂಡುಕೊಳ್ಳುತ್ತಿದ್ದಾರೆ. ಅಂಥ ಜನರಿಗೆ ಮಾರ್ಗವನ್ನು ಕಂಡು ಕೊಳ್ಳುತ್ತಿದ್ದಾರೆ. ಅಂಥ ಜನರಿಗೆ ಸ್ವಯಂ-ಅರುಹಿನ ಬಂಧನವು ದೇವರ ಅರುಹುವುಳ್ಳ ಆಶೀರ್ವಾದಕ್ಕೆ ಮಾರ್ಗ ಮಾಡುವುದು.

ತೆರೆದ ಬೈಬಲಿನೊಂದಿಗೆ ಪ್ರತಿದಿನವು ಭರವಸೆಯಿಂದ ಮತ್ತು ವೈಯಕ್ತಿಕವಾಗಿ ದೇವರನ್ನು ಸಮೀಪಿಸುವುದು ಹೊಸದಾಗಿ ಹುಟ್ಟಿದ್ದ ಪ್ರತಿಯೊಬ್ಬ ದೇವರ ಮಗುವಿಗೆ ಅದ್ಭುತಕರವಾದ ಅವಕಾಶವಾಗಿದೆ.

ನೀನು ಕೇಳುತ್ತಿರುವ ಪ್ರಶ್ನೆ ಇದಾಗಿರಬಹುದು : ನನ್ನ ಪ್ರಾಣವನ್ನು ಪೋಷಿಸಿ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರೀತಿ ಮತ್ತು ಜ್ಞಾನದಲ್ಲಿ ಬೆಳೆಯಲು ನನಗೆ ಸಹಾಯ ಮಾಡುವಂತೆ, ಬೈಬಲನ್ನು ಓದುವ ಅತ್ಯುತ್ತಮವಾದ ಮಾರ್ಗವು ಯಾವುದು? ರಹಸ್ಯವು ''ಒಂದಾಗಿ ಕೂಡಿ ಬರುವ ಸಮಯ'' ಎಂದು ನಾವು ಕರೆಯುವದರಲ್ಲಿ ಕಂಡು ಬರುತ್ತದೆ - ಅದು ಕರ್ತನೊಂದಿಗೆ ಒಂದಾಗಿರುವುದರ ಒಂದು ಸಮಯವಾಗಿರುವುದು.

''ಒಂದಾಗಿ ಕೂಡಿ ಬರುವ ಸಮಯ''ವು ನಿಜವಾಗಿಯೂ ನಮ್ಮ ಜೀವಿಸುವ ಕರ್ತನೊಂದಿಗೆ ಎರಡು ಮಾರ್ಗದ ಸಂವಾದವಾಗಿರುವುದು. ತನ್ನ ವಾಕ್ಯದ, ಬೈಬಲಿನ, ಮುಖಾಂತರ ದೇವರು ತನ್ನ ಮಕ್ಕಳೊಂದಿಗೆ ಮಾತಾಡುತ್ತಾನೆ. ದೇವರು ಹೇಳುತ್ತಿರುವದಕ್ಕೆ ಸರಿಯಾಗಿ ಮತ್ತು ವೈಯಕ್ತಿಕವಾಗಿ ನಾವು ಉತ್ತರ ಕೊಟ್ಟರೆ, ನಾವು ಬೈಬಲಿಗೆ ತಕ್ಕಂತೆ ಮತ್ತು ನಿರೀಕ್ಷೆಯುಳ್ಳ ನಂಬಿಕೆಯೊಂದಿಗೆ ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ಕಲಿತುಕೊಳ್ಳುವೆವು.

''ಬೈಬಲಗನುಗುಣವಾಗಿ ಪ್ರಾರ್ಥಿಸುವುದು'' ಎಂಬುದರ ಬಗ್ಗೆ ನಾನು ಮಾತಾಡುವಾಗ, ಪ್ರಾರ್ಥನೆಯಲ್ಲಿ ನಾವು ಕರ್ತನಿಗೆ ಉತ್ತರ ಕೊಡುವಾಗ, ನಾವು ಓದುತ್ತಿರುವ ಪರಿಶುದ್ಧ ಬರಹಗಳ ಮಾತುಗಳನ್ನೇ ನಾವು ನಿಜವಾಗಿಯೂ ಉಪಯೋಗಿಸಬೇಕೆಂದು ನನ್ನ ಅರ್ಥವಾಗಿರುತ್ತದೆ. ಬೈಬಲಿಗನಗುಣವಾಗಿ

ಪ್ರಾರ್ಥಿಸುವುದು, ದೇವರ ಚಿತ್ತಕ್ಕನುಗಣವಾಗಿ ಪ್ರಾರ್ಥಿಸುವದರ ಬೆಳೆಯುತ್ತಿರುವ ಭರವಸೆಯನ್ನು ಅನುಭವಿಸುವುದಾಗಿರುತ್ತದೆ.

ದೇವರ ವಾಕ್ಯವನ್ನು ಪವಿತ್ರಾತ್ಮನು ನಮಗೆ ಜೀವಿಸುವದನ್ನಾಗಿ ಮಾಡುವಂತೆ, ನಾವು ಪರಿಶುದ್ಧ ಬರಹದ ಮಾತುಗಳನ್ನೇ ಉಪಯೋಗಿಸುವೆವು ಮತ್ತು ನಮ್ಮ ಹೃದಯ ದಲ್ಲಿರುವ ಚಿಂತನೆಗಳಿಗೆ ಅವುಗಳನ್ನು ಸಂಬಂಧಿಸಿಕೊಳ್ಳುವೆವು. ಈ ರೀತಿಯಲ್ಲಿ ಪ್ರಾರ್ಥಿಸುವುದರಿಂದ, ಒಂದೇ ರೀತಿಯ ಪ್ರಾರ್ಥನೆಗಳಿಂದ ಉಳಿದುಕೊಳ್ಳುವೆವು. ಅದರ ಬದಲು ಬೈಬಲಿಗನುಗುಣವಾಗಿ ನಾವು ಪ್ರಾರ್ಥಿಸಿದರೆ, ನಮ್ಮ ಜೀವಿನದಲ್ಲಿ ಆತನ ಚಿಂತನೆ ಮತ್ತು ಉದ್ದೇಶಗಳ ಬೆಳೆಯುತ್ತಿರುವ ತಿಳುವಳಿಕೆಯಲ್ಲಿ ಪ್ರವೇಶಿಸುವಂತೆ, ಕರ್ತನೊಂದಿಗೆ ಅನ್ಯೋನ್ಯತೆಯ ಅವಕಾಶವನ್ನು ಅನುಭವಿಸುವೆವು.

ನಿಜವಾದ ಪ್ರಾರ್ಥನೆಯು ದೇವರ ಚಿತ್ತವನ್ನು ನನ್ನ ಚಿತ್ತಕ್ಕೆ ಬಾಗುವಂತೆ ಮಾಡುವದಲ್ಲ ; ಆದರೆ ದೇವರ ಚಿತ್ತಕ್ಕೆ ನನ್ನ ಚಿತ್ತವನ್ನು ಬಾಗಿಸುವುದಾಗಿದೆ. ಯೆಹೋಶುವನು ಅದ್ಭುತಕರವಾಗಿ ಇಸ್ರೆಯೇಲ್ಯರನ್ನು ಯೋರ್ದನ್ ಹೊಳೆಯನ್ನು ದಾಟಿಸಿದ ನಂತರ, ತನಗೆ ಪರಿಚಿತವಿಲ್ಲದ ''ಮನುಷ್ಯ''ನನ್ನು ಎದುರಿಸಿದನು. ಕಾನಾನ್ ದೇಶದಲ್ಲಿ ದೇಶವನ್ನು ಜಯಿಸಿ, ಅದನ್ನು ಅನ್ಯ ಜನರ ಆಚಾರ ಪದ್ಧತಿಗಳನ್ನು ತೆಗೆದು ಹಾಕಿ ಶುದ್ಧಿಕರಿಸುವುದು ದೇವರಿಂದ ತನಗೆ ಕೊಡಲ್ಪಟ್ಟ ಕಾರ್ಯವಾಗಿತ್ತೆಂಬುದನ್ನು ಯೆಹೋಶುವನು ತಿಳಿದುಕೊಂಡಿದ್ದನು. ಆದುದರಿಂದ ಯೆಹೋಶುವನು ತನ್ನ ಕೈಯಲ್ಲಿ ಕತ್ತಿಯನ್ನು ಹಿಡಿದು ತನ್ನ ಎದುರಿನಲ್ಲಿ ನಿಂತ ಅಪರಿಚಿತನಿಗೆ, ''ನೀನು ನಮ್ಮವನೋ ಅಥವಾ ಶತ್ರುಪಕ್ಷದವನೋ ?'' ಎಂದು ಪ್ರಶ್ನಿಸಿದನು. ಯೆಹೋಶುವನು ಪಡಕೊಂಡ ವಿಚಿತ್ರ ಉತ್ತರವು ''ಅಲ್ಲ'' ಎಂಬುದು. ಇಲ್ಲವೇ NIV ಬೈಬಲ್ ಭಾಷಾಂತರಿಸುವಂತೆ ''ಎರಡೂ ಅಲ್ಲ'' ಎಂಬುದಾಗಿತ್ತು. ಈ ಉತ್ತರದಿಂದ ಯೆಹೋಶುವನು ಆ ಪರಿಚಿತಿಯಿಲ್ಲದವನು ಪಕ್ಷಗಳನ್ನು ವಹಿಸುವವನು ಅಲ್ಲವೆಂದು ತಿಳಿದುಕೊಂಡನು. ಅಪರಿಚಿತನಿಂದ ಕೊಡಲ್ಪಟ್ಟ ಉತ್ತರವನ್ನು ಸ್ಪಷ್ಟಪಡಿಸಿದ ಮಾತುಗಳು ಬಂದವು : ''ಯೆಹೋವನ ಸೇನಾಪತಿಯು, ಈಗಲೇ ಬಂದಿದ್ದೇನೆ''.

ಆ ಹಂತದಲ್ಲಿ, ಯೆಹೋಶುವನು ಸರಿಯಾಗಿ, ಪಕ್ಷಗಳನ್ನು ತೆಗೆದುಕೊಳ್ಳುವ ಬದಲು ಆ ಅಪರಿಚಿತನು ನಿಯಂತ್ರಣ ತೆಗೆದುಕೊಳ್ಳಲಿದ್ದಾನೆಂಬುದನ್ನು ಗುರುತಿಸಿದನು. ಒಪ್ಪಿಸಿಕೊಡುವ ಸೂಚನೆಯಾಗಿ, ಸಾಷ್ಟಾಂಗ ನಮಸ್ಕಾರ ಮಾಡಿ, ಯೆಹೋಶುವನು ತಾನು ಯೆಹೋವನ ಸೇನಾಪತಿಯ ಸನ್ನಿಧಿಯಲ್ಲಿರುವೆನೆಂದು ತಿಳಿದು ಕೊಂಡನು. **ನೀನು ನಿಂತಿರುವ ಸ್ಥಳವು ಪರಿಶುದ್ಧವಾದದ್ದು.** (ಯೆಹೋಶುವ 5:13-15).

ಅದೇ ರೀತಿಯಲ್ಲಿ ಪ್ರಾರ್ಥನೆಯ ನಮ್ಮ ಸ್ವಂತ ಸಮಯದಲ್ಲಿ, ದೇವರಿಗೆ ನಮ್ಮ ವೈಯಕ್ತಿಕ ಕಾರ್ಯ ಸೂಚಿ ಪಟ್ಟಿಯನ್ನು ತರಬಾರದು ಮತ್ತು ನಮ್ಮೊಂದಿಗಿರು ಎಂದು ಕೇಳಬಾರದು, ಆದರೆ ಅದರ ಬದಲು ಆತನ ಪರಿಶುದ್ಧ ಸನ್ನಿಧಿಯಲ್ಲಿ ನಮ್ಮನ್ನು ಆತನ ಯೋಜನೆಗಳಿಗೆ, ಆತನ ಉದ್ದೇಶಗಳಿಗೆ ಮತ್ತು ಆತನ ಬಲಕ್ಕೆ ಒಪ್ಪಿಸಲು ಬಾಗಿಕೊಳ್ಳಬೇಕು.

ಹೀಗೆ, ಬೈಬಲಿನ ಪ್ರಕಾರವಾಗಿ ಪ್ರಾರ್ಥಿಸುವುದು ದೇವರ ಉದ್ದೇಶ ಮತ್ತು ಚಿತ್ತಕ್ಕೆ ಸಾಮರಸ್ಯದಲ್ಲಿ ಪ್ರಾರ್ಥಿಸುವುದಾಗಿದೆ. ಮತ್ತು ನಮ್ಮ ಚಿತ್ತವನ್ನು ಆತನ ಚಿತ್ತಕ್ಕೆ ಬಾಗಿಸುವುದು, ನಾವು ಪ್ರಾರ್ಥಿಸುವಾಗಲೆಲ್ಲಾ ದೇವರ ವಾಕ್ಯಕ್ಕೆ ನಮ್ಮನ್ನು ಹೊಂದಿಸಿ ಕೊಳ್ಳುವದನ್ನು ಕಲಿಯುವಂತೆ ನಮ್ಮಲ್ಲಿ ಪ್ರತಿಯೊಬ್ಬರ ಬೆಳೆಯುತ್ತಿರುವ ಅನುಭವ ವಾಗುವುದು.

ಹೌದು, ದೇವರಿಂದ ಕೇಳಲು ಯತಾರ್ಥವಾದ ಅಪೇಕ್ಷೆಯೊಂದಿಗೆ ಬೈಬಲನ್ನು ಪ್ರಾರ್ಥನಾ ಪೂರಕವಾಗಿ ಓದುವಾಗ, ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರುವಿರಿ. (2 ಪೇತ್ರ 3:18).

ನಾವು ಈಗಾಗಲೇ ಗಮನಿಸಿದಂತೆ, ಯೆಶಾಯನು, ನಾವು ನಿಜವಾಗಿಯೂ ದೇವರ ಸ್ವರವನ್ನು ಕೇಳಲು ನಮ್ಮ ಕಿವಿಗಳನ್ನು ತೆರೆಯುವಾಗ, ಆತನು ಹೇಳುವದರಲ್ಲಿ ನಾವು ನಿಜವಾಗಿಯೂ ಆನಂದಿಸುವೆವು ಎಂದು ಹೇಳಿದ್ದಾನೆ.

**ಆತ್ಮಿಕ ತಪಾಸಣೆ**

1. ನಾನು ಮೊದಲು ಹೊಸದಾಗಿ ಹುಟ್ಟಿದ ಕ್ರೈಸ್ತನಾದದಂದಿನಿಂದ ಎಷ್ಟು ಸಮಯವಾಯಿತು ?

2. ಈಗ ನಾನು ಅನುಭವಿಸುತ್ತಿರುವದಕ್ಕಿಂತ, ದೇವರೊಂದಿಗೆ ಹೆಚ್ಚು ನಿಕಟವಾದ ಸಂಬಂಧವನ್ನು ಎಂದಾದರೂ ಅನುಭವಿಸಿರುವೆನೋ ?

3. ಇಂದಿನ ನನ್ನ ಜೀವಿತವನ್ನು ಐದು ವರ್ಷಗಳ ಹಿಂದಿನ ಜೀವಿತದೊಂದಿಗೆ ಹೋಲಿಸುವಾಗ : ದೇವರೊಂದಿಗೆ ಹೆಚ್ಚು ಏಕಾಂತ ಸಮಯವನ್ನು ಕಳೆಯುತ್ತಿರುವೆನೋ ?

ದೇವರ ನಡಿಸುವಿಕೆಯನ್ನು ನನ್ನ ಸ್ವಂತ ಅಪೇಕ್ಷೆಗಳಿಂದ ಚನ್ನಾಗಿ ವ್ಯತ್ಯಾಸ ಗುರುತಿಸಬಹುದೋ ?

ಕರ್ತನೇ, ಆಲಿಸುವದನ್ನು ನನಗೆ ಕಲಿಸು,
ಸಮಯಗಳು ಗದ್ದಲದಿಂದ ತುಂಬಿರುವವು,
ಸತತವಾಗಿ ದಾಳಿ ಮಾಡುವ ಸಾವಿರಾರು ಕರ್ಕಶ
ಧ್ವನಿಗಳಿಂದ,
ದಣಿದು ಹೋಗಿರುವವು ನನ್ನ ಕಿವಿಗಳು.
‘‘ಅಪ್ಪಣೆಯಾಗಲಿ, ನಿನ್ನ ದಾಸನು ಕಾದಿದ್ದಾನೆ’’
ಎಂದು ನಿನಗೆ ಹೇಳಿದಾಗಿನ,
ಬಾಲಕ ಸಮುವೇಲನ ಮನಸ್ಸನ್ನು ಕೊಡು ನನಗೆ.
ನೀನು ಮಾತನಾಡುವದನ್ನು ನನ್ನ ಹೃದಯದಲ್ಲಿ
ಕೇಳುವಂತೆ ಮಾಡು.
ಪರಿಚಿತವಾಗಿರಲಿ ನಿನ್ನ ಧ್ವನಿಯ ಸ್ವರವು ನನಗೆ.
ಪರಿಚಿತವಾಗಿರಲಿ ಅದರ ತಾಳಗಳು.
ಭೂಲೋಕದ ಸ್ವರಗಳು ಸತ್ತು ಹೋಗುವಾಗ,
ಉಳಿದಿರುವುದು ಒಂದೇ ಸ್ವರ, ನೀನು
ಮಾತಾಡುತ್ತಿರುವ ಸ್ವರದ ಸಂಗೀತ
ಆಮೆನ್

- A.W. Tozer

## ಅಧ್ಯಾಯ 2

# ತಲೆ ಮತ್ತು ಹೃದಯ

ಅನೇಕ ವರ್ಷಗಳ ಹಿಂದೆ, ಕೀನ್ಯಾದ ಉತ್ತರ ಭಾಗದಲ್ಲಿ, ದೇಶೀಯ ಸಭಾಪಾಲಕರು ಮತ್ತು ಅವರ ಪತ್ನಿಯರ ಕೂಟದಲ್ಲಿ ದೇವರ ವಾಕ್ಯವನ್ನು ಬೋಧಿಸುವ ಅವಕಾಶವು ನನ್ನ ಪತ್ನಿ ಡೊರೊತಿಗೂ ನನಗೂ ದೊರೆಯಿತು. ಸಾಯಂಕಾಲದ ಕೂಟಕ್ಕಾಗಿ ಸಾಯಂಕಾಲ ಏಳು ಗಂಟೆಗೆ ತಲುಪಲು, ಈ ಸಭಾಪಾಲಕರಲ್ಲಿ ಕೆಲವರು ಆ ದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಹೊರಡಬೇಕಾಗಿತ್ತು. ಬೈಬಲಿನ ಬಗ್ಗೆ ಇನ್ನೂ ಹೆಚ್ಚು ಕಲಿಯಲು ಅತ್ಯಾಸಕ್ತಿಯುಳ್ಳ ಅಪೇಕ್ಷೆಯಿಂದ ಪ್ರೇರಪಿಸಲ್ಪಟ್ಟು ಬಿಸಿಲಿನ ಬೇಗೆಯನ್ನು ಸಹಿಸಿಕೊಂಡು ಆಯಾಸಕರವಾದ ನಡಿಗೆಯಿಂದ ಅವರು ಬಂದಿದ್ದರು. ಆ ಬಿಸಿಲು ಅವರ ನಾಡನ್ನು ಕ್ಷಾಮಗಳಿಂದಲೂ ಬರಗಾಲಗಳಿಂದಲೂ ಪೀಡಿಸುತ್ತಿತ್ತು.

ಆ ದೇಶೀಯ ಸಭಾಪಾಲಕರಲ್ಲಿ ಪ್ರತಿಶತ ಅರವತ್ತರಿಂದ ಎಪ್ಪತರ ಮಧ್ಯದಲ್ಲಿಯ ಸಭಾಪಾಲಕರಲ್ಲಿ ಬೈಬಲ್ ಇರುವದಿಲ್ಲ ಎಂಬ ಸಂಗತಿಯು ನಮಗೆ ಆಘಾತವಾಗಿ ಬಂದಿತ್ತು. ಈ ಪ್ರತಿಷ್ಠಿತ ನಾಯಕರಲ್ಲಿ ಅನೇಕರು ಕಳೆದ ಎರಡು ಇಲ್ಲವೇ ಮೂರು ವರ್ಷಗಳ ಮೊದಲು ಮಾತ್ರವೇ ಮಾರ್ಪಾಟ ಹೊಂದಿದವರಾಗಿದ್ದರೂ, ಅವರ ಉತ್ಸಾಹಭರಿತ ಸಾಕ್ಷಿಗಳು ಅವರ ಸ್ವಂತ ಜನರಲ್ಲಿ, ಆಫ್ರಿಕನ್ ಕಾಡು ಭೂಮಿಗಳಲ್ಲಿ ಅನೇಕ ಚಿಕ್ಕ ಸಭೆಗಳನ್ನು ಜೀವಿಸಲು ತರುವಂತೆ ದೇವರಿಂದ ಉಪಯೋಗಿಸಲ್ಪಟ್ಟವು.

ನಮ್ಮ ಕೂಟದ ಪ್ರಾರಂಭದಲ್ಲಿ, ಈ ಪ್ರತಿಯೊಬ್ಬ ಸಭಾಪಾಲಕರ ಹಸ್ತಗಳಲ್ಲಿ ಬೈಬಲನ್ನು ಇಡಲು ನಾವು ಶಕ್ತರಾದೆವು. ಅನಂತರ ಬೋಧಿಸುವುದರೊಂದಿಗೆ ಅಲ್ಲಿ ಅನೇಕ ದಿನಗಳನ್ನು ಕಳೆದೆವು. ನನ್ನ ಮುಖ್ಯ ಪ್ರಸ್ತಾಪವು ಇದಾಗಿತ್ತು : ''ಈಗ ನಿಮ್ಮ **ಕೈಯಲ್ಲಿ** ಒಂದು ಬೈಬಲ್ ಇದೆ, ಅದು ನಿಮ್ಮ ಕೈಯಿಂದ ನಿಮ್ಮ **ತಲೆಯೊಳಗೆ** ಹೋಗುವ ವರೆಗೆ ಅದು ನಿಮಗೆ ಆಶೀರ್ವಾದವಾಗಿರುವದಿಲ್ಲ! ಆದರೆ ಅದೂ ಈ ದಿನಗಳಲ್ಲಿ ನಿಮಗಾಗಿ ದೇವರು ಉದ್ದೇಶಿಸಿರುವ ಪೂರ್ಣ ಆಶೀರ್ವಾದವನ್ನು ನಿಮಗೆ ತರುವದಿಲ್ಲ. ನಿಮ್ಮ **ಹೃದಯದಲ್ಲಿ** ಬೈಬಲು ದೇವರ ವಾಕ್ಯದಂತೆ ಜೀವಿಸಲು ಪ್ರಾರಂಭಿಸುವಾಗ ಮಾತ್ರವೇ ಈ ಕೂಟವು ನಿಮಗೆ ತೀರದ ಆಶೀರ್ವಾದವಾಗುವುದು. ಬೈಬಲನ್ನು ನಿನ್ನ ಕೈಯಿಂದ ನಿನ್ನ ತಲೆಗೆ ಹಾಗೂ ಆಮೇಲೆ ನಿನ್ನ ತಲೆಯಿಂದ ನಿನ್ನ ಹೃದಯಕ್ಕೆ ಹೇಗೆ ತೆಗೆದುಕೊಳ್ಳಬೇಕೆಂದು ಕಲಿತುಕೊಳ್ಳುವುದು ಅತ್ಯವಶ್ಯವಾಗಿದೆ''.

ನಾನು ಕ್ರಿಸ್ತನಿಗೆ ಮಾರ್ಪಾಟ ಹೊಂದಿದಾಗ ವಾಸಿಸಿದ್ದ ಇಂಗ್ಲಂಡಿನಲ್ಲಿಯ ಮನೆಯನ್ನು ಇತ್ತೀಚೆಗೆ ನೋಡಿದೆನು. ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ದೀಪದ ಕಂಬವಿತ್ತು. ಅದರ ಕೆಳಗೆ ಹದಿನಾಲ್ಕು ವರ್ಷ ವಯಸ್ಸಿನ ಬಾಲಕ, ಬೊಬ್ ಫ್ಲಿಂಟ ಸಹ ಕ್ರಿಸ್ತನನ್ನು ಸ್ವೀಕರಿಸಿಕೊಂಡನು. ಬೊಬ್‌ನ ಮಾರ್ಪಡುವಿಕೆಯು ನಾಟಕೀಯವಾಗಿ ಅವನ ಇಡೀ ಜೀವಿತವನ್ನು ಬದಲಾಯಿಸಿತು. ಅವನು ಆಗಲೇ ಶಾಲೆ ಬಿಟ್ಟಿದ್ದರಿಂದ ಮತ್ತು ಕಟ್ಟಡ ಕಟ್ಟುವದರಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದರಿಂದ ತನ್ನ ಜೀವಿತದಲ್ಲಿ ಬೊಬ್‌ನು ಕಲಿತವನಾಗಿರಲಿಲ್ಲ.

ಆದಾಗ್ಯೂ ಬೊಬ್‌ನು ಕ್ರೈಸ್ತನಾದ ತರುವಾಯ, ಅವನು ಪ್ರತೀ ದಿನ ಕೆಲಸಕ್ಕೆ ಹೋಗುವ ಮೊದಲು ತನ್ನ ಬೈಬಲನ್ನು ಓದಬೇಕೆಂದು ಪ್ರೋತ್ಸಾಹಿಸಿದೆನು. ಅವನಿಗೆ ಯಾವದೇ ರೀತಿಯ ಸಭೆಯ ಹಿನ್ನೆಲೆಯಿಲ್ಲದ್ದರಿಂದ, ಪ್ರತಿದಿನವೂ ''ಒಂದಾಗಿ ಕೂಡಿ ಬರುವ ಸಮಯದಲ್ಲಿ'' ದೇವರ ವಾಕ್ಯವನ್ನು ವೈಯಕ್ತಿಕವಾಗಿ ಅಭ್ಯಾಸ ಮಾಡುವದರಿಂದ ತನ್ನ ಜೀವಿತವನ್ನು ಹೇಗೆ ಪೋಷಿಸಿಕೊಳ್ಳಬೇಕೆಂಬುದನ್ನು ಕಲಿತುಕೊಂಡನು.

ಹದಿನೇಳು ವರ್ಷದವನಾದಾಗ, ಬೊಬ್, ಒಂದು ಬೈಬಲ್ ಕರಸ್ಪೊಂಡೆನ್ಸ್ ಕೋರ್ಸಿಗೆ ಸೇರಿಕೊಂಡು ದಾನಿಯೇಲನ ಪುಸ್ತಕದ ಅಧ್ಯಯನದಲ್ಲಿ ಉನ್ನತ ಗ್ರೇಡುಗಳನ್ನು ಪಡೆದದಕ್ಕೆ ಆಶ್ಚರ್ಯವಾದದ್ದಾಗಿತ್ತು. ಅನಂತರದಲ್ಲಿ ಅವನು ಹದಿನೆಂಟನೆಯ ವಯಸ್ಸಿನಲ್ಲಿ ಮಿಲಿಟರಿಯನ್ನು ಸೇರಿಕೊಂಡು, ಕರ್ತನಲ್ಲಿ ತನ್ನ ಆಸಕ್ತಿಯನ್ನು ಮುಂದರಿಸಿಕೊಂಡನೆಂಬುದನ್ನು ಕೇಳಿ ನನಗೆ ಬಹಳ ಆನಂದವಾಯಿತು, ಅವನು ''ಬೂಟ ಕ್ಯಾಂಪ'' ದಲ್ಲಿ ತನ್ನ ಮೊದಲಿನ ಎಂಟು ವಾರಗಳಲ್ಲಿ ಬ್ಯಾರಾಕಿನಲ್ಲಿಯ ಇತರ ಹದಿನೇಳು ಇತರ ಸೈನಿಕರೊಂದಿಗೆ ವೈಯಕ್ತಿಕವಾಗಿ ಪ್ರಾರ್ಥನೆ ಮಾಡಿದನು ; ಅವರು ಕರ್ತನನ್ನು ಸ್ವೀಕರಿಸಿಕೊಂಡರು. ಅವನ ತನ್ನ ಮಿಲಿಟರಿ ಸೇವೆಯನ್ನು ಮುಗಿಸಿದಾಗ, ಬೊಬ್ ಮಿಶನರಿ ಟ್ರೇನಿಂಗ ಪ್ರಾರಂಭಿಸಲು ಕರೆಯಲ್ಪಟ್ಟನು. ಜರ್ಮನಿಯಲ್ಲಿ ತನ್ನ ಕೊನೆಯ ಮಿಶನ್ನಿಗಾಗಿ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅವನ ಮಿಲಿಟರಿ ವಿಮಾನವು ಅಪಘಾತಕ್ಕೀಡಾಯಿತು ಮತ್ತು ಬೊಬ್ ಕರ್ತನೊಂದಿಗಿರಲು ಕರೆಯಲ್ಪಟ್ಟನು.

ವಿಮಾನವು ಅಪಘಾತಕ್ಕೊಳಪಟ್ಟ ಸ್ಥಳದಲ್ಲಿ, ಬೊಬ್‌ನ ಚೀಲದಿಂದ ಜರ್ಮನಿಯ ನೆಲದ ಮೇಲೆ ಸುವಾರ್ತೆಯ ಕರಪತ್ರಗಳು ಚೆಲ್ಲಲ್ಪಟ್ಟಿದ್ದವು, ದೇವರ ವಾಕ್ಯವು ಬೊಬ್‌ನ ಕೈಗಳಿಂದ ಅವನ ತಲೆಗೆ, ಮತ್ತು ಆಮೇಲೆ ಅವನ ತಲೆಯಿಂದ ಅವನ ಹೃದಯಕ್ಕೆ ಮತ್ತು ಅಂತಿಮವಾಗಿ ಅವನ ಹೃದಯದಿಂದ ಇತರರ ಹೃದಯಕ್ಕೆ ಬೆಳೆಯುತ್ತ ಹೋಯಿತು ಮತ್ತು ಬಾಬ್ ಮರಣ ಹೊಂದಿದಾಗ ಅವನು ಜೀವಿತದ ಹೊರಗೆ, ಭೂಲೋಕಕ್ಕೆ ಹೊಂದಿಕೊಂಡಿದ್ದ ಸಂಬಂಧದಿಂದ ತನ್ನ ಕರ್ತನೊಂದಿಗೆ ದೇವರ ಸನ್ನಿಧಿಯಲ್ಲಿ ಆಶ್ಚರ್ಯಕರವಾದ ಅನ್ಯೋನ್ಯತೆಯೊಳಗೆ ಕರೆಯಲ್ಪಟ್ಟನು.

ಬೊಬ್‌ನಂತೆ, ಅನೇಕ ಜನರಿಗೆ ಬೈಬಲ್ ಅಧ್ಯಯನದ ಮೂಲಗಳು ಮತ್ತು ಅವರ ಕ್ರೈಸ್ತ ನಡೆಯಲ್ಲಿ ಪ್ರೋತ್ಸಾಹಗೊಳಿಸುವ ತರಬೇತಿಗಳೂ ಲಭ್ಯವಿರುತ್ತವೆ. ಆಫ್ರಿಕನ್ ಪಾಸ್ಟರರು ದೇವರ ವಾಕ್ಯವನ್ನು ಕಲಿಯಲು ಹದಿನೈದು ತಾಸು ಬಿಸಿಲಿನಲ್ಲಿ ನಡೆಯ ಬೇಕಾಗಿದ್ದಂತೆ, ನಮ್ಮಲ್ಲಿ ಅನೇಕರು ನಡೆದು ಹೋಗಬೇಕಾಗಿಲ್ಲ, ನಮ್ಮ ಪರಿಸರಗಳು ಯಾವುದೇ ಇದ್ದರೂ, ಬೈಬಲ್

ಜ್ಞಾನವನ್ನು ಹೃದಯದ ಅನುಭವಕ್ಕೆ ಬದಲಾಯಿಸುವುದು - ಹೌದು **ವರ್ಗಾಯಿಸುವುದು** ಹೇಗೆಂಬುದನ್ನು ನಾವೆಲ್ಲರೂ ತಿಳಿಯಬೇಕು.

ವೈಯಕ್ತಿಕವಾಗಿ, ನನ್ನ ಕ್ರೈಸ್ತ ಜೀವನದ ಪ್ರಾರಂಭದಲ್ಲಿಯೇ ಕ್ರಮ ಪ್ರಕಾರವಾದ ಬೈಬಲ್ ಅಧ್ಯಯನ ಮತ್ತು ಬಂದಾಗಿ ಕೂಡಿ ಬರುವ ಸಮಯದ ಮಧ್ಯದಲ್ಲಿಯ ಭಿನ್ನತೆಯನ್ನು ತೋರಿಸಿದ್ದಕ್ಕಾಗಿ ಕರ್ತನಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ದೇವರ ವಾಕ್ಯಕ್ಕೆ ನಮ್ಮ ಸಂಪರ್ಕದಲ್ಲಿ ತಲೆ ಮತ್ತು ಹೃದಯ ಸಮರ್ಪಣೆಯಿಲ್ಲದ ತಲೆಯ ಜ್ಞಾನವು ಆತ್ಮಿಕ ಬೆಳವಣಿಗೆಗೆ ನಡಿಸುವದಿಲ್ಲ ಎಂದು ಅರ್ಥ ಮಾಡಿಕೊಳ್ಳುವುದು ಮಹತ್ವದ್ದಾಗಿದೆ.

# ತಲೆ

## ಬೈಬಲ್ ಅಧ್ಯಯನ : ಅದರ ಉದ್ದೇಶ ಮತ್ತು ಅದರ ಸಮಸ್ಯೆಗಳು

**ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸು ವವನೂ ಆಗಿರು. (2 ತಿಮೊಥೆ 2:15).** ಸಾಂಪ್ರದಾಯಿಕವಾಗಿ ಬೈಬಲ ಅಧ್ಯಯನ ಮಾಡುವುದು ಮತ್ತು ಅದರಿಂದ ಅದರಲ್ಲಿಯ ವಿಷಯಗಳ ಬಗ್ಗೆ ಪರಿಚಿತಿ ಮಾಡಿಕೊಳ್ಳುವುದು ಪ್ರತಿಯೊಬ್ಬ ಕ್ರೈಸ್ತನಿಗೆ ಉತ್ತೇಜನಕರವಾದ ಹಾಗೂ ಅಗತ್ಯವಾದ ತೊಡಗಿಸಿಕೊಳ್ಳುವಿಕೆಯಾಗಿದೆ. ಸಾಧ್ಯವಾದಾಗಲೆಲ್ಲಾ, ಭಕ್ತಿವಂತ ಪಾಸ್ಟರನ ಇಲ್ಲವೇ ಬೈಬಲ್ ಬೋಧಕನ ಸೇವೆಗಳ ಮತ್ತು ಬೋಧನೆಗಳ ಪೂರ್ಣ ಲಾಭವನ್ನು ಪಡೆದುಕೊಳ್ಳಿರಿ. ಮತ್ತು ಲಭ್ಯವಿರುವ ಬೈಬಲ್ ಕಮೆಂಟರಿಗಳು ದೇವರ ವಾಕ್ಯದೊಂದಿಗೆ ಮಾನಸಿಕವಾಗಿ ಪರಿಚಿತಿಯುಳ್ಳವರಾಗಿರಲು ಸಹಾಯ ಮಾಡುವುವು. ಅಂಥ ಮಾಹಿತಿಯ ಹಿನ್ನೆಲೆಯು ನಿಮ್ಮ ಸ್ವಂತ ಒಂದಾಗಿ ಕೂಡಿಬರುವಿಕೆಯ ಸಮಯಕ್ಕಾಗಿ ನೀವು ಪಕ್ಕಕ್ಕೆ ಸರಿಯುವಾಗ ನಿಮಗೆ ಬಹಳ ಸಹಾಯ ಮಾಡುವುದು.

ಪಾಸ್ಟರ- ಬೋಧಕರು ದೇವರ ಸಭೆಗೆ ಆತನ ವರವಾಗಿರುವರು. ಒಬ್ಬ

ಪಾಸ್ಟರನ ಶ್ರೇಷ್ಠ ಸೇವೆಯು ವಿಶ್ವಾಸಿಗಳಿಗೆ ಬೈಬಲಿನ ವಿವಿಧ ಪುಸ್ತಕಗಳ ವಿಷಯಗಳನ್ನು, ಹಿನ್ನೆಲೆ ಗಳನ್ನು ಮತ್ತು ಸನ್ನಿವೇಶಗಳನ್ನು, ಅಧ್ಯಾಯ ಅಧ್ಯಾಯಗಳನ್ನಾಗಿ ಹಾಗೂ ಪುಸ್ತಕ ಪುಸ್ತಕಗಳಾಗಿ ಬೋಧಿಸುವುದಾಗಿದೆ. ಆ ಚೌಕಟ್ಟಿನಿಂದ, ಪಾಸ್ಟರನು ತನ್ನ ಸಭೆಯನ್ನು ಭಕ್ತಿಯ ಜೀವನಕ್ಕೆ ಆಂತರಿಕ ತೃಪ್ತಿಯ ಸ್ಥಿತಿಗೆ ಮತ್ತು ನಾಶವಾಗಿ ಹೋಗುತ್ತಿರುವ ಪ್ರಾಣಗಳಿಗಾಗಿ ಚಿಂತನೆಗೆ ಎಚ್ಚರಿಸಬೇಕಾಗಿದೆ.

ಅಂಥ ಒಬ್ಬ ಪಾಸ್ಟರನಿಂದ ಉಪದೇಶಿಸಲ್ಪಟ್ಟ ಐದು ಭಾಷಣಗಳ ದಾಖಲೆ ನನ್ನ ಮುಂದಿರುತ್ತದೆ. ಹಲವು ವರ್ಷಗಳ ಹಿಂದೆ, ಪಾಸ್ಟರ ವಿಲಿಯಮ್ ಸ್ಟಿಲ್ ಎಂಬವನು ಇಂಟರ-ವಾರ್ಸಿಟಿ' ಥೆಯೊಲೊಜಿಕಲ್ ಸ್ಟುಡೆಂಟ್ಸ ಕಾನ್ಫರನ್ಸಿನಲ್ಲಿ ಈ ಭಾಷಣಗಳನ್ನು ಪ್ರಸ್ತುತ ಪಡಿಸಿದನು. ಸ್ಕೊಟಲ್ಯಾಂಡಿನ ಅಬರ್ಡೀನದಲ್ಲಿಯ ಒಂದು ಸಭೆಯ ನಾಲ್ವತ್ತೈದು ವರ್ಷಕ್ಕಿಂತಲೂ ಹೆಚ್ಚು ಅವಧಿಯ ಸೇವೆಯ ನಂತರವೂ ಅವನ ಸೇವೆಯು ಎಂದಿನಂತೆ ಇನ್ನೂ ಬಲವಾದದ್ದೂ ಆಸಕ್ತಿಯುಳ್ಳದ್ದೂ ಆಗಿತ್ತು, ಮತ್ತು ಪ್ರಶ್ನೆಯಿಲ್ಲದೇ, ಅವನ ಸಭಾಪಾಲಕ ಸೇವೆಯು ಸ್ಕೊಟಲ್ಯಾಂಡಿನಲ್ಲಿಯ ಆ ಸಭೆಯನ್ನು ದಾಟಿ ಬಹು ದೂರ ತಲುಪಿತು. ಅವನ ಪ್ರಸಂಗ ಮತ್ತು ಬೋಧನೆಯಿಂದ ಪ್ರಭಾವಿತರಾದ ಮಾರ್ಪಾಟು ಹೊಂದಿದವರ ಮತ್ತು ಅನೇಕ ಇತರರ ಒಂದು ಸಣ್ಣ ಗುಂಪು ಅಕ್ಷರಶಃವಾಗಿ ಇಂದು ಜಗತ್ತಿನಲೆಲ್ಲಾ ಸೇವೆ ಮಾಡುತ್ತಿರುವರು. ತನ್ನ ಇಂಟರ - ವಾರ್ಸಿಟಿ ವಿದ್ಯಾರ್ಥಿಗಳಿಗೆ ತನ್ನ ಭಾಷಣಗಳಲ್ಲಿ ಪಾಸ್ಟರ ಸ್ಟಿಲ್ ಹೀಗೆ ಹೇಳಿದನು:

> ಕುರಿಗಳು ತಿನ್ನಿಸಲ್ಪಡುವದನ್ನು ಬಯಸದಿದ್ದರೂ, ಕುರಿಗಳಿಗೆ ತಿನ್ನಿಸಲು ಪಾಸ್ಟರನು ಕರೆಯಲ್ಪಟ್ಟಿರುವನು. ಅವನು ನಿಶ್ಚಿತವಾಗಿಯೂ ಆಡುಗಳನ್ನು ಉಪಚರಿಸುವವನಾಗಬಾರದು ಆಡುಗಳು ನಾಡಿನಲ್ಲಿ ಆಡುಗಳನ್ನು ಉಪಚರಿಸಲಿ. ನೀವು ನಿಶ್ಚಯವಾಗಿ ಆಡುಗಳನ್ನು ಕುಟಿಲತನದಿಂದ ಕುರಿಗಳನ್ನಾಗಿ ಮಾಡಲಾರಿರಿ... ಬಹಳವಾಗಿ ಫಲ ಭರಿತವಾದ ಸಭಾಪಾಲನಾ ಕರ್ತವ್ಯವು ಎಲ್ಲಾ ರೀತಿಯ ಕುರಿಗಳು ಒಟ್ಟಾಗಿ ಜೀವಿಸುವಂತೆ ಮಾಡುವುದು ಮತ್ತು

ಆಡುಗಳಂತಾಗದೇ ಆಡುಗಳ ಮಧ್ಯದಲ್ಲಿ ಜಗತ್ತಿನಲ್ಲಿ ಹೇಗೆ ಜೀವಿಸಬೇಕೆಂಬುದನ್ನು ಅವುಗಳಿಗೆ ತೋರಿಸುವುದು ಆಗಿರುತ್ತದೆ.

ನೀವು ಹೊಸದಾಗಿ ಹುಟ್ಟುವಾಗ, ಅಂಥ ನಂಬಿಗಸ್ಥಿಕೆಯ ಸಭಾಪಾಲನಾ ಸೇವೆಯ ಮುಖಾಂತರ ನೀವು ಆಶೀರ್ವಾದ ಹೊಂದುವ ಸಭೆಯ ಭಾಗವಾಗುವುದು ಬಹಳ ಮಹತ್ವದ್ದಾಗಿದೆ.

ದುರ್ದೈವದಿಂದ, ಈ ಪುಸ್ತಕವನ್ನು ಓದುತ್ತಿರುವ ನಿಮ್ಮಲ್ಲಿ ಕೆಲವರಿಗೆ ಈ ರೀತಿಯ ಸಭಾಪಾಲನಾ ನಿರ್ದೇಶನವಿರಲಿಕ್ಕಿಲ್ಲ. ಹೀಗಿದ್ದರೂ, ಒಬ್ಬ ನಂಬಿಗಸ್ಥ ಸಭಾಪಾಲಕ - ಬೋಧಕನ ಸಹಾಯವಿದ್ದರೂ ಮತ್ತು ಬೈಬಲ್ ಕಮೆಂಟರಿ ನಿಮಗೆ ಲಭ್ಯವಿದ್ದರೂ, ನಿನ್ನ ಅನುದಿನದ ''ಒಂದಾಗಿ ಕೂಡಿ ಬರುವ ಸಮಯ''ದಲ್ಲಿ ದೇವರು ನಿನಗೆ ಕೊಡಲು ಅಪೇಕ್ಷಿಸುವ ಆತ್ಮಿಕ ಆಹಾರಕ್ಕೆ ಬದಲಾಗಿ ನೀನು ನಿನ್ನ ತಲೆಯಲ್ಲಿ ನೀನು ಕಲಿತುಕೊಂಡಿದ್ದು ಇರುವುದು ಎಂದು ತಿಳಿಯುವ ಗಂಡಾಂತರದ ಬಗ್ಗೆ ನೀನು ಯಾವಾಗಲೂ ಎಚ್ಚರಿಕೆಯಿಂದ ಇರಬೇಕು.

ಇಲ್ಲ, ನಂಬಿಗಸ್ಥ ಸಭಾಪಾಲಕ - ಬೋಧಕನಿಂದ ನಾವು ಹೊಂದಿಕೊಳ್ಳುವ ಬೈಬಲ್ ಜ್ಞಾನವಾಗಲಿ. ಇಲ್ಲವೇ, ನಮ್ಮ ಸ್ವಂತ ಬುದ್ಧಿಯಿಂದ ದೇವರ ವಾಕ್ಯವನ್ನು ಅಧ್ಯಯನ ಮಾಡುವದರಿಂದ ಹೊಂದಿಕೊಳ್ಳುವ ತಿಳುವಳಿಕೆಯಾಗಲಿ, ವಿಶೇಷವಾದ ''ಒಂದಾಗಿ ಕೂಡಿ ಬರುವ ಸಮಯ''ದಲ್ಲಿ ನಾವು ಆತನೊಂದಿಗೆ ಅನ್ಯೋನ್ಯತೆಯಲ್ಲಿರುವಂತೆ ನಮ್ಮ ಹೃದಯಗಳಿಗೆ ಮತ್ತು ಜೀವಿತಗಳಿಗೆ ಪವಿತ್ರಾತ್ಮನು ಅನ್ವಯಿಸುವ ಆತ್ಮಿಕ ಆಹಾರದ ಸ್ಥಳವನ್ನು ತೆಗೆದುಕೊಳ್ಳಲಾರದು.

ಒಂದು ವೈಯಕ್ತಿಕ ''ಒಂದುರಗೂಡಿ ಬರುವ ಸಮಯ'' ಕ್ಕೆ ಬೈಬಲ್ ಶಿಕ್ಷಕನು ಬದಲಿಯಾದವನು ಆಗಿರದಂತೆ, ಒಂದು ವೈಯಕ್ತಿಕ ''ಒಂದು ಗೂಡಿ ಬರುವ ಸಮಯ'' ವಿರುವುದೂ ದೇವರು ತನ್ನ ವಾಕ್ಯವನ್ನು ಅಧ್ಯಯನ ಮಾಡಲು ನಮಗೆ ಕೊಡುವ ಅವಕಾಶಗಳನ್ನು ಅಲಕ್ಷಿಸುವದಕ್ಕಾಗಿ ಮತ್ತು ಬೈಬಲ್ -

ನಂಬುವ ಸಭೆಯ ಸೇವೆಯ ಭಾಗವಾಗುವದರಲ್ಲಿ ಸೋತು ಹೋಗುವದಕ್ಕೂ ನೆವವಾಗಿರುವದಿಲ್ಲ.

ನಿನ್ನ ಸನ್ನಿವೇಶಗಳು ಏನೇ ಇದ್ದರೂ, ಕ್ರಮ ಪ್ರಕಾರವಾದ ಬೈಬಲ್ ಅಧ್ಯಯನ ವನ್ನು ಬೆಳಿಸಿಕೊಳ್ಳಲು ಈ ಕೆಳಗಿನ ಸೂಚನೆಗಳು ನಿನಗೆ ಸಹಾಯ ಮಾಡುವವು.

ಬಹು ಸಮಯದ ಹಿಂದೆ, Myles Coverdale ದೇವರ ವಾಕ್ಯದ ಸಹಾಯಕ ಅಧ್ಯಯನಕ್ಕಾಗಿ ಉಪಯೋಗಿಸಲು ಈ ಪ್ರಶ್ನೆಗಳನ್ನು ಸೂಚಿಸಿದರು. ಅವರು ಬರೆದದ್ದನ್ನು ಸರಳವಾಗಿ ಇಲ್ಲಿ ಹೇಳಲಾಗಿದೆ :

> ಯಾವುದು ಹೇಳಲ್ಪಟ್ಟಿದೆ ಇಲ್ಲವೇ ಬರೆಯಲ್ಪಟ್ಟಿದೆ ಎಂಬುದನ್ನು ಗಮನಿಸಿದರೆ ಮಾತ್ರವಲ್ಲ ಈ ಕೆಳಗಿನ ಪ್ರಶ್ನೆಗಳೊಂದಿಗೆ ಉತ್ತರ ಪಡೆಯುವುದೂ ಪರಿಶುದ್ಧ ಬರಹಗಳನ್ನು ಅರ್ಥ ಮಾಡಿಕೊಳ್ಳಲು ನಿಮಗೆ ಬಹಳವಾಗಿ ಸಹಾಯ ಮಾಡುವುದು :
>
> **ಯಾರ ಬಗ್ಗೆ** ಪರಿಚ್ಛೇದವು ಮಾತಾಡುತ್ತಿದೆ ?
> **ಯಾರಿಗೆ ಪರಿಚ್ಛೇದವು** ನಿರ್ದೇಶಿಸಲ್ಪಟ್ಟಿದೆ ?
> **ಯಾವ ಸ್ಪಷ್ಟವಾದ ಶಬ್ದಗಳನ್ನು** ಲೇಖಕನು ಉಪಯೋಗಿಸುತ್ತಾನೆ ?
> **ಯಾವ ಸಮಯದಲ್ಲಿ** ಪರಿಚ್ಛೇದವು ಬರೆಯಲ್ಪಟ್ಟಿತು ?
> **ಎಲ್ಲಿಂದ** ಪರಿಚ್ಛೇದವು ಬರೆಯಲ್ಪಟ್ಟಿತು ?
> **ಯಾವ ಉದ್ದೇಶಕ್ಕಾಗಿ** ಪರಿಚ್ಛೇದವವು ಬರೆಯಲ್ಪಟ್ಟಿತು ?
> **ಯಾವ ಪರಿಸ್ಥಿತಿಯಲ್ಲಿ** ಪರಿಚ್ಛೇದವು ಬರೆಯಲ್ಪಟ್ಟಿತು ?
>
> ಪರಿಚ್ಛೇದವು ಅದರ ಹಿಂದಿರುವ ಮತ್ತು ಅದರ ಮುಂದಿರುವ ಸಂಗತಿಗೆ ಹೇಗೆ ಹೊಂದಿಕೊಳ್ಳುತ್ತದೆ ?

(ಸಾಧ್ಯವಾದಾಗ ಮಾರ್ಜಿನಲ್ ರೆಫರನ್ಸ ಬೈಬಲ್‌ನ್ನು ಉಪಯೋಗಿಸುವದರಿಂದ) ನಿನ್ನ ಕ್ರಮಪ್ರಕಾರವಾದ ಬೈಬಲ್ ಅಧ್ಯಯನದಲ್ಲಿ

ಅಂಥ ಪ್ರಶ್ನೆಗಳಿಗೆ ಸ್ವಾಭಾವಿಕವಾಗಿ ಉತ್ತರ ಕೊಡುವದನ್ನು ಕಲಿತುಕೊಳ್ಳುವಾಗ, ಬೈಬಲಿನಲ್ಲೆಲ್ಲಾ ಸಾಮರಸ್ಯಗೊಳಿಸುವ ಆಶ್ಚರ್ಯಕರವಾದ ಸತ್ಯಗಳ ಬಗ್ಗೆ ನೀವು ಚಕಿತರಾಗುವಿರಿ. ಕ್ರಮೇಣವಾಗಿ, ಕೆಲವು ಭಾಗಗಳು ಆಗಲೇ ನೆರವೇರಿದ ಮತ್ತು ಕೆಲವು ಇನ್ನು ಮುಂದೆ ನೆರವೇರ ಬೇಕಾಗಿರುವ, ದೇವರ ಪ್ರಕಟನೆಯಲ್ಲಿ ಒಳಗೊಂಡಿರುವ ಪ್ರವಾದನೆಯ ಸರಣಿಯು ಪ್ರಕಟವಾಗುವದರೊಂದಿಗೆ ನೀವು ಆಕರ್ಷಿಸಲ್ಪಡುವಿರಿ.

ನಿಮ್ಮ ಕಣ್ಣುಗಳು ನಿತ್ಯನಾದ ದೇವರ ಕಡೆಗೆ ಹೆಚ್ಚೆಚ್ಚಾಗಿ, ಅದ್ಭುತಕರವಾಗಿ ತೆರೆಯಲ್ಪಡುವಂತೆ ನೀವು ಬಹಳವಾಗಿ ಆಶೀರ್ವದಿಸಲ್ಪಡುವಿರಿ ; ಸೃಷ್ಟಿಯಲ್ಲಿ ಆತನ ಉದ್ದೇಶಗಳು ; ಚರಿತ್ರೆಯಲ್ಲಿ ಆತನ ಸ್ಥಾನ ; ರಕ್ಷಣೆಯ ಆತನ ಸಿದ್ಧಾಂತ; ಕರ್ತನಾದ ಯೇಸು ಕ್ರಿಸ್ತನ ವ್ಯಕ್ತಿತ್ವದಲ್ಲಿ ಭೂಲೋಕದೊಳಗೆ ಆತನ ಬರುವಿಕೆ. ಇಂದಿನ ಸಮಯದ ವರೆಗೆ ನಿನ್ನಂಥ, ನನ್ನಂಥ ಕ್ರೈಸ್ತರಿಗಾಗಿ ಆತನ ವಿವರವಾದ ನಿರ್ದೇಶನಗಳು - ಇವುಗಳನ್ನು ನೋಡುವಿ. ಅಂಥ ಬೈಬಲ್ ಜ್ಞಾನವು ನಿಜವಾಗಿಯೂ ಆಶ್ಚರ್ಯಗೊಳಿಸುವಂಥದ್ದಾಗಿದೆ ಮತ್ತು ಪ್ರತಿಯೊಬ್ಬ ವಿಶ್ವಾಸಿಯಿಂದ ಜಾಣ್ಮೆಯಿಂದ ಅನುಸರಿಸಲ್ಪಡಬೇಕಾಗಿದೆ.

# ಹೃದಯ

## ಒಂದುಗೂಡಿ ಬರುವ ಸಮಯ :
## ಅದರ ಸರಿಪಡಿಸುವಿಕೆಗಳು ಮತ್ತು ಆಲೋಚನೆಯು

ತನ್ನ ಸ್ವಂತವಾದ ಪ್ರತಿಯೊಬ್ಬರ ಬಗ್ಗೆ ದೇವರ ಅಪೇಕ್ಷೆಯು, ನಮ್ಮ **ಹೃದಯ** ಮತ್ತು ನಮ್ಮ **ತಲೆ**ಯೊಂದಿಗೆ - ಆತನೊಂದಿಗೆ ವೈಯಕ್ತಿಕ ಅನ್ಯೋನ್ಯತೆಯ ಒಂದಾಗಿರುವಿಕೆಯಲ್ಲಿ ಎರಡೂ ಕೂಡಿಸಲ್ಪಟ್ಟಿರುವದರೊಂದಿಗೆ **ಆತ್ಮನಲ್ಲಿಯೂ ಸತ್ಯದಲ್ಲಿಯೂ** ಆರಾಧಿಸುವುದು ಆಗಿದೆ (ಯೋಹಾನ 4:24).

ನಿನ್ನ ಸಾಂಪ್ರದಾಯಕವಾದ ಬೈಬಲ್ ಅಧ್ಯಯನವು ನಿನ್ನನ್ನು ಕೇವಲ ಬೈಬಲಿನ ಕರ್ಮವಾಚಕ ಜ್ಞಾನದೊಂದಿಗೆ ಬಿಡುವುದಾದರೆ, ಅಂಥ ಜ್ಞಾನವು

ನಿನಗೆ ಲಾಭಕರವಾದದ್ದಾಗಿರುವದಿಲ್ಲ. ಯತಾರ್ಥವಾದ ಜೀವನ-ಅನ್ವಯವಿಲ್ಲದೇ ತಲೆಯ ಜ್ಞಾನವು ಇಂದು ಅನೇಕ ಕ್ರೈಸ್ತರಿಗೆ ದೊಡ್ಡ ಸಮಸ್ಯೆಯಾಗಿದೆ.

ದೇವರ ವಾಕ್ಯದ ಬಗ್ಗೆ ಬಹಳವಾಗಿ ತಿಳಿದವರಾಗಿದ್ದು, ಆ ಅದ್ಭುತಕರವಾದ ಜ್ಞಾನದ ಬೆಳಕಿನಲ್ಲಿ ಜೀವಿಸದೇ ಇರುವುದು ದುಃಖಕರವಾದ ಸಂಗತಿಯಾಗಿದೆ. ಅದರ ಬದಲು, ಅವರು ಬೈಬಲಿನ ತಮ್ಮ ಜ್ಞಾನವನ್ನು ತಮ್ಮ ಮನಸ್ಸುಗಳಲ್ಲಿ ಬಂಧಿಸಿಟ್ಟು, ಹುಚ್ಚುತನದಿಂದ ಲೋಕದ ಮಾರ್ಗಗಳನ್ನು ಅನ್ವಯಿಸಿಕೊಳ್ಳುತ್ತಾರೆ. ಎಂಥಾ ದುಃಖಕರ ವಾದ ಸಂಗತಿ ; ದೇವರ ವಾಕ್ಯವು ಸಮಕಾಲೀನ ಯೋಚನೆ ಮತ್ತು ಜೀವನ ವಿಧಾನಗಳಿಗೆ ಎಂದೂ ಹೊಂದಿಕೊಂಡು ಹೋಗುವುದಿಲ್ಲ.

ಲೋಕದ ಮನೋಭಾವನೆಯಿಂದ ದೇವರ ವಾಕ್ಯವನ್ನು ಸಮೀಪಿಸಲು, ಮತ್ತು ಪರಿಶುದ್ಧ ಬರಹಗಳನ್ನು ತತ್ವಜ್ಞಾನ ಶಾಸ್ತ್ರ ಇಲ್ಲವೇ ಮಾನವ ಸಂಸ್ಕೃತಿಯ ಮನಃಶಾಸ್ತ್ರದೊಂದಿಗೆ ಏಕೀಭವಿಸುವುದನ್ನು ಪ್ರಯತ್ನಿಸುವುದು ಬೌದ್ಧಿಕ ಯತಾರ್ಥತೆಯ ಹಾಗೂ ನೈತಿಕ ಪ್ರಾಮಾಣಿಕತೆಯ ಪ್ರತಿಯೊಂದು ತತ್ವವನ್ನು ಮೀರುವಂಥದ್ದಾಗಿರುತ್ತದೆ. ಕರ್ತನಾದ ಯೇಸು ಕ್ರಿಸ್ತನು ಇಂದಿನ ದುಷ್ಟ ಜಗತ್ತಿನೊಳಗಿಂದ ನಮ್ಮನ್ನು ಬಿಡಿಸಲು ಅದ್ಭುತಕರವಾದ ಕ್ರಯವನ್ನು ಕೊಟ್ಟನು, ಮತ್ತು ದೇವರ ವಾಕ್ಯವು ನಿಶ್ಚಯವಾಗಿ ಕ್ರಿಸ್ತನನ್ನು ತಿರಸ್ಕರಿಸುವ ಸಂತತಿಯ ವಿಚಾರ ಪದ್ಧತಿಯನ್ನು ವಿರೋಧಿಸುತ್ತದೆ.

ದೇವರ ವಾಕ್ಯವು ಎಂದೂ ಮಾನವತಾವಾದದ ಸಂಸ್ಕೃತಿಯೊಂದಿಗೆ ಹೊಂದಿಕೊಳ್ಳದೇ ಹೋಗುವದರಿಂದ, ನಾವು ಏನಾಗಿರಬೇಕೆಂದು ದೇವರ ಶ್ರೇಷ್ಠ ಅಪೇಕ್ಷೆಯೊಂದಿಗೆ ನಾವು ಬೈಬಲನ್ನು ಅಧ್ಯಯನ ಮಾಡುವಾಗ ಅದು ಜೀವನ ಬದಲಾಯಿಸುವ ಕ್ರಾಂತಿಕಾರಿ ಅನುಭವವಾಗುವುದು. ದೇವರು ತನ್ನ ಪ್ರತಿಯೊಬ್ಬ ಮಗುವಿನಿಂದ ತಲೆಯ ಜ್ಞಾನವನ್ನಲ್ಲ ಆದರೆ ಈ ಹೃದಯದ ಒಳಗೊಳ್ಳುವಿಕೆಯನ್ನು ಬಯಸುತ್ತಾನೆ.

''ನಿನ್ನ ವಾಕ್ಯವನ್ನು ನನ್ನ ತಲೆಯಲ್ಲಿ ಅಡಗಿಸಿಟ್ಟುಕೊಂಡರುವೆನು''

ಎಂದು ಕೀರ್ತನೆಗಾರನು ಹೇಳಲಿಲ್ಲ, ಆದರೆ ''ನಿನಗೆ ವಿರೋಧವಾಗಿ ಪಾಪ ಮಾಡದಂತೆ, ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿ ಇಟ್ಟುಕೊಂಡಿದ್ದೇನೆ'' (ಕೀರ್ತನೆ 119-11) ಎಂದು ಹೇಳಿದ್ದಾನೆ, ತನ್ನ ಬಹಿರಂಗ ಖಂಡನೆಯಲ್ಲಿ, ಅಡೊಲ್ಫ ಹಿಟ್ಲರನು ಕೆಲವು ಸಲ ಬೈಬಲನಿಂದ ಉಲ್ಲೇಖಿಸಿದನು, ಆದರೆ ಕೆಲವೊಂದು ಬೈಬಲ್ ವಚನಗಳ ಈ ಜ್ಞಾನವು ಅವನ ನೈತಿಕ ಆಯ್ಕಗಳಲ್ಲಿ ಇಲ್ಲವೇ ತನ್ನ ನಿತ್ಯವಾದ ಅಂತಿಮ ಸ್ಥಿತಿಯಲ್ಲಿ ಯಾವುದೇ ಸಹಾಯ ಕೊಡದು. ಅವನ ಜ್ಞಾನವು ನಿಜವಾಗಿಯೂ ಅವನ ಹೃದಯದೊಳಗೆ ಸೇರಿರಲಿಲ್ಲ.

ಆದರೆ ದೇವರ ವಾಕ್ಯವನ್ನು ದಾವೀದನು ತನ್ನ ಹೃದಯದೊಳಗೆ ಅಡಗಿಸಿಟ್ಟು ಕೊಂಡಿದ್ದೇನೆ ಎಂದು ಹೇಳಿದ್ದರಲ್ಲಿ ಅವನ ಅರ್ಥವೇನು ಇತ್ತು ? ಎಂದು ನೀವು ಕೇಳಬಹುದು. ತನ್ನ ರಕ್ತನಾಳಗಳಿಂದ ನಾಡಿಗಳಿಗೆ ರಕ್ತವನ್ನು ಒತ್ತಿ ಕಳಿಸುವ ರಕ್ತಕೋಶದ ಪೊಳ್ಳಿನ ಬಗ್ಗೆ ಅವನು ಹೇಳುತ್ತಿರುವದಿಲ್ಲ. ಅಲ್ಲಿ ಯಾರೂ ದೇವರ ವಾಕ್ಯವನ್ನು ಅಡಗಿಸಿಡಲಾರರು. ದಾವೀದನು **ಹೃದಯ** ಎಂಬ ಶಬ್ದವನ್ನು ಉಪಯೋಗಿಸಿದಾಗ, ಆಂತರಿಕ ಆತ್ಮವನ್ನು ನಿರ್ದೇಶಿಸುವ ತನ್ನ ನಡತೆಯ ಜೀವದ ಕೇಂದ್ರವನ್ನು ಅವನು ಸೂಚಿಸುತ್ತಿದ್ದಾನೆ. ನಮ್ಮ ಜೀವದ ಕೇಂದ್ರದಲ್ಲಿ ದೇವರ ವಾಕ್ಯವನ್ನು ಅಡಗಿಸಲು ಬೈಬಲನ್ನು ಓದುವಂತೆ, ಆಗ ಆಂತರ್ಯದಲ್ಲಿ ವಾಸಿಸುವ ಕ್ರಿಸ್ತನ ಬಲದಿಂದ, ದೇವರ ವಾಕ್ಯದ ಶುದ್ಧೀಕರಿಸುವ, ಶಕ್ತಿಯಿಂದ ತುಂಬಿಸುವ ಮತ್ತು ಪೋಷಿಸುವ ಬಲವನ್ನು ಸತತವಾಗಿ ಅನುಭವಿಸುವೆವು.

ಪೂರ್ಣಾವಧಿ ವಿದ್ಯಾರ್ಥಿಯಂತೆ ಕ್ರಮಪ್ರಕಾರವಾಗಿ ಬೈಬಲನ್ನು ಮತ್ತು ದೈವಜ್ಞಾನ ಶಾಸ್ತ್ರವನ್ನು ಅಧ್ಯಯನ ಮಾಡುವ ಅವಕಾಶ ನನಗಿದ್ದಾಗ ಬೈಬಲಿನ ಸತ್ಯವನ್ನು ಕೂಡಿಸಿಟ್ಟುಕೊಳ್ಳುವುದು ದೇವರು ತನ್ನ ವಾಕ್ಯದ ಮುಖಾಂತರ ಹೇಳುವಂಥದ್ದನ್ನು ಕೇಳುವದಕ್ಕೆ ಏಕಾಂಗಿಯಾಗಿರವದಕ್ಕೆ ಪರ್ಯಾಯವಲ್ಲ ಎಂದು ಕಲಿತುಕೊಂಡೆನು. ದೇವರ ವಾಕ್ಯವು ನನ್ನ ಮೇಲೆ ನ್ಯಾಯ ತೀರ್ಪು ಮಾಡಲು ಬಿಡುವದಕ್ಕಿಂತ, ದೇವರ ವಾಕ್ಯದ ಮೇಲೆ ನ್ಯಾಯ ತೀರಿಸಲು ಕುಳಿತುಕೊಳ್ಳುವುದು ಸುಲಭ ಎಂಬುದನ್ನು ಕಂಡು ಕೊಂಡೆನು.

ಆ ಕಾಲೇಜು ದಿನಗಳಲ್ಲಿ ಕ್ಲಾಸ ರೂಮಿನ ಪಾಠಕ್ಕಾಗಿ ತಮಾಷೆಯ

ನಿರೂಪಣೆ ಗಳನ್ನು ಕೊಡುತ್ತಿದ್ದವು. ''ಒಂದು ಉಪನ್ಯಾಸವು, ಇಬ್ಬರ ತಲೆಯಲ್ಲಿಯೂ ಹೋಗದೇ ವಿಷಯವು ನೋಟ ಪುಸ್ತಕದೊಳಗೆ ವರ್ಗಾಯಿಸುವ ಸಾಧನವಾಗಿದೆ'' ಎಂದು ಹೇಳುತ್ತಿದ್ದೆವು.

ಇದ್ದಕ್ಕಿಂತಲೂ ಹೆಚ್ಚು ದುಃಖಕರವಾದ ಸಂಗತಿಯು, ಇಬ್ಬರ ಹೃದಯವನ್ನೂ ಕದಲಿಸದೇ ಬೈಬಲ್ ಬೋಧನೆಯು ಸಭಾಪಾಲಕನ ತಲೆಯ ಮುಖಾಂತರ ಸಭೆಯ ತಲೆಗಳೊಳಗೆ ಹೋಗುವ ಪರಿಸ್ಥಿತಿಯಾಗಿದೆ. ದೇವರು ಸ್ಪಷ್ಟವಾಗಿ ಹೇಳುವದನ್ನು ಜ್ಞಾಪಿಸಿಕೊಳ್ಳಿರಿ :

> ''ಆದರೆ ಆ ಕಾಲದಲ್ಲಿ ಕೇಳಿದವರು ನಂಬದೆ ಹೋದ ಕಾರಣ ಆ ವಾಕ್ಯದಿಂದ ಅವರಿಗೆ ಪ್ರಯೋಜನ ವಾಗಲಿಲ್ಲ'' (ಇಬ್ರಿಯ 4:2).

ಪ್ರವಾದಿ ಯೆರಮೀಯನ ಸಾಕ್ಷಿಯೊಂದಿಗೆ ನಾವು ಗುರುತಿಸಿಕೊಳ್ಳುವಾಗ ದೇವರ ವಾಕ್ಯವು ತನ್ನ ಉದ್ದೇಶಿತ ಆಶೀರ್ವಾದವನ್ನು ನಮ್ಮ ಜೀವಿತಗಳಿಗೆ ತರುವುದು. ''ಆತನ ವಾಕ್ಯವು .... ಉರಿಯುವ ಬೆಂಕಿಯು ನನ್ನ ಎಲುಬುಗಳಲ್ಲಿ ಅಡಕವಾಗಿದೆಯೋ ಎಂಬಂತೆ ನನ್ನ ಹೃದಯದಲ್ಲಿದೆ....'' ಎಂದು ಯೆರಮೀಯನು ಹೇಳಿದನು. (ಯೆರಮೀಯ 20:9) ಇಂದು ಅನೇಕ ವಿಶ್ವಾಸಿಗಳ ಜೀವಿತದಲ್ಲಿ ದೇವರ ವಾಕ್ಯದ ಬಗ್ಗೆ ಅಂಥ ಪ್ರಜ್ವಲಿಸುವ ನಂಬಿಕೆಯು ಕಳೆದು ಹೋಗಿದೆ. ತಲೆ ಮತ್ತು ಹೃದಯದ ಮಧ್ಯದಲ್ಲಿ, ದೇವರ ಧ್ವನಿಯ ಮತ್ತು ವಿಶ್ವಾಸಿಯ ಜೀವನದ ಮಧ್ಯದಲ್ಲಿ ನಿಜವಾದ ಜೋಡಿಸುವಿಕೆ ಇರುವದಿಲ್ಲ. ಅದರ ಪರಿಣಾಮವಾಗಿ ನಾವು ತಿಳಿದಿರುವದರ ಮತ್ತು ನಾವು ಮಾಡುವದರ ಮಧ್ಯದಲ್ಲಿ ಪರಸ್ಪರ ಸಂಬಂಧವಿರುವದಿಲ್ಲ.

ಬೈಬಲ್ ಬೋಧನೆಯು ನಿಜವಾಗಿಯೂ ನಿಮ್ಮ ಹೃದಯವನ್ನು ಕದಲಿಸುವಾಗ, ಅದು ಹೆಚ್ಚಾಗಿ ನಿಶ್ಚಿತವಾಗಿ ನಿಮ್ಮ ಜೀವಿತವನ್ನು ಬದಲಾಯಿಸುವುದು. ಇದು ಸಂಭವಿಸು ವಂತೆ, ಕುಟುಂಬ ಆಲೋಚನಾ ಕರ್ತರಂಥ ಮತ್ತು ಕ್ರಮಬದ್ಧವಾದ ಚರ್ಚಾ ಕೂಟಗಳಂಥ ಮಾನವ ಸಹಾಯಕ ಪದ್ಧತಿಗಳ ಮೇಲೆ ನೀವು ಕಡಿಮೆ ಅವಲಂಭಿತರಾಗುವಿರಿ, ಯಾಕಂದರೆ ದೇವರು

ತನ್ನ ವಾಕ್ಯದಲ್ಲಿ ನಿನಗಾಗಿ ಮಾಡಿದ ವಾಗ್ದಾನಗಳು ನಿನಗೆ ವೈಯಕ್ತಿಕವಾಗಿ ಹೇಗೆ ಪೂರೈಸಲ್ಪಡುವವು ಎಂಬುದನ್ನು ನೀನು ಕಂಡುಕೊಂಡಿರುವಿ. ಆಗ ಪವಿತ್ರಾತ್ಮನು ಆಂತರ್ಯದಲ್ಲಿ ವಾಸಿಸುವ ಶಕ್ತಿಯಿಂದ, ಕರ್ತನಾದ ಯೇಸು ಕ್ರಿಸ್ತನ ಸ್ಪಷ್ಟವಾದ ಆಜ್ಞೆಗಳಿಗೆ ವಿಧೇಯನಾಗಲು ಶಕ್ತನಾಗುವಿ.

ಆಗಾಗ, ನಾನು ಪ್ರಸಂಗಿಸಿದ ನಂತರ, ಸಭೆಯ ಸಭ್ಯ ಸದಸ್ಯನು ''ನೀವು ನಿಶ್ಚಯವಾಗಿ ಯೋಚಿಸಲಿಕ್ಕೆ ಕೆಲವೊಂದನ್ನು ನನಗೆ ಕೊಟ್ಟಿರಿ'' ಎಂದು ಹೇಳುವದರಿಂದ ನನ್ನನ್ನು ಪ್ರೋತ್ಸಾಹಿಸಲು ಹೇಳುತ್ತಾನೆ. ನಾನು ಅದನ್ನು ಕೇಳುವಾಗ, ನನ್ನ ಪ್ರಸಂಗವು ಏನನ್ನು ಸಾಧಿಸಬಹುದೆಂದು ನಾನು ಯೋಚಿಸಿದ್ದೇನೋ ಅದನ್ನು ಸಾಧಿಸಲಿಲ್ಲ ಎಂಬುದನ್ನು ತಿಳಿದುಕೊಳ್ಳುತ್ತೇನೆ. ದೇವರ ವಾಕ್ಯವು ಬೌದ್ಧಿಕ ಪ್ರೇರೇಪಿಸುವಿಕೆಯಂತೆ ಹೊಗಳಲ್ಪಡುವದಕ್ಕೂ ಮತ್ತು ಅದು ಜೀವನ ಮಾರ್ಗದರ್ಶಿಸುವಿಕೆಯ ಸತ್ಯದಂತೆ ಅನ್ವಯಿಸಲ್ಪಡುವದಕ್ಕೂ ಮಧ್ಯದಲ್ಲಿ ಭಿನ್ನತೆ ಇರುತ್ತದೆ. ನಿಜವಾಗಿಯೂ, ಪ್ರಸಂಗಗಳು ಯಾವುದಾದರ ಬಗ್ಗೆ ಯೋಚಿಸುವದನ್ನಲ್ಲ, ಆದರೆ ಕಾರ್ಯ ಮಾಡಲಿಕ್ಕಾಗು ವಂಥದ್ದನ್ನು ಜನರಿಗೆ ಕೊಡಬೇಕು.

ಅದೇ ರೀತಿಯಲ್ಲಿ, ''ಒಂದಾಗಿ ಕೂಡಿ ಬರುವಿಕೆಯ ಸಮಯವು'' ವಿಶ್ವಾಸದ ಕಾರ್ಯಾಚರಣೆಯ ಉತ್ತರಕ್ಕೆ, ಮತ್ತು / ಇಲ್ಲವೇ ವಿಧೇಯತೆಗೆ, ಪಾಪದ ಅರಿಕೆಗೆ, ಇಲ್ಲವೇ ಆರಾಧನೆಯ ಮನೋಭಾವನೆಗೆ ನಡಿಸದಿದ್ದರೆ, ಅದು ಫಲಪ್ರವಾದ ''ಒಂದಾಗಿ ಕೂಡಿ ಬರುವಿಕೆಯ ಸಮಯ''ವಾಗಿರುವದಿಲ್ಲ.

ಇನ್ನೊಂದು ಕಡೆಯಲ್ಲಿ, ದೇವರ ಮಗುವು ತನ್ನ ತಲೆಯನ್ನು ದೇವರ ವಾಕ್ಯದ ಜ್ಞಾನದೊಂದಿಗೆ ತುಂಬಿಸಿಕೊಂಡಾಗ ಮತ್ತು ಅವನ ಹೃದಯವು ಪವಿತ್ರಾತ್ಮನ ಮೃದುವಾದ ಚಲನೆಯಿಂದ ಕಂಪಿಸಲ್ಪಡುವಾಗ, ಅವನು ನಿಜವಾಗಿಯೂ ರಕ್ಷಕನೊಂದಿಗೆ ಸಜೀವ ಅನ್ಯೋನ್ಯತೆಯನ್ನು ಅನುಭವಿಸುವನು. ಇಂದೂ ಸಹ, ನಾನು ಅತಿಥಿ ಭಾಷಣಕಾರನಾಗಿ ಬೈಬಲ್ ಕಾಲೇಜುಗಳನ್ನು ಸಂದರ್ಶಿಸುವಾಗ, ನಾನು ನನ್ನ ವಿದ್ಯಾರ್ಥಿಗಳಿಗೆ ಹೇಳುವೆನು :

**ನೀನು ಬೈಬಲನ್ನು ಕೇವಲ ತಿಳಿಯುವದಕ್ಕಾಗಿ ಬೈಬಲನ್ನು ಅಧ್ಯಯನ**

**ಮಾಡುವದಕ್ಕಾಗಿ ನೀನು ಇಲ್ಲಿ ಇರುವದಿಲ್ಲ ! ಬೈಬಲಿನ ದೇವರನ್ನು ತಿಳಿದುಕೊಳ್ಳಲು ಬೈಬಲನ್ನು ಅಧ್ಯಯನ ಮಾಡಲು ನೀವು ಇಲ್ಲಿ ಇರುವಿರಿ.**

ವಿಶ್ವಾಸಿಗಳಲ್ಲಿ ಆತ್ಮಿಕ ಅಪಕ್ವತೆಯು ಕೆಲವು ಮೃದುವಾದ ಮಾತುಗಳ ಮತ್ತು ಸರಳವಾಗಿ ಸಂಗ್ರಹಿಸಿದ ಬೈಬಲಿನ ರೂಪರೇಷಗಳ ಪರಿಣಾವಿಲ್ಲದಿರುವಿಕೆಗೆ ಮೂಕ ಸಾಕ್ಷಿಯಾಗಿದೆ, ದೇವರೊಂದಿಗೆ ಮತ್ತು ನಿನ್ನ ತೆರೆದ ಬೈಬಲಿನೊಂದಿಗೆ ನಿನ್ನ ವೈಯಕ್ತಿಕ ಅನುಭವವನ್ನು ಬೇರೆ ಯಾವುದಾದರೂ ತೆಗೆದುಕೊಳ್ಳುವದಕ್ಕೆ ಬಿಟ್ಟರೆ, ಅದು ದೇವರೊಂದಿಗಿನ ನಿನ್ನ ನಿಕಟವಾದ ಮತ್ತು ವೈಯಕ್ತಿಕ ಅನ್ಯೋನ್ಯತೆಯನ್ನು ಕೆಡಿಸುವುದು.

ಕರ್ತನೊಂದಿಗೆ ನಿಜವಾದ ಅನ್ಯೋನ್ಯತೆಯು ಕ್ರಿಸ್ತನು ದೇವರ ಪವಿತ್ರ ಪ್ರಸನ್ನತೆಯ ಬಹಿರಂಗ ಬೆಳಕನ್ನು ಎದುರಿಸುವಾಗ ಮಾತ್ರವೇ ಸಂಭವಿಸುವುದು. ಅಂಥ ಬೆಳಕು ಪ್ರಕಟಿಸುವಂಥದ್ದಾಗಿರುವುದು ಮತ್ತು ನಿನಗೂ ನಿನ್ನ ಪರಲೋಕದ ತಂದೆಗೂ ಮಧ್ಯದಲ್ಲಿ ಯಾತಾರ್ಥವಾದ ಹಾಗೂ ಪ್ರಾಮಾಣಿಕವಾದ ಸಂಪರ್ಕಿಸುವಿಕೆಯ ಅಗತ್ಯತೆಯಿರುವುದು. ನೀವು ಆತನ ವಾಕ್ಯವನ್ನು ಓದುವಾಗ, ಆತನ ಸತ್ಯಕ್ಕೆ ನಿಮ್ಮ ಹೃದಯವು ವಿಧೇಯತೆಯಿಂದ ಉತ್ತರ ಕೊಟ್ಟರೆ ಆ ಸತ್ಯವು ನಿಮ್ಮ ಆತ್ಮಕ್ಕೆ ಆಹಾರವಾಗವುದು ಮತ್ತು ನೀವು ನಿಮ್ಮ ಕರ್ತನ ಜ್ಞಾನದಲ್ಲಿ, ಬುದ್ಧಿವಂತಿಕೆಯಲ್ಲಿ ಬೆಳೆಯುವಿರಿ. ''ನಿನ್ನ ತೇಜಸ್ಸು ನಮಗೆ ಬೆಳಕು ಕೊಡುತ್ತದೆ'' (ಕೀರ್ತನೆ 36:9) ಎಂದು ಕೀರ್ತನೆಗಾರನು ಸಾಕ್ಷಿ ಕೊಟ್ಟಿದ್ದಾನೆ. ಹಳೇ ಸಾಮತಿಯು ಇನ್ನೂ ಸತ್ಯವಾಗಿದೆ :

ವಿಧೇಯವಾದ ಬೆಳಕು ಹೆಚ್ಚು
ದೊಡ್ಡ ಬೆಳಕನ್ನು ತರುವದು,
ಅವಿಧೇಯವಾದ ಬೆಳಕು ಆಳವಾದ
ರಾತ್ರಿಯನ್ನು ತರುವುದು.

ನಿನ್ನ ಸ್ವಂತ ಬುದ್ಧಿವಾದ ಮೇಲೆ ಕಾರ್ಯ ಮಾಡುವದಕ್ಕಿಂತ ಬೇರೆಯವರಿಗೆ ಬುದ್ಧಿವಾದ ಹೇಳುವುದು ಸುಲಭವಾಗಿದೆ ಎಂದು ನಾನು ಕಂಡುಕೊಂಡಂತೆ ನೀವು ನಿಶ್ಚಿತವಾಗಿ ಕಂಡುಕೊಂಡಿದ್ದೀರಿ. ಹೀಗಿದ್ದರೂ,

ಅದ್ಭುತ ಸ್ವರೂಪನು, ಆಲೋಚನಾ ಕರ್ತನು ಎಂದು ಯೆಶಾಯನಿಂದ ವಿವರಿಸಲ್ಪಟ್ಟ ಕರ್ತನಾದ ಯೇಸುವು (ಯೆಶಾಯ 9:6). ಅದ್ವಿತೀಯನಾಗಿದ್ದಾನೆ, ಯಾಕಂದರೆ ಅವನು ಆಲೋಚನೆ ಕೊಡುವನು ಮಾತ್ರವಲ್ಲದೆ, ಆ ಆಲೋಚನೆಯ ಮೇಲೆ ನಾವು ಕಾರ್ಯ ಮಾಡುವಂತೆ ಆತನು ಶಕ್ತನಾದಾತನಾಗಿರುತ್ತಾನೆ.

ಪ್ರತೀ ಪ್ರತಃಕಾಲ, ನಿಮ್ಮ ''ಒಂದಾಗಿ ಕೂಡಿಬರುವಿಕೆಯ ಸಮಯ''ವು ಅನಂತರದಲ್ಲಿ ನಿಮಗೆ ಕಾದಿರುವುದಕ್ಕಾಗಿ ಸಿದ್ಧಪಡಿಸುವದರಲ್ಲಿ ಪ್ರಮುಖ ಪಾತ್ರ ವಹಿಸುವುದು. ಆತನ ವಾಕ್ಯವನ್ನು ಓದುವದರ ಮುಖಾಂತರ, ದೇವರು ನಿಮಗೆ ತನ್ನ ಆಲೋಚನೆಯನ್ನು ಕೊಡುವನು, ಕರ್ತನಾದ ಯೇಸುವು ನಿಮ್ಮ ಆಂತರ್ಯದಲ್ಲಿ ವಾಸಿಸುವಾತನೂ ಬರುವದೆಲ್ಲದಕ್ಕಾಗಿ ಮಾಗದರ್ಶಿಯೂ ಆಗಿರುವ ಭರವಸೆ ನಿಮಗಿರುವುದು.

## ಆತ್ಮಿಕ ತಪಾಸಣೆ

1. ನಾನು ಬೈಬಲನ್ನು ಓದುವಾಗ ನನ್ನ ತಲೆಯಂತೆ ನನ್ನ ಹೃದಯವು ಸಿದ್ಧವಾಗಿ ಕೂಡಲೇ ಪ್ರತ್ಯುತ್ತರ ಕೊಡುವುದೋ ?

2. ನಾನು ಪ್ರಾರ್ಥಿಸುವಾಗ, ನನಗೆ ನಿಜವಾಗಿಯೂ ದೇವರೊಂದಿಗೆ ಎರಡು ಮಾರ್ಗದ ಸಂಪರ್ಕವಿರುವುದೋ ?

3. ನನ್ನ ಆತ್ಮಿಕ ಜೀವಿತದಲ್ಲಿ, ನಾನು ಮೊದಲು ಆಲೋಚನೆ ಯನ್ನು ಹುಡುಕುವುದು ಮನುಷ್ಯನಿಂದಲೋ ಇಲ್ಲವೇ ದೇವರಿಂದಲೋ (ಆತನ ವಾಕ್ಯದ ಮುಖಾಂತರವೋ) ?

4. ನನ್ನ ಕ್ರೈಸ್ತ ಸೇವೆಯಲ್ಲಿ ಇತರರಿಗೆ ನನ್ನ ಬೋಧನೆಯು ದೇವರ ಪ್ರೀತಿಯಿಂದ ಉರಿಯುತ್ತಿರುವ ಹೃದಯದಿಂದ ಮತ್ತು ಆತನ ವಾಕ್ಯದಿಂದ ತುಂಬಿಕೊಂಡ ಮನಸ್ಸಿನಿಂದ ಬರವುದೋ ?

(ಎಚ್ಚರಿಕೆ : ಅವರು ತಮ್ಮ ಆಲೋಚನೆಯನ್ನು ಅನುಸರಿಸಿ ಅವಿಧೇಯರಾದರು. (ಕೀರ್ತನೆ 106:43)

## ಇವುಗಳಂಥ ಪಾಪಗಳು

*ಎಣಿಸಲಾಗದ ಪಾಪಗಳನ್ನು ಅರಿಕೆ ಮಾಡುವೆನು ;*
*ಮಿತಿಮೀರಿದ ಪಾಪಭರಿತತೆಯನ್ನು -*

*ಆರಾಧನೆಯ ಸಮಯದಲ್ಲಿ ಲೋಕದ ಚಿಂತೆಗಳು ;*
*ಶ್ರೇಷ್ಠ ಕಾರ್ಯದಲ್ಲಿ ಸ್ವಾರ್ಥದ ಗುರಿಗಳು ;*
*ದೇವರು ದಾಟಿ ಹೋಗುತ್ತಿರುವಾಗ, ಗರ್ವ ;*
*ಪ್ರಾಣಗಳು ಕತ್ತಲೆಯಲ್ಲಿ ಸಾಯುತ್ತಿರುವಾಗ, ಆಲಸ್ಯ.*

*ಕರ್ತನು ಒಳ್ಳೆಯವನು ಎಂದು ರುಚಿನೋಡಿ,*
*ವಿಷಕರವಾದ ಆಹಾರಕ್ಕಾಗಿ ಹಂಬಲಿಸುವುದು ;*
*ಆಕಾಶಗಳ ಬುಗ್ಗೆಯ ಬಳಿಯಲ್ಲಿ*
*ಸೃಷ್ಟಿ ವಸ್ತುಗಳ ಸಂಗ್ರಹ ಬಯಸುವುದು.*

*ಇಂಥ ಪಾಪಗಳು ಮೋಸಗೊಳಿಸುವವು ನನ್ನನ್ನು,*
*ನೀನು -ಮಾತ್ರ ತಿಳಿದಿರುವಿ ಅವು ದುಃಖ ಕೊಡುವುದನ್ನು ;*

*ಎಷ್ಟು ಹಗುರವಾಗಿ ನಾನು ನಿದ್ರಿಸಿದೆನು.*
*ಅನುದಿನದ ತಪ್ಪುಗಳಿಗೆ ಕಣ್ಣೀರು ಇಡದೆ,*
*ಪವಿತ್ರ ಕಾರ್ಯಗಳಿಗಾಗಿ ಮತ್ತೆ ಎಚ್ಚತ್ತುಕೊಂಡೆನು*
*ನನ್ನ ದೇಹದಲ್ಲಿ ದೊಡ್ಡ ರೋಗದ ಕಲೆಯೊಂದಿಗೆ.*

*ಇನ್ನೂ ಸೋತು ಹೋಗದು ನಿನ್ನ ಆದರಣೆ*
*ಇನ್ನೂ ಇರುವುದು ಗುಣಪಡಿಸುವ ನಿನ್ನ ಸ್ಪರ್ಶ,*
*ನಿನಗಾಗಿ ಕರ್ತನೇ ನೋಡು ನನ್ನ ದುಃಖ,*
*ನೀನೇ ನನ್ನನ್ನು ಕರುಣಿಸು.*

*ಪಿತನೇ, ನಿನ್ನ ಕುಮಾರನ ಮೂಲಕ ಕ್ಷಮಿಸು,*
*ನಿನ್ನ ಆತ್ಮನಿಗೆ ವಿರುದ್ಧವಾಗಿ ಮಾಡಿದ ಪಾಪಗಳನ್ನು.*

Willam Maclardie Bunting
(1805-1866). Adapted by R.A.B.

# ಅಧ್ಯಾಯ 3

# ಪ್ರಾರ್ಥನಾ ಪೂರ್ವಕವಾದ ಸಿದ್ಧತೆ

ನಾನು ಮೊದಲು ಮಾರ್ಪಾಟು ಹೊಂದಿದಾಗ, ಬೈಬಲಿನ ಬಗ್ಗೆ ಬಹಳ ಸ್ವಲ್ಪ ಜ್ಞಾನವಿತ್ತು, ಆದರೆ ನಾನು ಅದರ ಪುಟಗಳನ್ನು ತಿರುವಿ ಹಾಕಿದಾಗ. ನಾನು ದೇವರ ವಾಕ್ಯವನ್ನು ನಾನು ಓದುತ್ತಿರುವೆನೆಂದು ಅರಿತುಕೊಂಡೆನು. ಇಂದಿನ ದಿನದ ವರೆಗೂ, ನಾನು ಆತನ ವಾಕ್ಯವನ್ನು ಓದುವಾಗ ಕರ್ತನಾದ ಯೇಸುವು ನನ್ನ ಹೃದಯಕ್ಕೆ ಮಾತಾಡುವದನ್ನು ಮುಂದುವರಿಸುತ್ತಾನೆಂದು ಅರ್ಥ ಮಾಡಿಕೊಳ್ಳುವದರಲ್ಲಿ ಇನ್ನೂ ಆನಂದಿಸುತ್ತೇನೆ.

ನೂತನ ಕ್ರೈಸ್ತನಂತೆ, ನಾನು ನನ್ನ ಬೈಬಲನ್ನು ತೆರೆದಾಗ, ಅದನ್ನು ನನ್ನ ಹೃದಯಕ್ಕೆ ಜೀವಿಸುವಂಥದ್ದನ್ನಾಗಿ ಮಾಡಲು ಪವಿತ್ರಾತ್ಮನು ಅಪೇಕ್ಷಿಸುತ್ತಾನೆಂದು ನನಗೆ ಬೋಧಿಸಲ್ಪಟ್ಟಿತು. ಆದುದರಿಂದ ನಾನು ಒಂದಾಗಿ ಕೂಡಿಬರುವ ಸಮಯವನ್ನು, ನಾನು ಹೆಚ್ಚಾಗಿ ಒಂದು ಕಿರುಗೀತೆಯನ್ನು, ನಾನು ಕಲಿತುಕೊಂಡದ್ದನ್ನು ಪ್ರಾರ್ಥಿಸುವದ ರಿಂದ ಪ್ರಾರಂಭಿಸುತ್ತೇನೆ :

ದೇವರ ಆತ್ಮನೇ, ನನ್ನ ಬೋಧಕನಾಗಿರುವಾತನೇ,
ಕ್ರಿಸ್ತನ ಸಂಗತಿಗಳನ್ನು ನನಗೆ ಪ್ರಕಟಿಸುವಾತನೇ,
ಬಂಧನ ಬಿಡಿಸುವ ಮತ್ತು ಸ್ವತಂತ್ರನನ್ನಾಗಿ ಮಾಡುವ
ಅದ್ಭುತಕರವಾದ ಬೀಗದ ಕೈಯನ್ನ ಸನ್ನ ಹಸ್ತದಲ್ಲಿಡು.

ಪರಲೋಕದಲ್ಲಿಯ ತನ್ನ ತಂದೆಯ ಬಳಿಗೆ ಹೋಗಲು ತನ್ನ ಶಿಷ್ಯರನ್ನು ಬಿಡುವ ಮೊದಲು, ಕರ್ತನಾದ ಯೇಸು ಕ್ರಿಸ್ತನು ವಾಗ್ದಾನ ಮಾಡಿದನು: ''ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು'' (ಯೋಹಾನ 16:13). ಅಂತಿಮವಾಗಿ ಒಬ್ಬನೇ ಬೋಧಕನಿರುವನು ಆತನು ಪವಿತ್ರಾತ್ಮನು.

**ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಕಾರ್ಯ ಮಾಡಲು ಸ್ವತಂತ್ರನಾಗಿರದಿದ್ದರೆ, ದೇವರ ವಾಕ್ಯದ ನಮ್ಮ ಓದುವಿಕೆಯು ನೀರಸವಾದದ್ದೂ ಬರಿದಾದದ್ದೂ ಆಗಿರುವುದು.**

ಜೊನ್ ವೆಸ್ಲಿ (ಹದಿನೆಂಟನೆಯ ಶತಮಾನದ ಬ್ರಿಟೀಶ ಭಕ್ತಿ ಸಂಜೀವನದಲ್ಲಿ ದೇವರಿಂದ ಬಲವಾಗಿ ಉಪಯೋಗಿಸಲ್ಪಟ್ಟವನು, ಕ್ರಾಂತಿಯಿಂದ ಇಂಗ್ಲಂಡನ್ನು ರಕ್ಷಿಸಿದವನೆಂದು ಅನೇಕ ಚರಿತ್ರೆಗಾರರಿಂದ ಗೌರವಿಸಲ್ಪಟ್ಟವನು) ಸಹ ತನ್ನ ''ಒಂದಾಗಿ ಕೂಡಿ ಬರುವ ಸಮಯ''ದ ಮೌಲ್ಯವನ್ನು ತಿಳಿದಿದ್ದನು. ನಾವೆಲ್ಲರೂ ಚೆನ್ನಾಗಿ ಅನುಸರಿಸಲಿಕ್ಕೆ ಮಾಡುವಂತೆ ಒಂದು ಪಾಠವನ್ನು ಅವನು ಜಾಣ್ಮೆಯಿಂದ ಕಲಿತು ಕೊಂಡನು. ಪ್ರಾಥಃಕಾಲದಲ್ಲಿ ಏಳಲು ಸಾಧ್ಯವಾಗುವಂತೆ ಸಾಯಂಕಾಲದಲ್ಲಿ ಬೇಗನೇ ಹಾಸಿಗೆಗೆ ಹೋಗುವದನ್ನು ವೆಸ್ಲಿ ರೂಢಿಸಿಕೊಂಡಿದ್ದನು. ಇತ್ತೀಚೆಗೆ, ನಾನು ಪ್ರಾಥಃಕಾಲ 4-00 ಗಂಟೆಗೆ ವೆಸ್ಲಿ ತನ್ನ ಕರ್ತನನ್ನು ಸಂದರ್ಶಿಸುತ್ತಿದ್ದ ಅದೇ ಪ್ರಾರ್ಥನಾ ಸ್ಟೂಲಿನ ಮುಂದೆ ಮೊಣಕೂರಿಕೊಂಡು ಒಬ್ಬನೆಯಾಗಿ ಪ್ರಾರ್ಥಿಸಿದೆನು. ಅದೇ ಕೋಣೆಯಲ್ಲಿ ಅವನ ದಿನಚರಿಯಿಂದ ಈ ಕೆಳಗಿನ ಉಲ್ಲೇಖವನ್ನು ಓದಿದಾಗ ನನ್ನ ಮನಸ್ಸು ಕರಗಿತು: ''ನಾನು ಒಬ್ಬನೇ ಕೇಳಿಕೊಳ್ಳುತ್ತೇನೆ.... ದೇವರು ಮಾತ್ರವೇ ಇಲ್ಲಿದ್ದಾನೆ. ಆತನ ಸನ್ನಿಧಿಯಲ್ಲಿ ಆತನ ಪುಸ್ತಕವನ್ನು ತೆರೆದು ಓದುತ್ತೇನೆ. ಮತ್ತು ನಾನು ಓದುವದನ್ನು ನಾನು ಬೋಧಿಸುತ್ತೇನೆ.''

ಹೊಸದಾಗಿ ಹುಟ್ಟಿದ ವಿಶ್ವಾಸಿಗಳನ್ನು ಪ್ರೋತ್ಸಾಹಿಸುವದಕ್ಕಾಗಿ ಅಪೊಸ್ತಲ ಯೋಹಾನನು ಅವರಿಗೆ ಪರಿಶುದ್ಧ ಬರಹಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಲು ಅವರಿಗೆ ಬೇರೆ ಜನರು ಇಲ್ಲದಿದ್ದಾಗ,

ದೇವರ ವಾಕ್ಯದ ಮುಖಾಂತರ ಅವರ ಹೃದಯಗಳನ್ನು ಸ್ಪರ್ಶಿಸಲು ಪವಿತ್ರಾತ್ಮನು ಇರುವನೆಂಬ ಭರವಸೆ ಕೊಟ್ಟನು. ಅವರಿಗೆ ಅವನು ಹೀಗೆ ಬರೆದನು : ''ಆದರೆ ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವುದು ಅವಶ್ಯವಿಲ್ಲ. [not "no one" but not a "Self-appointed teacher"]; ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲ. ಅದು ನಿಮಗೆ ಉಪದೇಶ ಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರ್ರಿ'' (1 ಯೋಹಾನ 2:27). ದೇವರ ಪುಸ್ತಕವನ್ನು ನೀವು ಓದುವಂತೆ ಪವಿತ್ರಾತ್ಮನ ಜ್ಞಾನಪ್ರಕಾಶದ ಮೇಲೆ ನೀವು ಪ್ರಜ್ಞಾಪೂರ್ವಕವಾಗಿ ಅವಲಂಭಿಸುವಾಗ, ಆತನು ಅದರ ಸತ್ಯವನ್ನು ನಿಮ್ಮ ಹೃದಯದಲ್ಲಿ ಜೀವಿಸುವಂತೆ ಮಾಡುವನು.

ನಿಮಗೆ ಆಶೀರ್ವಾದಕರವಾದ, ನೆರವೇರುವಿಕೆಯ ಮತ್ತು ಕ್ರಮಪ್ರಕಾರವಾದ ''ಒಂದಾಗಿ ಕೂಡಿ ಬರುವಿಕೆಯ ಸಮಯವನ್ನು'' ನೀವು ನಿಜವಾಗಿಯೂ ಬಯಸಿದರೆ, ಗದ್ದಲವಿಲ್ಲದ ಸ್ಥಳವನ್ನು ಹುಡುಕಿರಿ ಮತ್ತು ನಿಮ್ಮ ಬೈಬಲನ್ನು ತೆರೆದು ದೇವರೊಂದಿಗೆ ಸಂಪರ್ಕದಲ್ಲಿರಲು ನಿರ್ಧಿಷ್ಠವಾದ ಸಮಯವನ್ನು ಪ್ರತ್ಯೇಕಿಸಿಕೊಳ್ಳಿರಿ. ದೇವರೊಂದಿಗೆ ಏಕಾಂಗಿಯಾಗಿರುವ ಅಂಥ ಸಮಯಗಳು ಆನಂದದ ನಿರೀಕ್ಷೆಯಿಂದ ನಿಮ್ಮ ಹೃದಯ ವನ್ನು ಚಕಿತಗೊಳಿಸುವವು, ನಿಮ್ಮ ಕುಟುಂಬ ಇಲ್ಲವೇ ನಿಮ್ಮ ವ್ಯವಹಾರ, ಇಲ್ಲವೇ ಇತರ ಆಸಕ್ತಿಗಳು ನಿಮ್ಮ ಗಮನಕ್ಕೆ ಆತಂಕವೊಡ್ಡಿ, ದೇವರೊಂದಿಗೆ ಏಕಾಂತದಲ್ಲಿ ರುವರನ್ನು ಕಠಿಣವಾದದ್ದನ್ನಾಗಿ ಮಾಡಬಹುದು. ನೀವು ಕರ್ತನಾದ ಯೇಸು ಕ್ರಿಸ್ತನ ಪ್ರೀತಿ ಮತ್ತು ಜ್ಞಾನದಲ್ಲಿ ನೀವು ಬೆಳೆಯಬೇಕಾದರೆ ಅಂಥ ದಿನಗಳಲ್ಲಿ ನಿಜವಾದ ಶಿಸ್ತು ಕ್ರಮದಲ್ಲಿರಬೇಕಾದ ಅವಶ್ಯಕತೆ ಇರುತ್ತದೆ. ಅಲಕ್ಷಿಸಲ್ಪಟ್ಟ ಬೈಬಲು ನಿಮ್ಮಲ್ಲಿ ಬೈಬಲು ಇಲ್ಲದೇ ಇರುವಷ್ಟು ನಿರುಪಯೋಗಿ ಯಾದದ್ದಾಗಿರುತ್ತದೆ ಎಂಬುದನ್ನು ಜ್ಞಾಪಿಸಿಕೊಳ್ಳಿರಿ.

ವಾಗ್ದತ್ತ ದೇಶಕ್ಕೆ ಹೋಗುತ್ತಿದ್ದ ಮಾರ್ಗದಲ್ಲಿ ಇಸ್ರೆಯೇಲ್ಯರು ತಮ್ಮ ದೈಹಿಕ ಪೋಷಣೆಗಾಗಿ ದೇವರು ದೈವೀಯವಾಗಿ ಒದಗಿಸಿದ

ಮನ್ನವನ್ನು ಕೊಡಿಸಲು ಪ್ರತಿದಿನವೂ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತಿತ್ತು. ಅದರಂತೆಯೇ ನಾವೂ ದೇವರ ವಾಕ್ಯವನ್ನು ಸ್ವೀಕರಿಸಲು ಸಿದ್ಧರಾಗುವ ಅವಶ್ಯಕತೆಯಿರುತ್ತದೆ.

ಮೊದಲನೆಯದು : ದೇವರೊಂದಿಗೆ ಏಕಾಂಗಿಯಾಗಿರಲು ನೀನು ನಿನ್ನ ಬೈಬಲನ್ನು ತೆರೆಯುವಾಗ ನೀನು ನಿಜವಾಗಿಯೂ ನಿನ್ನ ಮೊಣಕಾಲುಗಳನ್ನುರುವುದು ಸಹಾಯಕರವಾದದ್ದು ಆಗುವುದು.

ಎರಡನೆಯದು : ನಿತ್ಯ ಬೆಳಕಾಗಿರುವಾತನ ಬಳಿಗೆ ನೀನು ಬರುವಾಗ, ಆತನ ಪರಿಶುದ್ಧ ಸನ್ನಿಧಿಯಲ್ಲಿ ನಿನ್ನ ಹೃದಯವನ್ನು ತೆರೆಯುವುದು ಯಾವಾಗಲೂ ಅಗತ್ಯವಾಗಿರುತ್ತದೆ. ಆತನಿಂದ ನೀನು ಯಾವುದನ್ನು ಮುಚ್ಚಿಡಲಾರಿ, ಆದುದರಿಂದ ಯಾಕೆ ಪ್ರಯತ್ನಿಸಬಾರದು ?

ದೇವರನ್ನು ಸಂಧಿಸಲು ನಿನ್ನನ್ನು ನೀನು ಒಂದು ಸಲ ಸಿದ್ಧಪಡಿಸಿಕೊಂಡಾಗ. ಬೈಬಲು ಹೊಳೆಯುವ ವಾಸ್ತವಿಕತೆಯೊಂದಿಗೆ ಸಜೀವವಾಗುವುದು ಮತ್ತು ದೇವರ ವಾಕ್ಯವು ನಿನ್ನ ತಲೆಯಿಂದ ನಿನ್ನ ಹೃದಯಕ್ಕೆ ಹೇಗೆ ಚಲಿಸಲು ಪ್ರಾರಂಭಿಸುವುದು ಎಂಬುದನ್ನು ಕಂಡುಕೊಳ್ಳುವಿ.

# ನಿನ್ನ ಮೊಣಕಾಯಿಗಳನ್ನೂರು

## ಜೀವಿಸುವ ಅನ್ಯೋನ್ಯತೆಯು ಗರ್ವದ ಆತ್ಮದೊಂದಿಗೆ ಜೊತೆಯಾಗಿ ಅಸ್ತಿತ್ವದಲ್ಲಿರಲಾರದು

ಬೈಬಲಿನಲ್ಲಿ, ಮೊಣಕಾಲೂರುವ ಸ್ಥಾನವನ್ನು ತೆಗೆದುಕೊಳ್ಳುವದರಿಂದ ದೇವರಿಗೆ ತಮ್ಮ ಭಕ್ತಿಯನ್ನೂ ಸಮರ್ಪಣೆಯನ್ನು ವ್ಯಕ್ತಪಡಿಸಿದ ಅನೇಕ ಭಕ್ತಿಯುಳ್ಳ ಜನರ ಬಗ್ಗೆ ಓದುತ್ತೇವೆ. ಕ್ರೈಸ್ತರೂ ಮಹಮ್ಮದಿಯರೂ ತಮ್ಮ ಬಹಿರಂಗ ಪ್ರಾರ್ಥನೆ ಗಳಲ್ಲಿ ಮೊಣಕಾಲೂರುವದನ್ನು ರೂಢಿಯಾಗಿ ಇಟ್ಟುಕೊಂಡಿದ್ದರೂ, ಅಂಥ ಆಸನವು ದೇವರೊಂದಿಗೆ ಸಜೀವ ಅನ್ಯೋನ್ಯತೆಯನ್ನು ಸೂಚಿಸುವ ಅವಶ್ಯಕತೆಯಿರುವದಿಲ್ಲ. ಹೀಗಿದ್ದರೂ ನಮ್ಮ ನಿತ್ಯನಾದ ದೇವರ ಹಾಗೂ ಸೃಷ್ಟಿಕರ್ತನ ಬಳಿಗೆ ಬರುವಾಗ, ನಮ್ಮ ಮನಸ್ಸು ಮತ್ತು

ಹೃದಯದ ಮನೋಭಾವನೆಯು ಆತನ ಮುಂದೆ ನಾವು ಮೊಣಕಾಲೂರಿದರೆ ಬಹಳವಾಗಿ ಸಹಾಯ ಹೊಂದುವುದು.

ಗೆತ್ಸೆಮನೆ ತೋಟದಲ್ಲಿ, ಕರ್ತನಾದ ಯೇಸು ಕ್ರಿಸ್ತನು ತಾನು ಶಿಲುಬೆಗೆ ಹಾಕಲ್ಪಡುವದರ ಭಯಾನಕವಾದ ತಾಸನ್ನು ಸಮೀಪಿಸುತ್ತಿದ್ದಾಗ, ಆತನು ತನ್ನ ಶಿಷ್ಯರು ಗಾಢ ನಿದ್ರೆಯಲ್ಲಿ ಇದ್ದುದನ್ನು ನೋಡಿದನು. ಅವರಿಂದ ಸ್ವಲ್ಪ ದೂರ ಹೋಗಿ ಯೇಸುವು ಮೊಣಕಾಲೂರಿಕೊಂಡು ಪ್ರಾರ್ಥಿಸಿದನು. (ಲೂಕ22:41). ಯೇಸುವು ತನ್ನ ತಂದೆಯೊಂದಿಗೆ ಏಕಾಂಗಿಯಾಗಿದ್ದನು. ಅಲ್ಲಿ ಆತನು ಪ್ರಾರ್ಥಿಸಲು **ಮೊಣಕಾಲೂರಿದನು.** ಅದರಂತೆ, ದೇವರೊಂದಿಗೆ ಏಕಾಂಗಿಗಳಾಗರಲು ನಮ್ಮ ಸ್ನೇಹಿತರಿಂದಲೂ ನಮ್ಮ ಕುಟುಂಬದಿಂದಲೂ ನಾವು ಬೇರೆಯಾಗಿರುವಾಗ, ನಾವು ಪ್ರಾರ್ಥಿಸುವಂತೆ ಮೊಣಕಾಲೂರುವದರಿಂದ ಆತನಿಗೆ ಭಕ್ತಿಯನ್ನು ವ್ಯಕ್ತಪಡಿಸಲಿಕ್ಕೆ ಅದನ್ನು ಸಹಾಯಕವಾಗಿ ಕಂಡುಕೊಳ್ಳಬಹುದು.

ಅಪೊಸ್ತಲ ಪೌಲನು ತನ್ನ ಬಹಿರಂಗ ಸೇವೆಯ ಅಂತ್ಯಕ್ಕೆ ಸಮೀಪಿಸುತ್ತಿದ್ದಾಗ, ತಾನು ಎಫೆಸದಲ್ಲಿ ಸ್ಥಾಪಿಸಿದ ಸಭೆಗೆ ವಿಯೋಗ ಹೇಳುವ ಸಮಯಕ್ಕೆ ಬಂದಿದ್ದನು. ಅವರೆಲ್ಲರೊಂದಿಗೆ ಮೊಣಕಾಲೂರಿಕೊಂಡು ಪ್ರಾರ್ಥಿಸಿದನು ಎಂಬುದನ್ನು ನಾವು ಓದುತ್ತೇವೆ. (ಅ.ಕೃ. 20:36), ಇನ್ನೊಂದು ಸಮಯದಲ್ಲಿ ಸಮುದ್ರದ ತೀರದಲ್ಲಿ ಶಿಷ್ಯರಿಗೂ ಅವರ ಹೆಂಡತಿಯರಿಗೂ ಮತ್ತು ಮಕ್ಕಳಿಗೂ ವಿಯೋಗ ವಂದನೆ ಹೇಳಿದನು. ಸಮುದ್ರ ತೀರದಲ್ಲಿ ಅವರು ಮೊಣಕಾಲೂರಿಕೊಂಡು ಪ್ರಾರ್ಥಿಸಿದರು ಎಂದು ಪರಿಶುದ್ಧ ಬರಹಗಳು ದಾಖಲೆ ಮಾಡುತ್ತವೆ (ಅ.ಕೃ. 21:5). ಮಹಿಳೆಯರು ಮಕ್ಕಳು ಬಹಿರಂಗ ಸ್ಥಳದಲ್ಲಿ ಪ್ರಾರ್ಥಿಸಲು ಮೊಣಕಾಲೂರುವ ದೃಶ್ಯವು ಸುತ್ತಲಿನವರಿಂದ ತಪ್ಪಾಗಿ ತಿಳಿದು ಕೊಳ್ಳಲ್ಪಡುತ್ತವೆ ಎಂದು ಇಂದು ಅನೇಕರು ಯೋಚಿಸಬಹುದು. ನಾವು ಧರ್ಮಾಂಧರು ಎಂದು ಘೋಷಿಸಲ್ಪಡುವ ಭಯವಿದ್ದ ದಿನ, ನಾವೂ ಸಹ, ಪ್ರತ್ಯೇಕವಾದ ಪ್ರಾರ್ಥನಾ ಕೂಟದಲ್ಲಿ ಆದರಣೆಪಡುವದನ್ನು ಆಯ್ದುಕೊಳ್ಳತ್ತೇವೆ. ಪೌಲನ ದಿನದ ಮಹಿಳೆಯರು ಮತ್ತು ಮಕ್ಕಳೊಂದಿಗೆ ಶಿಷ್ಯರಿಗೆ ಮೊಣಕಾಲೂರುವುದು ಅಂಥ ಸಮಸ್ಯೆಯಾಗಿರಲಿಲ್ಲ. ಹಾಗೆಯೇ ನಾವು

ಬಹಿರಂಗ ಪ್ರಾರ್ಥನಾ ಕೂಟದಲ್ಲಿ ಇರಲಿ ಇಲ್ಲವೇ ನಾವು ದೇವರೊಂದಿಗೆ ಏಕಾಂಗಿಯಾಗಿರಲಿ ಅಂಥ ಸಮಸ್ಯೆ ಇರಬಾರದು.

ಹೀಗಿದ್ದರೂ, ನಾವು ಪ್ರಾರ್ಥಿಸುವಾಗ ನಾವು ನಿಂತುಕೊಂಡಿರಲಿ, ಕುಳಿತು ಕೊಂಡಿರಲಿ ಇಲ್ಲವೆ ನಡೆಯುತ್ತಿರಲಿ, ದೇವರೊಂದಿಗೆ ನಮ್ಮ ಪ್ರತ್ಯೇಕವಾದ ಅನ್ಯೋನ್ಯತೆಯ ಬಗ್ಗೆ ಮಹತ್ವದ ಸಂಗತಿಯು ನಮ್ಮ ಮನಸ್ಸಿನ ಮನೋಭಾವನೆಯು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಹೌದು, ನಾವು ಪ್ರಾರ್ಥಿಸುವಾಗ ನಾವು ಸರಿಯಾದ ಮಾನಸಿಕ ಮನೋಭಾವನೆಯನ್ನು ಹೊಂದಿಕೊಳ್ಳಬೇಕೆಂದು ಬೈಬಲ ನಮಗೆ ಹೇಳುತ್ತದೆ, ಯಾಕಂದರೆ: **''ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ ಎಂದು ಶಾಸ್ತ್ರವು ಹೇಳುತ್ತದೆ. ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು. ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು'' (ಯಾಕೋಬ 4:6-8).**

ಕೆಲವೊಂದು ದೈಹಿಕ ಸಮಸ್ಯೆಗಳ ಕಾರಣದಿಂದ, ಕೆಲವು ಜನರಿಗೆ ಉದ್ದವಾದ ಪ್ರಾರ್ಥನೆಗಾಗಿ ಮೊಣಕಾಲೂರುವುದು ಅಸಾಧ್ಯವಾಗಬಹುದು. ದೇವರು ನಮ್ಮಲ್ಲಿ ಪ್ರತಿಯೊಬ್ಬರ ಹೃದಯವನ್ನು ನೋಡುತ್ತಾನೆ. ನಮ್ಮ ಆಸನಕ್ಕಿಂತ ನಮ್ಮ ಹೃದಯದ ಮನೋಭಾವನೆಯು ಆತನಿಗೆ ಹೆಚ್ಚು ಮಹತ್ವದ್ದಾಗಿರುತ್ತದೆ. ಆದರೆ ಶಕ್ತರಾದವರಿಗೆ, ಮೊಣಕಾಲೂರುವುದು, ನಾವು ಪ್ರಾರ್ಥಿಸುವಾಗ ನಮ್ಮ ಸೃಷ್ಟಿಕರ್ತನೊಂದಿಗೆ ಸ್ನೇಹಿತನು ಸ್ನೇಹಿತನೊಂದಿಗೆ ಮಾತನಾಡುವ ಭಯಭಕ್ತಿಯ ಅವಕಾಶವು ನಮಗಿರುವದೆಂಬ ನಮ್ಮ ತಿಳುವಳಿಕೆಯನ್ನು ಚುರುಕುಗೊಳಿಸುವ ಸಹಾಯಕವಾದ ಮಾರ್ಗವಾಗಿರುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರಿಗೆ ಬೈಬಲಿನ ಮಹತ್ವವುಳ್ಳ ಉಪದೇಶ ಹೀಗಿದೆ: **''ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ''** ಮತ್ತು ಈ ಆಜ್ಞೆಗೆ ನಾವು ಉತ್ತರ ಕೊಡುವಾಗ, ದೇವರು ಅದ್ಭುತಕರವಾದ ಒಂದು ವಾಗ್ದಾನದೊಂದಿಗೆ ಮುಂದುವರಿಯುತ್ತಾನೆ : **''ಆಗಲಾತನು ನಿಮ್ಮನ್ನು ಮೇಲಕ್ಕೆ ತರುವನು''** (ಯಾಕೋಬ 4:10).

# ನಿಮ್ಮ ಹೃದಯವನ್ನು ತೆರೆಯಿರಿ

**ಸಜೀವ ಅನ್ಯೋನ್ಯತೆಯು ಯಾವಾಗಲೂ ದೇವರ ಕೃಪಾಸನದ ಬಳಿಯಲ್ಲಿ ಪ್ರಾರಂಭವಾಗುವುದು, ಹೊಸ ಒಡಂಬಡಿಕೆಯ ಮಾತುಗಳಲ್ಲಿ ಅದು ಯೇಸುವು ಮರಣ ಹೊಂದಿದ ಶಿಲುಬೆಯ ಬಳಿಯಲ್ಲಿರುವದು.**

ಹೌದು, ಕರ್ತನಾದ ಯೇಸುವು ಶಿಲುಬೆಯಲ್ಲಿ ಸಾಯುವದಕ್ಕಿಂತ ಮೊದಲೇ, ದೇವರು ಮಹಾಕರುಣೆ ಮತ್ತು ಪ್ರೀತಿಯಲ್ಲಿ, ತಪ್ಪಿಹೋದ ಮಾನವ ಕುಲವು ತನ್ನೊಂದಿಗೆ ಅನ್ಯೋನ್ಯತೆಯನ್ನು ನವೀಕರಿಸಲು ಶಕ್ತರಾಗುವಂತೆ. ಪಾಪದ ಕ್ರಯವಾಗಿ ತನ್ನ ದೋಷವಿಲ್ಲದ ಕುಮಾರನ ರಕ್ತವನ್ನು ಸ್ವೀಕರಿಸುವದನ್ನು ಆಯ್ದು ಕೊಂಡಿದ್ದನು. ಹೀಗೆ, ನಮ್ಮ ರಕ್ಷಕನು ಶಿಲುಬೆಗೆ ಹಾಕಲ್ಪಡುವದಕ್ಕಿಂತ ಎಷ್ಟೋ ಮೊದಲು, ದೇವರು ಕೃಪಾಸನದ ಬಳಿಯಲ್ಲಿ ತನ್ನ ಮಕ್ಕಳನ್ನು ಸಂದರ್ಶಿಸುವೆನೆಂದು ಘೋಷಿಸಿದ್ದನು: **''ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು, ಮತ್ತು ಕೃಪಾಸನದ ಮೇಲೆ .. ನಾನು ಮಾತಾಡಿ.... ಎಲ್ಲಾ ಸಂಗತಿಗಳನ್ನು ತಿಳಿಸುವೆನು''** (ವಿ.ಕಾಂ. 25:22).

ಇಂದು ನಮ್ಮ ಪಾಪಗಳಿಗಾಗಿ ಯಜ್ಞಾರ್ಪಣೆಯು ಚರಿತ್ರೆಯ ಭಾಗವಾಗಿದೆ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಮೂಲ್ಯ ರಕ್ತವು ನಮ್ಮ ಪರವಾಗಿ ಸುರಿಸಲ್ಪಟ್ಟಿದೆ ಮತ್ತು ಹೀಗೆ ಯೇಸುವಿನ ಮರಣದ ಮುಖಾಂತರ ಆತನೊಂದಿಗೆ ಅನ್ಯೋನ್ಯತೆ ಯಲ್ಲಿರಲು ನಮಗೆ ಸಜೀವ ಮಾರ್ಗವು ಒದಗಿಸಲ್ಪಟ್ಟಿದೆ. ಆತನ ಅಗ್ರಾಹ್ಯವಾದ ಪ್ರೀತಿಯು ಆನಂದದಿಂದ ಹೀಗೆ ಉದ್ಗರಿಸಲು ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ : **''ಆದುದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ'' (ಇಬ್ರಿಯರಿಗೆ 4:16).**

**ಕರುಣೆ ಅಂದರೆ ನಮಗೆ ಅರ್ಹತೆಯುಳ್ಳದ್ದನ್ನು ದೇವರ ನಮಗೆ ಕೊಡುವದಿಲ್ಲ ಎಂದು ಅರ್ಥವಾಗುತ್ತದೆ ; ಕೃಪೆ ಅಂದರೆ ನಾವು ಯಾವುದಕ್ಕೆ ಅರ್ಹರಾಗಿರುವ ದಿಲ್ಲವೋ ಅದನ್ನು ದೇವರು ನಮಗೆ ಕೊಡುತ್ತಾನೆ**

**ಎಂದರ್ಥವಾಗುತ್ತದೆ. ದಯೆಯ ಮತ್ತು ಕೃಪೆಯ ನಮ್ಮ ದೇವರೊಂದಿಗೆ ಅನ್ಯೋನ್ಯತೆಯಲ್ಲಿ ನಡೆಯುವುದು ಎಷ್ಟು ಅದ್ಭುತಕರವಾದದ್ದಾಗಿರುತ್ತದಲ್ಲವೇ.**

ಬೀಸುವ ಪ್ರತಿಯೊಂದು ಬಿರುಗಾಳಿಯಿಂದ,
ಉಬ್ಬುತ್ತಿರುವ ಪ್ರತಿಯೊಂದು ಸಂಕಟಗಳ ತೆರೆಯಿಂದ.
ಶಾಂತವಾದ, ನಿಶ್ಚಿತವಾದ ಹಿಂದಿರುಗುವಿಕೆಯು
ದೊರೆತಿರುವುದು ಕೃಪಾಸನದ ಅಡಿಯಲ್ಲಿ.

ಆನಂದದ ಎಣ್ಣೆಯನ್ನು ಸುರಿಸಲು ಯೇಸುವಿಗೆ
ಇರುವುದು ಸ್ಥಳ ನಮ್ಮ ತಲೆಗಳ ಮೇಲೆ ;
ಅತಿ ಸಿಹಿಯಾಗಿರುವ ಒಂದು ಸ್ಥಳ ಇರುವುದು ನನಗೆ ;
ಅದು ರಕ್ತ ಕ್ರಯದಿಂದ ಕೊಂಡ ಕೃಪಾಸನವೇ.

ಆತ್ಮಗಳು ಸಮ್ಮಿಲಿತವಾಗುವ ಸ್ಥಾನದೊಂದಿಗೆ,
ಸ್ನೇಹಿತನು ಸ್ನೇಹಿತನೊಂದಿಗೆ ಅನ್ಯೋನ್ಯತೆಯಿಂದಿರುವಲ್ಲಿ ;
ದೂರ ಆಗಲಿ ಹೋಗಿದ್ದರೂ, ಸಂಧಿಸುವರು ನಂಬಿಕೆಯಿಂದ
ಒಂದೇ ಹುದುವಾದ ಕೃಪಾಸನದ ಸುತ್ತ.

ಆಹಾ, ಸಹಾಯಕ್ಕಾಗಿ ನಾವೆಲ್ಲಿಗೆ ಓಡೋಣ,
ಶೋಧಿಸಲ್ಪಟ್ಟಾಗ, ಕೈಬಿಡಲ್ಪಟ್ಟಾಗ, ದಿಗಿಲುಗೊಂಡಾಗ ;
ನರಕದ ದಂಡು ಹೇಗೆ ಸೋಲಿಸುವುದು,
ಶ್ರಮೆ ತಾಳುವ ದೇವ ಜನರಿಗೆ ಕೃಪಾಸನ ಇಲ್ಲದಾಗ ?

ಅಲ್ಲಿ, ಅಲ್ಲಿ, ಹದ್ದಿನ ರೆಕ್ಕೆಗಳ ಮೇಲೆ ಮೇಲೇರುವೆವು,
ಸಮಯ ಮತ್ತು ಪ್ರಜ್ಞೆ ಎಲ್ಲಾ ಇನ್ನು ಮುಂದೆ ಕಾಣವು,
ಪರಲೋಕ ಇಳಿದು ಬರುವುದು, ವಂದಿಸಲಿಕ್ಕೆ ನಮ್ಮ ಪ್ರಾಣಗಳು,
ಮಹಿಮೆಯು ಗೌರವಿಸುವುದು ಕೃಪಾಸನವನು.

H. Stowell

**ಅಶುದ್ಧ ಮನಸ್ಸಾಕ್ಷಿಯೊಂದಿಗೆ ಜೀವಿಸುವ ಅನ್ಯೋನ್ಯತೆಯು ಜೊತೆಯಾಗಿ ಅಸ್ತಿತ್ವದಲ್ಲಿರಲಾರದು.**

ಒಂದು ಕುಟುಂಬದಲ್ಲಿ ಜನಿಸಿದ ಬಾಲಕನು ಯಾವಾಗಲೂ ತನ್ನ ತಂದೆ ತಾಯಿಗಳ ಮಗನಾಗಿರುವನು. ಅವನು ''ಹುಟ್ಟದವನು'' ಎಂದೂ ಆಗಿರಲಾರನು. ಆದರೆ ಅವನು ಕೆಟ್ಟವನಾಗಿದ್ದರೆ, ತನ್ನ ತಂದೆ ತಾಯಿಗಳೊಂದಿಗಿನ ನೇರ ಸಂಪರ್ಕವು ಮುರಿದು ಹೋಗುವ ಸಮಯಗಳಿರುವವು. ಸಂಬಂಧವು ಉಳಿದುಕೊಳ್ಳುವುದು, ಆದರೆ ಅನ್ಯೋನ್ಯತೆಯು ನಿಶ್ಚಯವಾಗಿ ಕಡಿದು ಹೋಗುವುದು ! ಅದು ದೊಡ್ಡ ದುಃಖದ ಸಂಗತಿಯಾಗುವುದು.

ನಾವು ಹೊಸದಾಗಿ ಹುಟ್ಟಿದ ಕೂಡಲೇ, ಪರಲೋಕದಲ್ಲಿರುವ ನಮ್ಮ ತಂದೆ ಯೊಂದಿಗೆ ಒಂದು ನಿತ್ಯವಾದ ಸಂಬಂಧವು ಸ್ಥಾಪಿಸಲ್ಪಟ್ಟಿತು ಎಂಬ ತಿಳುವಳಿಕೆಯಲ್ಲಿ ತುಂಬಿಕೊಳ್ಳುವುದು ಅದ್ಭುತಕರವಾದದ್ದಾಗಿದೆ : ಕರ್ತನಾದ ಯೇಸುವನ್ನು ಯತಾರ್ಥ ವಾಗಿ ನಾವು ನಮ್ಮ ಹೃದಯಗಳಲ್ಲಿ ಸ್ವೀಕರಿಸಿದ್ದರೆ, ನಾವು ದೇವರ ಮಕ್ಕಳಾದೆವು, ಸಂಬಂಧವು ನಿತ್ಯತ್ವಕ್ಕಾಗಿ ಉಳಿದುಕೊಳ್ಳುವುದು. ಹೀಗಿದ್ದರೂ ನಾವು ಪಾಪ ಮಾಡುವಾಗ, ನಮ್ಮ ತಂದೆಯೊಂದಿಗಿನ ನಮ್ಮ ಅನ್ಯೋನ್ಯತೆಯು ದುಃಖಕರವಾಗಿ ಬೇರ್ಪಡುವುದು.

ನಮ್ಮ ಅನ್ಯೋನ್ಯತೆಯ ನಿಮಿತ್ತವಾಗಿ ನಾವು ಒಂದು ಸಲ ಅನುಭವಿಸಿದ ಆತನ ನಗುವಿಕೆಯ ಅದೇ ಆಶೀರ್ವಾದವನ್ನು ಇನ್ನು ಮುಂದೆ ಅನುಭವಿಸಲಾರೆವು. ನೇರವಾದ ಅನ್ಯೋನ್ಯತೆಯಲ್ಲಿ ಈ ಮುರಿದು ಹೋಗುವಿಕೆಯು ಸ್ವಲ್ಪ ಕಾಲವಿರಲಿ ಇಲ್ಲವೇ ಬಹಳ ಕಾಲವಿರಲಿ, ನಿಶ್ಚಯವಾಗಿಯೂ ದೇವರಿಗಾಗಲೀ ಇಲ್ಲವೇ ಆತನ ಚಿಂತನೆಯ ಕೊರತೆಗಾಗಲೀ ಅನ್ವಯಿಸಲ್ಪಡಕ್ಕಾಗುವದಿಲ್ಲ ಒಡಕುಂಟಾಗುವುದು ಯಾವಾಗಲೂ ನಮ್ಮ ಕೆಟ್ಟು ಹೋದ ಮನಸ್ಸಾಕ್ಷಿಯ ಕಾರಣದಿಂದಲೇ ಆಗುವುದು ; ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಯಾವುದೇ ತಡೆಗೆ ನಾವು ಪೂರ್ಣ ಜವಾಬ್ದಾರರಾಗಿರುತ್ತೇವೆ.

**ಒಂದು ಅಶುದ್ಧವಾದ ಮನಸ್ಸಾಕ್ಷಿ :** ''ಪಾಪವು ನನ್ನನ್ನು ಬೈಬಲಿನಿಂದ ದೂರ ಇಡುವುದು ಮತ್ತು ಬೈಬಲು ನನ್ನನ್ನು ಪಾಪದಿಂದ ದೂರ ಇಡುವುದು'' ಎಂದು ಜಾನ್ ಬುನ್ಯನ್ ಒಮ್ಮೆ ಹೇಳಿದನು. ಒಬ್ಬ ವ್ಯಕ್ತಿಯು ಪವಿತ್ರಾತ್ಮನನ್ನು ದುಃಖ

ಪಡಿಸಿದಾಗ ಮತ್ತು ತನ್ನ ಜೀವಿತದಲ್ಲಿ ಬೇಕು ಬೇಕೆಂತಲೇ ಪಾಪವನ್ನು ಅಪ್ಪಿಕೊಂಡಾಗ, ಅವನು ದೇವರ ವಾಕ್ಯಕ್ಕಾಗಿ ಹಸಿವೆಯನ್ನು ಕಳೆದುಕೊಳ್ಳುವನು, ಕ್ರೈಸ್ತನು ದೇವರ ವಾಕ್ಯದ ಕಡೆಗೆ ತಿರುಗಿಕೊಳ್ಳುವಾಗ ಬಲವಾದ ಮತ್ತು ನಿರೀಕ್ಷೆಯುಳ್ಳ ವಿಶ್ವಾಸಕ್ಕಾಗಿ ಶುದ್ಧ ಮನಸ್ಸಾಕ್ಷಿಯು ಅತೀ ಅವಶ್ಯಕವಾದದ್ದಾಗಿರುತ್ತದೆ. ''ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ ; ದೇವರ ಬಳಿಗೆ ಬರುವವನು ದೇವರು ಇದ್ದಾನೆ ; ಮತ್ತು ತನ್ನನ್ನು ಹುಡುಕುವವರಿಗೆ ತಕ್ಕ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ.'' ಎಂದು ಬೈಬಲ್ ಹೇಳುತ್ತದೆ. (ಇಬ್ರಿಯ 11:6).

ಆದರೆ ನಮ್ಮ ಪಾಪವನ್ನು ಕಡೆಗಣಿಸುವದರಲ್ಲಿ ಮುಂದುವರಿದರೆ, ನಾವು ಬೈಬಲನ್ನು ಓದುವಾಗ ನಮ್ಮ ವಿಶ್ವಾಸವು ನಂದಿಸಲ್ಪಡುವುದು, ಯಾಕಂದರೆ ನಮ್ಮ ಮನಸ್ಸಾಕ್ಷಿಯು ಪವಿತ್ರಾತ್ಮನ ಸ್ವರಕ್ಕೆ ಇನ್ನು ಮುಂದೆ ಧ್ವನಿಗೂಡಿಸಲಾರದು.

**ಒಂದು ಶುದ್ಧವಾದ ಮನಸ್ಸಾಕ್ಷಿ :** ನಾವು ಪಾಪ ಮಾಡಿದ ನಂತರ ದೇವರೊಂದಿಗೆ ಅನ್ಯೋನ್ಯತೆಯನ್ನು ನವೀಕರಿಸಲು, ನಮ್ಮ ಅಪರಾಧದ, ಪಾಪದಿಂದ ತುಂಬಿದ ಮನಸ್ಸಾಕ್ಷಿಯು ಶುದ್ಧೀಕರಿಸಲ್ಪಡುವುದು ಅಗತ್ಯವಾಗಿದೆ. ಈ ಅಪರಾಧದ ಭಾರವನ್ನು ತನ್ನಿಂದ ತೆಗೆದು ಹಾಕಲು, ಅಪವಿತ್ರನಾದ ಕ್ರೈಸ್ತನು ದೇವರ ಎದುರಿನಲ್ಲಿ ತನ್ನ ಪಾಪದ ಅರಿಕೆಯಲ್ಲಿ ತನ್ನ ಹೃದಯವನ್ನು ತೆರೆಯಬೇಕು. ಅಪೋಸ್ತಲ ಯೋಹಾನನು ಹೀಗೆ ಬರೆದಿದ್ದಾನೆ.

> ''ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ಥನೂ ನೀತಿವಂತನೂ ಆಗಿರುವದ ರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು'' (1 ಯೋಹಾನ 1:9).

ನನ್ನ ಬೈಬಲಿನ ಆ ಭಾಗದಲ್ಲಿ, ಎಫ್. ಡಬ್ಲ್ಯೂ. ಕ್ರುಮಾಖರ ಎಂಬವನಿಂದ ಪ್ರಾರ್ಥಿಸಲ್ಪಟ್ಟಂಥ ಒಂದು ಪ್ರಾರ್ಥನೆಯನ್ನು ದಾಖಲೆ ಮಾಡಿದ್ದೇನೆ. ನನ್ನ ಸೋಲಿನ ಮತ್ತು ಪಾಪದ ಅರುಹನ್ನು ನಾನು ಹೊಂದಿದಾಗ, ಆ ನಿರ್ಧಿಷ್ಟವಾದ ಪಾಪಗಳನ್ನು ದೇವರ ಕೃಪಾಸನದ ಮುಂದೆ ಹೇಳಲು

ಪ್ರಯತ್ನಿಸುವೆನು. ಆಗ ಕೆಲವು ಸಲ, ಕರ್ತನಿಗೆ ನನ್ನ ಸ್ವಂತ ವೈಯಕ್ತಿಕ ಅರಿಕೆಯ ತಳಹದಿಯಾಗಿ ಕ್ರುಮಾಖರನ ಪ್ರಾರ್ಥನೆಯನ್ನು ಮಾಡುವೆನು :

> ''ಕರ್ತನೇ, ನನ್ನ ದೇವರೇ, ನಾನು ಪುನಃ ನಿನಗೆ ವಿರೋಧವಾಗಿ ಪಾಪ ಮಾಡಿದ್ದೇನೆ ಮತ್ತು ಅದರಿಂದ ದುಃಖಕ್ಕೆ ಒಳಗಾಗಿದ್ದೇನೆ. ನನ್ನನ್ನು ನಾನೇ ಖಂಡಿಸಿಕೊಂಡು ತೀರ್ಪು ಹೊಂದುತ್ತೇನೆ. ಆದರೆ ನಿನ್ನ ದಯೆಯು ದೊಡ್ಡದು, ಅದರಲ್ಲಿ ನಾನು ನಂಬಿಕೆಯಿಡುತ್ತೇನೆ. ಪ್ರಾಯಶ್ಚಿತ್ತದ ರಕ್ತದಿಂದ ನನ್ನ ಮನಸ್ಸಾಕ್ಷಿಯನ್ನು ಚಿಮುಕಿಸು ಮತ್ತು ನನಗಾಗಿ ನೀನು ಸಹಿಸಿದ ಶ್ರಯೆಗಳನ್ನು, ನಂಬಿಕೆಯಿಂದ, ಈ ನನ್ನ ಪಾಪಕ್ಕಾಗಿ ಉಪಯೋಗಿಸಲು ನನ್ನನ್ನು ಶಕ್ತನನ್ನಾಗಿ ಮಾಡು.''

ನಾವು ನಮ್ಮ ಪಾಪಗಳನ್ನು ಕಂತೆಗಳಲ್ಲಿ ಮಾಡುವದಿಲ್ಲ, ಅದುದರಿಂದ ಅಪರಾಧದ ಒಂದು ಸಾಮಾನ್ಯ ಒಪ್ಪಿಗೆಯಲ್ಲಿ ಅವುಗಳನ್ನು ನಾವು ಅರಿಕೆ ಮಾಡಲು ಯಾಕೆ ಪ್ರಯತ್ನಿಸಬೇಕು ? ಒಂದೇ ಕಂತೆಯಲ್ಲಿ ನಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸುವದಕ್ಕಾಗಿ ದೇವರನ್ನು ಕೇಳಿಕೊಳ್ಳುವುದು ನಮ್ಮ ಗರ್ವದ ಹೃದಯಗಳೊಳಗಿಂದ ಹೊರಗೆ ಬರುವ ಸುಲಭ ಮಾರ್ಗವನ್ನು ಕಂಡುಕೊಳ್ಳಲು ಪ್ರಯತ್ನಿಸುವುದಾಗಿದೆ : ದೇವರ ಚಿತ್ತದೊಳಗೆ ಹಿಂದಿರುಗಿ ಹೆಜ್ಜೆಯಿಡಲು ಅಪೇಕ್ಷಿಸುವುದು ಹಾಗೂ ಮಾನಸಾಂತರವನ್ನು ಯತಾರ್ಥವಾಗಿ ವ್ಯಕ್ತಪಡಿಸುವುದು ಆಗಿರುವದಿಲ್ಲ. ಎಲ್ಲವನ್ನೂ ಒಳಗೊಂಡಿರುವ ಈ ರೀತಿಯ ಅರಿಕೆಯು ಅದರ ಅಪರಾಧವನ್ನು ಅರುಹನ್ನು ತೆಗೆದು ಹಾಕುವದಿಲ್ಲ. ಪಾಪ ಎಂದು ತಿಳಿದಿರುವ ಯಾವುದನ್ನೇ ಆಗಲಿ ಪವಿತ್ರಾತ್ಮನು ಮನಸ್ಸಿಗೆ ತರುವಾಗ, ಅವಿಧೇಯತೆಯ ಕೃತ್ಯದ ಹೆಸರನ್ನು ಪಾಪವೆಂದು ವಿವರಿಸಲು ಬೈಬಲು ಉಪಯೋಗಿಸುವ ಶಬ್ದವನ್ನೇ ಉಪಯೋಗಿಸಬೇಕು - ಒಂದು ಬಿಳಿ ಸುಳ್ಳಲ್ಲ. ಆದರೆ ಒಂದು ಸುಳ್ಳು ; ಕಲ್ಪಿಸುವ ಮನಸ್ಸು ಎಂದಲ್ಲ, ಆದರೆ ಒಂದು ವ್ಯಭಿಚಾರದ ಮನಸ್ಸು; ಅವಸರದ ಮಾತಲ್ಲ, ಆದರೆ ಕೊಲೆ ಮಾಡುವ ದ್ವೇಷದೊಂದಿಗಿನ ಹೃದಯ.

ನಿಜವಾದ ಅಪರಾಧದ ಕಾರಣದಿಂದ, ಮತ್ತು ಅಪರಾಧ ಮನೋಭಾವನೆ ಅಷ್ಟೇ ಅಲ್ಲ, ನಮ್ಮ ಸಮಸ್ಯೆಯು. ನಾವು ದೇವರ ಸನ್ನಿಧಿಯ ಬೆಳಕಿನಲ್ಲಿ ಬರುವಾಗ ಯಾವುದೇ ರೀತಿಯ ಮಾನಸಿಕ ದ್ವಂದ ಮಾತಾಗಲೀ ಇಲ್ಲವೇ ಮಾನವ ನೆವವಾಗಲೀ ಇರಬಾರದು. ನೀನು ದೀನತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಆತನ ಮುಂದೆ ನಿನ್ನ ಪಾಪದ ಹೆಸರು ಹೇಳುವಾಗ, ದೇವರು ತನ್ನ ಮಹಾಕರುಣೆಯಲ್ಲಿ, ನಿನ್ನ ಅರಿಕೆಗೆ ಉತ್ತರಕೊಡುವನು. ದೇವರ ಅದ್ಭುತಕರವಾದ ಕೃಪೆಯು ಅಂಥದ್ದಾಗಿರುವುದು.

ದಾವೀದನು ತನ್ನ ದುಃಖಕರವಾದ ಸ್ವಂತದ ಪಾಪವನ್ನು ಅರಿಕೆಮಾಡಿದ ತರುವಾಯ, ಅದರ ಮೇಲೆ ಪ್ರತಿಕ್ರಿಯಿಸುವದರಲ್ಲಿ ಆನಂದ ಪಟ್ಟನು : ''ನಿನ್ನ (ದೇವರ) ಕರುಣೆಗಳ ಅಪಾರತೆಯು (ಕೀರ್ತನೆ 51:6). ಕೀರ್ತನೆ 51ರಲ್ಲಿಯ ಬೈಬಲಿನ ದಾಖಲೆಯು ದಾವೀದನು ದೇವರ ಕಡೆಗೆ ತಿರುಗಿ ಕೊಂಡಾಗ ; ಈ ಮುರಿದ ಮತ್ತು ಹೃದಯ - ಕಲುಕಿದ ಮನುಷ್ಯನು ತನ್ನ ಅರಿಕೆಯಲ್ಲಿ ಯತಾರ್ಥನಾಗಿದ್ದನು ಅಷ್ಟೇ' ಅಲ್ಲ, ಅವನು ತನ್ನ ಅರಿಕೆಯಲ್ಲಿ ಪ್ರಾಮಾಣಿಕನಾಗಿದ್ದನು ಎಂಬುದನ್ನು ತೋರಿಸುತ್ತದೆ. ನೀನು ಮಾನಸಾಂತರ ಪಟ್ಟರೆ, (ದೇವರ ಮಾರ್ಗವನ್ನಲ್ಲ ಆದರೆ ನಿನ್ನ ಸ್ವಂತ ಮಾರ್ಗವನ್ನು ನೀನು ತೆಗೆದುಕೊಂಡಿದ್ದೀ ಎಂದು ಗುರುತಿಸಿದರೆ, ಮತ್ತು ಈಗ ದೇವರ ಶುದ್ಧವಾದ ಹಾಗೂ ಪವಿತ್ರವಾದ ಮಾರ್ಗಕ್ಕೆ ಹಿಂದಿರುಗಿ ಬರಲು ಅಪೇಕ್ಷಿಸಿದರೆ) ಮತ್ತು ನಿನಗೆ ತಿಳಿದಿರುವ ಪಾಪಗಳನ್ನು ದೀನತೆಯಿಂದಲೂ ಪ್ರಾಮಾಣಿಕತೆಯಿಂದಲೂ ಅರಿಕೆ ಮಾಡಿದರೆ, ಹಾಗೂ ದೇವರ ಮುಂದೆ ಸ್ಪಷ್ಟವಾದ ಮಾತುಗಳಲ್ಲಿ ಅವುಗಳನ್ನು ಹೆಸರಿಸಿದರೆ, ದೇವರ ದಯಾಪೂರ್ವಕವಾದ ಕರುಣೆಗಳಲ್ಲಿ ಆನಂದಪಡುವಿ. ಆಗ ಮಾತ್ರವೇ ನಿನ್ನ ಮನಸ್ಸಾಕ್ಷಿಯು ಶುದ್ಧವಾಗಿರುವುದು, ಅದರಿಂದ ಪವಿತ್ರ ದೇವರೊಂದಿಗೆ ಅನ್ಯೋನ್ಯತೆಯನ್ನು ಪುನಃಸ್ಥಾಪಿಸಿಕೊಳ್ಳಲು ಶಕ್ತನಾಗುವಿ.

ಪ್ರೀತಿಯುಳ್ಳ ದೇವರ ದಯೆಯ ಕಾರ್ಯದಿಂದ ನಿನ್ನ ಮನಸ್ಸಾಕ್ಷಿಯು ಶುದ್ಧೀಕರಿಸಲ್ಪಟ್ಟಾಗ, ನಿನಗೆ ಪ್ರಾರ್ಥನೆಯಲ್ಲಿ ಹೊಸ ಧೈರ್ಯವಿರುವದನ್ನು ಕಂಡುಕೊಳ್ಳುವಿ :

**''ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಪ್ರವೇಶಿಸಿ..... ನಾವು ಹೃದಯವನ್ನು ಪ್ರೋಕ್ಷಿಸಿ ಕೊಂಡು.... ದೇವರ ಬಳಿಗೆ ಬರೋಣ'' (ಇಬ್ರಿಯ 10:19,22)**

ಹೌದು, ದೇವರ ಮುಂದೆ ನಿಜವಾದ ಧೈರ್ಯವು ಶುದ್ಧ ಮನಸ್ಸಾಕ್ಷಿಯಿಂದ ಹರಿದು ಬರುವುದು. ಆಗ ಪಾರದರ್ಶಕವಾಗಿ ಸತ್ಯಭರಿತ ಹೃದಯವು, ದೇವರೊಂದಿಗೆ ಸಜೀವ ಅನ್ಯೋನ್ಯತೆಯ ಪೂರ್ಣ ಆನಂದಕ್ಕೆ ಅಗತ್ಯವಾಗಿ ಬೇಕಾಗುವ ಧೈರ್ಯದ ವಿಶ್ವಾಸವನ್ನು ಬಿಡುಗಡೆ ಮಾಡುವುದು.

ನೀನು ನಿನ್ನ ಹೃದಯವು ಸ್ವಚ್ಛವಾಗಿರುವದೆಂದು ನೀನು ತಿಳಿದುಕೊಳ್ಳುವಾಗ, ಹಿಂದಿನ ಪಾಪದ ತಗ್ಗಿಸುವ ಜ್ಞಾಪಕವು ಇನ್ನು ಮುಂದೆ ನಿನ್ನ ಮನಸ್ಸಾಕ್ಷಿಯನ್ನು ಗಲಿಬಿಲಿಗೊಳಿಸಲು ಶಕ್ತವಾಗುವದಿಲ್ಲ. ಸೈತಾನನು ನಿನ್ನನ್ನು ದೂರಲು ಪ್ರಯತ್ನಿಸುವನು, ಆದರೆ ಅವನ ಬಲವಾದ ದಾಳಿಗಳನ್ನು ಎದುರಿಸಲು, ಅವನಿಗೆ ನಿನ್ನ ಉತ್ತರವು ನಿನ್ನ ಅಪರಾಧಿ ಮನಸ್ಸಾಕ್ಷಿಗೆ ದೇವರ ಉತ್ತರವಿದ್ಧಂಥದ್ದು ಆಗಿರಬೇಕು ; ಅಂದರೆ ಯೇಸುವಿನ ಅಮೂಲ್ಯ ರಕ್ತದ ಬಲವಾಗಿರಬೇಕು. ಪ್ರಕಟನೆಯ ಗ್ರಂಥದಲ್ಲಿ, ದೇವರ ಜನರು, ದೇವರಿಂದ ಕ್ಷಮಿಸಲ್ಪಟ್ಟ ಪಾಪಗಳು ಸೈತಾನನಿಂದ ದೂರಲ್ಪಟ್ಟಾಗ, ಆ ಅಮೂಲ್ಯ ರಕ್ತದ ಬಲವಾದ ಶಕ್ತಿಯನ್ನು ಅರಿತುಕೊಂಡರು. ಅವರ ಬಗ್ಗೆ ಹೀಗೆ ದಾಖಲಿಸಲ್ಪಟ್ಟಿದೆ : ''**ಯಜ್ಞದ ಕುರಿಯಾದಾತನ ರಕ್ತದ ಬಲದಿಂದ** ಅವರು ಅವನನ್ನು (ಸೈತಾನನ್ನು - ಸಹೋದರರ ಮೇಲೆ ದೂರು ಹೇಳಿದವನನ್ನು) ಜಯಿಸಿದರು...'' (ಪ್ರಕಟನೆ'12:11). ಶುದ್ಧೀಕರಿಸಲ್ಪಟ್ಟ ಮನಸ್ಸಾಕ್ಷಿಯ ಆಶೀರ್ವಾದವನ್ನು ಅವರು ಅನುಭವಿಸುವರಲ್ಲದೆ, ಅವರು ಕ್ಷೋಭೆಗೊಳ್ಳದ ಮನಸ್ಸಾಕ್ಷಿಯ ರಹಸ್ಯವನ್ನು ಕಲಿತು ಕೊಂಡಿರುವರು. ದೇವರಿಗೆ ಸ್ತೋತ್ರವಾಗಲಿ !

**ಸಜೀವ ಅನ್ಯೋನ್ಯತೆಯು ತಪ್ಪಾದ ಮನೋಭಾವನೆಯೊಂದಿಗೆ ಒಂದಾಗಿ ಅಸ್ತಿತ್ವದಲ್ಲಿರಲಾರದು.**

ದೇವರ ವಾಕ್ಯದ ಪೋಷಿಸುವ ಹಾಲಿಗಾಗಿ ಜನರಿಗೆ ಯಾಕೆ ಅಪೇಕ್ಷೆ

ಇರುವದಿಲ್ಲ ಎಂಬುದಕ್ಕೆ ಅಡಗಿಸಿಕೊಳ್ಳುವಷ್ಟು ನಿನಗೆ ಎಂದಾದರೂ ಅಂಥ ಜ್ವರವು ಇರುವುದೋ ? ಆಹಾರವು ಎಷ್ಟೇ' ರುಚಿಕರವಾದದ್ದಾಗಿದ್ದರೂ ನೀನು ತಿನ್ನುವದರಲ್ಲಿ ಆಸಕ್ತಿಯುಳ್ಳವನಾಗಿರುವದಿಲ್ಲ. ನೀನು ಅಸ್ವಸ್ಥತೆಯಲ್ಲಿರುವಾಗ, ಪೋಷಕವಾಗಿರುವ ಆಹಾರವು ಆಕರ್ಷಣೆಯುಳ್ಳದ್ದಾಗಿರುವದಿಲ್ಲವೋ ಹಾಗೆಯೇ, ತಪ್ಪಾದ ಮನೋಭಾವನೆಯು ನಿನ್ನ ಆತ್ಮಿಕ ಹಸಿವೆಯನ್ನು ಆರಿಸಿದ್ದರೆ, ಬೈಬಲು ನಿನ್ನಲ್ಲಿ ಆಕರ್ಷಣೆಯನ್ನು ಹುಟ್ಟಿಸುವದಿಲ್ಲ.

ವಾಕ್ಯದ ಪೋಷಿಸುವ ಹಾಲನ್ನು ಬಯಸುವದಕ್ಕೆ ಪೇತ್ರನು ನಮ್ಮನ್ನು ಪ್ರೋತ್ಸಾಹಿಸಿದರೂ (1 ಪೇತ್ರ 2:2) ದೇವರ ಪೋಷಕಾಂಶಗಳಿಗಾಗಿ ನಮ್ಮ ಅಪೇಕ್ಷೆಯನ್ನು ಹಾಳುಮಾಡುವ ಮನೋಭಾವನೆಗಳ ಬಗ್ಗೆ ಅವನು ಮೊದಲು ಎಚ್ಚರಿಸುತ್ತಾನೆ. ಪೋಷಿಸುವ ''ಒಂದಾಗಿ ಕೂಡಿ ಬರುವಿಕೆಯ ಸಮಯ'' ಕ್ಕೆ ಈ ಆತಂಕಗಳನ್ನು ಪರಿಹರಿಸಿಕೊಳ್ಳಲು ಒಂದೇ ಒಂದು ಮಾರ್ಗವು ಇರುವುದೆಂದು ಅವನು ಬರೆದಿದ್ದಾನೆ. ಪರಿಪೂರ್ಣ ಆತ್ಮಿಕ ಹಸಿವೆಗೆ ಇರುವ ಪ್ರತಿಯೊಂದು ಆತಂಕವನ್ನು ಬದಿಗಿಡಬೇಕು. ಅನಾರೋಗ್ಯಕರವಾದ ಮನೋಭಾವನೆಯು, ಆರೋಗ್ಯಕರವಾದ ಹಸಿವೆಯು ಪುನಃ ಬರಬೇಕೆಂದರೆ, ಆಮೂಲಾಗ್ರವಾಗಿ ಬದಲಾಯಿಸಲ್ಪಡಬೇಕು - **''ಮಾನಸಾಂತರ ಪಡು''** ಎಂದು ಹೇಳುವ ಇನ್ನೊಂದು ಮಾರ್ಗ ಇದಾಗಿದೆ.

> ''ಆದಕಾರಣ ಎಲ್ಲಾ ಕೆಟ್ಟುತನವನ್ನೂ ಎಲ್ಲಾ ವಂಚನೆಯನ್ನೂ ಎಲ್ಲಾ ತರದ ನಿಂದೆಯನ್ನು ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ.'' (1 ಪೇತ್ರ 2:1-27).

ಮೊದಲು ನಾವು ಹೇಳಿದ ಆತ್ಮಿಕ ರೋಗವು - ನಮ್ಮ ಆತ್ಮಿಕ ಹಸಿವೆಯನ್ನು ಹಾಳು ಮಾಡುವಂಥದ್ದು - ತೆಗೆದು ಹಾಕಲ್ಪಡುವ ವರೆಗೆ ನಾವೆಂದೂ ''ವಾಕ್ಯದ ಶುದ್ಧ ಹಾಲನ್ನು'' ನಿಜವಾಗಿ ಅಪೇಕ್ಷಿಸುವದಿಲ್ಲ ಎಂದು ಪರಿಶುದ್ಧ ಬರಹವು ಒತ್ತಿ ಹೇಳುತ್ತದೆ. ಅವುಗಳನ್ನು ಒಂದೊಂದಾಗಿ ಯೋಚಿಸೋಣ :

**ದ್ವೇಷ :** ಇತರರಿಂದ ನಾವು ನಡಿಸಲ್ಪಟ್ಟ ರೀತಿಗಾಗಿ ನಮ್ಮ ವಿರೋಧ ಇಲ್ಲವೇ ಕೋಪ - ಕ್ಷಮಿಸದ ಮನೋಸ್ಥಿತಿ ಇರುವುದು.

ಕೊರ್ರಿ ಟೆನ್ ಬೂಮ ಎಂಬಾಕೆಯು ರೇವನ್ಸ್ ಬ್ರುಕ್ ನಾಝಿ ಕೊನ್ಸಂಟ್ರೇಶನ್ ಕ್ಯಾಂಪದ, ಕುಖ್ಯಾತ ನಿರ್ಮೂಲನಾ ಕೇಂದ್ರದಲ್ಲಿ ಅಗ್ರಾಹ್ಯವಾದ ಶ್ರಮೆಯನ್ನು ಅನುಭವಿಸಿದಳು. ಇದಕ್ಕಿಂತಲೂ ಆಕೆಗೆ ಹೆಚ್ಚು ಭಯಾನಕವಾದದ್ದು ತನ್ನ ಸ್ವಂತ, ಭಕ್ತಿಯುಳ್ಳ ಸಹೋದರಿಯ ಜೀವವು ಆ ಕ್ಯಾಂಪಿನ ಅಮಾನುಷವಾದ ಮತ್ತು ಹಿಂಸಾತ್ಮಕವಾದ ವಾತಾವರಣದಲ್ಲಿ ಅಳಿದು ಹೋದದ್ದನ್ನು ನೋಡಿದ್ದಾಗಿತ್ತು. ಅಂಥ ದುಷ್ಕೃತ್ಯಗಳಿಗೆ ಜವಾಬ್ದಾರರಾಗಿದ್ದ ಕ್ರೂರ ಕಾವಲುಗಾರನ ಬಗ್ಗೆ ಮಾತಾಡುವಾಗ, ಕೊರ್ರಿ ಟೆನ್ ಬೂಮ ಅನಂತರದಲ್ಲಿ ಅವರನ್ನು ನಿಜವಾಗಿ ಹೇಗೆ ಕ್ಷಮಿಸಿದ್ದೇನೆ ಎಂದು ಸಾಕ್ಷಿಕೊಟ್ಟು, ಹೀಗೆ ಹೇಳಿದಳು :

**''ಕ್ಷಮಾಪಣೆಯು ಚಿತ್ತದ ಕಾರ್ಯವಾಗಿದೆ ಮತ್ತು ಚಿತ್ತವು ಹೃದಯದ ತಾಪಮಾನವು ಎಷ್ಟೇ ಇದ್ದರೂ ಕಾರ್ಯಮಾಡಲು ಆಯ್ದುಕೊಳ್ಳಬಹುದು.''**

ಯಾರ ಮೇಲಾದರೂ ಕ್ಷಮಿಸದ ಭಾವನೆ ಸಾಧಿಸುತ್ತಿದ್ದರೆ - ಅಂಥ ವ್ಯಕ್ತಿಯ ಕೈಗಳಿಂದ ನೀನು ಹೇಗೆ ಶ್ರಮೆ ಸಹಿಸಿದ್ದರೂ- ಕ್ಷಮಿಸುವ ನಿನ್ನ ಕೊರತೆಯು ಅವನಿಗೆ ತೊಂದರೆ ಮಾಡುವದಿಲ್ಲ, ಆದರೆ ನಿಶ್ಚಯವಾಗಿಯೂ ಅದು ನಿನ್ನ ಆತ್ಮಿಕ ಜೀವಿತವನ್ನು ಕೆಡಿಸುವುದು ಅವನನ್ನು ಕ್ಷಮಿಸಲು ಸಿದ್ಧನಾಗುವ ವರೆಗೆ ಅಂಥ ವ್ಯಕ್ತಿಗೆ ದಾಸತ್ವದಲ್ಲಿರುವಿ. ಆಗ ಮಾತ್ರವೇ ನಮ್ಮ ಕರ್ತನು ಕಲಿಸಿಕೊಟ್ಟ ಪ್ರಾರ್ಥನೆಯನ್ನು ಪ್ರಾರ್ಥಿಸಬಹುದು: **''ನಮಗೆ ತಪ್ಪು ಮಾಡಿರುವ ಪ್ರತಿಯೊಬ್ಬನನ್ನು ನಾವು ಕ್ಷಮಿಸುತ್ತೇವಾದ್ದರಿಂದ, ನಮ್ಮ ಪಾಪಗಳನ್ನು ಕ್ಷಮಿಸು'' (ಲೂಕ 11:4).** ನಿನ್ನ ಹೃದಯದಲ್ಲಿ ''ಹಗೆತನದ'' (ಕ್ಷಮಿಸದಿರುವುದು) ಆತ್ಮದ ಬಗ್ಗೆ ತಿಳಿದುಕೊಂಡರೆ, ದೇವರೊಂದಿಗೆ ಏಕಾಂಗಿಯಾಗಿ ನಿನ್ನ ಸಮಯ ಕಳೆಯುತ್ತಿರುವಂತೆ ಆ ವ್ಯಕ್ತಿಯನ್ನು, ಇಲ್ಲವೇ ವ್ಯಕ್ತಿಗಳನ್ನು ಕ್ಷಮಿಸುವದನ್ನು ಆಯ್ದುಕೋ. ಆಗ ನೀನು ಕಪಟವಿಲ್ಲದೇ ಅವರ ಕಡೆಗೆ ದೇವರ ಪ್ರೀತಿಯನ್ನು ವ್ಯಕ್ತಪಡಿಸಲು ಶಕ್ತನಾಗುವಿ.

**ವಂಚನೆ:** ನಮ್ಮ ಪಾಪವನ್ನು ಅರಿಕೆ ಮಾಡುವದರ ಬದಲು ನಮ್ಮ ಸೋಲುಗಳನ್ನು ಮುಚ್ಚಿಡುವುದು ಇಲ್ಲವೇ ವೈಚಾರಿಕತೆಯಿಂದ ಸಮರ್ಥಿಸಿಕೊಳ್ಳುವುದು ಪ್ರಾಮಾಣಿಕತೆಯಿಂದ ಜೀವಿಸದೇ ಸುಳ್ಳಿನಿಂದ ಜೀವಿಸುವುದು.

**ಕಪಟ :** ತಪ್ಪಾದ ಪ್ರಭಾವ ಬೀರಲು ಗರ್ವದ ಅಪೇಕ್ಷೆಯಿಂದ ನಮ್ಮನ್ನು ಅತಿಯಾಗಿ ತಪ್ಪಾಗಿ ಪ್ರತಿನಿಧೀಕರಿಸುವುದು - ನಾವಿರದಂಥ ಯಾವುದೋ ವ್ಯಕ್ತಿಯಾಗಿದ್ದೇವೆಂದು ಇಲ್ಲವೇ ಏನೋ ಆಗಿದ್ದೇವೆಂದು ನಟಿಸುವುದು. ಅದು ಒಬ್ಬ ಸಭಾಪಾಲಕರಿಂದಾಗಲೀ, ತಂದೆ ತಾಯಿಯಿಂದಾಗಲೀ, ಒಬ್ಬ ಸ್ನೇಹಿತನಿಂದಾಗಲೀ, ಇಲ್ಲವೇ ಕೆಲಸ ಮಾಡುವ ಸ್ಥಳದಲ್ಲಿಯಾಗಲೀ ಮನ್ನಣೆಗಾಗಿ ಅಪೇಕ್ಷೆಯು ಎಲ್ಲಾ ಕಪಟತನಕ್ಕೆ ಮೂಲ ಕಾರವಾಗಿದೆ.

**ಅಸೂಯೆ :** ಇನ್ನೊಬ್ಬನ ಆಶೀರ್ವಾದಗಳಿಗೆ ನಿಜವಾದ ಸಂತೋಷಪಡುವಿಕೆಯಿಂದಲ್ಲ ಆದರೆ ಸಂಶಯದೊಂದಿಗೆ ಪ್ರತಿಕ್ರಿಯೆ ತೋರಿಸುವುದು - ಬೇರೊಬ್ಬರು ಹೊಂದಿಕೊಂಡದ್ದಕ್ಕೆ ಆಶೆ ಪಡುವುದು.

**ಕೆಟ್ಟ ಮಾತು:** ಇನ್ನೊಬ್ಬನಿಗೆ ನೋವುಂಟು ಮಾಡಲು ಇಲ್ಲವೆ ಇನ್ನೊಬ್ಬನ ಮೇಲೆ ಆಪಾದನೆ ಹೊರಿಸಲು, ನಮ್ಮ ನಾಲಿಗೆ ಉಪಯೋಗಿಸುವುದು, ಇಲ್ಲವೆ ಬೇರೊಬ್ಬನ ಗುಣಕ್ಕೆ ಕಳಂಕತರುವ ಯಾವುದಕ್ಕಾದರೂ ನಮ್ಮ ಕಿವಿಗೂಡುವುದು - ಇನ್ನೊಬ್ಬ ವ್ಯಕ್ತಿಯ ಜೀವನದಲ್ಲಿ ಪಾಪಗಳನ್ನು ತೋರಿಸುವದರಿಂದ ನಮ್ಮ ಸ್ವಂತ ವೈಯಕ್ತಿಕ ಅಪರಾಧವನ್ನು ಹಗುರಗೊಳಿಸಿಕೊಳ್ಳುವುದು.

ವಾಕ್ಯದಿಂದ ಪೋಷಿಸಲ್ಪಡಲಿಕ್ಕೆ ನಾವು ನಿಜವಾಗಿಯೂ ಅಪೇಕ್ಷಿಸಿದರೆ ಈ ಸಂಗತಿಗಳನ್ನು ನಾವು ಬದಿಗಿಡತಕ್ಕದ್ದು. ಆಗ, ಹಸಿವೆಯಾಗುವಾಗ ಜೀವ-ಕೊಡುವ ಹಾಲನ್ನು ಹೊಸದಾಗಿ ಹುಟ್ಟಿದ ಶಿಶುವು ಹುಡುಕುವಂತೆ ನಡಿಸುವ ಅಗತ್ಯತೆಯಿರುವದಿಲ್ಲ. ಹಾಗೆಯೇ, ನೀನು ನಿನ್ನ ಬೈಬಲನ್ನು ತೆರೆಯುವ ಅವಕಾಶವಿರುವಾಗ, ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸುವಿ ಮತ್ತು ಅದರಿಂದ ಬೆಳೆಯುತ್ತ ರಕ್ಷಣೆಯನ್ನು ಹೊಂದುವಿ. (1 ಪೇತ್ರ 2:2).

**ಸಜೀವ ಅನ್ಯೋನ್ಯತೆಯು ಸ್ವಾರ್ಥ ಕೇಂದ್ರವಾಗಿರುವ ಜೀವಿತದೊಂದಿಗೆ ಜೊತೆಯಾಗಿ ಅಸ್ತಿತ್ವದಲ್ಲಿರಲಾರದು.**

ಅನೇಕ ವರ್ಷಗಳಿಂದ ಜಪಾನಿನಲ್ಲಿ ಇದ್ದ ಒಬ್ಬ ಮಿಶನರಿ ಮಹಿಳೆಯಿಂದ ಒಂದು ವೈಯಕ್ತಿಕ ಪತ್ರವನ್ನು ಸ್ವೀಕರಿಸಿದೆನು. ಹೆಚ್ಚಾದ ಇತರರು ತಲುಪಲಾರದ ಜನರಿಗೆ - ಸರಕಾರದಲ್ಲಿ, ರಾಜಕೀಯ ವೃತ್ತಗಳಲ್ಲಿ ಇರುವವರಿಗೆ ಮತ್ತು ''ಉನ್ನತ ಸಮಾಜ'' ದಲ್ಲಿಯ ಇತರರಿಗೆ ಆಕೆ ಸೇವೆ ಮಾಡುತ್ತಾಳೆ. ಆಕೆ ಹೀಗೆ ಬರೆದಳು :

> ತನ್ನನ್ನು ಅಲ್ಲಗಳೆದುಕೊಂಡು ದಿನವೂ ಶಿಲುಬೆಯನ್ನು ಹೊತ್ತುಕೊಳ್ಳವ ಬೋಧನೆಗೆ ಏನು ಸಂಭವಿಸಿರುವುದು ? ಕ್ರೈಸ್ತ ಜೀವಿತಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬೇರೆಯಾಗಿಟ್ಟುಕೊಂಡಾಗ, ಒಂದು ಸಂಗತಿ ನನ್ನ ಗಮನಕ್ಕೆ ಬಂದಿತು. ಹಿಂದಿನ ಇಪ್ಪತ್ತು ಇಲ್ಲವೇ ಹೆಚ್ಚು ವರ್ಷಗಳಲ್ಲಿ ನಾನು ಪಡೆದ ಪುಸ್ತಕಗಳು ಕ್ರೈಸ್ತ ಜೀವನದ ಸುಧಾರಣೆಗಳಿಗಾಗಿ ''ನೀನೇ ಕಾರ್ಯಮಾಡಬೇಕು'' ಎಂದು ಹೇಳುತ್ತಿದ್ದವು. ಆದರೆ ನನ್ನ ಪ್ರಾರಂಭದ ಕ್ರೈಸ್ತ ಜೀವನದಿಂದ ಆ ಪುಸ್ತಕಗಳು ಹೇಳಿದ್ದನ್ನು ಜ್ಞಾಪಿಸಿಕೊಳ್ಳುತ್ತೇನೆ. ಅವು ಸ್ವಾರ್ಥವನ್ನು ಅಲ್ಲಗಳೆಯುವುದು, ಪ್ರತಿದಿನವೂ ಶಿಲುಬೆಯನ್ನು ತೆಗೆದು ಕೊಳ್ಳುವುದು, ಪರಿಶುದ್ಧ ಜೀವಿತ ಜೀವಿಸುವುದು, ಕ್ರಿಸ್ತನಲ್ಲಿ ನೆಲೆಗೊಳ್ಳುವುದು ಮತ್ತು ನನ್ನ ಮುಖಾಂತರ ಜೀವಿಸಲು ಆತನನ್ನು ಬಿಡುವುದು ಎಂಬಿತ್ಯಾದಿಗಳಿದ್ದವು. ಕ್ರಮೇಣವಾಗಿ ಆ ಬೋಧನೆಗಳು ಕಣ್ಮರೆಯಾಗುತ್ತಲಿವೆಯೋ ಇಲ್ಲವೇ ಅದನ್ನು ನಾನು ಕಲ್ಪಿಸುತ್ತಿರುವೆನೋ ?
>
> ಹಾಂಗ ಕಾಂಗಿನಲ್ಲಿಯ ಒಬ್ಬ ಚೀನಾದ ನಾಯಕನು ಹೀಗೆ ಬರೆದಾಗ, ಅವನ ಅರ್ಥವು ಇದಾಗಿರಬಹುದು: ''ಪಶ್ಚಿಮದಲ್ಲಿ ಇಲ್ಲವೇ ಇಡೀಯಾಗಿ ಸ್ವತಂತ್ರ ಜಗತ್ತಿನಲ್ಲಿ, ಸಭೆಯು ಎಷ್ಟೇ ಹೆಚ್ಚಾಗಿ ಯೇಸುವಿನ ಪುನರುತ್ಥಾನದ ಜಯದೊಂದಿಗೆ ಗುರುತಿಸಿ ಕೊಳ್ಳುವದನ್ನು ನೋಡಿದ್ದೇನೆ, ಅವರು ಆ ರೀತಿಯ ಸಂಬಂಧವನ್ನು ಬಯಸುತ್ತಾರೆ. ಯಶಸ್ಸಿಗಾಗಿ, ಸಮೃದ್ಧಿಗಾಗಿ, ಉತ್ಥಾನವಾದ ಕುಮಾರನ ಒಳ್ಳೇ ಸಂಗತಿಗಳಿಗಾಗಿ ಅವರು ಆಸಕ್ತರಾಗಿದ್ದಾರೆ. ಕ್ರಿಸ್ತನ ಶ್ರಮೆಗಳ

ಅನ್ಯೋನ್ಯತೆಯಲ್ಲಿ ಕೆಲವರು ಭಾಗವಹಿಸುತ್ತಾರೆ. ಹೀಗಿದ್ದರೂ, ಇದಕ್ಕೆ ವಿರುದ್ಧವಾದದ್ದನ್ನು ಏಶಿಯನ್ ಸಭೆಗಳಲ್ಲಿ, ಪ್ರತ್ಯೇಕವಾಗಿ ಪ್ರತಿಬಂಧಿಸಲ್ಪಟ್ಟಿರುವ ಮತ್ತು ನಿರ್ಬಂಧಿಸಲ್ಪಟ್ಟಿರುವ ಪರಿಸ್ಥಿತಿಗಳಲ್ಲಿರುವ ದೇಶಗಳಲ್ಲಿ ಕಂಡುಕೊಳ್ಳುತ್ತೇನೆ. ಈ ವಿಶ್ವಾಸಿಗಳು ಕ್ರಿಸ್ತನ ಶ್ರಮೆಗಳೊಂದಿಗೆ ಅನ್ಯೋನ್ಯತೆಯಲ್ಲಿರಲು ಹೆಚ್ಚು ಸಿದ್ಧ ಮನಸ್ಸುಳ್ಳವರಾಗಿರುತ್ತಾರೆ. ಅವರಿಗೆ, ಆತನ ಶ್ರಮೆಗಳ ಅನ್ಯೋನ್ಯತೆಯು ಹೆಚ್ಚು ದೊಡ್ಡ ಬಹುಮಾನವೂ ಮತ್ತು ಅವಕಾಶವೂ ಆಗಿದೆ.''

## ಆತನ ಮರಣಕ್ಕೆ ಸರೂಪನಾಗುವುದು

ಅಪೊಸ್ತಲ ಪೌಲನು ತಾನೇ ಪ್ರಾರ್ಥಿಸಿದನು :

**''ಆತನನ್ನು (ಕರ್ತನಾದ ಯೇಸುವನ್ನು) ಮತ್ತು ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನು ತಿಳುಕೊಂಡು ಆತನ ಮರಣದ ವಿಷಯದಲ್ಲಿ ಸರೂಪನಾಗಬೇಕೆಂಬುದೇ ನನ್ನ ಕುತೂಹಲ ವಾಗಿದೆ.'' (ಫಿಲಿಪ್ಪಿ 3:10).**

ಪೌಲನಿಂದ ವ್ಯಕ್ತಪಡಿಸಲ್ಪಟ್ಟಂತೆ ಕರ್ತನಾದ ಯೇಸುವಿನೊಂದಿಗೆ ಅನ್ಯೋನ್ಯತೆಗೆ ಈ ಘನವಾದ ಗುರಿಯ ಅರ್ಥಗಳನ್ನು ಗ್ರಹಿಸಿಕೊಳ್ಳಲು, ''ಗೊತ್ತು ಮಾಡಿಕೊಳ್ಳದೆ ಇಬ್ಬರು ಜೊತೆಯಾಗಿ ನಡೆಯುವರೋ ?'' (ಆಮೋಸ 3:3) ಎಂದು ಆಮೋಸನು ಕೇಳಿದ್ದು ಸಹಾಯ ಮಾಡುತ್ತದೆ. ಆತನ ಪುನರುತ್ಥಾನದ ಬಲದಲ್ಲಿ ನಾವು ನಡೆಯಬೇಕೆಂದು ಬಯಸಿದರೆ, ಆಗ ಆತನ ಶ್ರಮೆಗಳ ಅನ್ಯೋನ್ಯತೆಯಲ್ಲಿ ಭಾಗಿಗಳಾಗಲು ನಿಶ್ಚಯವಾಗಿ ಒಪ್ಪಿಕೊಳ್ಳಬೇಕು. ಅಂಥ ಒಪ್ಪಂದವೂ ನಿಜವಾಗಿಯೂ ಒಪ್ಪಂದವೇ ಆಗಿರುವದಿಲ್ಲ.

ಬೇರೆಕಡೆಯಲ್ಲಿ ಪೌಲನು ತನ್ನ ಅಪೊಸ್ತಲಿಕ ಅಧಿಕಾರವನ್ನು ಕಡೆಗಣಿಸಲು ಪ್ರಾರಂಭಿಸಿದ ಅವನಿಂದ ಮಾರ್ಪಡಿಸಲ್ಪಟ್ಟವರಿಗೆ ಅವನು ಬರೆದಾಗ ಪ್ರತಿಯಾಗಿ ಪ್ರೀತಿಸಿದ ಪ್ರೀತಿಯ ದೊಡ್ಡ ನೋವನ್ನು ಎತ್ತಿ ತೋರಿಸಿದನು : ''ನಾನಂತೂ

ನನಗಿರುವದನ್ನೂ ನಿಮ್ಮ ಆತ್ಮ ಸಂರಕ್ಷಣೆಗೋಸ್ಕರ ಅತೀ ಸಂತೋಷದಿಂದ ವೆಚ್ಚ ಮಾಡುತ್ತೇನೆ, ನನ್ನನ್ನೇ ವೆಚ್ಚ ಮಾಡಿಕೊಳ್ಳುತ್ತೇನೆ. ನಾನು ನಿಮ್ಮನ್ನು ಹೆಚ್ಚಾಗಿ ಪ್ರೀತಿಸಿದರೆ ನೀನು ನನ್ನನ್ನು ಕಡಿಮೆಯಾಗಿ ಪ್ರೀತಿಸುತ್ತೀರೋ ?'' (2 ಕೊರಿಂಥ 12:15) ಬೇರೆ ಕಡೆಯಲ್ಲಿ ಯತಾರ್ಥವಾದ ಪ್ರೀತಿಯನ್ನು ವಿಂಗಡಿಸಿದನು ಮತ್ತು ಒತ್ತಿಯಾಗಿ ಘೋಷಿಸಿದನು : ''ಪ್ರೀತಿಯು ಬಹು ತಾಳ್ಮೆಯುಳ್ಳದ್ದು ಮತ್ತು ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ......'' (1 ಕೊರಿಂಥ 13:4-5).

ಅಂಥ ಶುದ್ಧ ಪ್ರೀತಿಯು, ದೀರ್ಘಶಾಂತಿಯ ಮತ್ತು ಸ್ವಾರ್ಥರಹಿತವಾದದ್ದು, ಅದ್ಭುತಕರವಾಗಿ ಕರ್ತನಾದ ಯೇಸು ಕ್ರಿಸ್ತನ ವ್ಯಕ್ತಿಯಲ್ಲಿ ವ್ಯಕ್ತೀಕರಿಸಲ್ಪಟ್ಟದೆ. ಪ್ರೀತಿಯಿಲ್ಲದ ಜಗತ್ತಿನಲ್ಲಿ ಕರ್ತನಾದ ಯೇಸು ಬಂದಾಗ, ಆತನು ಪರಿಪೂರ್ಣವಾಗಿ ಮಾನವ ರೂಪದಲ್ಲಿ ದೇವರ ಪ್ರೀತಿಯನ್ನು ಪ್ರತ್ಯಕ್ಷಪಡಿಸಿದನು. ಆತನ ಕೃತ್ಯಗಳು, ಆತನ ವಾಕ್ಯಗಳು, ಆತನ ಆಂತರಿಕ ಯೋಚನೆಗಳು, ತನ್ನ ತಂದೆಯ ಚಿತ್ತಕ್ಕೆ ಆತನ ಸಂಪೂರ್ಣ ಸಮರ್ಪಣೆಯು - ಪ್ರೀತಿಯ ಅತ್ಯದ್ಭುತಕರವಾದ ಚಿತ್ರವನ್ನು ಚಿತ್ರಿಸಿತು. ಆತನು ಜನಿಸಿದ ಸಮಯದಿಂದ ಆತನು ಶಿಲುಬೆಗೆ ಹಾಕಲ್ಪಡುವ ವರೆಗೆ, ಕರ್ತನಾದ ಯೇಸುವು ತನ್ನ ಸ್ವಂತ ಲಾಭಗಳಿಗಾಗಿ ತನ್ನ ಸ್ವಂತ ಮಾನವ ಪರಿಪೂರ್ಣತೆಯನ್ನು ಉಪಯೋಗಿಸಿ ಕೊಳ್ಳುವದನ್ನು ಪ್ರೀತಿಯಿಂದ ನಿರಾಕರಿಸಿದನು.

ಭೂಲೋಕದಲ್ಲಿಯ ತನ್ನ ಮೂವತ್ಮೂರು ವರ್ಷಗಳ ಅವಧಿಯಲ್ಲಿ, ಕರ್ತನಾದ ಯೇಸುವು ಇತರ ಜನರ ಒಳಿತಿಗಾಗಿ, ಸತತವಾಗಿ ತನ್ನ ಜೀವಿತವನ್ನು ಕೊಟ್ಟನು. (1 ಯೋಹಾನ 3:16). ಆಗ ಶಿಲುಬೆಯ ಶ್ರಮೆಯನ್ನು ಎದುರಿಸಿದಂತೆ, ನಾವು ಹೀಗೆ ಓದುತ್ತೇವೆ : **''ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗ ಬೇಕಾದ ಕಾಲ ಬಂತೆಂದು ತಿಳುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು.** (ಯೋಹಾನ 13:1).

ಹೌದು, ಆತನ ಪ್ರೀತಿಯು ನಿಶ್ಚಯವಾಗಿಯೂ ಬಹಳ ಶ್ರಮತಾಳಿತು. ನಮ್ಮ ರಕ್ಷಕನೊಂದಿಗೆ ನಾವು ನಿಜವಾಗಿ ''ಅನ್ಯೋನ್ಯತೆ'' ಯಲ್ಲಿ ಇದ್ದರೆ, ನಾವು ಈಗ ಕೇಳ ಬೇಕಾದ ಹೃದಯ ಶೋಧಿಸುವ ಪ್ರಶ್ನೆಯು ಇದಾಗಿರುತ್ತದೆ :

**ದೇವರು ನನಗಾಗಿ ಕೊಟ್ಟ ಜೀವನದ ಲಾಭಗಳನ್ನು ನನ್ನ ಸ್ವಂತ ಲಾಭಕ್ಕಾಗಿ ಮತ್ತು ಪ್ರಗತಿಗಾಗಿ ಉಪಯೋಗಿಸುತ್ತಿರುವನೋ ; ಇಲ್ಲವೇ ಇತರ ಜನರಿಗಾಗಿ ಯತಾರ್ಥವಾದ ಪ್ರೀತಿಯಲ್ಲಿ ಶ್ರಮೆಯು ಒಳಗೊಂಡಿದ್ದರೂ ನನ್ನ ಜೀವ ಕೊಡಲು ಸಿದ್ಧನಾಗಿರುವೆನೋ ?**

ಹೌದು, ಸ್ವಯಂ - ಪ್ರೀತಿಯು ಸದ್ಗುಣವಾಗಿದೆ ಮತ್ತು ಒಬ್ಬನ ಹಕ್ಕುಗಳು ಇನ್ನೊಬ್ಬರ ಒಳಿತಿಗಿಂತ ಹೆಚ್ಚು ಮಹತ್ವದ್ದಾಗಿದೆ ಎಂದು ಧೈರ್ಯದಿಂದ ಘೋಷಿಸುವ, ಈ ''ನಾನು ಮೊದಲು'' ಸಂತತಿಗೆ ಅತೀ ವಿರುದ್ಧವಾದದ್ದನ್ನು ದೇವರ ಪ್ರೀತಿಯು ಪ್ರಕಟಿಸುತ್ತದೆ. ತನ್ನನ್ನು ಆರಾಧಿಸಿಕೊಳ್ಳುವ ಇದೇ ಸಂಗತಿಯನ್ನು ಅಂತಿಮ ದಿನಗಳ ಸಂಕೇತಗಳಲ್ಲಿ ಒಂದರಂತೆ ಪರಿಶುದ್ಧ ಬರಹವು ಪ್ರಕಟಿಸುತ್ತದೆ : **''ಮನುಷ್ಯರು ಸ್ವಾರ್ಥ ಚಿಂತಕರೂ .... ದೇವರನ್ನು ಪ್ರೀತಿಸದೇ ಭೋಗಗಳನ್ನೇ ಪ್ರೀತಿಸುವವರೂ... ಆಗಿರುವರು''** (2 ತಿಮೊಥೆ 3:2,4).

ಉನ್ನತ ಆತ್ಮಿಕ ಸೌಂದರ್ಯಗಳ ದಾರಿಯು ಗಾಯಗೊಂಡ ಸ್ವಾರ್ಥ-ಪ್ರೀತಿಯ ರಕ್ತಸಿಕ್ತ ಹೆಜ್ಜೆ ಗುರುತಗಳಿಂದ ಕಲೆಗೊಂಡಿದೆ ಎಂದು ಅಲೆಕ್ಸಾಂಡರ ಮಾಕ್ಲೆರೆನ್ ಒತ್ತಿ ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ.

ಪಾಪವು ಕೃತಿಯಲ್ಲಿ ವ್ಯಕ್ತಪಡಿಸಿದ್ದಾಗಿದ್ದರೂ ಇಲ್ಲವೆ ವಿಚಾರದಲ್ಲಿ ವ್ಯಕ್ತಪಡಿಸಿದ್ದಾಗಿದ್ದರೂ, ಸ್ವಯಂ-ಅರುಹಿನ ಮತ್ತು ಸ್ವಾರ್ಥ- ಕೇಂದ್ರಿಕರಿಸುವಿಕೆಯ ನಮ್ಮ ಸ್ವಾಸ್ಥ್ಯವಾಗಿ ಹೊಂದಿದ ಕೃತ್ಯಕ್ಕೆ ಪುರಾವೆಯನ್ನು ಹೊಂದಿರುತ್ತದೆ. ಓಸ್ವಾಲ್ಡ ಚೇಂಬರ್ಸ ಅವರು ಈ ಸ್ವಾರ್ಥ ಭಾವನೆಯನ್ನು ''ನನ್ನ ಹಕ್ಕನ್ನು ನನ್ನಷ್ಟಕ್ಕೆ ನಾನು ಕೇಳಿ ಕೊಳ್ಳುತ್ತೇನೆ'' ಎಂದು ವಿವರಿಸುತ್ತಾರೆ ಮತ್ತು ''ಅದು ಗೌರವಾನ್ವಿತ ನೈತಿಕತೆಯಲ್ಲಿ ಕಾರ್ಯಮಾಡಲ್ಪಟ್ಟರೂ ಇಲ್ಲವೇ ದುಷ್ಟ ಅನೈತಿಕತೆಯಲ್ಲಿ ಕಾರ್ಯ ಮಾಡಲ್ಪಟ್ಟರೂ ಒಂದೇ ರೀತಿಯಲ್ಲಿ ಗಂಡಾಂತರಕಾರಿಯಾದದ್ದಾಗಿದೆ'' ಎಂದು ಘೋಷಿಸಿದ್ದಾರೆ. ಸ್ವಾರ್ಥವನ್ನು ಮತ್ತು ಕಳ್ಳತನದ ಕನಿಕರವಿಲ್ಲದಿರುವಿಕೆಯನ್ನು ಮತ್ತು ದುರ್ಬಳಿಕೆ ಮಾಡುವದನ್ನು ಧೂಷಿಸುವುದು ಸುಲಭ, ಆದರೆ ಮನುಷ್ಯನ ಪಾಪಭರಿತ ಸ್ವಯಂ

- ಕೇಂದ್ರಿಕರಿಸುವಿಕೆಯು ಅದರಂತೆ ಹೆಚ್ಚು ಕಷ್ಟಕರವಾದ ರೀತಿಗಳಲ್ಲಿ ವ್ಯಕ್ತಪಡಿಸಲ್ಪಟ್ಟಿದೆ ಎಂಬುದನ್ನು ನಾವು ಗ್ರಹಿಸಿಕೊಳ್ಳಬೇಕಾಗಿದೆ.

ಪ್ರತಿಯೊಂದು ಮನೆಯ ಸಮಸ್ಯೆಯ ಮತ್ತು ಸಾಮಾಜಿಕ ಉದ್ವೇಗದ ಹೃದಯ ದಲ್ಲಿ ಹಾಗೂ ಹೆಚ್ಚಿದ ಸಭೆಯ ತೊಂದರೆಗಳಲ್ಲಿ, ನನಗೆ ನನ್ನ ಹಕ್ಕನ್ನು ಕೇಳುವದರಲ್ಲಿ ನನ್ನ ಸಮಯ, ನನ್ನ ಹಣ, ನನ್ನ ಮಾರ್ಗ, ನನ್ನ ಅಪೇಕ್ಷೆ, ನನ್ನ ಚಿತ್ತದ ವಂಚನೆಯ ಕೇಳುವಿಕೆಯಿದೆ. ಇದರಲ್ಲಿ ಆಶ್ಚರ್ಯವಿಲ್ಲ, ತನ್ನ ಸ್ವಂತಕ್ಕಾಗಿ ಹುಡುಕದ, ದೇವರ ಪ್ರೀತಿಯನ್ನು ಯಾವುದು ಪ್ರತಿಬಿಂಬಿಸುವುದಿಲ್ಲವೋ ಅದು ಮನುಷ್ಯನಲ್ಲಿ ಸಹಜವಾಗಿರುವಂಥ ಸ್ವಾರ್ಥತೆಯ ವ್ಯಕ್ತಪಡಿಸುವಿಕೆಯಾಗಿದೆ.

# ನನ್ನ ಪಾರಲೌಕಿಕ ದೃಷ್ಟಿಕೋನ

ಸ್ವಾರ್ಥಮಗ್ನತೆಯನ್ನು ನಿಜವಾಗಿಯೂ ಗುರುತಿಸಲು ಕೇವಲ ಒಂದೇ ಮಾರ್ಗವು ದೇವರು ದೃಷ್ಟಿಕೋನದಿಂದ ನಮ್ಮ ಕಡೆಗೆ ನೋಡಿಕೊಳ್ಳುವುದು. ಜೆ. ಬಿ. ಫಿಲಿಪ್ಸ, ಅವರು ತನ್ನ Letters to the Young Churches ದಲ್ಲಿ ಕೊಲೊಸ್ಸೆಯ ಸಭೆಯಲ್ಲಿಯ ಜನರಿಗಾಗಿ ಪೌಲನ ಪ್ರಾರ್ಥನೆಯನ್ನು ಹೀಗೆ ಭಾಷಾಂತರಿಸಿದ್ದಾರೆ :

ಆತ್ಮಿಕ ಆಂತರಿಕ ದೃಷ್ಟಿಯನ್ನು ಮತ್ತು ತಿಳುವಳಿಕೆಯನ್ನು ಕೊಡಲ್ಪಡುವದರಿಂದ **ಆತನ ದೃಷ್ಟಿಕೋನದಿಂದ** ನೀವು ಸಂಗತಿಗಳನ್ನು ನೋಡಬೇಕೆಂದು ನಾವು ದೇವರನ್ನು ಬೇಡಿಕೊಳ್ಳುತ್ತಿದ್ದೇವೆ. (ಕೊಲೊಸ್ಸೆ 1:9).

ಪೌಲನ ಉದಾಹರಣೆಯನ್ನು ನಾವು ಅನುಸರಿಸುವಾಗ ಮತ್ತು ನಮ್ಮ ಆತ್ಮಿಕ ಕಣ್ಣುಗಳು ತೆರೆಯಲ್ಪಡಲು ದೇವರಿಗೆ ಪ್ರಾರ್ಥಿಸುವಾಗ, ನಮ್ಮ ವೈಯಕ್ತಿಕ ಜೀವನದ ''ನಿಜವಾದ'' ಪರಿಸ್ಥಿತಿಗಳನ್ನು ದೃಷ್ಟಿಸಲು ಪ್ರಾರಂಭಿಸುವೆವು ;ನಮ್ಮ ಸ್ವಾರ್ಥ - ಕೇಂದ್ರದ ಅಸ್ತಿತ್ವದ ಕಣ್ಣುಗಳ ಮುಖಾಂತರ ಅಲ್ಲ, ಆದರೆ ದೇವರ ಪಾರಲೌಕಿಕ ದೃಷ್ಟಿಕೋನದಿಂದ. ಮತ್ತು ಈ ರೀತಿಯಲ್ಲಿ ಮಾತ್ರವೇ ಆತನ ಆತ್ಮಿಕ ಕಣ್ಣುಗಳ ಮುಖಾಂತರ ನಮ್ಮ ಜೀವಿತದ ವಾಸ್ತವಿಕತೆಗಳ ಕಡೆಗೆ ನಾವು ನೋಡಬಹುದು.

ಒಂದು ರಾತ್ರಿ ಶ್ರೀಮತಿ ಸ್ಯೆಲೆನ್ಸ, ಬಹಳ ದಿನಗಳಿಂದ ಡೊರೊತಿಯ ಮತ್ತು ನನ್ನ ಸ್ನೇಹಿತೆಯಾಗಿದ್ದವಳು, ಕುಟುಂಬದ ಒಂದು ಅವಘಡವನ್ನು ಪಾರಲೌಕಿಕ ದೃಷ್ಟಿಯಿಂದ ಪ್ರಾರ್ಥನಾ ಪೂರ್ವಕವಾಗಿಯೂ ವಿಧೇಯತೆಯಿಂದಲೂ ಎದುರಿಸಿದಾಗ ಬಹಳವಾಗಿ ಆದರಿಸಲ್ಪಟ್ಟಳು. ಒಂದು ಟೆಲಿಫೋನ'ಕರೆಯಿಂದ ಆಕೆ ರಾತ್ರಿ ಎರಡು ಗಂಟೆಯ ಸಮಯದಲ್ಲಿ ಎಚ್ಚರಿಸಲ್ಪಟ್ಟಳು. ''ಈ ರಾತ್ರಿಯಲ್ಲಿ ನಿಮ್ಮ ಕಾರನ್ನು ಯಾರು ನಡಿಸುತ್ತಿದ್ದರು ಎಂಬುದು ನಿಮಗೆ ಗೊತ್ತೋ ?'' ಎಂದು ಪೋಲೀಸ ಅಧಿಕಾರಿ ಕೇಳಿದನು. ''ಹೌದು, ಯುವ ಜನರ ಬೈಬಲ್ ಕಾನ್ಫರನ್ಸಿನಿಂದ ನನ್ನ ಇಬ್ಬರು ಗಂಡು ಮಕ್ಕಳು ತಿರುಗಿ ಮನೆಗೆ ಬರುತ್ತಿದ್ದರು'' ಎಂದು ಆಕೆ ಉತ್ತರ ಕೊಟ್ಟಳು. ''ಸರಿ, ನಿಮಗೆ ಒಂದು ದುಃಖಕರವಾದ ಸುದ್ಧಿ ಇರುತ್ತದೆ. - ಡ್ರೈವರನು ಸತ್ತು ಹೋಗಿದ್ದಾನೆ ಮತ್ತು ಇನ್ನೊಬ್ಬ ಯುವಕನು ಜೀವದಿಂದ ಉಳಿಯುವನು ಎಂಬುದಕ್ಕೆ ಯಾವಾಗಲೂ ಮೃದುವಾದ ಪ್ರೀತಿಯಿಂದ ತುಂಬಿಕೊಂಡಿದ್ದ ತಾಯಿಯ ಈ ಆಘಾತಕರವಾದ ಸುದ್ಧಿಯಿಂದ ದಿಕ್ಕುತೋಚದ ತಾಯಿ ಸ್ಥಂಭೀಭೂತಳಾದಳು.

ಟೆಲಿಪೋನನ್ನು ಕೆಳಗಿಟ್ಟು ಶ್ರೀಮತಿ ಸ್ಯೆಲೆನ್ಸ, ಪರಲೋಕದ ತಂದೆಗೆ ಕೂಗಿ ಕೊಂಡಳು : ''ದೇವರೇ, ಇಂಥಾ ಸಮಯದಲ್ಲಿ ಒಬ್ಬ ತಾಯಿ ಏನು ಮಾಡಬಲ್ಲಳು ?'' ಸುದೈವದಿಂದ, ಆಕೆ ಪ್ರಾರ್ಥಿಸಲು ಮತ್ತು ಬೈಬಲಿಗನು ಗುಣವಾಗಿ ಯೋಚಿಸುವದನ್ನು ಕಲಿತುಕೊಂಡಿದ್ದಳು. ''ಎಲ್ಲಾದರಲ್ಲಿಯೂ ಕೃತಜ್ಞತಾ ಸ್ತುತಿ ಮಾಡಿರಿ'' (1 ಥೆಸಲೋನಿಕ 5:18) ಎಂದು ಆಜ್ಞಾಪಿಸಿದ ಪರಿಶುದ್ಧ ಬರಹದ ವಚನದ ಮೇಲೆ ಧ್ಯಾನ ಮಾಡುವದನ್ನು ಬಿಟ್ಟು ಬೇರೆನನ್ನೂ ಮಾಡಲಿಲ್ಲ ಎಂದು ಆಕೆ ಅನಂತದರದಲ್ಲಿ ನಮಗೆ ತಿಳಿಸಿದಳು. ''ಆದರೆ, ಕರ್ತನೇ, ನನ್ನ ಹೃದಯವು ಕೃತಜ್ಞತೆಯಿಂದಿರುವದಿಲ್ಲ. ಅದು ತಣ್ಣಗಾಗಿದೆ ಮತ್ತು ಆಘಾತಕೊಳ್ಳಪಟ್ಟಿದೆ ಹಾಗೂ ಬರಿದಾದದ್ದಾಗಿದೆ, ಆದರೆ ಈ ಭಯಾನಕವಾದ ರಾತ್ರಿಯಲ್ಲಿ ನಿನ್ನ ವಾಕ್ಯಕ್ಕೆ ವಿಧೇಯಳಾಗುತ್ತೇನೆ. ನಾನು ನಿನಗೆ ವಿಧೇಯಳಾಗುವಾಗ ಮತ್ತು ನಿನಗೆ ಉಪಕಾರ ಎಂದು ಹೇಳುವಾಗ, ಅದನ್ನು ನೀನು ನಿಜವಾದದ್ದನ್ನಾಗಿ ಮಾಡಬೇಕು ಯಾಕಂದರೆ, ಈ ದುಃಖಕರವಾದ ಸಮಯದಲ್ಲಿ, ನಾನು ಕೃತಜ್ಞತೆಯುಳ್ಳವಳಾಗಿರುವದೇ ಇಲ್ಲ'' ಎಂದು ಶ್ರೀಮತಿ

ಸೈಲೆನ್ಸ ಮುಂದರಿದು ಹೇಳಿದ್ದಳು. ಈ ರೀತಿಯಲ್ಲಿ, ಶ್ರೀಮತಿ ಸೈಲೆನ್ಸ ತನ್ನ ನಂಬಿಕೆಯನ್ನು ಪ್ರಯೋಗಿಸಿ ಪ್ರಾರ್ಥಿಸಲು ಪ್ರಾರಂಭಿಸಿದಳು.

ಈ ಮೃದು ಹೃದಯದ ತಾಯಿಯು ಮೊದಲು ''ನಿನಗೆ ಉಪಕಾರವಾಗಲಿ, ತಂದೆಯೇ, ನೀನಿರುವದಕ್ಕಾಗಿ'' ಎಂದು ಹೇಳಿದಾಗ, ಆಕೆಯ ಸ್ಥಬ್ಧಗೊಂಡ ಹೃದಯವು ತಂಪಾದದ್ದಾಗಿಯೂ ಬರಿದಾದದ್ದಾಗಿಯೂ ಇತ್ತೆಂದು ನನಗೆ ಹೇಳಿದಳು. ಆದರೆ ನಂಬಿಗಸ್ಥಿಕೆಯಿಂದ ತನ್ನ ಕೃತಜ್ಞತೆಗಳನ್ನು ಪುನಃ ಪುನಃ ಹೇಳುವಾಗ ಪವಿತ್ರಾತ್ಮನು ತನ್ನ ಸ್ವಂತ ಅದ್ಭುತಕರವಾದ ಅದ್ಭುತ ಕಾರ್ಯವನ್ನು ಮಾಡಿದನು : ಆಕೆಯ ಹೃದಯ ವನ್ನು ಆದರಣೆಯಿಂದಲೂ ಯತಾರ್ಥವಾದ ಕೃತಜ್ಞತೆಯಿಂದಲೂ ತುಂಬಿಸಿದನು. ಹೌದು, ರಾತ್ರಿಯ ಆ ಅಂಧಕರವಾದ ದೀರ್ಘತಾಸುಗಳಲ್ಲಿ, ದೇವರ ಆದರಿಕನು, ಪವಿತ್ರಾತ್ಮನು, ಶ್ರೀಮತಿ ಸೈಲೆನ್ಸಳ ನಂಬಿಕೆಗೆ ಮತ್ತು ವಿಧೇಯತೆಗೆ ಉತ್ತರ ಕೊಟ್ಟನು. ಆಕೆಗೂ ಮತ್ತು ಆಕೆಯ ಕುಟುಂಬಕ್ಕೂ ಆತನು ದೇವರ ಬದಲಾಗದ ಪ್ರೀತಿಯ ಭರವಸೆ ಯನ್ನು ಪುನಃ ಕೊಟ್ಟನು, ಪ್ರಾಥಃಕ್ಕಾಲ ಉದಯವಾದಾಗ, ಸಂಶಯವಿಲ್ಲದೆ, ಆಕೆಯ ಕಣ್ಣುಗಳಲ್ಲಿ ಇನ್ನೂ ಕಣ್ಣೀರು ಇದ್ದವು, ಆದರೆ ಅದೇ ಸಮಯದಲ್ಲಿ ಆಕೆಯ ಹೃದಯ ದಲ್ಲಿ ವರ್ಣಿಸಲಾಗದಂಥ ದೇವರ ಸಮಾಧಾನದ ಆದರಣೆಯ ಅನುಭವ ಹೊಂದಿದಳು.

ದುಃಖಪಡುತ್ತಿದ್ದ ತಾಯಿಯನ್ನು ದೇವರು ತನ್ನ ನಿತ್ಯ ಪ್ರೀತಿಯ ಎದೆಗಪ್ಪಿ ಕೊಂಡಂಥ ದೇವರ ಕೃಪೆಗೆ ಇದು ಒಂದು ಅದ್ಭುತಕರವಾದ ಸಾಕ್ಷಿಯಾಗಿದೆ. ಆಳವಾದ ಮತ್ತು ಮೌನವಾದ ಭರವಸೆಯೊಂದಿಗೆ ಶ್ರೀಮತಿ ಸೈಲೆನ್ಸಳು, ಆ ಅಂಧಕಾರದ ರಾತ್ರಿಯಲ್ಲಿ, ಮಾನವ ಗ್ರಹಕೆಯನ್ನು ದಾಟಿಹೋಗುವ ದೇವರ ಶಾಂತಿಯು ಹೇಗೆ ತನ್ನ ಪ್ರಾಣದಲ್ಲಿ ತುಂಬಿಕೊಂಡಿತ್ತು ಎಂದು ಹೇಳಿದಳು. ಕರ್ತನೊಂದಿಗಿನ ತನ್ನ ನಡೆಯುವಿಕೆ ಯಲ್ಲಿ ಶ್ರೀಮತಿ ಸೈನೆನ್ಸಳು ಸಿದ್ಧಪಡಿಸಿತೋರಿಸಿದಂತೆ, ತೊಂದರೆಯು ಬರುವಾಗ, ಒಬ್ಬ ಮಾನವನ ಮತ್ತು ಒಂದು ಪರಲೋಕದ ದೃಷ್ಟಿಕೋನದ ಮಧ್ಯದಲ್ಲಿ ಸಂಪೂರ್ಣ ಭಿನ್ನತೆಯಿರುತ್ತದೆ.

ದೇವರೊಂದಿಗೆ ನಿಕಟವಾದ ಸಂಬಂಧವನ್ನು ನೀವೂ ಅನುಭವಿಸುವಂತೆ, ಕೃತಜ್ಞತೆ ಸಲ್ಲಿಸುವಂಥದ್ದೂ, ನಂಬಿಕೆಯೂ ಯಾವಾಗಲೂ ಒಂದಕ್ಕೊಂದು ಸಂಬಂಧಿಸಿವೆ ಯೆಂದು ನೀವು ಅರಿತುಕೊಳ್ಳುವಿರಿ. ಯತಾರ್ಥವಾದ ನಂಬಿಕೆಯು ಕೃತಜ್ಞತಾ ಸ್ತುತಿಯು ನಿಮ್ಮ ಹೃದಯವನ್ನು ತುಂಬಿಕೊಳ್ಳುವಾಗ ನಿಮ್ಮ ಜೀವಿತದ ಬದಲಾಗುವ ಪರಿಸ್ಥಿತಿಗಳನ್ನು - ಅವು ಹೊರಗಿನಿಂದ ಒಳ್ಳೆಯವುಗಳಾಗಿ ಕಾಣಲಿ ಇಲ್ಲವೇ ಕೆಟ್ಟದ್ದಾಗಿ ಕಾಣಲಿ - ತನ್ನ ದೃಷ್ಟಿಕೋನದಿಂದ ದೃಷ್ಟಿಸಲು ನಿಮ್ಮನ್ನು ದೇವರು ಶಕ್ತರನ್ನಾಗಿ ಮಾಡುವನು. ಅಂಥ ಪಾರಲೌಕಿಕ ದೃಷ್ಟಿಕೋನದಿಂದ, ''ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ'' (ರೋಮಾಪುರ 8:28) ಎಂದು ದೇವರು ನಿಶ್ಚಿತವಾಗಿಯೂ ನಿಮ್ಮ ನೊಂದ ಹೃದಯಕ್ಕೆ ಪುನಃ ಭರವಸೆ ಕೊಡುವನು. ಈ ವಚನದ ಆದರಣೆಯು ತಣ್ಣಗಾಗಿಯೂ, ಬರಿದಾದದ್ದಾಗಿಯೂ, ಪುನಃ ಪುನಃ ಉಲ್ಲೇಖಿಸಿದ ಸತ್ಯವಾಗಲೀ ಆಗಿರಬೇಕಾದ ಅವಶ್ಯಕತೆಯಿಲ್ಲ. ನಮ್ಮ ಪ್ರತಿಯೊಂದು ಹೃದಯಗಳಲ್ಲಿ ಅದ್ಭುತಕರ ವಾದ ವಾಸ್ತವಿಕತೆಯೊಂದಿಗೆ ಅದು ಧ್ವನಿಸುವುದೆಂದು ದೇವರು ನಮಗೆ ಆಶ್ಚರ್ಯಕರ ವಾದ ವಾಗ್ದಾನವನ್ನು ಕೊಟ್ಟಿದ್ದಾನೆ. ಅದರಂತೆ ನಿಮಗೆ ಅನಿಸುವಾಗ ದೇವರಿಗೆ ಸ್ತೋತ್ರ ಹೇಳಿರಿ. ಹಾಗೆ ನಿಮಗೆ ಅನ್ನಿಸದಿದ್ದಾಗಲೂ ಕರ್ತನಿಗೆ ಸ್ತೋತ್ರ ಹೇಳಿರಿ. ಅದರಂತೆ ಭಾವಿಸುವವರೆಗೆ ಕರ್ತನಿಗೆ ಸ್ತೋತ್ರ ಹೇಳುತ್ತಲೇ ಇರ್ರಿ. ನಿನ್ನ ಇಲ್ಲವೇ ನನ್ನ ಜೀವಿತದಲ್ಲಿ ಕರ್ತನನ್ನು ಸ್ತುತಿಸಲಿಕ್ಕೆ ಅಕಾಲವೆಂಬ ಪರಿಸ್ಥಿತಿಯು ಎಂದೂ ಇರುವದಿಲ್ಲ.

ಇತ್ತೀಚೆಗೆ, ಡೊರೊತಿ ಮತ್ತು ನಾನು ಇತ್ತೀಚೆಗೆ, ಮಧ್ಯ ಪ್ರಾಚ್ಯ ದೇಶದ ನಿರ್ಬಂಧಿತ ಪರಿಸ್ಥಿತಿಗಳಲ್ಲಿ ಕ್ರಿಸ್ತನಿಗಾಗಿ ನಂಬಿಗಸ್ಥಿಕೆಯಿಂದಲೂ ಫಲಪ್ರದವಾಗಿಯೂ ಸೇವೆ ಮಾಡಿದ ದೀರ್ಘಾವಧಿ ಸೇವೆಯ ಮಿಶನರಿಗಳಿಂದ ಒಂದು ಪತ್ರವನ್ನು ಸ್ವೀಕರಿಸಿದೆವು. ತನ್ನ ಪತ್ರದಲ್ಲಿ ಸ್ಟ್ಯಾನ ಎಂಬವರು ಹೀಗೆ ಬರೆದಿದ್ದರು: ''ನನ್ನ ಆದರಣೆಯ ಮೇಲೆ ಅಲ್ಲ, ಆದರೆ ಆತನ ಗುಣದ ಮೇಲೆ ಅವಲಂಭಿಸಿ ನಾನು ಕರ್ತನನ್ನು ಕೊಂಡಾಡಬೇಕು ಮತ್ತು ಕೊಂಡಾಡತಕ್ಕದ್ದು.'' ಕ್ಷಮಾಪಣೆಯ ಬಗ್ಗೆ ಕೊರ್ರಿಟೆನ್ ಬೂಮ ಅವರ ಹೇಳಿಕೆಯನ್ನು ವಿವರಿಸಿ

ಹೇಳಲು, ಕರ್ತನನ್ನು ಸ್ತುತಿಸುವುದು ಚಿತ್ತದ ಕೃತ್ಯವಾಗಿರುವದರಿಂದ, ಹೃದಯದ ಸ್ಥಿತಿಯು ಹೇಗೆ ಇದ್ದರೂ ಚಿತ್ತವು ಕರ್ತನನ್ನು ಕೊಂಡಾಡುವದನ್ನು ಆಯ್ದುಕೊಳ್ಳಬಹುದೆಂದು ನಾವು ಹೇಳಬಹುದು. ಆತನನ್ನು ಕೊಂಡಾಡುವದನ್ನು ಆಯ್ದುಕೊಳ್ಳುವಂತೆ, ನಮ್ಮ ಪರಿಸ್ಥಿತಿಗಳು ಏನೇ ಇದ್ದರೂ-ಆತನು ತನ್ನ ಸಮಾಧಾನವನ್ನು ಬದಲಾಗದ ಆತನ ಪ್ರೀತಿಯ ಭರವಸೆಯನ್ನು ನಿಶ್ಚಯ ವಾಗಿ ನಮಗೆ ಕೊಡುವನು.

ಪ್ರತಿಯೊಂದಕ್ಕಾಗಿ ನಾವು ದೇವರಿಗೆ ಉಪಕಾರ ಹೇಳಬೇಕೆಂದು ನಮಗೆ ಹೇಳಲ್ಪಟ್ಟಿಲ್ಲವೆಂಬುದನ್ನು ಗಮನಿಸಿರಿ ; ಆದರೆ ಪ್ರತಿಯೊಂದರಲ್ಲಿ ಆತನಿಗೆ ಉಪಕಾರ ಹೇಳಬೇಕೆಂದು ಬೋಧಿಸಲ್ಪಟ್ಟಿದ್ದೇವೆ.

**ನಮ್ಮ ಪಾರಲೌಕಿಕ ದೃಷ್ಟಿಕೋನವನ್ನು ಗುರುತಿಸುವದರಿಂದ ಬರುವ ಯತಾರ್ಥವಾದ ಕೃತಜ್ಞತಾ ಸ್ತುತಿಯು ದುಃಖದಿಂದ ಸ್ವ-ಕನಿಕರವನ್ನು ಬೇರೆ ಮಾಡುವ ನಂಬಿಕೆಯ ಒಂದು ಅಂಶವಾಗಿದೆ.**

ನಾವು ಸಭೆಯಲ್ಲಿರಲಿ ಇಲ್ಲವೇ ಆಸ್ಪತ್ರೆಯಲ್ಲಿರಲಿ ಇದು ಸತ್ಯವಾಗಿದೆಯೆಂದು ಜ್ಞಾಪಿಸಿಕೊಳ್ಳಿರಿ! ಜೀವನದ ಬಿರುಗಾಳಿಗಳೇಳುವಾಗಲೂ, ''ನನ್ನನ್ನು ಕರುಣಿಸು'' ಎಂಬ ಮನೋಭಾವನೆ ಪ್ರಕಟಿಸುವುದು ಸುಲಭವಾಗಿರುವದನ್ನು ಕಂಡುಕೊಳ್ಳು ವಾಗಲೂ, ಕ್ರಿಸ್ತನು ಕೇಂದ್ರೀಕೃತವಾಗಿರುವ ಹೃದಯವು ಕರ್ತನನ್ನು ಇನ್ನೂ ಕೊಂಡಾಡುವುದು.

ನೋವಿನ ಪ್ರಥಮ ಹಿಡಿತದಲ್ಲಿ ನಮ್ಮಲ್ಲಿ ಹೆಚ್ಚಾದವರು ಭಯಪಟ್ಟು ಬಿದ್ದು ಹೋಗುತ್ತೇವೆ ; ದೇವರ ಉದ್ದೇಶಗಳ ಮತ್ತು ಸ್ವಕನಿಕರದ ಹೊಸ್ತಿಲಿನ ಮೇಲೆ ಕುಳಿತು ಕೊಳ್ಳುತ್ತೇವೆ. ಕೈಸ್ತ ಸಹಾನುಭೂತಿ ಎಂದು ಕರೆಯಲ್ಪಡುವುದೂ ವಿಧಾನವನ್ನು ವೃದ್ಧಿ ಗೊಳಿಸುತ್ತದೆ. ಆದರೆ, ತನ್ನ ಮಹಾಪ್ರೀತಿಯಲ್ಲಿ ದೇವರು ಅದನ್ನು ಎಂದೂ ಮಾಡಲಾರನು. ಆತನು ತನ್ನ ಕುಮಾರನ ಚುಚ್ಚಲ್ಪಟ್ಟ ಕೈಯ ಹಿಡಿತದೊಂದಿಗೆ ಆತನು ಬರುತ್ತಾನೆ ಮತ್ತು ''ನನ್ನೊಂದಿಗೆ ಐಕ್ಯತೆಯಲ್ಲಿ ಪ್ರವೇಶಿಸು ; ಎದ್ದೇಳು, ಪ್ರಕಾಶಿಸು'' ಎಂದು ಹೇಳುತ್ತಾನೆ. ಮುರಿದ ಹೃದಯದ ಮುಖಾಂತರ ದೇವರು ತನ್ನ ಉದ್ದೇಶವನ್ನು ನೆರವೇರಿಸುವುದಾದರೆ, ಆಗ

ನಿನ್ನ ಹೃದಯವನ್ನು ಮುರಿದದ್ದಕ್ಕಾಗಿ ಆತನಿಗೆ ಉಪಕಾರ ಹೇಳಿರಿ. (Oswald Chambers, My Utmost for His Higest, paraphrase).

ನಮ್ಮ ಜೀವನಗಳಲ್ಲಿಯ ''ಎಲ್ಲಾ ಸಂಗತಿ''ಗಳ ಹಿಂದೆ ದೇವರ ಪ್ರೀತಿಯ ಕಾರಣವನ್ನು ಗಮನಿಸಿರಿ. ''ಆತನ ಕುಮಾರನ ಸಾರೂಪ್ಯವುಳ್ಳವರಾಗುವಂತೆ'' (ರೋಮಾಪುರ 8:29) ಅವರು ಉದ್ದೇಶಿಸಲ್ಪಟ್ಟಿದ್ದಾರೆ ಎಂದು ಮುಂದಿನ ವಚನವು ಪ್ರಕಟಿಸುತ್ತದೆ.

ಹೌದು, ನಮ್ಮಿಂದ ಮಹಿಮೆಯುಳ್ಳ ಸ್ವಾತಂತ್ರ್ಯದೊಂದಿಗೆ ದೇವರು ನಮಗೆ ಹೇಗೆ ಒದಗಿಸಿದ್ದಾನೆಂದು ನಾವು ಅರ್ಥಮಾಡಿಕೊಳ್ಳಬೇಕಾದರೆ ಒಂದು ಪಾರಲೌಕಿಕ ದೃಷ್ಟಿಕೋನದಿಂದ ನಮ್ಮ ಜೀವಿತವನ್ನು ದೃಷ್ಟಿಸುವದನ್ನು ನಾವು ಕಲಿತುಕೊಳ್ಳುವುದು ಅವಶ್ಯಕವಾಗಿದೆ.

ಸ್ವಾರ್ಥ ಕೇಂದ್ರೀಕೃತವಾಗಿರುವ ಜೀವಿತಕ್ಕೆ ದೇವರ ಉತ್ತರವು ಸುಧಾರಣೆ ಯಾಗಲೀ ಇಲ್ಲವೇ ಶಿಕ್ಷಣವಾಗಲೀ ಆಗಿರುವದಿಲ್ಲ, **ಆದರೆ ಮರಣವಾಗಿರುವುದು** ಭೂಲೋಕದಲ್ಲಿ ನಮ್ಮ ಜೀವಿತಗಳ ಅವಧಿಯಲ್ಲಿ ಸ್ವಾರ್ಥ ಜೀವಿತದ ಆಕರ್ಷಿತ ಎಳೆಯುವಿಕೆಯೊಂದಿಗೆ ಎದುರಿಸಲ್ಪಟ್ಟಾಗ, ಯತಾರ್ಥವಾದ ನಂಬಿಕೆಯು ದೇವರ ನಿತ್ಯವಾದ ಸತ್ಯದಲ್ಲಿ ಆನಂದಿಸಲು ಶಕ್ತವಾಗುವುದು: ''ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ'' (ಕೊಲೊಸ್ಸೆ 3:3).

ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನದ ಮುಖಾಂತರ ನಾವು ದೇವರಲ್ಲಿ ಕ್ರಿಸ್ತನೊಂದಿಗೆ ಮರೆಯಾಗಿಡಲ್ಪಟ್ಟಿದ್ದರಿಂದ (ರೋಮಾಪುರ6:24) ಸ್ವಾರ್ಥ ಕೇಂದ್ರವಾಗಿರುವ ಚಿಂತನೆಗಳೊಂದಿಗಿನ ನಮ್ಮ ಭೂಲೋಕದ ಅಸ್ತಿತ್ವದಿಂದ ಈಗಾಗಲೇ ಬಹಳವಾಗಿ ಬೇರೆಯಾಗಿ ಇಡಲ್ಪಟ್ಟಿದ್ದೇವೆ. ಈಗ ನಾವು ಕ್ರಿಸ್ತನ ಪುನರುತ್ಥಾನದ ಕಡೆಯ ಜೀವನದ ನಮ್ಮ ದೃಷ್ಟಿಕೋನವನ್ನು ಅನುಭವಿಸಬಹುದು.

ಕ್ರಿಸ್ತನಲ್ಲಿ ನಾನು ಸತ್ತೆನು ಕ್ರಿಸ್ತನಲ್ಲಿ ನಾನು ಎದ್ದೆನು,
ಕ್ರಿಸ್ತನಲ್ಲಿ ನನ್ನ ವೈರಿಗಳ ಮೇಲೆ ಜಯ ಹೊಂದಿದೆನು,

ಕ್ರಿಸ್ತನಲ್ಲಿ ಪರಲೋಕದಲ್ಲಿ ನನ್ನ ಸ್ಥಾನ ತೆಗೆದುಕೊಂಡೆನು.
ಮತ್ತು ನರಕದ ಸೋಲಿನಲ್ಲಿ ಪರಲೋಕ ಆನಂದಿಸಿತು.

ಹಳೇ ಸೃಷ್ಟಿಗೆ ಸತ್ತವನಾಗಿ, ನಿಜವಾದ ಕ್ರೈಸ್ತನು ದೇವರ ನೂತನ ಸೃಷ್ಟಿಯ ಭಾಗವಾಗುವನು, ನಮ್ಮ ರಕ್ಷಣೆಯ ಬಗ್ಗೆ ಇದೆಲ್ಲವೂ ಇರುವುದು.

ನಾವು ಕ್ರಿಸ್ತನೊಂದಿಗೆ ಜೊತೆಯಾಗಿ ಶಿಲುಬೆಗೆ ಹಾಕಲ್ಪಡುವದನ್ನು ಅರ್ಥ ಮಾಡಿಕೊಳ್ಳುವಂತೆ, ಭೂಲೋಕದಲ್ಲಿಯ ನಮ್ಮ ಅನುದಿನದ ಜೀವಿತವು, ಸ್ವಾರ್ಥ ಕೇಂದೀಕೃತವಾದ ಅಸ್ತಿತ್ವದಲ್ಲಿರುವದರಿಂದ, ಕ್ರಿಸ್ತನು ಕೇಂದ್ರೀಕೃತವಾಗಿರುವ ಅನುಭವದ ಜೀವಿತಕ್ಕೆ ಮಾರ್ಪಾಟ ಹೊಂದುವುದು. ಆದರೆ ಆತನೊಂದಿಗೆ ಅಂಥ ನಿಕಟ ಅನ್ಯೋನ್ಯತೆಯನ್ನು ಅನುಭವಿಸಲು ಸ್ವಯಂ ಜೀವಿತದೊಂದಿಗೆ ನಮ್ಮ ಭೂಲೋಕದ ಸಮಸ್ಯೆಯೊಂದಿಗೆ ಸತತವಾಗಿ ಹೇಗೆ ವರ್ತಿಸಬೇಕು ಎಂಬುದನ್ನು ನಾವು ತಿಳಿದಿರತಕ್ಕದ್ದು.

# ನನ್ನ ಭೂಲೋಕದ ಸಮಸ್ಯೆ

**ಈಗ ನಾವು ಹೃದಯವನ್ನು ಶೋಧಿಸುವ ಪ್ರಶ್ನೆಯನ್ನು ಕೇಳತಕ್ಕದ್ದು : ಭೂಮಿಯ ಮೇಲೆ ನನ್ನ ಜೀವಿತವು ನಿಜವಾಗಿಯೂ ಕ್ರಿಸ್ತ - ಕೇಂದ್ರವಾದದ್ದಾಗಿರುವುದೋ ಇಲ್ಲವೇ ಅದು ಇನ್ನೂ ಸ್ವಾರ್ಥ ಕೇಂದ್ರವಾದದ್ದಾಗಿರುವುದೋ ?**

ನಿಶ್ಚಯವಾಗಿಯೂ, ಸ್ವಾರ್ಥ-ಕೇಂದ್ರವಾಗಿರುವ ಜೀವಿತವು ಯಾವುದೇ ವ್ಯಕ್ತಿಗೆ ಕೂಡಲೇ ವಿರೋಧವಾದದ್ದಾಗುವುದು ಇಲ್ಲವೇ ಅದರ ಭದ್ರತೆಯನ್ನು, ಅದರ ಸ್ವಾರ್ಥವನ್ನು, ಅದರ ಆದರಣೆಯನ್ನು ಇಲ್ಲವೇ ಅದರ ಆನಂದವನ್ನು ಭಯಪಡಿಸುವ ಯಾವುದೇ ಸಂದರ್ಭದ ಕಡೆಗೆ ಕೋಪಗೊಳ್ಳುವುದು, ಜಿ. ಕ್ಯಾಂಬೆಲ್ ಮೊರ್ಗನ್ ಈ ರೀತಿ ಹೇಳಿದ್ದಾರೆ. ''ಸ್ವಾರ್ಥ ಕೇಂದ್ರವಾಗಿರುವಂಥದ್ದು ಪಾಪದ ತಿರುಳಾಗಿರುತ್ತದೆ ; ವೈರತ್ವದ ಬೀಜವಾಗಿರುತ್ತದೆ; ನರಕವು ಮಾಡಲ್ಪಟ್ಟಿದ್ದರ ವಸ್ತುವಾಗಿದೆ''. (ಹೊಸೆಯ : ದ ಹಾರ್ಟ್ ಆ್ಯಂಡ ಹೋಲಿನೆಸ್ ಆಫ್ ಗೊಡ್).

ಒಂದು ಸಾಯಂಕಾಲ ಪ್ರಾರ್ಥನಾ ಕೂಟದಲ್ಲಿ ಒಬ್ಬ ಮಹಿಳೆ ಅಸಾಮಾನ್ಯವಾದ ಯತಾರ್ಥತೆಯಿಂದ ಪ್ರಾರ್ಥಿಸುವದನ್ನು ಕೇಳಿಸಿಕೊಂಡೆನು. ಆಕೆ ಪ್ರಾರ್ಥಿಸುವಂತೆ ನೂತನವಾದ ಮತ್ತು ಜೀವವನ್ನು ಮಾರ್ಪಾಟ ಮಾಡುವ ರೀತಿಯಲ್ಲಿ ಆಕೆ ದೇವರನ್ನು ಸಂದರ್ಶಿಸುವ ರೀತಿಯಲ್ಲಿ ಕಂಡಳು: ''ಕರ್ತನಾದ ಯೇಸುವೇ, ನಿನ್ನ ಪ್ರೀತಿಯ ತೋಳುಗಳನ್ನು ನನ್ನ ಸುತ್ತಲೂ ಇಡು, ಶಿಲುಬೆಗೆ ನನ್ನನ್ನು ಸೇರಿಸು, ಮತ್ತು ಮರಣಕ್ಕೆ ನನ್ನನ್ನು ಪ್ರೀತಿಸು. ಇನ್ನು ಜೀವಿಸುವವಳು ನಾನಾಗಿರಬೇಕೆಂದು ಬಯಸುವದಿಲ್ಲ ಆದರೆ ಕ್ರಿಸ್ತನು ನನ್ನಲ್ಲಿ ಜೀವಿಸುವವನಾಗಲಿ''. ಆಕೆಯ ಪ್ರಾರ್ಥನೆಯು ನನ್ನ ಮೇಲೆ ಬಹಳವಾಗಿ ಪ್ರಭಾವ ಬೀರಿತು.

ಈ ಮಹಿಳೆಯು ಆಗಲೇ - ಮರಣ ಮತ್ತು ಪುನರುತ್ಥಾನದ ಮುಖಾಂತರ- ಕ್ರಿಸ್ತನೊಂದಿಗೆ ಪರಲೋಕದಲ್ಲಿ ವಾಸಿಸುವದಕ್ಕಾಗಿ ವಿಮೋಚಿಸಲ್ಪಟ್ಟಿದ್ದೇನೆಂದು ತಿಳಿದಿದ್ದರೂ, ಆಕೆ ತನ್ನ ದೇಹವು ಇನ್ನೂ ಈ ಲೋಕದಲ್ಲಿ ಇರುವುದೆಂಬ ಅರುಹು ವುಳ್ಳವಳೂ ಆಗಿದ್ದಳು ! ಆಕೆ ಪ್ರಾರ್ಥಿಸುತ್ತಿರುವಂತೆ, ಭೂಲೋಕದಲ್ಲಿಯ ತನ್ನ ದೇಹದ ಸ್ವಾರ್ಥಪರ ಕೃತ್ಯಗಳಿಗೆ ಮತ್ತು ಮಾತುಗಳಿಗೆ ದೇವರ ಪರಿಹಾರವನ್ನು ಆಕೆ ಹುಡುಕುತ್ತಿದ್ದಳು. ಅಂಥ ಅರ್ಥಗರ್ಭಿತವಾದ ಪ್ರಾರ್ಥನೆಯು ನಿಶ್ಚಯವಾಗಿಯೂ, ತನ್ನ ಕರ್ತನೊಂದಿಗೆ ಹೆಚ್ಚು ನಿಕಟವಾದ ಅನ್ಯೋನ್ಯತೆಗಾಗಿ ಆಕೆಯ ಹೃದಯ ಪೂರ್ವಕ ವಾದ ಅಪೇಕ್ಷೆಯನ್ನು ವ್ಯಕ್ತಪಡಿಸಿತು. ಆನಂತರದಲ್ಲಿ ನಾನು ಈ ಪ್ರಾರ್ಥನೆಯ ಬಗ್ಗೆ ಯೋಚಿಸಿದಾಗ, ಅಂಥ ಹೃದಯ ಸ್ಪರ್ಶ ಭಿನ್ನಹಕ್ಕೆ ಬೈಬಲಿನ ತಳಹದಿಯನ್ನು ಹೀಗೆ ಬರೆದಾಗ ಕೊಟ್ಟನು ಎಂದು ಅರ್ಥ ಮಾಡಿಕೊಂಡೆನು: ''ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ'' (ರೋಮಾಪುರ 8:13).

ನನ್ನ ಕೆಲವು ವಾಚಕರಿಗೆ ಮುಂದಿನ ವಿಚಾರಗಳು ಈ ವಚನದ ಮಹತ್ವದ ಮೇಲೆ ಒಂದು ಆಳವಾದ ಧ್ಯಾನದಂತೆ ಸಹಾಯಕವಾದವುಗಳಾಗಿ ಕಂಡು ಬರಬಹುದು ಮತ್ತು ಇತರರು ಆನಂತರದ ಉದಾಹರಣೆಯನ್ನು ಹೆಚ್ಚು

ಸಹಾಯಕವಾದದ್ದನ್ನಾಗಿಯೂ ವ್ಯಾವಹಾರಿಕವಾದದ್ದಾನ್ನಾಗಿಯೂ ಕಂಡುಕೊಳ್ಳಬಹುದು. ಗ್ರೀಕ ಭಾಷೆಯೊಂದಿಗೆ ಪರಿಚಯವುಳ್ಳವರು ಈ ವಚನದಲ್ಲಿ ಕಂಡು ಬಂದ ವಿಮೋಚನಾ ಸತ್ಯದ ಹೆಚ್ಚು ಪೂರ್ಣವಾದ ತಿಳುವಳಿಕೆಯನ್ನು ನಮಗೆ ಕೊಡುವರು :

> **''ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ'' (ರೋಮಾಪುರ 8:13).**

**ಮೊದಲನೆಯದು :** ಮೂಲ ಗ್ರೀಕದಲ್ಲಿ **ನೀವು** ಎಂಬ ಶಬ್ದವು **ಸಾಯುವುದು** ಎಂಬುದಕ್ಕೆ ಕರ್ತೃವಾಗಿದೆ ಮತ್ತು ಅದು **ಕರ್ತರಿ ಪ್ರಯೋಗದಲ್ಲಿ** ಬರೆಯಲ್ಪಟ್ಟಿದೆ.

**ಬೈಬಲಿನ ಸಂಗತಿ :** ನನ್ನ ದೇಹದ (ನನ್ನ ಸ್ವಾರ್ಥ-ಕೇಂದ್ರದ ಜೀವನದ) ''ಕೃತ್ಯಗಳಿಂದ'' ನಾನು ಬಿಡುಗಡೆ ಹೊಂದಬೇಕಾದರೆ, ನಾನು ಕಾರ್ಯಶಿಲತೆಯಿಂದಲೂ ರಚನಾತ್ಮಕತೆಯಿಂದಲೂ ದೇವರೊಂದಿಗೆ ಸಹಕರಿಸಬೇಕು.

**ಎರಡನೆಯದು : ಆತ್ಮನ ಮುಖಾಂತರ** (ದೇವರ ದೈವೀಯ ಕಾರ್ಯಕರ್ತ) ನಮ್ಮ ಸ್ವಾರ್ಥಪರ, ಭೂಲೋಕಕ್ಕೆ ಸಂಬಂಧಿಸಿದ ಕೃತ್ಯಗಳ ಮೇಲೆ ಜಯಕ್ಕಾಗಿ ಆತನು ತನ್ನ ಸ್ವಂತ ಅದ್ಭುತಕರವಾದ ಅಗತ್ಯತೆಗಳನ್ನು ಮಾಡುವನೆಂದು ಈ ವಚನವು ನಮಗೆ ಹೇಳುತ್ತದೆ.

**ಬೈಬಲನ ಸಂಗತಿ :** ಈ ವಿಧಾನದಲ್ಲಿ ಪ್ರಾರ್ಥನಾ ಪೂರ್ವಕವಾಗಿಯೂ ಕಾರ್ಯ ನಿರತೆಯಿಂದಲೂ ಒಳಗೊಂಡಿದ್ದರೂ, ನನ್ನಷ್ಟಕ್ಕೆ ನಾನೇ ನನ್ನ ಸ್ವಾರ್ಥಪರ ಕೃತ್ಯಗಳಿಗೆ ಮರಣವನ್ನು ತರಲಾರೆನು, ನಾನು ಈ ಲೋಕದಲ್ಲಿರುವಾಗ, **ಪವಿತ್ರಾತ್ಮನು ಮಾತ್ರವೇ ನನ್ನನ್ನು ನನ್ನ ಸ್ವಾರ್ಥದಿಂದ ಕೇಂದ್ರೀಕೃತವಾದ ಕೃತ್ಯಗಳಿಂದ ಆಮೂಲಾಗ್ರವಾಗಿ ನನ್ನನ್ನು ಬೇರ್ಪಡಿಸಬಲ್ಲನು.**

**ಮೂರನೆಯದು :** ಈ ವಚನವು **ವರ್ತಮಾನ ಕಾಲದಲ್ಲಿ** ಬರೆಯಲ್ಪಟ್ಟಿರುವುದನ್ನು ಗಮನಿಸುವುದು ಆಸಕ್ತಿಯುಳ್ಳದ್ದಾಗಿದೆ. ವ್ಯಾವಹಾರಿಕ ಮಾತುಗಳಲ್ಲಿ, ಈ ಕಾಲದ ಉಪಯೋಗವು ದೇವರೊಂದಿಗೆ ನನ್ನ ಪ್ರಾರ್ಥನಾ ಪೂರ್ವಕವಾದ ಮತ್ತು ಕಾರ್ಯನಿರತ ಸಹಕಾರವು ಸತತವಾಗಿ ಉಪಯೋಗಿಸಲ್ಪಡಬೇಕು ಎಂಬುದನ್ನು ಸೂಚಿಸುತ್ತದೆ.

ಬೈಬಲಿನ ಸಂಗತಿ : ಮರಣಕ್ಕೆ ತನ್ನ ಸ್ವಂತ ಜೀವಿತವನ್ನು ಪ್ರೀತಿಸಲು ಪವಿತ್ರಾತ್ಮನನ್ನು ಒಬ್ಬ ಕ್ರೈಸ್ತನು ಮಾರ್ಪಡಿಸುವದನ್ನು ಕೇಳುವುದು ಮೊದಲನೆಯ ಅನುಭವವಾಗಿದ್ದರೂ. ಅದು ಒಮ್ಮೆ ಮಾತ್ರ ಮಾಡಬೇಕಾದ ಸಂಗತಿಯಾಗಿರುವದಿಲ್ಲ. ಇಲ್ಲ, ಸ್ವಾರ್ಥ ಜೀವಿತವು ತನ್ನ ಕುರೂಪೀ ತಲೆಯನ್ನು ತೋರಿಸುವಾಗಲೆಲ್ಲಾ ಪವಿತ್ರಾತ್ಮನ ವಿಮೋಚಿಸುವ ಕಾರ್ಯದೊಂದಿಗೆ ನಮ್ಮ ಪರವಾಗಿ ಸಹಕರಿಸುವ ವಿಶಿಷ್ಠ ಪ್ರಾರ್ಥನೆಯು ಇರಬೇಕು. ಆಗ, ಪವಿತ್ರಾತ್ಮನ ಕಾರ್ಯಸಾಧನೆಯ ಸೇವೆಯ ಮೇಲೆ ಸತತವಾಗಿ ನಾವು ಅವಲಂಭಿಸುವಾಗ, ನಮ್ಮ ಸ್ವಾರ್ಥಕಾರ್ಯಗಳು ಮರಣಕ್ಕೆ ತರಲ್ಪಡುವುದು ನಿಶ್ಚಿತವಾಗುತ್ತದೆ.

ನಂಬಿಕೆಯ ಈ ಮನೋಭಾವನೆಯು ಸತತವಾದದ್ದು ನಿರಂತವಾಗಿರುವಂಥದ್ದೂ ಸದಾಕಾಲ ಇರುವಂಥದ್ದು ಆದ ಅನುಭವ ಆಗಿರಬೇಕೆಂದು ದೇವರು ಉದ್ದೇಶಿಸುತ್ತಾನೆ.

ಇದನ್ನು ಉದಾಹರಿಸುವದಕ್ಕಾಗಿ ನಮ್ಮ ಕಲ್ಪನೆಯಲ್ಲಿ ಒಂದು ಕೋರ್ಟ ರೂಮಿಗೆ ಹೋಗೋಣ. ಅಲ್ಲಿ ಒಬ್ಬ ಮನುಷ್ಯನು ಕೊಲೆಗಾಗಿ ನ್ಯಾಯ ವಿಚಾರಣೆ ಹೊಂದುತ್ತಿದ್ದನು. ಪುರಾವೆಯು ವಿಚಾರಿಸಲ್ಪಟ್ಟು ಅವನ ಅಪರಾಧವು ಸ್ಥಾಪಿಸಲ್ಪಟ್ಟಿತು, ಮತ್ತು ಶಿಕ್ಷೆಯನ್ನು ಘೋಷಿಸುವ ಗಂಭೀರವಾದ ಜವಾಬ್ದಾರಿಕೆ ನ್ಯಾಯಾಧೀಶನಿಗಿತ್ತು. ನ್ಯಾಯಾಧೀಶನು ಎದ್ದು ನಿಂತುಕೊಂಡು, ''ಈ ಮನುಷ್ಯನು ಕೊಲೆಯ ಅಪರಾಧಿ ಯಾಗಿದ್ದಾನೆಂದು ಕಂಡು ಬಂದಿದೆ ಮತ್ತು ಈ ಕಾರಣದಿಂದ ಅವನಿಗೆ ಮರಣ ದಂಡನೆ ವಿಧಿಸಲ್ಪಟ್ಟಿದೆ'' ಎಂದು ಹೇಳುವಾಗ ಕೋರ್ಟ ರೂಮಿನಲ್ಲಿ ಸಂಪೂರ್ಣ ಸ್ಥಬ್ಧತೆ ತುಂಬಿಕೊಂಡಿತ್ತು.

ಆ ಗಂಭೀರವಾದ ಹೇಳಿಕೆಯಿಂದ ನ್ಯಾಯಾಧೀಶನ ಕರ್ತವ್ಯವು

ಮುಗಿಯಿತು. ಹೀಗಿದ್ದರೂ, ಮರಣ ದಂಡನೆಯನ್ನು ತಾನೇ ನೆರವೇರಿಸಲು. ನ್ಯಾಯಾಧೀಶನು ತನ್ನ ಬೆಂಚಿನ ಕೆಳಗಿನಿಂದ ಒಂದು ಪಿಸ್ತೋಲನ್ನು ತೆಗೆದುಕೊಂಡು ಕೊಲೆಗಾರನನ್ನು ಹೊಡೆದರೆ, ನ್ಯಾಯಾಧೀಶನು ತಾನೇ ಕೊಲೆಯ ಅಪರಾಧಿಯಾಗುತ್ತಾನೆ.

ಮರಣದಂಡನೆಯನ್ನು ಪ್ರಕಟಿಸಿದ ನಂತರ ನ್ಯಾಯಾಧೀಶನು ಮಾಡ ಬೇಕಾಗಿದ್ದುದು ದಂಡಿಸಲ್ಪಟ್ಟವನನ್ನು ದಂಡನೆಯನ್ನು ಕಾರ್ಯಕೂಪಕ್ಕೆ ತರುವವರಿಗೆ ಒಪ್ಪಿಸಬೇಕಾಗಿತ್ತು.

ಅದೇ ರೀತಿಯಲ್ಲಿ, ನಮ್ಮ ಸ್ವಾರ್ಥ ಜೀವಿತವು ತನ್ನ ಸ್ವಾರ್ಥವನ್ನು ಗುರುತಿಸಿ ಅರಿಕೆ ಮಾಡುವದನ್ನು ಬಿಟ್ಟು ಬೇರೆನನ್ನೂ ಮಾಡಬಾರದು. ಕೋರ್ಟ ರೂಮಿನಲ್ಲಿಯ ನ್ಯಾಯಾಧೀಶನಂತೆ, ನಮ್ಮ ಎಲ್ಲಾ ಸ್ವಾರ್ಥದ ಕೃತ್ಯಗಳ ಮೇಲೆ ಮರಣ ದಂಡನೆಯನ್ನು ಪ್ರಕಟಿಸಬೇಕು. ಆದರೆ ನ್ಯಾಯಾಧೀಶನು ಕೊಲೆಗಾರನ ಜೀವವನ್ನು ಎಂದೂ ತೆಗೆಯ ಬಾರದು ಎಂಬಂತೆ, ನಮ್ಮ ಸ್ವಾರ್ಥ ಕೇಂದ್ರೀಕೃತ ಪರಿಸ್ಥಿತಿಯಲ್ಲಿ ಸ್ವಾರ್ಥ ಜೀವಿತದ ಕೃತ್ಯಗಳನ್ನು ಮರಣಕ್ಕೆ ಹಾಕಲು ನಮಗೆ ಅಧಿಕಾರವಿಲ್ಲ. ಆದರೆ, ದೇವರು ನಮಗೆ ಒಬ್ಬ ದೈವೀಯ ಕಾರ್ಯನಿರ್ವಾಹಕನನ್ನು - ಪವಿತ್ರಾತ್ಮನನ್ನು ಒದಗಿಸಿದ್ದಕ್ಕಾಗಿ ಆತನಿಗೆ ಉಪಕಾರ ಹೇಳಿರಿ. ಪವಿತ್ರಾತ್ಮನಿಗೆ ನಮ್ಮ ಜೀವಿತಗಳ ಸ್ವಾರ್ಥತೆಯನ್ನು ನಿಷ್ಕ್ರೀಯ ಗೊಳಿಸಲು ಬಲವಿರುವುದು.

ಹೌದು, ದೇವರ ಕೃಪೆಯಿಂದ, ಆತ್ಮನ ಮುಖಾಂತರ ''ಶರೀರದ ಕೃತ್ಯಗಳನ್ನು'' ಮರಣಕ್ಕೆ ತರಲು ನಾವು ಶಕ್ತರಾಗಿ ಮಾಡಲ್ಪಟ್ಟಿದ್ದೇವೆ. ಈ ಅದ್ಭುತಕರವಾದ ಅವಕಾಶ ವನ್ನು ಸತತವಾದ ಮತ್ತು ಖಂಡಿತವಾದ ತಳಹದಿಯ ಮೇಲೆ ನಾವೇ ಲಭ್ಯವಾಗಿ ಮಾಡಿಕೊಳ್ಳುವಾಗ, ನಿಜವಾಗಿಯೂ ಕ್ರಿಸ್ತನು ಕೇಂದ್ರವಾಗಿರುವ ಜೀವನದ ವಿಮೋಚನಾ ಆನಂದವನ್ನು ಅನುಭವಿಸುವೆವು.

ಅಂಥ ಸ್ಪಷ್ಟವಾದ ಆತ್ಮಿಕ ಬೋಧನೆಯಿಂದ, ಮತ್ತು ಪ್ರಾರ್ಥನಾಕೂಟದಲ್ಲಿ ಮಹಿಳೆಯ ತುಟಿಗಳಿಂದ ನಾನು ಕೇಳಿದಂಥ ಆಸಕ್ತಿಯುಳ್ಳ

ಪ್ರಾರ್ಥನೆಗಳ ಮನ ಮುಟ್ಟುವ ಪಾಠಗಳ ಕಾರಣದಿಂದ, ನಾನೂ ಸಹ ಅದೇ ರೀತಿಯಲ್ಲಿ ಅನೇಕ ಸಲ ಪ್ರಾರ್ಥಿಸಿದ್ದೇನೆ :

> **ಕರ್ತನೇ, ನಿನ್ನ ಪವಿತ್ರಾತ್ಮನಿಂದ, ನನ್ನನ್ನು ಶಿಲುಬೆಗೆ ಸುತ್ತಿಸು ಮತ್ತು ನನ್ನ ಸ್ವಾರ್ಥ ಜೀವಿತವನ್ನು ಮರಣಕ್ಕೆ ಪ್ರೀತಿಸು. ಇನ್ನು ಜೀವಿಸುವವನು ನಾನಾಗಿರಲು ಬಯಸುವದಿಲ್ಲ ಆದರೆ ಕ್ರಿಸ್ತನು ನನ್ನಲ್ಲಿ ಜೀವಿಸುವನು.**

ನಮ್ಮ ಜೀವಿತವು ದೇವರ ವಾಕ್ಯದಿಂದ ಪೋಷಿಸಲ್ಪಡುವ ಮತ್ತು ಸಾಕಲ್ಪಡುವದರ ಅಂತಿಮ ಉದ್ದೇಶವು ವೈಯಕ್ತಿಕ ಸಂತೃಪ್ತಿಯ ಜೀವಿತಕ್ಕೆ ತಲುಪಬೇಕಾಗಿರುವುದು ಎಂದು ಸುಲಭವಾಗಿ ಯೋಚಿಸಬಹುದು. ಹಾಗಿರುವದಿಲ್ಲ ! ಹಳೇ ಒಡಂಬಡಿಕೆಯ ಯಾಜಕನು ತನ್ನ ಮಂದೆಯ ಅತಿ ಉತ್ತಮವಾದವುಗಳನ್ನು ಯಾಕೆ ಪೋಷಿಸಿ ಬೆಳಿಸಿದನು ? ಅತ್ಯುತ್ತಮವಾದ ಮಾದರಿಗಳನ್ನು ಪ್ರದರ್ಶನಕ್ಕಿಡುವದಕ್ಕಾಗಿಯೇ ? ಅದಕ್ಕೆ ವಿರುದ್ಧವಾಗಿ, ವಿಲಿಯಮ್ ಸ್ಟಿಲ್ಲ ತೋರಿಸುವಂತೆ, ಅವು ಕೊಯ್ಯಲ್ಪಡಲಿಕ್ಕೆ ಅಗತ್ಯವಾಗಿದ್ದ ಕುರಿಗಳೇ ಆಗಿದ್ದವು. ಅವು ಜನಿಸಿದಾಗಿನಿಂದಲೇ ಯಜ್ಞವಾಗಿ ಅರ್ಪಿಸಲ್ಪಡಲಿಕ್ಕೆ ಉದ್ದೇಶಿಸಲ್ಪಟ್ಟಿದ್ದವು.

ಬಹಳ ಸಲ, ಕ್ರೈಸ್ತರು, ಸುವಾರ್ತಿಕ ಪ್ರೇಕ್ಷಕರ ಒಂದು ಸಮೂಹದ ಮುಂದೆ ಗೋಲ್ಡ ಮೆಡಲಿಸ್ಟರಾಗಲು ಪ್ರಯತ್ನಿಸುವಂತೆ ತಮ್ಮ ಸಂಗೀತದ ಇಲ್ಲವೇ ಭಾಷಣದ ಸಾಮರ್ಥ್ಯಗಳು ಹೇಗೋ ಕ್ರಿಸ್ತನನ್ನು ಮೆಚ್ಚಿಸುತ್ತವೆ ಎಂದು ತಪ್ಪಾಗಿ ತೀರ್ಮಾನಿಸಿ ಕೊಳ್ಳುತ್ತಾರೆ. ದೇವರು ಪ್ರೀತಿಯ ಸಂಗತಿಗಳೊಂದಿಗೆ. ತನ್ನ ವಾಕ್ಯದಿಂದ ನಮ್ಮನ್ನು ಪೋಷಿಸುವಾಗ, ಆತನ ಉದ್ದೇಶವು ನಾವು ವೇದಿಕೆಯ ಮೇಲೆ ಹೆಚ್ಚು ಉತ್ತಮವಾಗಿ ಪ್ರದರ್ಶನ ಮಾಡಬೇಕೆಂಬುದಲ್ಲ, ಆದರೆ ನಮ್ಮ ಜೀವಿತಗಳ ಪ್ರತಿಯೊಂದು ಕ್ಷೇತ್ರವು ಆತನ ಯಜ್ಞ ಪೀಠದ'ಮೇಲೆ ಇಡಲ್ಪಡಬೇಕೆಂಬುದಾಗಿರುವುದು. ಆತನಿರುವು ಎಲ್ಲದಕ್ಕೆ ನಾವು ಜೀವಿತರಾಗುವ ಮೊದಲು, ನಮ್ಮಲ್ಲಿ ನಾವೇ ಇರುವ ಎಲ್ಲದಕ್ಕೆ - ನಮ್ಮ ಸ್ವ-ಕನಿಕರ, ನಮ್ಮ ಸ್ವಾರ್ಥ - ತೃಪ್ತಿ, ನಮ್ಮ ಸ್ವಾರ್ಥ-ಕೇಂದ್ರೀಕರಿಸುವಿಕೆ, ನಮ್ಮ ಸ್ವಾರ್ಥ

ಸಂತೋಷಗೊಳ್ಳುವಿಕೆ, ನಮ್ಮ ಸ್ವಾರ್ಥ ಸ್ಥಾಪನೆ... ಈ ಯಾದಿ ಮುಂದುವರಿಯುತ್ತಲೇ ಹೋಗುತ್ತದೆ - ಮೊದಲು ಮರಣವಿರತಕ್ಕದ್ದು. ★ ''ಜೋಪಾಸನೆ'' ಮಾಡಲು ತಿಮೊಥೆಯನ್ನು ಬಿಟ್ಟು ಬೇರೆ ಯಾವ ವ್ಯಕ್ತಿಯನ್ನು ಕಂಡುಕೊಳ್ಳಲಿಲ್ಲವೆಂದು ಹೇಳಿದನು. ಯಾಕಂದರೆ ಆ ಪಟ್ಟಣದಲ್ಲಿ ಅನೇಕ ಕ್ರೈಸ್ತರು, ಪ್ರೀತಿಯು ''ತನ್ನ ಸ್ವಾರ್ಥವನ್ನು ಹುಡುಕುವದಿಲ್ಲ'' ಎಂಬುದನ್ನು ತಮ್ಮ ಸ್ವಂತ ಅನುಭವದ ಮುಖಾಂತರ ತಿಳಿದುಕೊಂಡಿರಲಿಲ್ಲ : ಪೌಲನು ಎಷ್ಟು ದುಃಖದಿಂದ ಪ್ರತಿಬಿಂಬಿಸಿದನೆಂಬುದನ್ನು ಓದುತ್ತೇವೆ : ''ಎಲ್ಲರೂ ಸ್ವ ಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸು ಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವ ದಿಲ್ಲ.'' (ಫಿಲಿಪ್ಪಿ 2:21).

ಜಗತ್ತಿನ ಅನೇಕ ಭಾಗಗಳಲ್ಲಿ ಶ್ರಮೆಪಡುತ್ತಿದ್ದ ಸಭೆಗಳ ಬಗ್ಗೆ ಇಂದು ನಿಜವಾಗಿಯೂ ಚಿಂತಿಸುವ ಕ್ರೈಸ್ತರು ಎಲ್ಲಿರುವರು? ಅವರಿಗಾಗಿ ನಿಜವಾಗಿಯೂ ಚಿಂತಿಸಲು ಯಾರೂ ಇಲ್ಲದಂಥ ಜನರನ್ನು ಪ್ರೀತಿಸಲು ಸಮಯವಿಲ್ಲದಷ್ಟು ನಮ್ಮ ಮೇಲೆ ಪರಿಣಾಮ ಮಾಡುವಷ್ಟು ನಾವು ಜೀವನದೊಂದಿಗೆ ಮುಂದಾಗಿ ತುಂಬಿ ಕೊಂಡಿದ್ದೇವೆಯೋ ? ದೇವರ ಪ್ರೀತಿ ಮಾತ್ರವೇ ತನ್ನ ಸ್ವಾರ್ಥವನ್ನು ಹುಡುಕುವದಿಲ್ಲ ಮತ್ತು ಬಹಳವಾಗಿ ಶ್ರಮೆಪಡುತ್ತದೆ ಎಂದನ್ನು ನಾವು ಜ್ಞಾಪಕ ಮಾಡಿಕೊಳ್ಳತಕ್ಕದ್ದು. ಅತಿಸಿಹಿಯಾದ ಕಿತ್ತಳೆ ಹಣ್ಣಿನ ರಸವಾಗುವ ಮೊದಲು ಒಂದು ಕಪ್ ಹುಳಿರಸದ ಕಹಿಯು ಮೊದಲು ಖಾಲಿ ಮಾಡಲ್ಪಡುವಂತೆ, ದೇವರ ಪ್ರೀತಿಯಿಂದ ನಾವು ತುಂಬಲ್ಪಡುವ ಮೊದಲು ನಮ್ಮ ಸ್ವಾರ್ಥ ಜೀವಿತವು

---

★ *ಬೈಬಲಿನಲ್ಲಿ, ಮರಣ ಎಂಬುದಕ್ಕೆ ನಾಶವಾಗಿ ಹೋಗುವುದು ಎಂಬ ಅರ್ಥ ಎಂದೂ ಇರಲಿಲ್ಲ, ಆದರೆ ಬೇರ್ಪಡುವಿಕೆ ಎಂದರ್ಥವಿದೆ. ಉದಾಹರಣೆಯಾಗಿ, ದೈಹಿಕ ಮರಣವು ದೇಹದಿಂದ ಪ್ರಾಣವು ಬೇರೆಯಾಗುವುದು ಮತ್ತು ನಿತ್ಯ ಮರಣವು ದೇವರಿಂದ ಪ್ರಾಣದ ನಿತ್ಯವಾದ ಬೇರ್ಪಡುವಿಕೆ ಆಗಿದೆ. ಅಂಥದೇ ಅರ್ಥದಲ್ಲಿ, ಸ್ವಾರ್ಥಜೀವಿತಕ್ಕೆ ಮರಣವು ಮಾನವ ನಡತೆಯ ವಿಧಗಳಿಂದ ಸ್ವಾರ್ಥ ಕೃತ್ಯಗಳ ಸತತವಾದ ಬೇರ್ಪಡಿಸುವಿಕೆಯಾಗಿದೆ. ಮತ್ತು ಇದು ನಾವು ನೋಡಿದಂತೆ, ದೇವರ ಪವಿತ್ರಾತ್ಮನ ಬಲದಲ್ಲಿ ಮಾತ್ರವೇ ಸಾಧಿಸಲ್ಪಡ ಬಹುದು.*

ಮರಣಕ್ಕೆ ತರಲ್ಪಡತಕ್ಕದ್ದು. ಈ ಎರಡೂ ಸೇವೆಗಳು ನಮ್ಮ ಜೀವಿತಗಳಲ್ಲಿ ಪವಿತ್ರಾತ್ಮನ ಕೃಪಾಕಾರ್ಯದ ಭಾಗವಾಗಿರುವದರಿಂದ ದೇವರಿಗೆ ಸ್ತೋತ್ರ ಸಲ್ಲಿಸಿರಿ. ತೀವ್ರವಾದ ಬೇರ್ಪಡಿಸುವಿಕೆಯಿಂದ ಸ್ವಾರ್ಥ ಜೀವನದ ಕೃತ್ಯಗಳಿಂದ ಬೇರ್ಪಡಿಸುವದರಿಂದ ಮರಣಕ್ಕೆ ತರಬೇಕೆಂದು ಪವಿತ್ರಾತ್ಮನನ್ನು ಬೇಡಿಕೊಳ್ಳುವುದು ಮತ್ತು ಅದಕ್ಕೆ ಪ್ರತಿಯಾಗಿ ದೇವರ ಪ್ರೀತಿಯೊಂದಿಗೆ ತುಂಬಿ ತುಳುಕುವಂತೆ ತುಂಬಿಸಲು ಬೇಡಿಕೊಳ್ಳುವುದು ನಮ್ಮೆಲ್ಲರಿಗೆ ಅವಶ್ಯವಾದದ್ದಾಗಿದೆ. ''ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿ ರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ'' (ರೋಮಾಪುರ 5:5).

ನಿಮ್ಮ ಒಂದಾಗಿ ಕೂಡಿ ಬರುವಿಕೆಯ ಸಮಯದಲ್ಲಿ ಈ ಸತ್ಯಗಳು ಅದುರಲು ಪ್ರಾರಂಭಿಸುವಾಗ, ಪವಿತ್ರಾತ್ಮನು ದೇವರ ವಾಕ್ಯದಿಂದ ನಿಮಗೆ ಹೊಸ ಸತ್ಯಗಳನ್ನು ತೆರೆಯುವನು.

ಪ್ರತಿಯೊಬ್ಬ ವಿಶ್ವಾಸಿಯು ''ದೇವರೊಂದಿಗೆ ಚಿಕ್ಕ ಲೆಕ್ಕಾಚಾರವನ್ನು ಇಟ್ಟಿರಬೇಕು'' ಎಂದು ಚೆನ್ನಾಗಿ ಹೇಳಲ್ಪಟ್ಟಿದೆ. ನಮ್ಮ ದೇವರ ಅರುಹನ್ನು ಮತ್ತು ಆತನೊಂದಿಗಿನ ನಿಕಟ' ಅನ್ಯೋನ್ಯತೆಯನ್ನು ಜೀವನದಲ್ಲಿ ಯಾವುದೂ ಕುಂದಿಸದಂತೆ ನಾವು ಸತತವಾಗಿ ನಿಶ್ಚಿತ ಪಡಿಸಿಕೊಳ್ಳಬೇಕು.

## ಆತ್ಮಿಕ ತಪಾಸಣೆ

1. ನನ್ನ ಕರ್ತನ ಸನ್ನಿಧಿಯಲ್ಲಿ, ನಾನು ಮಾನಸಾಂತರ ಪಡದೇ ಇದ್ದ, ಯಾವುದೇ ಅರಿಕೆ ಮಾಡದ ಪಾಪದ ಬಗ್ಗೆ ನನಗೆ ತಿಳಿದಿದೆಯೋ ?

2. ಇದರೊಂದಿಗೆ ನನಗೆ ಒಂದು ಸಮಸ್ಯೆಯಿರುವುದೋ :
   ಒಂದು ಕ್ಷಮಿಸಲ್ಪಡದಿರುವ ಆತ್ಮ ?
   ನಾನು ಮೆಚ್ಚದಿರುವ ಪ್ರೀತಿಸುವ ಜನರು ?
   ಒಳ್ಳೇ, ರೂಪ ತೋರಿಸುವ ಮೋಸ ಮಾಡುವ ಜನರು ?
   ಇನ್ನೊಬ್ಬ ವ್ಯಕ್ತಿಯ ವರಗಳನ್ನು ಇಲ್ಲವೇ ಸ್ವಾಸ್ಥ್ಯಗಳನ್ನು ಆಶಿಸುವುದು ?
   ಗುಣುಗುಟ್ಟುವುದು ಮತ್ತು ಟೀಕಿಸುವುದು ?

3. ನನ್ನ ಮನಸ್ಸಾಕ್ಷಿಯು ಶುದ್ಧೀಕರಿಸಲ್ಪಟ್ಟಿರುವದರಿಂದ ನಿರೀಕ್ಷೆಯ ನಂಬಿಕೆಯನ್ನು ರೂಢಿಸಬಹುದೋ ?

4. ಭೂಮಿಯ ಮೇಲಿನ ನನ್ನ ಜೀವಿತವು ನಿಜವಾಗಿಯೂ ಕ್ರಿಸ್ತನು- ಕೇಂದ್ರವಾದದ್ದಾಗಿರುವುದೋ ಇಲ್ಲವೋ ಇನ್ನೂ ಸ್ವಾರ್ಥ ಕೇಂದ್ರವಾದದ್ದಾಗಿರುವುದೋ ?

   ಈಗ ನೀವು Willam Maclardie Bunting ಅವರ ಪ್ರಾರ್ಥನೆಗೆ ಪುನಃ ತಿರುಗಲು ಬಯಸಬಹುದು ಮತ್ತು ಮೌನವಾಗಿ ಹಾಗೂ ವಿಚಾರಪೂರ್ವಕವಾಗಿ ಅದನ್ನು ಪುನಃ ನೀವೇ ಪ್ರಾರ್ಥಿಸಬಹುದು.

ಕರ್ತನೊಂದಿಗೆ ನಾವು ನೆಡಯುವಾಗ
ಆತನ ವಾಕ್ಯದ ಬೆಳಕಿನಲ್ಲಿ,
ಎಂಥಾ ಮಹಿಮೆಯನ್ನು ಸುರಿಸುವನಾತ ನಮ್ಮ ಹಾದಿಯ ಮೇಲೆ!
ನಾವು ಆತನ ಸುಚಿತ್ತವನ್ನು ಮಾಡುವಾಗ,
ವಾಸಿಸುವನು ಇನ್ನೂ ನಮ್ಮೊಂದಿಗೆ ಆತ,
ಇರುವನು ನಂಬುವ ಹಾಗೂ ವಿಧೇಯರಾಗುವ ಎಲ್ಲರೊಂದಿಗೆ.

ಛಾಯೆಯೊಂದು ಮೇಲಕ್ಕೆ ಏಳದು,
ಮೋಡವೊಂದು ಆಕಾಶದಲ್ಲಿ ಏಳದು,
ಆದರೆ ಅದನ್ನು ಕೂಡಲೇ ಓಡಿಸುವುದು ಆತನ ಮುಗುಳ್ನಗೆ;
ಒಂದು ಸಂಶಯ, ಒಂದು ಭಯ,
ಒಂದು ನಿಟ್ಟುಸಿರು, ಒಂದು ಕಣ್ಣೀರು,
ವಾಸಿಸುವದಿಲ್ಲ ನಾವು ನಂಬುವಾಗ ಮತ್ತು ವಿಧೇಯರಾಗುವಾಗ.

ಆದರೆ ರುಜುವಾತು ಪಡಿಸೆವು ನಾವೆಂದೂ
ಆತನ ಪ್ರೀತಿಯ ಆನಂದಗಳನ್ನು,
ಪೀಠದ ಮೇಲೆ ಎಲ್ಲವನ್ನೂ ನಾವು ಇಡುವವರೆಗೆ.
ಆತನು ತೋರಿಸುವ ಅನುಗ್ರಹವು
ಆತನು ದಯಪಾಲಿಸುವ ಆನಂದವು
ಇರುವವು ನಂಬುದವರಿಗೆ, ವಿಧೇಯರಾಗುವವರೆಗೆ ?

ಆತನು ತೋರಿಸುವ ಅನುಗ್ರಹವು,
ಆತನು ದಯಪಾಲಿಸುವ ಆನಂದವು,
ಇರುವವು ನಂಬುವವರಿಗಾಗಿ ಮತ್ತು ವಿಧೇಯರಾಗುವವರಿಗಾಗಿ

ಆಗ ಮಧುರ ಅನ್ಯೋನ್ಯತೆಯಲ್ಲಿ
ಕುಳಿತು ಕೊಳ್ಳುವೆವು ನಾವು ಆತನ ಪಾದಗಳ ಬಳಿಯಲ್ಲಿ,
ಇಲ್ಲವೇ, ಮಾರ್ಗದಲ್ಲಿ ನಡೆಯುವೆವು ಆತನ ಜೊತೆಯಲ್ಲಿ,
ಆತನು ಹೇಳುವದನ್ನು ಮಾಡುವೆವು ನಾವು,
ಆತನು ಕಳುಹಿಸುವಲ್ಲಿಗೆ ಹೋಗುವೆವು ನಾವು,
ಎಂದೂ ಭಯಪಡೆವು, ನಂಬುವೆವು ಮತ್ತು ವಿಧೇಯರಾಗುವೆವು.

John H. Sammis

# ಅಧ್ಯಾಯ 4

# ಒಂದುಗೂಡಿ ಬರುವ ಸಮಯ

ಅದನ್ನು ನೀನು ಯೋಚಿಸುವಾಗ, ತೆರೆದ ಬೈಬಲಿನೊಂದಿಗೆ ಮತ್ತು ತೆರೆದ ಹೃದಯದೊಂದಿಗೆ ಕರ್ತನಾದ ಯೇಸು ಕ್ರಿಸ್ತನ ಸಾಕಷ್ಟಾಗುವಿಕೆಯ ಮೇಲೆ ಮೊದಲು ಅವಲಂಭಿಸದೇ ನಾವು ದಿನದ ಆಹ್ವಾನಗಳನ್ನು ಎದುರಿಸಲಿಕ್ಕೆ ಸಿದ್ಧರಿದ್ದೇವೆ ಎಂದು ಯೋಚಿಸುವದಕ್ಕಿಂತ ಹೆಚ್ಚು ಗರ್ವದ ವ್ಯಕ್ತಪಡಿಸುವಿಕೆಗಳು ಕೆಲವು ಇರುತ್ತವೆ.

ಆತ್ಮಿಕವಾಗಿ ಫಲಕೊಡುವ ಜೀವವಾಗಿ ಬೆಳವಣಿಗೆ ಹೊಂದುವ ಜೀವಾಂಕುರ ಬೀಜವನ್ನು ದಾವೀದನು ಗುರುತಿಸಿದನು. ದೇವರ ವಾಕ್ಯದ ಮೇಲೆ ಧ್ಯಾನ ಮಾಡುವ ವ್ಯಕ್ತಿಯು ತಕ್ಕ ಕಾಲದಲ್ಲಿ ಫಲ ಕೊಡುವನು..... ಅವನ ಕಾರ್ಯವೆಲ್ಲವೂ ಸಫಲವಾಗುವುದು (ಕೀರ್ತನೆ 1:3) ಎಂದು ಅವನು ಹೇಳಿದ್ದಾನೆ.

**ಯಾವ ತರದ ವ್ಯಕ್ತಿಯನ್ನು ವೃದ್ಧಿಗೊಳಿಸುವೆನೆಂದು ಯೇಸುವು ವಾಗ್ದಾನ ಮಾಡಿದ್ದಾನೆ ? ಕರ್ತನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. (ಕೀರ್ತನೆ 1:2).**

''ದಿನಕ್ಕೊಂದು ಅಧ್ಯಾಯವು ಸೈತಾನನ್ನು ದೂರ ಇಡುವುದು'' ಎಂದು ತಮ್ಮ ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ಕರ್ತನಾದ ಯೇಸುವನ್ನು ಆಗಲೇ

ಸ್ವೀಕರಿಸಿದ ಜನರಿಗೆ ಕೆಲವು ಸಲ ಹೇಳುತ್ತೇನೆ. ಪರಿಶುದ್ಧ ಬರಹದ ನಿಮ್ಮ ಭಾಗ್ಯವನ್ನು ಓದಿರಿ ಮತ್ತು ಆಮೇಲೆ ಅದನ್ನು ಪುನಃ ಓದಲು ಹಿಂದುರಿಗಿರಿ. ಹಾಗೆ ನೀವು ಮಾಡುವಂತೆ, ವಚನದಿಂದ ವಚನವನ್ನು ಧ್ಯಾನ ಮಾಡಲು ನೀವು ಶಕ್ತರಾಗುವಿರಿ. ಹೊಲದಲ್ಲಿ ಆಕಳು ಮೇವನ್ನು ಮೆಲ್ಲುವುದಕ್ಕೆ ನೋಡಿರುವಿರೋ ? ಹುಲ್ಲನ್ನು ಜಗಿಯುತ್ತದೆ, ನುಂಗುತ್ತದೆ ಮತ್ತು ಪುನಃ ಜಗಿಯಲು ಬಾಯೊಳಗೆ ಹಿಂದಿರುಗಿ ತರುತ್ತದೆ, ಎಲ್ಲವೂ ತೀರುವವರೆಗೆ ಜಗಿಯುತ್ತಲೇ ಇರುತ್ತದೆ. ದೇವರ ವಾಕ್ಯದ ಮೇಲೆ ನಿಜವಾಗಿ ಧ್ಯಾನ ಮಾಡುವದಕ್ಕೆ ಇದು ಒಳ್ಳೆಯ ಉದಾಹರಣೆಯಾಗಿರುತ್ತದೆ.

ತನ್ನ ಎಪ್ಪತ್ತನೆಯ ಜನ್ಮ ದಿನದಂದು ಮಾರ್ಪಾಟ ಹೊಂದಿದ ಒಬ್ಬ ಮನುಷ್ಯನ ಬಗ್ಗೆ ನನಗೆ ತಿಳಿದಿರುತ್ತದೆ. ಆ ಸಮಯದಲ್ಲಿ ಅವನು ಬೈಬಲಿನ ಬಗ್ಗೆ ಬಹಳ ಸ್ಪಷ್ಟವಾಗಿ ತಿಳಿದಿದ್ದನು. ಕ್ರಿಸ್ತನಲ್ಲಿ ನೂತನ ಜೀವಿತವನ್ನು ಕಂಡುಕೊಳ್ಳುವ ಮೊದಲು ಅವನು ದೇವಾಲಯಕ್ಕೆ ಹೋಗುವವನೂ ಆಗಿರಲಿಲ್ಲ ; ಅವನು ಹೆಚ್ಚು ವಿದ್ಯಾಭ್ಯಾಸ ಮಾಡಿದವನೂ ಆಗಿರಲಿಲ್ಲ. ಹೀಗಿದ್ದರೂ, ಅವನು ನೂತನ ಜನನದ ಅನುಭವದ ನಂತರ, ಕೃಪೆಯಲ್ಲಿ ಮತ್ತು ಕರ್ತನಾದ ಯೇಸು ಕ್ರಿಸ್ತನ ಪ್ರೀತಿಯಲ್ಲಿ ಹಾಗೂ ಜ್ಞಾನದಲ್ಲಿ ಬೆಳೆಯುವ ಅವನ ಅಪೇಕ್ಷೆಯು ತೀವ್ರವಾಯಿತು ; ಅವನು ಎಂಭತ್ಮೂರು ವರ್ಷ ಪ್ರಾಯದಲ್ಲಿ ಪರಲೋಕಕ್ಕೆ ಹೋಗುವ ಸಮಯಕ್ಕಿಂತ ಮೊದಲು ಅವನು ಬೈಬಲನ್ನು ಮೊದಲನೆಯ ಪುಟದಿಂದ ಕೊನೆಯ ಪುಟದ ವರೆಗೆ ಹದಿಮೂರ ಸಲ ಓದಿ ಮುಗಿಸಿದ್ದನು. ನಿನ್ನ ವಯಸ್ಸು ಯಾವುದೇ ಇರಲಿ, ನಿನ್ನ ವಿದ್ಯೆಯ ಹಿನ್ನೆಲೆ ಯಾವುದೇ ಇರಲಿ, ನೀನೂ ಸಹ ಬೈಬಲನ್ನು ಪ್ರತಿದಿನ ಓದಬಹುದು.

ಒಂದು ತೆರೆದ ಬೈಬಲ್, ಒಂದು ಶುದ್ಧ ಹೃದಯ, ಒಂದು ದೀನ ಹೃದಯ, ಮತ್ತು ದಾವೀದನ ಪ್ರಾರ್ಥನೆ : ''ನನ್ನ ಕಣ್ಣುತೆರೆ ; ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು'' (ಕೀರ್ತನೆ119:18) ಇವು ಕರ್ತನೊಂದಿಗೆ ಒಂದು ಫಲಭರಿತ ಸಮಯಕ್ಕೆ ಮಾರ್ಗ ಸಿದ್ಧಪಡಿಸುವವು.

ನಾವು ಈಗಾಗಲೇ ಗಮನಿಸಿದಂತೆ, ಕೆಲವು ಜನರು ''ಒಂದಾಗಿ ಕೂಡಿ ಬರುವ ಸಮಯ''ವು ನಿಜವಾಗಿಯೂ ಎರಡು ಮಾರ್ಗದ

ಸಂವಾದವಾಗಿದೆಯೆಂದು ಅರ್ಥ ಮಾಡಿಕೊಳ್ಳುವದಿಲ್ಲ. ನಾವು ಓದುತ್ತಿರುವ ಬೈಬಲ್ ವಚನಗಳ ಮೇಲೆ ನಾವು ಧ್ಯಾನ ಮಾಡುವಾಗ ನಮಗೆ ದೇವರು ಮಾತಾಡುತ್ತಾನೆ. ನಮ್ಮ ಹೃದಯಗಳಿಗೆ ಮಾತನಾಡಲು ದೇವರು ಪ್ರೀತಿಯಿಂದ ಅನುಗ್ರಹಿಸಿದ ನಂತರ, ಆತನು ಆಗ ಪ್ರಾರ್ಥನೆಯಲ್ಲಿ ನಾವು ಉತ್ತರಿಸುವದಕ್ಕಾಗಿ ಕಾಯುತ್ತಿರುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ಅನೇಕ ಜನರು ಸೋತು ಹೋಗುವುದು ದುರ್ದೈವದ ಸಂಗತಿಯಾಗಿರುತ್ತದೆ. ದೇವರ ವಾಕ್ಯದ ಮೇಲೆ ನಾವು ಪ್ರತಿಬಿಂಬಿಸುವಾಗ, ಆ ವಾಕ್ಯವು ನಮ್ಮ ವಿಚಾರಿಸುವಿಕೆಯ ಭಾಗವಾಗಿರುವುದು. ದೇವರ ವಾಕ್ಯದ ಮೇಲೆ ನಾವು ಪ್ರಾರ್ಥನಾ ಪೂರ್ವಕವಾಗಿ ಕಾರ್ಯ ಮಾಡುವಾಗ, ಅದು ನಮ್ಮ ಜೀವಿತದ ಭಾಗವಾಗುವುದು.

ಈ ಹಂತದಲ್ಲಿ ನೀವು, ''ನಾನು ಬೈಬಲ್ ಓದುವಾಗ ಹೇಗೆ ದೇವರು ನನ್ನೊಂದಿಗೆ ಮಾತಾಡುವನು ?'' ಕೇಳಬಹುದು. ವೈಯಕ್ತಿಕವಾಗಿ, ನನ್ನ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳನ್ನು ಇಟ್ಟುಕೊಂಡು ನಾನು ಓದಿದ ಪ್ರತಿಯೊಂದು ವಚನದ ಧ್ಯಾನಿಸುವುದು ನನಗೆ ಸಹಾಯಕರವಾದದ್ದಾಗಿ ಕಂಡುಕೊಂಡಿದ್ದೇನೆ. ಅವುಗಳಲ್ಲಿ ಕೆಲವು ಅನೇಕ ವರ್ಷಗಳ ಹಿಂದೆ ನನಗೆ ಸೂಚಿಸಲ್ಪಟ್ಟವುಗಳಾಗಿವೆ. ನನ್ನ ಕರ್ತನೊಂದಿಗೆ ನಾನು ಪ್ರಾರ್ಥನಾ ಪೂರ್ವಕವಾಗಿ ಸಂಪರ್ಕಿಸುವಾಗ ಈ ಪ್ರಶ್ನೆಗಳು ನನಗೆ ಮಾರ್ಗದರ್ಶನ ಮಾಡುವಂತೆ ಬಿಡುತ್ತೇನೆ. ನೀವೂ ಸಹ ದೇವರ ವಾಕ್ಯದ ಮೇಲೆ ಧ್ಯಾನ ಮಾಡುವಂತೆ ಅಂಥ ರೀತಿಯಲ್ಲಿ ನಿಮ್ಮ ಯೋಚನೆಗೆ ಮಾರ್ಗದರ್ಶನ ಹೊಂದಿರಿ ಎಂದು ನಾನು ಸೂಚಿಸುತ್ತೇನೆ. ಅನೇಕ ವರ್ಷಗಳಿಂದ ಈ ಪ್ರಶ್ನೆಗಳ ಮೇಲೆ ನಾನು ಅವಲಂಭಿಸಿದ್ದರ ಕಾರಣದಿಂದ, ದೇವರೊಂದಿಗೆ ಮತ್ತು ಪರಿಶುದ್ಧ ಬರಹಗಳೊಂದಿಗೆ ಪ್ರತ್ಯೇಕ ವಾಗಿರುವುದು ಸಾಭಾವಿಕವಾದದ್ದಾಗಿದೆ.

ಕೆಳಗಿನ ಕೆಲವು ಪ್ರಶ್ನೆಗಳಿಗೆ ವಿಧೇಯತೆಯ ಕಾರ್ಯದ ಅಗತ್ಯತೆ ಇದೆಯೆಂದು; ಇತರವುಗಳಿಗೆ ವಿಶ್ವಾಸದ ಉತ್ತರದ ಅಗತ್ಯತೆ ಇದೆಯೆಂದು ; ಇನ್ನೂ ಇತರವುಗಳು ಕರ್ತನ ಮುಂದೆ ಆರಾಧನೆಯಲ್ಲಿ ಮತ್ತು ಸ್ತೋತ್ರದಲ್ಲಿ ನೀವು ಎಳೆಯಲ್ಪಡುವಂತೆ ಪರಿಣಾಮಗೊಳ್ಳುತ್ತವೆ; ಮತ್ತು ಅಂತಿಮವಾಗಿ ಕೆಲವು ನಿಮ್ಮ ವೈರಿಯ, ಸೈತಾನನ ಮೋಸಕರ ಕಾರ್ಯಗಳನ್ನು ತಿಳಿದುಕೊಳ್ಳುವ ಸಹಾಯ

ಮಾಡುವವು, ಮತ್ತು ಸೈತಾನನ ಮೇಲಿನ ಕ್ರಿಸ್ತನ ಜಯವು ಹೇಗೆ ನಿಮ್ಮದಾಗುವುದೆಂಬದನ್ನು ಅರ್ಥ ಮಾಡಿಕೊಳ್ಳಲು ನಿಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ ಈ ವಿಷಯಗಳನ್ನು ನಾವು ಗಮನಿಸಿದ್ದೇವೆ.

## ವಿಧೇಯತೆಯ ಒಂದು ಕೃತ್ಯ

ನಾವು ಬೈಬಲ್ ಓದುವಾಗ ಪವಿತ್ರಾತ್ಮನ ಸ್ವರಕ್ಕೆ ಚೆನ್ನಾಗಿ ಹೊಂದಿಕೊಳ್ಳಬೇಕಾಗಿದ್ದರೆ, ದೇವರೊಂದಿಗೆ ಸರಿಯಾದ ಸಂಪರ್ಕದಲ್ಲಿರ ತಕ್ಕದ್ದೆಂದು ನಾವು ಆಗಲೇ ಅರ್ಥಮಾಡಿಕೊಂಡಿದ್ದೇವೆ. ಆದರೆ ಪ್ರತೀ ಸಲ ಪವಿತ್ರಾತ್ಮನು ನಮ್ಮ ಹೃದಯಕ್ಕೆ ಮಾತನಾಡುವಾಗ ಆತನು ಹೇಳುತ್ತಿರುವದಕ್ಕೆ ವಿಧೇಯರಾಗುವುದು ಅವಶ್ಯವಾಗಿದೆ.

ಕರ್ತನೊಂದಿಗೆ ನಿಮ್ಮ ಒಂದಾಗಿರುವ ಸಮಯದಲ್ಲಿ ಬೈಬಲನ್ನು ಓದುವಾಗ, ಹೀಗೆ ಕೇಳುವುದು ಒಳ್ಳೆಯದಾಗಿದೆ :

ಈ ವಚನದಲ್ಲಿ -

ವಿಧೇಯನಾಗಲು ಒಂದು ಆಜ್ಞೆ ಇರುವುದೋ ?
ತಪ್ಪಿಸಿಕೊಳ್ಳಬೇಕಾದ ಒಂದು ಪಾಪವಿದೆಯೋ ?
ಅನುಸರಿಸಲು ಒಂದು ಒಳ್ಳೇ ಉದಾಹರಣೆ ಇದೆಯೋ ?
ತಪ್ಪಿಸಿಕೊಳ್ಳಬೇಕಾದ ಒಂದು ಕೆಟ್ಟ ಉದಾಹರಣೆ ಇದೆಯೋ?

ಅಂಥ ಪ್ರಶ್ನೆಗಳು ನಿನ್ನ ಕರ್ತನೊಂದಿಗೆ ವೈಯಕ್ತಿಕ ಮತ್ತು ಎರಡು ಮಾರ್ಗಗಳ ಅನ್ಯೋನ್ಯತೆಯಲ್ಲಿ ನಿನ್ನನ್ನು ತರಬಲ್ಲವು ಎಂಬುದನ್ನು ನೀನು ನೋಡುವಿಯೋ? ಅವು ನೀನು ಓದಿದ್ದರ ಸತ್ಯದ ಬಗ್ಗೆ ಕೇವಲ ಯೋಚಿಸುವಂತೆ ನಿಶ್ಚಯವಾಗಿಯೂ ನಿನ್ನನ್ನು ಬಿಟ್ಟು ಬಿಡುವದಿಲ್ಲ. ದೇವರ ಸನ್ನಿಧಿಯಲ್ಲಿ ನೀನು ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ, ದೇವರು ಹೇಳಿದ್ದಕ್ಕೆ ನಿನ್ನ ಹೃದಯದಲ್ಲಿ ಉತ್ತರವನ್ನು ಕೊಡುವ ಅಗ್ಯತ್ಯತೆಯನ್ನು ಕಂಡುಕೊಳ್ಳುವಿ.

ಯಾವಾಗಲೂ ಜ್ಞಾಪಕದಲ್ಲಿಟ್ಟುಕೋ. ನೀನು ದೇವರ ವಾಕ್ಯವನ್ನು ಓದುವಾಗ ಪವಿತ್ರಾತ್ಮನು ತಾನೇ ನಿನ್ನೊಂದಿಗೆ ಇರುವನು, ಮತ್ತು ನೀನು ಆತನ

ಮೇಲೆ ಅವಲಂಭಿಸಿದರೆ, ದೇವರ ವಾಕ್ಯವನ್ನು ಆತನು ಒಂಭತ್ತು ಇಂಚು ಕೆಳಗೆ-ನಿನ್ನ ತಲೆಯಿಂದ ನಿನ್ನ ಹೃದಯಕ್ಕೆ ದೂಡುವನು.

ದೇವರ ಆಜ್ಞೆಗಳಿಗೆ ಅವಿಧೇಯತೆಯಿಂದಲೂ ದಂಗೆಯಿಂದಲೂ ಜಗತ್ತು ಮುಂದೆ ಓಡುತ್ತಿರುವ ನಾಶನಕರವಾದ ದಿನಗಳಲ್ಲಿ ನಾವೆಲ್ಲಾ ಜೀವಿಸುತ್ತಿದ್ದೇವೆ, ಕ್ರಿಸ್ತನನ್ನು ತಿರಸ್ಕರಿಸುತ್ತಿರುವ ಸಂತತಿಯ ಮೇಲೆ ಪ್ರಭಾವ ಬೀರಲು ನಾವು ವಿಧೇಯರೂ ಪೂರ್ಣ ಹೃದಯರೂ ಆಗಿರತಕ್ಕದ್ದು. ದೇವರು ನಮಗೆ ತೋರಿಸುವ ಸತ್ಯಗಳಿಗೆ ವಿಧೇಯರಾಗಲು ಪ್ರಾರಂಭಿಸುವಾಗ ಮಾತ್ರವೇ ಅಗತ್ಯತೆಯುಳ್ಳ ಜಗತ್ತಿಗೆ ನಮ್ಮ ಮುಖಾಂತರ ಹರಿಯಲ್ಪಡಲು ಆತನ ಬಲಕ್ಕಾಗಿ ನಾವು ತೆರೆದಿರುವೆವು.

ಇತ್ತೀಚೆಗೆ, ನನ್ನ ಪತ್ನಿ ಮತ್ತು ನಾನು, ಓಸ್ವಾಲ್ಡ ಚೇಂಬರ್ಸ ಅವರ My Utmost for His Highest ಎಂಬ ಪುಸ್ತಕವನ್ನು ಓದಿದೆವು. ನಾವು ಓದಿದ್ದರ ಭಾವಾರ್ಥ ಇದಾಗಿದೆ:

> ದೇವರು ನಿನಗೆ ತೋರಿಸುವ ಸಂಗತಿಯಲ್ಲಿ ದೇವರಿಗೆ ವಿಧೇಯನಾಗು, ಮತ್ತು ಕೂಡಲೇ ಮುಂದಿನ ಸಂಗತಿಯು ತರೆಯಲ್ಪಡುವುದು...... ''ಒಂದು ದಿನ ನಾನು ಅದನ್ನು ಅರ್ಥ ಮಾಡಿಕೊಳ್ಳಬಹುದು'' ಎಂದು ನೀನು ಹೇಳಬಹುದು. ಒಂದು ನಿಮಿಷ ತಾಳಿರಿ ; ಈಗಲೇ ನೀವು ಅದನ್ನು ಅರ್ಥ ಮಾಡಿಕೊಳ್ಳಬಹುದು ! ವಿಶೇಷ ಆಂತರಿಕ ದೃಷ್ಟಿಯನ್ನು ತರುವಂಥದ್ದು **ಅಧ್ಯಯನವಲ್ಲ** ಆದರೆ **ವಿಧೇಯತೆಯು** ತರುವುದು. ವಿಧೇಯತೆಯ ಅತೀ ಚಿಕ್ಕ ಭಾಗವೂ ಕೂಡಲೇ ನಿಮಗೆ ದೇವರ ಅತೀ ಅಗಾಧವಾದ ಸತ್ಯಗಳು ನಿಮಗಿರುವಂತೆ ಪರಲೋಕದ ಕಿಟಕಿಗಳನ್ನು ತೆರೆಯುವುದು. ಆದರೆ, ನೀವು ಈಗಾಗಲೇ ತಿಳಿದಿರುವದಕ್ಕೆ ವಿಧೇಯರಾಗುವವರೆಗೆ ದೇವರು ತನ್ನ ಬಗ್ಗೆ ಹೆಚ್ಚಿನ ಸತ್ಯವನ್ನು ಎಂದಿಗೂ ಪ್ರಕಟಿಸುವದಿಲ್ಲ.

ಇಬ್ಬರು ದೊಡ್ಡ ಮಿಶನರಿಗಳಾದ ಚಾರ್ಲ್ಸ್ ಟಿ.ಸ್ಟಡ್ ಮತ್ತು ಹಡ್ಸನ್ ಟೇಲರ ಇಬ್ಬರೂ ಒಂದೇ ಕೋಣೆಯಲ್ಲಿ ಇದ್ದು ಒಂದು ರಾತ್ರಿ ಕಳೆಯಬೇಕಾಗಿತ್ತೆಂದು ವರದಿ ಮಾಡಲ್ಪಟ್ಟಿದೆ. ಬೆಳಗಿನ ಜಾವದಲ್ಲಿ, ಬೆಳಗಿನ ಜಾವದಲ್ಲಿ ಬಹಳ ಮೊದಲು ಟೇಲರ ಅವರು ಎಚ್ಚತ್ತುಕೊಂಡು ತನ್ನ ರೂಮಿನಲ್ಲಿ ಇದ್ದ ಜೊತೆಯವರು ಮೇಣಬತ್ತಿಯ ಬೆಳಕಿನಲ್ಲಿ ತಮ್ಮ ತೆರೆದ ಬೈಬಲಿನೊಂದಿಗೆ ಕುಳಿತುಕೊಂಡದ್ದನ್ನು ಕಂಡು, ಅಲ್ಲಿ ಯಾವಾಗಿನಿಂದ ಕುಳಿತುಕೊಂಡಿದ್ದೀರೆಂದು ಪ್ರಶ್ನಿಸಿದರು. ಟೇಲರ ಅವರ ಪ್ರಶ್ನೆಗೆ, ಸ್ಟಡ್ ಅವರು ಹೀಗೆ ಹೇಳಿದರು :

''ಮಧ್ಯರಾತ್ರಿಯಲ್ಲಿ, ''ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯಿರಿ'' (ಯೋಹಾನ 14:15) ಎಂಬ ಕರ್ತನಾದ ಯೇಸುವಿನ ಮಾತುಗಳೊಂದಿಗೆ ನಾನು ಎಚ್ಚತ್ತು ಕೊಂಡೆನು, ಪೂರ್ಣ ವಿಧೇಯತೆಯಿಂದ ಕರ್ತನಾದ ಯೇಸುವಿಗೆ ನನ್ನ ಪ್ರೀತಿಯನ್ನು ಸಿದ್ಧಪಡಿಸಿ ತೋರಿಸಿರುವೆನೋ? ಎಂದು ನಾನು ನನ್ನನ್ನು ಕೇಳಿ ಕೊಂಡೆನು. ನನ್ನ ಬೈಬಲನ್ನು ತೆಗೆದುಕೊಂಡು ಸುವಾರ್ತೆಗಳನ್ನು ಓದುತ್ತ ಉಳಿದ ರಾತ್ರಿಯನ್ನು ಕಳೆದೆನು. ಅಲ್ಲಿ ಕರ್ತನು ತನ್ನ ಶಿಷ್ಯರಿಗೆ ಕೊಟ್ಟ ಪ್ರತಿಯೊಂದು ಆಜ್ಞೆಯನ್ನು ಹುಡುಕಿದೆನು, ಆತನ ಆಜ್ಞೆಗಳಿಗೆ ನಾನು ವಿಧೇಯನಾಗಿದ್ದಲ್ಲಿ, ನನ್ನ ಬೈಬಲಿನಲ್ಲಿ ಚಿಕ್ಕ ಗುರುತು ಹಾಕಿ ಹಲ್ಲೆಲೂಯಾ ಎಂಬ ಶಬ್ದವನ್ನು ಬರೆದಿರುವೆನು. ನಾನು ಅವಿದೇಯನಾಗಿರುವಲ್ಲಿ, ನನ್ನ ಪಾಪವನ್ನು ಅರಿಕೆ ಮಾಡಿ, ಆತನ ಕೃಪೆಯಿಂದ ಪುನಃ ನನ್ನನ್ನು ಆತನಿಗೆ ವಿಧೇಯನಾಗಲು ಸಮರ್ಪಿಸಿಕೊಂಡೆನು ಮತ್ತು ಹೀಗೆ ನಾನು ಆತನನ್ನು ನಿಜವಾಗಿಯೂ ಪ್ರೀತಿಸುವೆನೆಂದು ಸಿದ್ಧಪಡಿಸಿ ತೋರಿಸಿರುವೆನು.''

ಪ್ರಿಯ ವಾಚಕನೇ, ಒಮ್ಮೆ ನೀನು ನಿಜವಾಗಿಯೂ ''ಕರ್ತನ ವಾಕ್ಯದ ಬೆಳಕಿನಲ್ಲಿ ಆತನೊಂದಿಗೆ ನಡೆದರೆ'' ನೀನೂ ಸಹ, ''ನಂಬುವುದು ಮತ್ತು ವಿಧೇಯನಾಗುವುದು'' ಇದನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ ಎಂದು ಸಾಕ್ಷಿಕೊಟ್ಟ ಸಂಗೀತ ಬರಹಗಾರನೊಂದಿಗೆ ಕೂಡಿಕೊಳ್ಳುವಿರಿ.

# ವಿಶ್ವಾಸದ ಪ್ರತ್ಯುತ್ತರ

ಬೈಬಲು ದೇವರ ವಿಶ್ವಾಸದ ಕಟ್ಟುವುದಾಗಿದೆ ! ನಾವು ನಂಬಿಕೆಯಲ್ಲಿ ಕಟ್ಟಲ್ಪಟ್ಟಂತೆ - ಅದು ಕರ್ತನಾದ ಯೇಸುವಿನ ಮೇಲೆ ಅವಲಂಭನೆ ಮತ್ತು ವಿಧೇಯತೆ ಯಾಗಿರುವುದು - ''ನಾನು ಮಾಡಲಾರೆ'' ''ಆತನು ಮಾಡಬಲ್ಲನು'' ಎಂದು ಒಪ್ಪಿಕೊಳ್ಳುತ್ತೇವೆ.

ಆದುದರಿಂದ ಕರ್ತನೊಂದಿಗಿನ ನಿಮ್ಮ ಒಂದಾಗಿ ಬರುವ ಸಮಯದಲ್ಲಿ, ಕೇಳುವದಕ್ಕೆ

ಒಳ್ಳೆಯದಾಗಿದೆ : ಈ ವಚನದಲ್ಲಿ

ಇದು ಇದೆಯೇ -

ಕೇಳಿಕೊಳ್ಳಲು ಒಂದು ವಾಗ್ದಾನ ?

ಗಮನಿಸಲು ಒಂದು ಎಚ್ಚರಿಕೆ ?

ಬೈಬಲು ವಾಗ್ದಾನಗಳಿಂದ ತುಂಬಿಕೊಂಡಿದೆ. ದೇವರ ವಾಕ್ಯದ ಮೇಲೆ ನಾವು ಧ್ಯಾನ ಮಾಡುವಾಗ, ದೇವರ ವಾಗ್ದಾನಗಳನ್ನು ಕೇಳುವುದು ಅಗತ್ಯವಾಗಿದೆ. ಅದೇ ಸಮಯದಲ್ಲಿ, ಹೀಗಿದ್ದರೂ, ಆತನ ಎಚ್ಚರಿಕೆಗಳನ್ನು ನಾವು ಗಮನಿಸತಕ್ಕದ್ದು. ದೇವರ ವಾಗ್ದನಗಳನ್ನು ಕೇಳುವದಕ್ಕೆ, ದೇವರ ಎಚ್ಚರಿಕೆಗಳನ್ನು ಅಲಕ್ಷಿಸುವುದು, ನಂಬಿಕೆಯಿಂದ ಜೀವಿಸುವುದು ಆಗಿರಲಿಲ್ಲ ; ಅದರ ಬದಲು ಅದು ಮೋಸತನದಿಂದ ''ಸಾಯುವುದು'' ಆಗಿರುತ್ತದೆ.

ದಿನ ದಿನವೂ ನೀವು ಬೈಬಲನ್ನು ಓದುವಂತೆ, ದೇವರ ಪ್ರತಿಯೊಂದು ವಾಗ್ದಾನವನ್ನು ಗಮನಿಸಿರಿ ಮತ್ತು ಪ್ರತಿಯೊಂದನ್ನು ನಿಮ್ಮದರಂತೆ ಕೇಳಿ ಕೊಳ್ಳಿರಿ. ದೇವರ ವಾಗ್ದಾನಗಳನ್ನು ನಿಮ್ಮದಾಗಿ ಮಾಡಿಕೊಳ್ಳುವಾಗ, ಕರ್ತನಾದ ಯೇಸು ಕ್ರಿಸ್ತನ ಶಕ್ತರನ್ನಾಗಿ ಮಾಡುವ ಸಾಕಷ್ಟಾಗಿರುವಿಕೆಯು, ನಿಮ್ಮ ಸ್ವಂತ ವೈಯಕ್ತಿಕ ಅನುಭವದ ವಾಸ್ತವಿಕತೆಯಲ್ಲಿ ವಿಧೇಯತೆಯ ಪ್ರತಿಯೊಂದು ಹೊಸ ಹೆಜ್ಜೆಯ ಕಡೆಗೆ ತಿರುಗಿಸಲು ನಿಮಗೆ ಅಗತ್ಯವಾಗಿರುವ ಎಲ್ಲಾ ಬಲವಾಗಿರುವುದು.

ದೇವರೊಂದಿಗೆ ನಿಮ್ಮ ನಡೆಯಲ್ಲಿ ''ಸಜೀವ'' ಸತ್ಯವಾಗಲಿಕ್ಕೆ ಆತನ

ವಾಗ್ದಾನಗಳು ನಿಮಗೆ ಕೊಡಲ್ಪಟ್ಟಿರುವವು, ನೀವು ಈ ವಾಗ್ದನಗಳನ್ನು ಹಿಡಿದು ಕೊಂಡಿರುವಂತೆ, ನಿಮ್ಮ ನಂಬಿಕೆಯು ಸತತವಾಗಿ ಬಲಪಡಿಸಲ್ಪಡುವುದು, ಯಾಕಂದರೆ ನಮಗೆ ಹೀಗೆ ಹೇಳಲ್ಪಟ್ಟಿದೆ : ''ಆದ ಕಾರಣ ನಂಬಿಕೆಯು ಕೇಳುವದರಿಂದ ಬರುತ್ತದೆ, ಮತ್ತು ಕೇಳುವಿಕೆಯು ದೇವರ ವಾಕ್ಯದಿಂದ ಬರುತ್ತದೆ.'' (ರೋಮಾಪುರ 10:17).

ನಂಬಿಕೆಯ ವಿರುದ್ಧವಾದದ್ದು ಯಾವುದು ಎಂಬುದರ ಬಗ್ಗೆ ಎಂದಾದರೂ ಆಶ್ಚರ್ಯ ಪಟ್ಟಿರುವಿರೋ ? ಉತ್ತರವು ತೋರುವಂತೆ ಅಷ್ಟು ಸುಲಭವಾಗಿರುವದಿಲ್ಲ. ಅಪನಂಬಿಕೆಯು ನಂಬಿಕೆಯ ವಿರುದ್ಧವಾದದ್ದಾಗಿದೆ ಎಂದು ಹೇಳುವುದು ನಿಜವಾಗಿಯೂ ಈ ಪ್ರಶ್ನೆಯ ಪೂರ್ಣ ಅರ್ಥಕೊಡುವಿಕೆಯನ್ನು ತಪ್ಪಿಸುತ್ತದೆ. ನಿಮಗೆ ಸಾಧ್ಯವಾದರೆ ಜೀವ ಕೊಡುವ ಮೂರು ''ಚಿಕ್ಕಪ್ಪನ ಮಕ್ಕಳನ್ನ'' ಕಲ್ಪಿಸಿರಿ. ಮೊದಲನೆಯದು ನಂಬಿಕೆ, ಎರಡನೆಯದು ಅವಲಂಭನೆ, ಮೂರನೆಯದು ದೀನತೆ. ಈಗ ಮೂರು ಮರಣಾಂತಿಕ ''ಚಿಕ್ಕಪ್ಪನ ಮಕಕ್ಳನ್ನು'' ಯೋಚಿಸಿರಿ. ಮೊದಲನೆಯದು ಅಪನಂಬಿಕೆ, ಎರಡನೆಯದು ಸ್ವಾತಂತ್ರ್ಯ ಮತ್ತು ಮೂರನೆಯದು ಗರ್ವ.

**ಒಬ್ಬ ನಂಬಿಕೆಯ ಮನುಷ್ಯನು** ತನ್ನಷ್ಟಕ್ಕೆ ತಾನೇ ಎಂದು ಮಾಡದಿರುವದಕ್ಕೆ ಕರ್ತನಾದ ಯೇಸುವಿನ ಮೇಲೆ ಅವಲಂಭಿಸುವವನು. ಬೈಬಲನ್ನು ಓದುವಾಗ, ನಿಜವಾದ ನಂಬಿಕೆಯ ಮನುಷ್ಯನು ಗಮನಿಸುವನು, ಮತ್ತು ಆಗ ದೇವರ ಮುರಿಯಲಾಗದ ವಾಗ್ದಾನಗಳನ್ನು ವೈಯಕ್ತಿಕವಾಗಿ ತನ್ನದನ್ನಾಗಿ ಮಾಡಿಕೊಳ್ಳುವನು.

ಕರ್ತನಾದ ಯೇಸುವು ತನ್ನ ಶಿಷ್ಯರಿಗೆ ''ನೀನು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ'' ಎಂದು ಹೇಳಿದನು. ಹೌದು, ಒಬ್ಬ ಮನುಷ್ಯನು ಕರ್ತನು ಸಾಮರ್ಥ್ಯ ಕೊಡುವದರ ಮುಖಾಂತರ ಯಾವುದೇ ಆತ್ಮಿಕ ಬೆಲೆಯುಳ್ಳದ್ದನ್ನು ಮಾಡಲು ಕರ್ತನನ್ನು ನಂಬುವ ಮೊದಲು, ಅವನು ತನ್ನ ಸ್ವಂತ ಬಲದಿಂದ ನಿತ್ಯತ್ವಕ್ಕಾಗಿ ಎಣಿಸಲ್ಪಡುವ ಯಾವುದನ್ನು ಮಾಡಲಾರನು ಎಂಬುದರ ಬಗ್ಗೆ ದೃಢಪಡಿಸಿಕೊಳ್ಳ ತಕ್ಕದ್ದು. ಈ ರೀತಿಯ ಅವಲಂಭಿತ ನಂಬಿಕೆಯು ದೀನ ಹೃದಯದಲ್ಲಿ ಮಾತ್ರವೇ ಹುಟ್ಟುವುದು. ಅಂಥ ವ್ಯಕ್ತಿಯು ಆಗ ಅಪೊಸ್ತಲ

ಪೌಲನೊಂದಿಗೆ, ''ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ'' (ಫಿಲಿಪ್ಪಿ 4:13) ಎಂದು ಹೇಳಲು ಶಕ್ತನಾಗುವನು.

**ಒಬ ಅಪನಂಬಿಕೆಯ ಮನುಷ್ಯನು** ಇನ್ನೊಂದು ಕಡೆಯಲ್ಲಿ, ತನಗೆ ದೇವರ ಸಹಾಯದ ಅಗತ್ಯತೆಯು ನಿಜವಾಗಿಯೂ ಇಲ್ಲದಷ್ಟು ಸ್ವತಂತ್ರವಾಗಿರುವಷ್ಟು ತನ್ನನ್ನು ಯೋಚಿಸಿಕೊಳ್ಳುತ್ತಾನೆ, ಇಂದು ಮಿಲಿಯಗಟ್ಟಲೆ ಜನರು ತಮ್ಮ ರಕ್ಷಣೆಗಾಗಿ ಕರ್ತನಾದ ಯೇಸುವಿನ ಮೇಲೆ ಅವಲಂಭಿಸದೇ ಇರುವುದು ದುಃಖಕರವಾದ ಸಂಗತಿಯಾಗಿದೆ. ಅನೇಕ ಕ್ರೈಸ್ತರು ತಮಗೆ ಕ್ರೈಸ್ತ ಜೀವಿತ ಜೀವಿಸಲು ಶಕ್ತರನ್ನಾಗಿ ಮಾಡುವಂತೆ ಆಂತರ್ಯದಲ್ಲಿ ವಾಸಿಸುವ ಕ್ರಿಸ್ತನ ಮೇಲೆ ಅವಲಂಭಿಸದೇ ಇರುವುದು ಇನ್ನೂ ದುಃಖಕರವಾದ ಸಂಗತಿಯಾಗಿದೆ. ಯಾವುದೇ ಮಾನವ ಸ್ವಾತಂತ್ರ್ಯದ ರೂಪವು ಗರ್ವದ, ಸಮರ್ಪಿಸಿ ಕೊಳ್ಳದ ಹೃದಯದಲ್ಲಿ ಹುಟ್ಟುತ್ತದೆ.

ಆದುದರಿಂದ ನಂಬಿಕೆಯ ವಿರುದ್ಧವಾದದ್ದು ಗರ್ವ ಎಂದು ನಾವು ಹೇಳ ಬಹುದು, ಹಾಗೆಯೇ ಅವಿಶ್ವಾಸದ ವಿರುದ್ಧವಾದದ್ದು ದೀನತೆಯಾಗಿದೆ. ಪ್ರಸಿದ್ಧವಾದ ಯೋಚಿಸವಿಕೆಯಿದ್ದರೂ, ಸ್ವ-ಭರವಸೆ ಮತ್ತು ಆತ್ಮ ವಿಶ್ವಾಸವು ವಿಶ್ವಾಸದ ಒಳ್ಳೆಯತನದ ಹೃದಯಕ್ಕೆ ವಿರುದ್ಧವಾಗಿ ಚುಚ್ಚುವುದು.

ಅಹಂಭಾವವನ್ನು ಉಬ್ಬಿಸಲು ರೂಪಿಸಲ್ಪಟ್ಟಿರುವ ಪ್ರತಿಯೊಂದು ಜಾಗತಿಕ ಪ್ರಭಾವವು ಅದೇ ಸಮಯದಲ್ಲಿ ಉತ್ಥಾನವಾದ ಕ್ರಿಸ್ತನ ಸ್ವರ್ಗೀಯ ಬಲದಲ್ಲಿ ಒಬ್ಬನ ಭರವಸೆಯ ವಿಶ್ವಾಸವನ್ನು ಬರಿದಾದದ್ದನ್ನಾಗಿ ಮಾಡುವುದು. ದೇವರ ಮಿತಿಯಿಲ್ಲದ ಮೂಲಗಳು ಆತನು ಮಾಡಿದ ಪ್ರತಿಯೊಂದು ವಾಗ್ದಾನದ ಹಿಂದೆ ಇರುವವು, ಮತ್ತು ಆತನು ಜೀವನದ ಮುಖಾಂತರದ ಪ್ರಯಾಣಕ್ಕೆ ನಮ್ಮ ಸ್ವಂತ ವಿಧಾನಗಳನ್ನು ಬಿಟ್ಟಿರುವದಿಲ್ಲ.

ಜಿ.ಕೆ. ಚೆಸ್ಟರಟನ್ (1874-1936) ಆತ್ಮ ವಿಶ್ವಾಸದ ಗರ್ವದ ವಿಪರ್ಯಾಸದ ಮೇಲೆ ತನ್ನ ಅಭಿಪ್ರಾಯ ಹೀಗೆ ಬರೆದಿದ್ದಾನೆ:

> ''ಇಂದು ನಾವು ಕಷ್ಟಪಡುವುದು ತಪ್ಪಾದ ಸ್ಥಳದಲ್ಲಿ ಗಾಂಭೀರ್ಯತೆಯಾಗಿದೆ. ದೃಢ ನಿಶ್ಚಿತತೆಯ ವಸ್ತುವಿನ

> ಮೇಲೆ, ಅದು ಅವಶ್ಯವಿಲ್ಲದಿದ್ದರೂ ಗರ್ವವೂ ಅದರ ಮೇಲೆ ನೆಲೆಗೊಂಡಿರುತ್ತದೆ. ಮನುಷ್ಯನು ತನ್ನ ಬಗ್ಗೆ ಸಂಶಯವುಳ್ಳವನಾಗಿರುವುದು ಸಹಜವಾಗಿದೆ ; ಇದು ಸ್ಪಷ್ಟವಾಗಿ ವಿರುದ್ಧ ವಾಗಿರಿಸಲ್ಪಟ್ಟಿದೆ.''

ಇತರ ಜನರ ಮಾನವ ಬುದ್ಧಿವಾದದ ಮೇಲೆ ಅವಲಂಭಿಸುವ ಯಾವುದೇ ಕ್ರೈಸ್ತನು, ಇಲ್ಲವೇ ಕರ್ತನಲ್ಲಿಡುವದರ ಬದಲು ತನ್ನಲ್ಲಿಯೇ ಭರವಸೆಯಿಟ್ಟು ಕೊಳ್ಳುವವನು ದೇವರ ಆಶೀರ್ವಾದ ಪೂರ್ಣತೆಯೊಳಗೆ ಎಂದಿಗೂ ಪ್ರವೇಶಿಸಲಾರನು. ನೀರು ಕೆಳಮಟ್ಟಕ್ಕೆ ಯಾವಾಗಲೂ ಹರಿಯುವಂತೆ ಜೀವಕರ ನೀರಿನಂತೆ ಯೇಸುವು ವಿವರಿಸಿದ ಪವಿತ್ರಾತ್ಮನೂ ಸಹ, ಮೇಲಕ್ಕೆತ್ತಲ್ಪಟ್ಟ..... ಗರ್ವಿಯಾದ ಮನುಷ್ಯನ ಕಡೆಗೆ ಹರಿಯುವದಿಲ್ಲ. (ಹಬಕ್ಕೂಕ 2:4-5).

ಹೀಗಿದ್ದರೂ, ಕ್ರಿಸ್ತನ ಬಲಪಡಿಸುವ ಶಕ್ತಿಯ ತನ್ನ ಅಗತ್ಯತೆಯನ್ನು ದೀನತೆಯಿಂದ ಗುರುತಿಸುವ ಯಾವುದೇ ವ್ಯಕ್ತಿಯ ಹೃದಯದಿಂದ ವಿಪುಲವಾಗಿ ಪವಿತ್ರಾತ್ಮನು ಸುರಿಸಲ್ಪಡುವನು.

> **''ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು - ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದೂ ಕೂಗಿ ಹೇಳಿದನು. (ಯೋಹಾನ 7:37-38).**

ಪ್ರತಿದಿನ ನೀನು ಯೇಸುವಿನ ಪಾದದ ಬಳಿಯಲ್ಲಿ ಅಡ್ಡ ಬಿದ್ದು ಆ ಜೀವಕರವಾದ ನೀರನ್ನು ಕುಡಿಯಬಹುದು. ನೀನು ಹಾಗೆ ಮಾಡುವಾಗ, ನಿನ್ನ ಜೀವಿತವು ನಿನ್ನ ವರಗಳಿಂದಾಗಲೀ ಇಲ್ಲವೇ ತರಬೇತಿಯಿಂದಾಗಲೀ ಇನ್ನು ಮುಂದೆ ವಿವರಿಸಲ್ಪಡುವ ದಿಲ್ಲ, ಅದರ ಬದಲು ನಿನ್ನ ಅತೀ ಆಂತರಿಕ

ಜೀವದಿಂದ ದೇವರ ಪವಿತ್ರಾತ್ಮನ ಸಮೃದ್ಧ ಉಕ್ಕಿಬರುವಿಕೆಯಿಂದ ನಿನ್ನ ಜೀವಿತವು ಗುಣಲಕ್ಷಣ ಹೊಂದಿಕೊಳ್ಳುವುದು.

ಪ್ರತಿಯೊಂದು ಹೊಸದಾಗಿ ಹುಟ್ಟಿದ ದೇವರ ಮಗುವಿನೊಂದಿಗೆ ದೈಹಿಕ ರೂಪದೊಂದಿಗೆ ಪವಿತ್ರಾತ್ಮನ ವ್ಯಕ್ತಿತ್ವದಲ್ಲಿ ನಮ್ಮ ಉತ್ಥಾನವಾದ ಕರ್ತನು ತಗ್ಗಿಸಿಕೊಂಡನು ಎಂಬುದನ್ನು ಜ್ಞಾಪಿಸಿಕೊಳ್ಳಿರಿ. ಇಂದು ವಿಶ್ವಾಸಿಯು ದೇವರಿಲ್ಲದ ಜಗತ್ತಿನಲ್ಲಿ ಯೇಸು ಕ್ರಿಸ್ತನ ಪರಿಣಾಮಕಾರಿಯಾದ ಪ್ರತಿನಿಧಿಯಾಗಿದ್ದಾನೆ. ಲಭ್ಯವಿರುವ ಪ್ರತಿಯೊಬ್ಬ ಕ್ರೈಸ್ತನ ಮುಖಾಂತರ, ಪವಿತ್ರಾತ್ಮನು ಇತರ ಜನರ ಜೀವಿತಗಳಿಗೆ ರಕ್ಷಿಸುವ ತನ್ನ ಕೆಲಸವನ್ನು ಮುಂದರಿಸುತ್ತಿದ್ದಾನೆ.

> ''ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು - ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ.'' (2 ಕೊರಿಂಥ 6:16)

ಹೌದು, ನಾವು ದೇವರ ಮಂದಿರವಾಗಿದ್ದೇವೆ. ನಮ್ಮ ಮೂಲಕ ತನ್ನ ಪವಿತ್ರತೆಯನ್ನು ಮಹಿಮೆಯನ್ನು ಪ್ರದರ್ಶಿಸಲು ಆತನು ಅಪೇಕ್ಷಿಸುತ್ತಾನೆ!

ಈ ಆಶ್ಚರ್ಯಕರವಾದ ಸಂಗತಿಯನ್ನು ಗುರುತಿಸಿ, ಪೌಲನು ಈ ರೀತಿಯ ಉಪದೇಶ ಮಾಡಿದ್ದಾನೆ:

''ಪ್ರಿಯರೇ, **ಈ ವಾಗ್ದಾನಗಳು ನಮಗಿರುವದರಿಂದ,** ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿ ಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ''. (2 ಕೊರಿಂಥ 7:1).

# ಆರಾಧನೆಯಲ್ಲಿ ವಾಸ್ತವಿಕತೆ

ಒಂದು ತಿರುಗಿಸುವ ಕವಲು ಪಿಯಾನೋ ಸ್ವರ ಸರಿಪಡಿಸಲು ಸಾರ್ವತ್ರಿಕ ಸಾಧನವಾಗಿದೆ. ಸರಿಪಡಿಸಿದ ಟ್ಯೂನಿಂಗ ಫೋರ್ಕಿನಿಂದ ಸ್ವರಗೆಟ್ಟ ಪಿಯಾನೋವನ್ನು ಪರಿಪೂರ್ಣ ಸಾಮರಸ್ಯಕ್ಕೆ ತರಬಹುದು.

ಹಾಗೆಯೇ, ಬೈಬಲು ಮನುಷ್ಯನ ದುಃಖಭರಿತ ಹೃದಯಕ್ಕೆ ಪರಲೋಕದ ಸಂಗೀತವನ್ನು ಸಾಮರಸ್ಯಕ್ಕೆ ತರುವ ದೇವರ ಸಾಧನವಾಗಿದೆ. ದೇವರ ವಾಕ್ಯವು ದೇವರ ಮಹಿಮೆಯಲ್ಲಿ, ಪವಿತ್ರತೆಯಲ್ಲಿ ಮತ್ತು ಪ್ರೀತಿಯಲ್ಲಿ ಹೊಸ ಆಂತರಿಕ ನೋಟಗಳನ್ನು ತರುವಾಗ, ನಿಮ್ಮ ಆರಾಧನೆಯಲ್ಲಿ ನೀವು ಸತತವಾಗಿ ನವೀಕೃತಗೊಳ್ಳುವಿರಿ ಮತ್ತು ಸ್ತೋತ್ರ ಮಾಡುವಿರಿ. ''ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ....'' (ಎಫೆಸ 5:19).

ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಕರ್ತನೊಂದಿಗಿನ ನಿಮ್ಮ ಒಂದಾಗಿ ಬರುವ ಸಮಯದಲ್ಲಿ ಹೀಗೆ ಕೇಳುವುದು ಒಳ್ಳೆಯದಾಗಿದೆ:

ಈ ವಚನದಲ್ಲಿ -

ತಂದೆಯಾದ ದೇವರ ಬಗ್ಗೆ ಒಂದು ಹೊಸ ವಿಚಾರ ಇರುವುದೋ?

ಕುಮಾರನಾದ ದೇವರ ಬಗ್ಗೆ ಒಂದು ಹೊಸ ವಿಚಾರ ಇರುವುದೋ?

ಪವಿತ್ರಾತ್ಮನಾದ ದೇವರ ಬಗ್ಗೆ ಒಂದು ಹೊಸ ವಿಚಾರ ಇರುವುದೋ?

ಇಂದು ಕರ್ತನನ್ನು ನಿಜವಾಗಿ ಆರಾಧಿಸಲು ದೇವರ ಜನರ ಮಧ್ಯದಲ್ಲಿ ಹೊಸ ಅಪೇಕ್ಷೆಯು ಇರುವಂತೆ ತೋರುವುದು ಪ್ರೋತ್ಸಾಹದಾಯಕವಾದದ್ದಾಗಿರುತ್ತದೆ, ''ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು'' (ಯೋಹಾನ 4:24) ಎಂದು ಹೇಳಿದಾಗ ಕರ್ತನಾದ ಯೇಸು ಕ್ರಿಸ್ತನು ಅಂಥ ಆರಾಧನೆಯನ್ನು ಪ್ರೋತ್ಸಾಹಿಸಿದನು. ನಿಜವಾದ ಆರಾಧನೆಯು ಪವಿತ್ರಾತ್ಮನು

ಅಭಿಷೇಕಿಸುವದರಲ್ಲಿ ಮತ್ತು ದೇವರ ವಾಕ್ಯದ ಸತ್ಯಕ್ಕೆ ಅನುಗುಣವಾಗಿ ಇರತಕ್ಕದೆಂದು ಬೇರೆ ಮಾತಿನಲ್ಲಿ ಹೇಳಬಹುದು. ಇಂಥ ರೀತಿಯ ಆರಾಧನೆಯು ಮಾತ್ರವೇ ನಮ್ಮ ತಂದೆಯ ಹೃದಯಕ್ಕೆ ಸಂತೋಷವನ್ನು ತರುವುದು.

ದೇವರ ವ್ಯಕ್ತಿತ್ವದ ಅದ್ಭುತಗಳಿಗೆ - ಆತನ ಸೌಂದರ್ಯದ ಯಾವುದೇ ಸಂಗತಿಯ ಕಡೆಗೆ ಪವಿತ್ರಾತ್ಮನು ನಮ್ಮ ಗಮನ ಸೆಳೆಯುವಾಗ ನಮ್ಮ ಹೃದಯಗಳು ಕರ್ತನಿಗೆ ಆರಾಧನೆಯ ನೂತನ ಸಂಗೀತದಲ್ಲಿ ಮತ್ತು ಸ್ತೋತ್ರದಲ್ಲಿ ಎಳೆಯಲ್ಪಡುವವು. ನಾವು ಪ್ರಾರ್ಥನೆಯಲ್ಲಿ ದೇವರ ಬಳಿಗೆ ಬರುವಾಗ ಮನಸ್ಸಿನ ಸರಿಯಾದ ಮನೋಭಾವನೆಯನ್ನು ಬೆಳಿಸಿಕೊಳ್ಳಲು ಮೊಣಕಾಲೂರುವ ಆಸನವು ನಿಶ್ಚಯವಾಗಿಯೂ ಸಹಾಯ ಮಾಡುವುದು. ಆತನಿಗೆ ನಿಮ್ಮ ಪ್ರೀತಿಯನ್ನು ಸಮರ್ಪಣೆಯನ್ನೂ ವ್ಯಕ್ತಪಡಿಸುವದಕ್ಕಾಗಿ ಮೊಣಕಾಲೂರುವಿಕೆಯು ನಿನ್ನ ವಿಶೇಷವಾದ ಏಕಾಂತದ ಸಮಯಗಳಲ್ಲಿ ಸಾಕಷ್ಟಾಗಿರುವದಿಲ್ಲ ಎಂಬುದನ್ನು ನನ್ನೊಂದಿಗೆ ನೀವೂ ಕಂಡುಕೊಳ್ಳಬಹುದು.

ಪತ್ಮೋಸ ದ್ವೀಪದಲ್ಲಿ ಮಹಿಮೆಯುಳ್ಳ ಕ್ರಿಸ್ತನ ಸನ್ನಿಧಿಯಲ್ಲಿ ಯೋಹಾನನು ಬಂದಾಗ ಅವನು ಕೇವಲ ಮೊಣಕಾಲೂರಲಿಲ್ಲ ಆದರೆ ''ನಾನು ಆತನನ್ನು ಕಂಡಾಗ ಸತ್ತವನ ಹಾಗೆ ಆತನ ಪಾದಗಳ ಮುಂದೆ ಬಿದ್ದೆನು'' (ಪ್ರಕಟನೆ 1:17) ಎಂದು ಸಾಕ್ಷಿ ಕೊಟ್ಟದ್ದನ್ನು ಗಮನಿಸುವುದು ಆಸಕ್ತಿಯುಳ್ಳದ್ದಾಗಿದೆ.

ಹೀಗಿದ್ದರೂ, ವಿಶ್ವಾಸಿಗೆ ಯಾವುದಾದರೂ ಅಮೂಲ್ಯವಾದದ್ದಾಗಿರುವಾಗ, ಗಂಡಾಂತರ ಕಾರಿಯಾದ ಕಪಟವಾದದ್ದು ಸಮೀಪದಲ್ಲಿರುವುದನ್ನು ಅರ್ಥ ಮಾಡಿ ಕೊಳ್ಳುವುದು ಮಹತ್ವದ್ದಾಗಿದೆ. ಕರ್ತನಾದ ಯೇಸುಕ್ರಿಸ್ತನು ನಿಜವಾದ ಆರಾಧನೆಗಾಗಿ ಸಲಹೆಯನ್ನು ಕೊಟ್ಟಿದ್ದಲ್ಲದೆ, ಕೆಲವರು ಆರಾಧನೆಯೆಂದು ಕರೆದರೂ ಅದು ನಿಜವಾದ ಸಂಗತಿಗೆ ಕಪಟವಾದದ್ದಾಗಿರುವುದರ ಬಗ್ಗೆ ಆತನು ಎಚ್ಚರಿಕೆಯನ್ನು ಕೊಟ್ಟನು. ''ಆತ್ಮದಲ್ಲಿಯೂ ಸತ್ಯದಲ್ಲಿಯೂ'' ಆರಾಧಿಸಬೇಕೆಂದು ಆತನು ಸಮಾರ್ಯ ಸ್ತ್ರೀಗೆ ಪ್ರೋತ್ಸಾಹ ಕೊಟ್ಟಾಗ ಕರ್ತನಾದ ಯೇಸುವು, ''ನೀವು ಅರಿಯದೆ ಇರುವಂಥದನ್ನು ಆರಾಧಿಸುವವರು'' ಎಂದು ನೇರವಾಗಿ ಗಮನಿಸಿದನು. (ಯೋಹಾನ 4:22).

ಆರಾಧನೆಯು ಆವೇಶಕ್ಕಿಂತ ಹೆಚ್ಚಿನದಾಗಿದೆ. ಆದರ ಕೇಂದ್ರೀಕರಣವು ನಮ್ಮ ಕರ್ತನಾದ ಯೇಸು ಕ್ರಿಸ್ತನ ವ್ಯಕ್ತಿತ್ವವಾಗಿರಬೇಕು. ಆರಾಧನೆಯ ಉದ್ದೇಶವು ಜನರನ್ನು ತಿರುಗಿ ಬರುವಂತೆ ಮಾಡುವದರ ಬದಲು ತಿರುಗುವಂತೆ ಮಾಡುವುದಾಗಿದ್ದರೆ ಆಗ ನಿಜವಾದ ಆರಾಧನೆಗೆ ಬದಲು ಸುಳ್ಳು ಆರಾಧನೆಯು ಇಡಲ್ಪಟ್ಟಿರುತ್ತದೆ. ನಮ್ಮ ದೇವರಿಗೆ ಸ್ತೋತ್ರದೊಂದಿಗೆ ನಾವು ತುಂಬಲ್ಪಡಬೇಕಾದರೆ ಕರ್ತನು ಆತ್ಮಿಕ ಕುತೂಹಲ ಕ್ಕಿಂತ ಹೆಚ್ಚಿನದನ್ನು ಬಯಸುತ್ತಾನೆ.

**ನಿಜವಾದ ಆರಾಧನೆಯು ಸಾರ್ವಭೌಮ, ಸಜೀವ ಕರ್ತನಾದ ಯೇಸು ಕ್ರಿಸ್ತನ ಮೇಲೆ ದೇವರ ವಾಕ್ಯದಲ್ಲಿ ಆತನು ಪ್ರಕಟಿಸಲ್ಪಟ್ಟಂತೆ ಆತನ ಮೇಲೆ ಮನಸ್ಸನ್ನೂ ಹೃದಯವನ್ನೂ ದೀನತೆಯಿಂದ ಕೇಂದ್ರೀಕರಿಸುವುದಾಗಿದೆ. ಇದು ಸಂಭವಿಸು ವಾಗಲೆಲ್ಲಾ, ಸಮರ್ಪಣೆ ಮತ್ತು ಸ್ತೋತ್ರ ಎರಡರಲ್ಲಿ ಆತನ ಮುಂದೆ ಆಂತರ್ಯದಲ್ಲಿ ಬೀಳುವುದಾಗಿದೆ.**

# ಸೈತಾನನಿಗೆ ಎಚ್ಚರಿಕೆಯಿಂದಿರುವುದು

ಹೌದು, ನಿನ್ನ ಒಂದಾಗಿ ಬರುವಿಕೆಯನ್ನು ಆಶೀರ್ವದಿಸುತ್ತಿದ್ದಾನೆ. ಈಗ ನಿನ್ನ ಮನಸ್ಸಾಕ್ಷಿಯು ಶುದ್ಧವಾಗಿದೆ. ಶಿಲುಬೆಯ ಬಳಿಯಲ್ಲಿ ಯೇಸುವು ನಿನಗಾಗಿ ಮಾಡಿದ್ದನ್ನು ಒಪ್ಪಿಕೊಂಡು, ನಿನ್ನ ''ಹಕ್ಕನ್ನು'' ನಿನಗಾಗಿ, ನಿನ್ನ ಗೌರವವನ್ನು, ನಿನ್ನ ಗುರಿಗಳನ್ನು ಮತ್ತು ನಿನ್ನ ಸ್ವಾಸ್ತ್ಯಗಳನ್ನು ನೀನು ತ್ಯಜಿಸಿಬಿಟ್ಟಿರುವಿ. ಈಗ ನೀನು ಕರ್ತನಿಗೆ ಆರಾಧನೆಯ ಮತ್ತು ಸ್ತೋತ್ರದ ನೂತನ ದಿಶೆಯಲ್ಲಿ ಈಗ ತೊಡಗಿರುವಿ, ಆದುದರಿಂದ ನಿನ್ನ ಒಂದಾಗಿ ಕೂಡಿಬರುವಿಕೆಯ ಸಮಯಕ್ಕಾಗಿ ಆಶೀರ್ವಾದದ ದೇವರ ಉದ್ದೇಶಗಳ ತುತ್ತು ತುದಿಯಲ್ಲಿ ನೀನು ಇರುವಿಯೋ ? ಅಷ್ಟೇನು ಚೆನ್ನಾಗಿ ಅಲ್ಲ.

ಅಲ್ಲಿ ಹೊರಗೆ ಬಹಳ ಕೋಪದಲ್ಲಿದ್ದ ಒಬ್ಬ ವೈರಿಯಿದ್ದಾನೆ. ಹೌದು, ಸೈತಾನನು ಕೋಪವುಳ್ಳವನಾಗಿದ್ದಾನೆ ಯಾಕಂದರೆ ದೇವರು ನಿನ್ನ ಪಾಪವನ್ನು ಕ್ಷಮಿಸುವದಕ್ಕಾಗಿ ದಾಟಿ ಹೋಗುವ ಒಂದು ಮಾರ್ಗವನ್ನು ನಿನಗೆ

ಒದಗಿಸಿದ್ದಾನೆ, ಆದರೆ ಸೈತಾನನು ಮುಂದೆ ಹಾಕಲಿಕ್ಕೆ ಯಾವುದೇ ಸಾಧ್ಯತೆಯಿಲ್ಲದೆ ಬೆಂಕಿಕೊಳ್ಳಕ್ಕೆ ನೇಮಿಸಲ್ಪಟ್ಟಿದ್ದಾನೆ. ಆದುದರಿಂದ, ನಿಮ್ಮ ಪರಲೋಕದ ಮಾರ್ಗದಲ್ಲಿ, ನಿನ್ನ ಹೆಜ್ಜೆಗಳನ್ನು ಕೆಡಿಸಲು, ಕರ್ತನ ಕಡೆಗಿರುವ ನಿನ್ನ ಧ್ಯಾನವನ್ನು ಹಾಳು ಮಾಡಲು ಮತ್ತು ನಿನ್ನ ಸಾಕ್ಷಿಯನ್ನು ಹಾಳು ಮಾಡಲು ತನಗೆ ಸಾಧ್ಯವಾದ ಎಲ್ಲವನ್ನು ಮಾಡುವನು.

ಈ ಕಾರಣದಿಂದ, ಕರ್ತನೊಂದಿಗೆ ನಿನ್ನ ಒಂದಾಗಿ ಕೂಡಿ ಬರುವ ಸಮಯದಲ್ಲಿ, ಇದನ್ನು ಕೇಳುವುದು ಚೆನ್ನಾಗಿದೆ.

ಈ ವಚನದಲ್ಲಿ -

ಸೈತಾನನ ವ್ಯಕ್ತಿಯೊಳಗೆ ಒಂದು ಹೊಸ ಅಂತರ್ ದೃಷ್ಟಿ ಇರುವುದೋ?

ಅವನ ಕ್ರೂರವಾದ ಗುರಿಗಳಲ್ಲಿ ಒಂದು ಹೊಸ ಅಂತರ್ ದೃಷ್ಟಿ ಇರುವುದೋ ?

ಅವನ ಸೂಕ್ಷ್ಮವಾದ ಕುಯುಕ್ತಿಗಳಲ್ಲಿ ಒಂದು ಹೊಸ ಅಂತರ್ ದೃಷ್ಟಿ ಇರುವುದೋ.

ಒಬ್ಬ ಚಿಕ್ಕಬಾಲಕನು ಸಂಡೇ ಸ್ಕೂಲಿನಿಂದ ಹಿಂದಿರುಗಿ ಬಂದದ್ದನ್ನು ಕುರಿತು ಒಂದು ಸಲ ನನಗೆ ಹೇಳಲ್ಪಟ್ಟಿತು. ಆ ರಾತ್ರಿ ಅವನ ತಾಯಿಯು ಅವನು ತನ್ನ ಹಾಸಿಗೆಯ ಬದಿಯಲ್ಲಿ ಮೊಣಕಾಲೂರಿದ್ದನ್ನು ಗಮನಿಸಿದಳು. ನೀನು ಏನು ಮಾಡುತ್ತಿರುವಿ ಎಂದು ಕೇಳಿದಳು. ''ಸೈತಾನನು ನಡಗುವಂತೆ ಮಾಡುತ್ತಿರುವೆನು'' ಎಂದು ತಕ್ಷಣವೇ ಉತ್ತರ ಬಂದಿತು. ''ಇಂದು ಸಂಡೇ ಸ್ಕೂಲಿನಲ್ಲಿ ಒಂದು ರಾಗವನ್ನು ಹಾಡಿದೆವು : - ಭಕ್ತಿಯುಳ್ಳ ಮನುಷ್ಯನನ್ನು ಮೊಣಕಾಲೂರಿರುವದನ್ನು ನೋಡುವಾಗ ಸೈತಾನನು ನಡುಗುವನು, ಹೀಗೆ ಸೈತಾನನ್ನು ನಡುಗುವಂತೆ ಮಾಡಲು ನಾನು ಮೊಣಕಾಲೂರಿಸುವೆನು'' ಎಂದು ಹೇಳಿದನು.

ದುರ್ದೈವದಿಂದ, ಸೈತಾನನನ್ನು ನಡುಗಿಸುವಂತೆ ಮಾಡಲು ಮೊಣಕಾಲೂರುವ ದಕ್ಕಿಂತ ಹೆಚ್ಚಿನದನ್ನು ತೆಗೆದುಕೊಳ್ಳುತ್ತದೆ ! ಯೇಸುವಿನ ಹೆಸರಿನಲ್ಲಿ ಸೈತಾನನು ನಡುಗುವಾಗ ಮಾತ್ರವೇ ಅವನಿಗೆ ನಿಮ್ಮ ಜೀವನದಲ್ಲಿ

ವಾಸಸ್ಥಳವು ಅಲ್ಲಗಳೆಯಲ್ಪಟ್ಟಿದೆ ಮತ್ತು ಅದೇ ಶಕ್ತಿಶಾಲಿಯಾದ ಯೇಸುವಿನ ನಾಮದಲ್ಲಿ ಸೈತಾನನ ಮರಣಾಂತಿಕ ಹಿಡಿತಗಳಿಂದ ಅಮೂಲ್ಯ ಜೀವಿತಗಳನ್ನು ಕಿತ್ತುಕೊಳ್ಳಲು ಪವಿತ್ರಾತ್ಮನು ಉಪಯೋಗಿಸಲ್ಪಡುತ್ತಾನೆ.

ಸೈತಾನನನ್ನು ತನ್ನಷ್ಟಕ್ಕೆ ಬಿಟ್ಟರೆ ಅವನು ತಮ್ಮನ್ನು ಸುಮ್ಮನೇ ಬಿಡುವನೆಂದು ಅನೇಕ ಕ್ರೈಸ್ತರು ಭಾವಿಸುತ್ತಾರೆ. ಆದರೆ ಅವರು ದುಃಖಕರವಾಗಿ ಮೋಸ ಹೋಗಿದ್ದಾರೆ. ಉದಾಹರಣೆಯಾಗಿ, ನೀವು ಪ್ರಾರ್ಥನೆಯಲ್ಲಿ ದೇವರ ಬಳಿಗೆ ಬರುವಾಗ, ಕೆಲವು ಸಲ ನೀವು ಹಿಂದಿನ ಸೋಲಿನ ಮೇಲೆ ದುಃಖದೊಂದಿಗೆ, ಅವು ಅರಿಕೆ ಮಾಡಲ್ಪಟ್ಟು ಕ್ಷಮಿಸಲ್ಪಟ್ಟಿದ್ದರೂ ನೀವು ಪ್ರತಿ ಬಿಂಬಿಸುವದನ್ನು ಕಂಡುಕೊಳ್ಳುತ್ತೀರೋ ? ಶಿಲುಬೆಯ ಬಳಿಯಲ್ಲಿ ನೀವು ಯತಾರ್ಥವಾಗಿ ಎದುರಿಸಿದ ನಿಮ್ಮ ಪಾಪದ ಬಗ್ಗೆ ಸೈತಾನನು ನಿಮ್ಮನ್ನು ದೂರಲು ಯಾವಾಗಲೂ ಹುಡುಕುವನು. ನಿಮ್ಮ ಹಿಂದಿನ ಜೀವಿತವನ್ನು ಸೈತಾನನು ಜ್ಞಾಪಕಕ್ಕೆ ತರುವಾಗ, ಸೈತಾನನಿಗೆ ಅವನ ಭವಿಷ್ಯವನ್ನು ಜ್ಞಾಪಿಸಿರಿ. ದೇವರು ತಾನು ಕ್ಷಮಿಸಿದ ಪಾಪಗಳನ್ನು ಜ್ಞಾಪಿಸಿಕೊಳ್ಳುವದನ್ನು ಆಯ್ದುಕೊಳ್ಳದಿದ್ದರೂ, ದೇವರ ಪ್ರೀತಿಯ ಕ್ಷಮಾಪಣೆಯ ನಿಜತ್ವವನ್ನು ನೀವು ಪ್ರಶ್ನಿಸಲು ಪ್ರಾರಂಭಿಸುವಂತೆ. ನಿಮ್ಮ ಪ್ರತಿಯೊಂದರ ಮೇಲೆ ಕೇಂದ್ರಿಕರಿಸಲು ಸೈತಾನನು ಬಯಸುವನು.

**ತೀರ್ಮಾನ ತೆಗೆದುಕೊಳ್ಳದಿರುವುದು, ಭಯ, ಗಲಿಬಿಲಿ ಮತ್ತು ನಿರಾಶೆ ಇವುಗಳು ದೇವರೊಂದಿಗಿನ ನಿಮ್ಮ ನಡೆಯಲ್ಲಿ ಮಧ್ಯೆ ಪ್ರವೇಶಿಸಲಿಕ್ಕೆ ಸೈತಾನನ ಪ್ರಯತ್ನಗಳ ಪ್ರಸಿದ್ಧ ಲಕ್ಷಣಗಳಾಗಿವೆ.**

ಹೌದು, ಸೈತಾನನು ನಿಮ್ಮ ಆನಂದ ಮತ್ತು ಸಮಾಧಾನವನ್ನು ಕದ್ದುಕೊಳ್ಳಲು ಏನನ್ನಾದರೂ ಮಾಡುವನು, ಆದರೆ ನೀವು ಬೈಬಲನ್ನು ಓದುವಂತೆ, ದೇವರು ಯಾವಾಗಲೂ ಸೈತಾನನು ನಿಮ್ಮ ಜೀವನದಲ್ಲಿ ವಾಸಸ್ಥಳವನ್ನು ಹೊಂದಿಕೊಂಡಿರುವನೆಂಬುದನ್ನು ಗ್ರಹಿಸಿಕೊಳ್ಳಲು ನಿಮ್ಮನ್ನು ಶಕ್ತರನ್ನಾಗಿ ಮಾಡುವನು. ಆಗ ದೇವರು ನಿಮಗೆ ಒದಗಿಸಿದ ಆಯುಧಗಳೊಂದಿಗೆ ಸೈತಾನನ ನಾಚಿಕೆಗೆಟ್ಟ ಪ್ರವೇಶಕ್ಕೆ ಪ್ರತಿಯೊಂದು ಬಾಗಿಲನ್ನು ನೀವು ಮುಚ್ಚತಕ್ಕದ್ದು !

ಮಾನವ ಯುದ್ಧದಲ್ಲಿ, ರಕ್ಷಣಾತ್ಮಕ ಮತ್ತು ಆಕ್ರಮಣಶೀಲ ವಿಧಾನಗಳಿರುವವು. ರಕ್ಷಣಾತ್ಮಕ ಪ್ರಯತ್ನಗಳ ಉಪಯೋಗದಿಂದ ಮಾತ್ರವೇ ಯಾವುದೇ ಯುದ್ಧ ಜಯಿಸಲ್ಪಟ್ಟಿರುವದಿಲ್ಲ. ಹಾಗೆಯೇ, ಆತ್ಮಿಕ ಯುದ್ಧದಲ್ಲಿ ರಕ್ಷಣಾತ್ಮಕ ಮತ್ತು ಆಕ್ರಮಣಶೀಲ ವಿಧಾನಗಳು ಅಗತ್ಯವಾಗಿವೆ. ಎರಡಕ್ಕೂ ದೇವರ ವಾಕ್ಯದ ಆಯುಧಗಳು ಬೇಕಾಗುತ್ತವೆ. ಫಲಭರಿತವಾದ ಒಂದೂಗೂಡಿಬರುವಿಕೆಯ ಸಮಯವನ್ನು ಬೆಳಿಸಿ ಕೊಳ್ಳುವದರ ಅನೇಕ ಪ್ರೋತ್ಸಾಹದಾಯಕ ವಿಷಯಗಳಲ್ಲಿ ಒಂದು, ನೇರವಾಗಿ ಯಾಗಲೀ, ಪರೋಕ್ಷವಾಗಿಯಾಗಲೀ ನೀವು ಸೈತಾನನ್ನು ಎದುರಿಸುವಾಗ, ನೀವು ಓದುತ್ತಿರುವ ಪರಿಶುದ್ಧ ಬರಹವನ್ನು ಉಲ್ಲೇಖಿಸಲು ಶಕ್ತರಾಗುವುದು ಮತ್ತು ಬೈಬಲಿನ ಪ್ರಕಾರ ಪ್ರಾರ್ಥಿಸಲು ಶಕ್ತರಾಗುವುದು ಆಗಿದೆ.

ನೀವು ದೇವರ ವಾಕ್ಯಕ್ಕೆ ಅನುಗುಣವಾಗಿ ಪ್ರಾರ್ಥಿಸುವಾಗ, ನೀವು ದೇವರ ಚಿತ್ತಕ್ಕನುಗುಣವಾಗಿ ಪ್ರಾರ್ಥಿಸುವಿರಿ ಎಂಬುದನ್ನು ತಿಳಿದುಕೊಳ್ಳುವುದು ಅದ್ಭುತಕರವಾದದ್ದಾಗಿರುತ್ತದೆ. ಸೈತಾನನ ಮೇಲೆ ಮತ್ತು ನಿಮ್ಮ ಆತ್ಮಿಕ ಜೀವನದ ಹಾದಿ ತಪ್ಪಿಸುವ ಅವನ ಪ್ರಯತ್ನಗಳ ಮೇಲೆ ಜಯವಿರುವುದೆಂಬುದನ್ನು ತಿಳಿಯಬೇಕೆಂಬುದು ದೇವರ ಚಿತ್ತವಾಗಿದೆ.

**ರಕ್ಷಿಸಿಕೊಳ್ಳುವ ಆತ್ಮಿಕ ಯುದ್ಧ :** ಕರ್ತನಾದ ಯೇಸುವು ಸೈತಾನನಿಂದ ಶೋಧಿಸಲ್ಪಟ್ಟಿದ್ದನ್ನು ಜ್ಞಾಪಿಸಿಕೊಳ್ಳುವಿರೋ ? ಧರ್ಮೋಪದೇಶ ಕಾಂಡ ಪುಸ್ತಕದಲ್ಲಿ ಓದುವ "**ಒಂದಾಗಿ ಕೂಡಿಬರುವ ಸಮಯ**" ಯೇಸುವಿಗಿತ್ತು ಎಂದು ನಾನು ಯೋಚಿಸುತ್ತೇನೆ. ನಿಶ್ಚಯವಾಗಿ ಸೈತಾನನಿಗೆ ವಿರುದ್ಧವಾಗಿ ತನ್ನನ್ನು ಉಳಿಸಿಕೊಳ್ಳಲು ಯೇಸುವು ಉಲ್ಲೇಖಿಸಿದ ಪರಿಶುದ್ಧ ಬರಹಗಳು ಆ ಪುಸ್ತಕದಲ್ಲಿರುತ್ತವೆ. ಮೂರು ಸಲ ನಮ್ಮ ಕರ್ತನು ಲಿಖಿತ ದೇವರ ವಾಕ್ಯದಿಂದ ಉಲ್ಲೇಖಿಸಿದನು. **ಅದು ಬರೆಯಲ್ಪಟ್ಟಿದೆ.... ಅದು ಬರೆಯಲ್ಪಟ್ಟಿದೆ..... ಅದು ಬರೆಯಲ್ಪಟ್ಟಿದೆ (ಮತ್ತಾಯ 4:4, 7,10). "ನಿನ್ನ ನಾಮಮಹತ್ತನ್ನು ಹೆಚ್ಚಿಸಿದ್ದಿ"** (ಕೀರ್ತನೆ 138:2) ಎಂದು ಬರೆದಾಗ ಕೀರ್ತನೆಗಾರನ ಅರ್ಥವನ್ನು ತಿಳಿದುಕೊಳ್ಳಲು ಕರ್ತನಾದ ಯೇಸುವಿನ ಈ ಶೋಧನೆಯು ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ. ಹೌದು, ದೇವರ ವಾಕ್ಯದ ಬಲವಾದ ದಾಳಿಯು

ಯೇಸುವಿನಿಂದ ಸೈತಾನನು ಓಡಿಹೋಗುವಂತೆ ಮಾಡಿತು.

ಅದೇ ರೀತಿಯಲ್ಲಿ ನೀನು ಸೈತಾನನನ್ನು ಜಯಿಸಬೇಕಾದರೆ ನೀವೂ ಸಹ, ರಕ್ಷಿಸಿಕೊಳ್ಳುವ ಯುದ್ಧದ ಆಯುಧವನ್ನಾಗಿ ಬೈಬಲನ್ನು ಹೇಗೆ ಉಪಯೋಗಿಸಿಕೊಳ್ಳ ಬಹುದೆಂಬುದನ್ನು ಕಲಿತುಕೊಳ್ಳತಕ್ಕದ್ದು. ಸೈತಾನನು ತನ್ನ ಕೆಟ್ಟ ಸೂಚನೆಗಳನ್ನು ನಿಮ್ಮ ಮನಸ್ಸಿನಲ್ಲಿ ನೆಡುವಾಗ ನೀವು ಯಾವಾಗಲೂ ದೇವರ ವಾಕ್ಯವನ್ನು ಆಶ್ರಯಿಸಿಕೊಳ್ಳ ಬೇಕು. ಒಂದು ದೃಢವಾದ ''ಒಂದಾಗಿ ಕೂಡಿ ಬರುವ ಸಮಯವು'' ಅಂಥ ಒಂದು ಸಮಯಕ್ಕಾಗಿ ನಿಮ್ಮ ಹೃದಯದಲ್ಲಿ ದೇವರ ವಾಕ್ಯವು ಜೀವಿಸುವುದೆಂದು ಭರವಸೆ ಕೊಡುವುದು.

ತಿಳಿಯದ ಕರ್ತೃವಿನ ಈ ಕೆಳಗಿನ "The Devil's Tactics" ಎಂಬ ಪದ್ಯವು ಎಫೆಸ 6ನೇ ಅಧ್ಯಾಯದಲ್ಲಿ ದಾಖಲೆಯಾದಂಥ ಈ ಸತ್ಯದಲ್ಲಿ ಬೇರೂರಿರುವುದು.

## ಸೈತಾನನ ತಂತ್ರಗಳು

ನನಗಿತ್ತು ಇಂದು ಉಗ್ರವಾದ ಯುದ್ಧ
ನನ್ನ ಪ್ರಾರ್ಥನೆಯ ಸ್ಥಾನದೊಳಗೆ,
ಹೋದೆನು ನಾನು ಸಂದರ್ಶಿಸಲು, ಮಾತನಾಡಲು
ದೇವರೊಂದಿಗೆ,
ಆದರೆ ಕಂಡೆನು ಅಲ್ಲಿ ಸೈತಾನನು.
ಅವನು ಉಸುರಿದನು, ''ಪ್ರಾರ್ಥಿಸಲಾರೆ ನಿಜವಾಗಿ ನೀನು ;
ಕಳೆದುಕೊಂಡಿರುವಿ ಬಹುದಿನಗಳ ಹಿಂದೆ.
ಮೊಣಕಾಲೂರಿರುವಾಗ ಶಬ್ದಗಳನ್ನು ಹೇಳಬಲ್ಲೆ,
ಆದರೆ ನೀನು ಪ್ರಾರ್ಥಿಸಲಾರೆ ಎಂಬುದನ್ನು ತಿಳಿದಿರುವಿ'' ಎಂದು.
ಆಗ ಜಗ್ಗಿದೆನು ಕೆಳಗೆ ನನ್ನ ಶಿರಸ್ತ್ರಾಣವನ್ನು,
ನನ್ನ ಕಿವಿಗಳ ಮೇಲೆ ಬರುವಂತೆ
ಅವನ ಸ್ವರವನ್ನು ನಿಲ್ಲಿಸಲು ಅದು ಸಹಾಯ ಮಾಡಿತು,
ನನ್ನ ಭಯಗಳನ್ನು ತೆಗೆದು ಹಾಕಿತು ;

ನನ್ನ ಇತರ ಆಯುಧಗಳನ್ನು ಪರೀಕ್ಷಿಸಿದೆನು ;
ಸಮಾಧಾನದಲ್ಲಿ ನನ್ನ ಪಾದಗಳು ಕೆರಗಳಲ್ಲಿದ್ದವು,
ಸತ್ಯದೊಂದಿಗೆ ನನ್ನ ನಡುವು ಕಟ್ಟಲ್ಪಟ್ಟಿತ್ತು.
ನನ್ನ ಖಡ್ಗ ; ದೇವರ ವಾಕ್ಯ
ನನ್ನ ನೀತಿಯೆಂಬ ಎದೆಕವಚ ಇನ್ನೂ ಇತ್ತು.
ನನ್ನ ಹೃದಯದ ಪ್ರೀತಿಯನ್ನು ಕಾಪಾಡಲು.
ನಂಬಿಕೆಯ ನನ್ನ ಗುರಾಣಿ ಭದ್ರವಾಗಿತ್ತು.
ಸೈತಾನನ ಬೆಂಕಿಯ ಬಾಣಗಳು ಪುಟಿದು ಹಿಂದೆ ಹೋದವು.
ಯೇಸುವಿನ ನಾಮದಲ್ಲಿ ದೇವರನ್ನು ಕರೆದೆನು ;
ಮತ್ತು ಅಮೂಲ್ಯ ರಕ್ತವನ್ನು ಬೇಡಿಕೊಂಡೆನು.
ಸೈತಾನನು ನಾಚಿಕೆಯಿಂದ ನುಸುಳಿಕೊಂಡು ಹೋದನು.
ನಾನು ದೇವರನ್ನು ಸಂಧಿಸಿದೆನು, ಆತನೊಂದಿಗೆ ಮಾತಾಡಿದೆನು.

**ಆಕ್ರಮಣಶೀಲ ಆತ್ಮೀಕ ಯುದ್ಧ :** ಹೀಗಿದ್ದರೂ ಸಂಪೂರ್ಣ ಜಯಗಳಿಗೆ ಕೇವಲ ರಕ್ಷಣಾತ್ಮಕ ಕೌಶಲ್ಯಕ್ಕಿಂತ ಹೆಚ್ಚಿನದು ಅಗತ್ಯವಾಗಿರುತ್ತದೆ. ನೋವು ಕೊಡುವ ಜಗತ್ತು ಇರುತ್ತದೆ. ಅದು ಯೇಸು ಕ್ರಿಸ್ತನು ಪ್ರಾಣಕೊಟ್ಟ ಬಿಲಿಯ ಸಂಖ್ಯೆಯಲ್ಲಿ ಅಮೂಲ್ಯ ವಾದ ಜನರ ಮನೆಯಾಗಿರುತ್ತದೆ. ಎಲ್ಲೆಲ್ಲಿಯೂ ಪುರುಷರೂ ಸ್ತ್ರೀಯರೂ ನೋವು ಕೊಡುತ್ತಿದ್ದಾರೆ, ಮತ್ತು ಅನೇಕರು ಸೈತಾನನಿಂದ ಕುರುಡರಾಗಿ ಮಾಡಲ್ಪಟ್ಟಿದ್ದಾರೆ ಮತ್ತು ಬಂಧಿಸಲ್ಪಟ್ಟಿದ್ದಾನೆ. ಸೈತಾನನು ತನ್ನ ಸಮಯವು ಅಲ್ಪವಾಗಿದೆ ಎಂದು ತಿಳಿದಿರುವನೆಂದು ನಾನು ಯೋಚಿಸುತ್ತೇನೆ, ಮತ್ತು ಈ ಕಾರಣದಿಂದ ಸಾಯುವ ಜನರಿಗೆ ದೇವರಿಲ್ಲದ ನಿತ್ಯತ್ವವು ಸಿಗಲಿ ಎಂದು ತನ್ನ ಕೊನೆಯ ಕಠಿಣವಾದ ಪ್ರಯತ್ನ ಮಾಡುತ್ತಿರುವನು.

ದೇವರು ಸೈತಾನನಿಗೂ ಅವನ ಪಿಶಾಚಿ ಸಮೂಹಕ್ಕೂ ''ಬೆಂಕಿಯ ಕೊಳ್ಳವನ್ನು'' ಹೇಗೆ ಸಿದ್ಧಪಡಿಸಿರುವನೆಂದು ನಾವು ಓದಿದರೂ, ಮಾನವ ಜನಾಂಗಕ್ಕಾಗಿ ದೇವರು ''ಬೆಂಕಿಯ ಕೊಳ್ಳವನ್ನು'' ಸಿದ್ಧಪಡಿಸಲಿಲ್ಲವೆಂದು ನಾವು ಜ್ಞಾಪಿಸಿಕೊಳ್ಳತಕ್ಕದ್ದು, ನಿಶ್ಚಯವಾಗಿಯೂ ಇಲ್ಲ ! ಕ್ರಿಸ್ತನು ಮರಣ ಹೊಂದಿದ, ತಪ್ಪಿ ಹೋದ ಈ ಎಲ್ಲಾ ಜನರಿಗೆ ಅದು ಇತ್ತು. ಹೀಗಿದ್ದರೂ ಸೈತಾನನ

ಕೋಪದಲ್ಲಿ ಮತ್ತು ಪವಿತ್ರವಾದದ್ದೂ ಒಳ್ಳೆಯದೂ ಆಗಿರುವ ಎಲ್ಲದರ ಬಗ್ಗೆ ತಿರಸ್ಕಾರದಲ್ಲಿ, ಅವನು ತನ್ನೊಂದಿಗೆ, ತನ್ನ ನಿತ್ಯವಾದ ಶ್ರಮೆಯಲ್ಲಿ ತನ್ನೊಂದಿಗೆ ಕೂಡಿಸಿಕೊಳ್ಳಲು ಸಾಧ್ಯವಾದಷ್ಟು ಹೆಚ್ಚು ಪ್ರಾಣಗಳನ್ನು ತೆಗೆದುಕೊಂಡು ಹೋಗಲು ಬಯಸುತ್ತಾನೆ. ತಪ್ಪಿಹೋದ ಪ್ರಾಣಗಳಿಗಾಗಿ ಈ ಹೋರಾಟದಲ್ಲಿ, ಕ್ರಿಸ್ತನು **ಹುಡುಕುವದನ್ನು ಮತ್ತು ರಕ್ಷಿಸುವದನ್ನು** (ಲೂಕ 19:10) ತನಗೆ ತಮ್ಮನ್ನು ಲಭ್ಯವಾಗಿ ಮಾಡಿಕೊಂಡಿರುವ ಕ್ರೈಸ್ತರ ಮುಖಾಂತರ ಮುಂದರಿಸುತ್ತಾನೆ.

ಬುದ್ಧಿವಂತ ಜನರು ಸರಳವಾದ ಸುವಾರ್ತೆಯ ಸಂದೇಶವನ್ನು ಯಾಕೆ ಅರ್ಥ ಮಾಡಿಕೊಳ್ಳುವದಿಲ್ಲ ಎಂದು ಎಂದಾದರೂ ಆಶ್ಚರ್ಯಪಟ್ಟಿರುವಿರೋ ? ಅವರ ಯೋಚಿಸುವಿಕೆಯನ್ನು ಗಲಿಬಿಲಿಗೊಳಿಸುವವನು ಯಾರು ಮತ್ತು ಕೆಲವು ಅವಿಶ್ವಾಸಿ ಗಳಿಗೆ ವಿಶ್ವಾಸಿಗಳಾಗಲು ಯಾಕೆ ಅಷ್ಟು ಕಷ್ಟಕರವಾಗಿದೆ ಎಂಬುದನ್ನು ಬೈಬಲಿನಲ್ಲಿ ನಮಗೆ ಹೇಳಲ್ಪಟ್ಟಿದೆ :

> ''ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವದಾದರೆ ನಾಶನ ಮಾರ್ಗದಲ್ಲಿರುವವರಿಗೇ ಮರೆಯಾಗಿರುವುದು. ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು (ಸೈತಾನನು) ನಂಬಿಕೆಯಿಲ್ಲದವರ ಮನಸ್ಸನ್ನು ಮಂಕು ಮಾಡಿದನು.'' (2 ಕೊರಿಂಥ 4:3-4).

ದೇವರ ಪ್ರೀತಿಯ ಮತ್ತು ಸತ್ಯದ ಬೆಳಕು ಅವಿಶ್ವಾಸಿಯ ಮನಸ್ಸಿನೊಳಗೆ ತೂರಿಕೊಂಡು ಹೋಗುವದನ್ನು ಯಾರು ತಡೆಯಬಲ್ಲರು ? ಸೈತಾನನು ! ಪುರುಷರ ಮತ್ತು ಸ್ತ್ರೀಯರ ರಕ್ಷಣೆಗಾಗಿ ನೀವು ಪ್ರಾರ್ಥಿಸುವಾಗ ಇದನ್ನು ನಿಮ್ಮ ಯೋಚಿಸುವಿಕೆ ಗಳಲ್ಲಿ ತೆಗೆದುಕೊಳ್ಳುವಿರೋ ? ನಾವು ಪ್ರಾರ್ಥಿಸುವಂತೆ, ಸರ್ವಶಕ್ತ ಯೇಸುವಿನ ಹೆಸರನ್ನು ಕರೆಯುವದರಿಂದ, ಸೈತಾನನ ಭ್ರಾಂತಿಯಿಂದ ಮಾರ್ಪಾಟು ಹೊಂದಿರದ ಜನರ ಮನಸ್ಸುಗಳನ್ನು ನಾವು ವಿಮೋಚಿಸತಕ್ಕದ್ದು. ಆ ಅದ್ಭುತಕರವಾದ, ಬಲವುಳ್ಳ ಮತ್ತು ಜಯಶಾಲಿಯಾದ ಹೆಸರಿನ ಬಗ್ಗೆ ಚಾರ್ಲ್ಸ್ ವೆಸ್ಲಿ ಹೀಗೆ ಬರೆದರು :

ಯೇಸು ! ಎಲ್ಲಕ್ಕಿಂತ ಉನ್ನತವಾದ ಹೆಸರು,
ನರಕದಲ್ಲಿ, ಭೂಮಿಯಲ್ಲಿ ಇಲ್ಲವೇ ಆಕಾಶದಲ್ಲಿ ;
ದೇವದೂತರು, ಮತ್ತು ಜನರು ಅದರ ಮುಂದೆ ಅಡ್ಡ ಬೀಳುವರು,
ಮತ್ತು ದೆವ್ವಗಳು ಭಯಪಟ್ಟು, ಓಡಿಹೋಗುವವು.

ಹೌದು ! ಸೈತಾನನ ಮೇಲೆ ಮತ್ತು ಅವನ ಎಲ್ಲಾ ಪಿಶಾಚಿ ಸಮೂಹದ ಮೇಲೆ ಕಲ್ವಾರಿಯ ಕ್ರೂಜೆಯ ಬಳಿಯಲ್ಲಿ ಜಯವು ನಿತ್ಯವಾಗಿ ಸಾಧಿಸಲ್ಪಟ್ಟಿದೆ : ''ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು'' (1 ಯೋಹಾನ 3:8). ಹಲ್ಲೇಲೂಯ ! ಸೋತು ಹೋದ ಯುದ್ಧವನ್ನು ನಾವು ಮಾಡುತ್ತಿರುವದಿಲ್ಲ. ನಿಶ್ಚಯವಾಗಿಯೂ ಇಲ್ಲ ! ಎರಡು ಸಾವಿರ ವರ್ಷಗಳ ಹಿಂದೆ ನಮ್ಮ ಪರವಾಗಿ ರದ್ದುಪಡಿಸಲಾಗದಂತೆ ಸಂಪಾದಿಸಿದಂಥ ಜಯವನ್ನು ಹಿಡಿದುಕೊಂಡಿದ್ದೇವೆ.

ಒಂದು ಚೆಸ್ ಆಟದಲ್ಲಿ ನೀವು ನಿರ್ಣಾಯಕವಾದ, ರದ್ದುಪಡಿಸಲಾಗದ ಜಯದ ಚಲನೆಯನ್ನು ನಿಮ್ಮ ವಿರೋಧಿಗೆ ವಿರುದ್ಧವಾಗಿ ಮಾಡುವ ಸಾಧ್ಯತೆ ನಿಮಗಿದೆ. ಆ ಹಂತದಿಂದ ಅವನ ಸೋಲು ನಿಶ್ಚಿತವಾಗುತ್ತದೆ. ಆದರೆ ನಿಮ್ಮ ವಿರೋಧಿಯು ಹಟಮಾರಿ ಯಾಗಿದ್ದರೆ, ತನ್ನ ಸೋಲನ್ನು ತಿರುವು ಮುರುವು ಮಾಡಲು ಎಂದೂ ಸಾಧ್ಯವಾಗದಿದ್ದರೂ, ಅವನು ಸೋತು ಹೋಗುವಾಗ ಇನ್ನೂ ಅವನು ತಡಮಾಡುವನು.

ಇದು ಹಾಗೆಯೇ ಸೈತಾನನೊಂದಿಗಿರುವದು; ಅವನು ತನ್ನ ಯುದ್ಧದಲ್ಲಿ ಎಂದಾದರೂ ಜಯಹೊಂದುವ ಸಾಧ್ಯತೆ ಇಲ್ಲದಿದ್ದರೂ ತನ್ನ ಅಂತಿಮ ತಳ್ಳಿ ಬಿಡಲ್ಪಡುವಿಕೆಯ ದೇವರು ಪೂರ್ವದಲ್ಲಿ ನಿರ್ಧರಿಸಿದ ಸಮಯವನ್ನು ಸಾಧ್ಯವಾದಷ್ಟು ಮಟ್ಟಿಗೆ ದೂರಕ್ಕೆ ತಳ್ಳಲು ಪ್ರಯತ್ನಿಸುವನು. ಸೈತಾನನು ಸರಪಣಿಗಳಲ್ಲಿ ಬಂಧಿಸಲ್ಪಡುವದಕ್ಕಿಂತ ಮೊದಲಿನ ಅಲ್ಪಾವಧಿಯಲ್ಲಿ ಅವನು **ಸೋತುಹೋದ ವೈರಿ** ಮಾತ್ರವೇ ಆಗಿರುವದಲ್ಲದೇ. ಅವನು ಕಂಡು ಹಿಡಿಯಲ್ಪಟ್ಟ ವೈರಿಯಾಗಿರುವನು ಎಂಬುದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ. ''ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ'' (2 ಕೊರಿಂಥ 2:11)

ಎಂದು ಬೈಬಲ್ ನಮಗೆ ಹೇಳುತ್ತದೆ. ವೈರಿಯ ವಿಧಾನಗಳನ್ನು ತಿಳಿದುಕೊಳ್ಳುವುದು ಯುದ್ಧದಲ್ಲಿ ಅನುಕೂಲತೆಯನ್ನು ಹೊಂದಿಕೊಳ್ಳುವುದಾಗಿದೆ.

ಸೈತಾನನ್ನು ಸೋಲಿಸಿದ ದೇವರ ಭಕ್ತರ ಜಯವನ್ನು ಮತ್ತು ಅದರಿಂದ ಕರ್ತನ ಜಯವನ್ನು ತಮ್ಮದಾಗಿಸಿಕೊಂಡ ಸಾಧನಗಳನ್ನು ಅಪೊಸ್ತಲ ಯೋಹಾನನು ದಾಖಲೆ ಮಾಡಿದ್ದಾನೆ : ''ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು (ಸೈತಾನನನ್ನು) ಜಯಸಿದರು.'' (ಪ್ರಕಟನೆ'12:11). ಮರಣಕ್ಕೆ ನಮ್ಮ ಜೀವಿತಗಳನ್ನು ನಾವು ಪ್ರೀತಿಸುವದಿಲ್ಲ ಯಾಕಂದರೆ ನಮ್ಮ ಪೂರ್ವ ಸ್ವಭಾವವು ಆಗಲೇ ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದೆ. (ರೋಮಾಪುರ 6:6).

ಹೌದು, ರಕ್ತದ ಶುದ್ಧೀಕರಣವು, ನಮ್ಮ ತುಟಿಗಳ ಅರಿಕೆಯು ಮತ್ತು ಕ್ರಿಸ್ತನೊಂದಿಗೆ ನಾವು ಶಿಲುಬೆಗೆ ಹಾಕಲ್ಪಡುವುದು ನರಕದ ಶಕ್ತಿಗಳ ಮೇಲೆ ಯೇಸುವಿನಲ್ಲಿ ನಮಗೆ ಜಯತರುವುದು.

ನನ್ನೊಂದಿಗೆ ಉಲ್ಲಾಸಪಡಿರಿ, ಪ್ರೌಢರಾಗಲು, ''ಜಯಿಸುವ'' ಕ್ರೈಸ್ತರಾಗಲು ಕರ್ತನಾದ ಯೇಸುವು ನಮಗಾಗಿ ಎಲ್ಲಾ ಅನುಕೂಲತೆಗಳನ್ನು ಮಾಡಿದ್ದಾನೆ. ಆದರೆ ಅದೇ ಸಮಯದಲ್ಲಿ ದೇವರ ಸಂಗತಿಗಳಲ್ಲಿ ಕೆಳಗಿನ ಮಟ್ಟವನ್ನು ದಾಟಿ ವಿಸ್ತರಿಸಲು ಅಪೇಕ್ಷೆಯಿಲ್ಲದಿದ್ದರೆ, ಕರ್ತನು ನಮ್ಮ ಮೇಲೆ ಆತ್ಮಿಕ ಪ್ರೌಢಾವಸ್ಥೆಯನ್ನು ಎಂದೂ ಒತ್ತಾಯವಾಗಿ ಹೇರುವದಿಲ್ಲ ಎಂಬುದರ ಬಗ್ಗೆ ಎಚ್ಚರಿಕೆಯಿಂದಿರಿ. ಆತನಿಗಾಗಿರುವ ನಮ್ಮ ಆತ್ಮಿಕ ಸಾಮರ್ಥ್ಯವು ನಾವು ಈ ಭೂಲೋಕದಲ್ಲಿರುವಾಗಿನ ಸಮಯದ ಹಿನ್ನೆಲೆಯಲ್ಲಿ ಮತ್ತು ಕರ್ತನಲ್ಲಿ ನಾವು ಎಷ್ಟು ಫ್ರೌಢರಾಗುವೆವು ಎಂಬುದರ ಪ್ರಕಾರ ನಿರ್ಧರಿಸಲ್ಪಡುವುದು ಹಾಗೂ ನಾವು ಪರಲೋಕವನ್ನು ತಲುಪುವಾಗ ಆ ಸಾಮರ್ಥ್ಯವು ಶುಭ್ರವಾದ ಮತ್ತು ನಿಕಟವಾದ ಆತನ ಅನ್ಯೋನ್ಯತೆಯಲ್ಲಿ ಅನುಭವಿಸಲ್ಪಡುವುದು.

## ಆತ್ಮಿಕ ತಪಾಸಣೆ

1. ನಾನು ನಿದ್ರೆ ಹೋಗುತ್ತಿರುವಂತೆ ನಾನು ಏನನ್ನು ಯೋಚಿಸುವೆನು ?
2. ನಾನು ಬೈಬಲನ್ನು ಓದುವಾಗ ದೇವರಿಂದ ಕೇಳುವದನ್ನು ನಿರೀಕ್ಷಿಸುವೆನೋ ?
3. ನಾನು ಬೈಬಲನ್ನು ಓದುವಾಗ ದೇವರು ಹೇಳುವದನ್ನು ಮಾಡಲು ಸಿದ್ಧನಾಗಿರುವೆನೋ ?
4. ನನ್ನ ಜೀವಿತವು ಇನ್ನೂ ''ನನ್ನ'' ಎಂಬ ಮಾತುಗಳಲ್ಲಿ ವಿವರಿಸಲ್ಪಡುತ್ತಿರುವುದೋ ಇಲ್ಲವೇ ಅದು ನನ್ನಲ್ಲಿ ವಾಸಿಸುವ ಕ್ರಿಸ್ತನ ಮಾತುಗಳಲ್ಲಿ ವಿವರಿಸಲ್ಪಡುತ್ತಿರುವವೋ (ಗಲಾತ್ಯ 2:20)?
5. ನಾನು ಸ್ವತಂತ್ರವಾದ ವ್ಯಕ್ತಿಯಾಗಿರುವೆನೋ ? ಹಾಗಿದ್ದರೆ, ನನ್ನ ಗರ್ವವನ್ನು ತ್ಯಜಿಸಿ ಬಿಡಲು ಮತ್ತು ದೇವರ ಮೇಲೆ ಸಂಪೂರ್ಣ ಅವಲಂಭನೆಯನ್ನು ರೂಢಿಸಲು ನಾನು ಸಿದ್ಧನಾಗಿರುವೆನೋ ?
6. ನನ್ನ ದೇವರನ್ನು ಆರಾಧಸುವುದು ನಾನು ತೊಡಗುವ ಅತೀ ದೊಡ್ಡ ಚಟುವಟಿಕೆಯೆಂದು ಅರ್ಥ ಮಾಡಿಕೊಂಡಿರುವೆನೋ ?
7. ಸೈತಾನನು ನನ್ನ ಜೀವನದಲ್ಲಿ ವಸತಿ ಸ್ಥಳವನ್ನು ಕಂಡು ಕೊಂಡಿರುವನೋ ?
8. ಸೈತಾನನ ಮೇಲೆ ಕ್ರಿಸ್ತನ ಜಯವನ್ನು ವೈಯಕ್ತಿಕವಾಗಿ ಸ್ವೀಕರಿಸುವ ಅಗತ್ಯತೆ ನನಗಿರುವುದೋ ?

ನನ್ನ ವಿಶ್ವಾಸವು ಕಂಡು ಕೊಂಡಿರುವುದು ವಿಶ್ರಾಂತಿ ಸ್ಥಳವನ್ನು,
ಯುಕ್ತಿಯಲ್ಲಿ ಅಲ್ಲ, ವಿಶ್ವಾಸ ಸೂತ್ರದಲ್ಲಿ ಅಲ್ಲ ;
ಸದಾ ಜೀವಿಸುವಾತನಲ್ಲಿ ನಂಬುವನು ನಾನು,
ಆತನ ಗಾಯಗಳು ಬೇಡಿಕೊಳ್ಳುವವು ನನಗಾಗಿ.

ವಾಕ್ಯದ ಮೇಲೆ ಆತುಕೊಂಡಿರುವುದು ನನ್ನ ಹೃದಯ,
ಲಿಖಿತ ದೇವರ ವಾಕ್ಯದ ಮೇಲೆ,
ನನ್ನ ರಕ್ಷಕನ ಹೆಸರಿನಿಂದ ರಕ್ಷಣೆ,
ಆತನ ರಕ್ತದ ಮುಖಾಂತರ ರಕ್ಷಣೆ.

ಬೇರೆ ವಾಗ್ದಾನ ಬೇಕಿಲ್ಲ ನನಗೆ,
ಬೇಕಿಲ್ಲ ನನಗೆ ಬೇರೆ ಬೇಡಿಕೆ.
ಯೇಸುವು ಮರಣ ಹೊಂದಿದ್ದೇ ಸಾಕು,
ಆತನು ನನಗಾಗಿ ಮರಣ ಹೊಂದಿದ್ದೇ ಸಾಕು.

Lidie H. Edmunds.

# ಅಧ್ಯಾಯ 5

# ವಿಶ್ವಾಸದ ಸಂಗತಿ

ಒಬ್ಬ ಮನುಷ್ಯನು ಉಕ್ಕಿ ಹರಿಯುತ್ತಿದ್ದ ನದಿಯನ್ನು ದಾಟಿ ಇನ್ನೊಂದು ದಢದಲ್ಲಿರುವ ತನ್ನ ಸ್ನೇಹಿತನನ್ನು ತಲುಪುವ ಕಾರ್ಯವನ್ನು ಎದುರಿಸುತ್ತಿರುವದನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ. ಅವನಲ್ಲಿ ನಾವೆಯಿರಲಿಲ್ಲ ; ಒಂದು ಗಾಳಿಪಟ ಮತ್ತು ದಾರದ ಹಲವಾರು ತುಂಡುಗಳು ; ಪ್ರತಿಯೊಂದು ತುಂಡು ಮೊದಲಿನ ತುಂಡಿಗಿಂತ ಸ್ವಲ್ಪ ಬಲವಾದದ್ದು ಕೊನೆಯ ತುಂಡು ಹಗ್ಗದಂತೆ ಬಲವಾದದ್ದು ಇದ್ದವು. ತೆಳುವಾದ ದಾರದಿಂದ ಆ ಮನುಷ್ಯನು ಗಾಳಿ ಪಟವನ್ನು ಹಾರಿಸುತ್ತಾನೆ. ನದಿಯ ಆಚೆ ದಡದಲ್ಲಿಯ ಸ್ನೇಹಿತನ ಕೈಗೆ ಅದು ತಲುಪುವಂತೆ ಹೇಗೋ ಮಾಡುತ್ತಾನೆ. ಮೂಲ ಗಾಳಿಪಟದ ದಾರಕ್ಕೆ ಹೆಚ್ಚು ಬಲವಾದ ದಾರವನ್ನು ಕಟ್ಟಿ ಎಳೆಯುತ್ತ ಕೊನೆಗೆ ಹಗ್ಗದಂತಿದ್ದುದನ್ನು ಎರಡೂ ಬದಿಗಳಲ್ಲಿಯ ಮರಗಳಿಗೆ ಕಟ್ಟುತ್ತಾರೆ ಮತ್ತು ಆ ಮನುಷ್ಯನು ಸುರಕ್ಷಿತವಾಗಿ ದಾಟಿ' ಆಚೆ ಬದಿಯಲ್ಲಿಯ ತನ್ನ ಸ್ನೇಹಿತನನ್ನು ತಲುಪುತ್ತಾನೆ.

ದೇವರ ಹೊಸದಾಗಿ ಹುಟ್ಟಿದ ಮಗನಂತೆ, ನೀವು ಈಗಾಗಲೇ ಕರ್ತನಾದ ಯೇಸು ಕ್ರಿಸ್ತನ ಮರಣದಲ್ಲಿ ನಿಮ್ಮ ವಿಶ್ವಾಸವನ್ನು ನಿಮ್ಮ ಪಾಪಗಳಿಗಾಗಿ ಪ್ರತಿಯಾಗಿ ದೇವರ ಪ್ರೀತಿಯಂತೆ ಇಟ್ಟಿರುವಿರಿ. ಆದರೆ ನೀವು ಬೈಬಲನ್ನು

ಓದಲು ಪ್ರಾರಂಭಿಸುವಂತೆ, ನಿಮ್ಮ ವಿಶ್ವಾಸವು ದಾರದ ತೆಳುವಾದ ತುಂಡಿನಂತೆ ಬಲಹೀನವಾದದ್ದಾಗಿರಬಹುದು - ಆದರೆ ಅದು ನದಿಯನ್ನು ಪಟದೊಂದಿಗೆ ದಾಟಿ ಸಂಪರ್ಕ ಸಾಧಿಸಲು ಸಾಕಷ್ಟಾಗಿತ್ತು ! ಹೀಗಿದ್ದರೂ, ನಂಬಿಕೆಯು ಕೇಳುವದರಿಂದ, ಮತ್ತು ಕೇಳುವಿಕೆಯು ದೇವರ ವಾಕ್ಯದಿಂದ ಬರುವದರಿಂದ (ರೋಮಾಪುರ 10:17), ದೇವರ ವಾಕ್ಯವನ್ನು ಓದುವದನ್ನು ಮುಂದರಿಸುವಂತೆ ಮತ್ತು ಆತನ ಅಮೂಲ್ಯವಾಗ್ದಾನಗಳನ್ನು ಹಿಡಿದುಕೊಳ್ಳುವದ ರಿಂದ, ನಿಮ್ಮ ವಿಶ್ವಾಸವು ಬಲವಾಗಿ ಬೆಳೆಯುವುದು ಎಂಬುದನ್ನು ನೀವು ಕಂಡುಕೊಳ್ಳುವಿರಿ. ತನ್ನ ಮಕ್ಕಳಲ್ಲಿ ಪ್ರತಿಯೊಬ್ಬರೂ ವಿಶ್ವಾಸದಲ್ಲಿ ಬಲವುಳ್ಳವರಾಗಿರ ಬೇಕೆಂದು ದೇವರ ಉದ್ದೇಶಿಸುತ್ತಾನೆ, ಇದು ದೇವರ ಮಗುವಿನ ಮತ್ತು ಅವನ ಪರಲೋಕದ ತಂದೆಯ ಮಧ್ಯದಲ್ಲಿ ''ಒಂದಾಗಿರುವ'' ನಿಕಟ ಸಂಬಂಧವನ್ನು ಮುನ್ನೋಡುತ್ತದೆ.

ಬೈಬಲಿನಲ್ಲಿ, ಯೂದನು, ರಕ್ಷಿಸುವ ನಂಬಿಕೆಯ ಪ್ರಾರಂಭದ ಅಸ್ತಿವಾರದ ಮೇಲೆ ಅದು ಕಟ್ಟುವ ಅಗತ್ಯತೆ ಹೇಗೆ ಅಗತ್ಯ ಎಂದು ದಾಖಲೆ ಮಾಡುತ್ತಾನೆ: ''ಪ್ರೀಯರೇ, ನೀವಾದರೋ ನಿಮಗಿರುವ ಅತಿ ಪರಿಶುದ್ಧವಾದ ಕ್ರಿಸ್ತನಂಬಿಕೆಯನ್ನು ಆಧಾರ ಮಾಡಿಕೊಳ್ಳಿರಿ....'' (ಯೂದ 20)

ಆಂಪ್ಲಿಫೈಡ ಬೈಬಲ್ ವಿಚಾರವನ್ನು ಈ ರೀತಿಯಲ್ಲಿ ಅನುವಾದಿಸುತ್ತದೆ.

> ''ಆದರೆ ನೀವು, ಪ್ರೀಯರೇ, ನಿಮ್ಮ ಅತಿ ಪರಿಶುದ್ಧವಾದ ನಂಬಿಕೆಯ ಮೇಲೆ ಕಟ್ಟಿಕೊಳ್ಳಿರಿ (ಸ್ಥಾಪಿಸಿಕೊಳ್ಳಿರಿ) (ಪ್ರಗತಿ ಮಾಡಿಕೊಳ್ಳಿರಿ, ಒಂದು ಮಂದಿರದಂತೆ ಎತ್ತರಕ್ಕೆ ಏಳಿರಿ) **ಪವಿತ್ರಾತ್ಮನಲ್ಲಿ ಪ್ರಾರ್ಥಿಸುತ್ತ ; ದೇವರ ಪ್ರೀತಿಯಲ್ಲಿ ನಿಮ್ಮನ್ನು ಕಾಪಾಡಿಕೊಳ್ಳಿರಿ ಮತ್ತು ಇಟ್ಟುಕೊಳ್ಳಿರಿ ; ನಮ್ಮ ಕರ್ತನಾದ ಯೇಸು ಕ್ರಿಸ್ತನ** (ಮೆಸ್ಸೀಯನ) ದಯೆಗಾಗಿ ನಿರೀಕ್ಷಿಸಿರಿ ಮತ್ತು ತಾಳ್ಮೆಯಿಂದ ಕಾದುಕೊಂಡಿರ್ರಿ - ನಿತ್ಯ ಜೀವಕ್ಕೆ (ಅದು ನಿಮ್ಮನ್ನು ತರುವುದ).... ಮತ್ತು ಅಲ್ಲಾಡುವ ಮತ್ತು ಸಂಶಯ ಪಡುವ ಕೆಲವರ ಮೇಲೆ **ದಯೆ ಇರಲಿ. ಇತರರನ್ನು** ರಕ್ಷಿಸಿರಿ

(ಪ್ರಯತ್ನಿಸಿರಿ), (ಅವರನ್ನು) ಬೆಂಕಿಯೊಳಗಿಂದ ಹೊರಗೆಳೆಯಿರಿ ; ಕೆಲವರನ್ನು ಭಯಯುಕ್ತರಾಗಿ ಕರುಣಿಸಿರಿ ; ತಮ್ಮ ಹೊಲಸು ನಡತೆಯಿಂದ ಮೈಲಿಗೆಯಾದ ಅವರ ಉಡುಪುಗಳನ್ನು ಅಸಹ್ಯಿಸಿರಿ'' (ಯೂದ 20-23. AMP)

ರಕ್ಷಿಸುವ ವಿಶ್ವಾಸದ ನಿಶ್ಚಿತವಾದ ಅಸ್ತಿವಾರದ ಮೇಲೆ **ಪ್ರಾರ್ಥನೆಯ ಜೀವಿತ ; ಪ್ರೀತಿ ; ಸಜೀವ ನಿರೀಕ್ಷೆ ; ಕಾರ್ಯನಿರತ ದಯೆ ಮತ್ತು ಆಸಕ್ತಿಯಿಂದ ಪ್ರಾಣ - ಗೆಲ್ಲುವದರಿಂದ** ನಮ್ಮನ್ನು ನಾವು ಆತ್ಮಿಕವಾಗಿ (ಅಂದರೆ ನಮ್ಮ ವಿಶ್ವಾಸವನ್ನು ಪ್ರೌಢಾವಸ್ಥೆಗೆ ಪುನಃ ಬಲಗೊಳಿಸುವುದು) ಕಟ್ಟಿಕೊಳ್ಳಬೇಕೆಂದು ಈ ವಚನಗಳು ಒತ್ತಿ ಹೇಳುತ್ತವೆ.

ನಿಮ್ಮ ರಕ್ಷಣೆಯು ನಂಬಿಕೆಯ ಮುಖಾಂತರ ಒಂದು ಉಚಿತವಾದ ವರದಂತೆ ಸ್ವೀಕರಿಸಲ್ಪಟ್ಟಂತೆ, ಹಾಗೆಯೇ, ಉತ್ಥಾನವಾದ ಕರ್ತನ ಜೀವಿತವನ್ನು ನಂಬಿಕೆಯಿಂದ ನಿಮ್ಮದನ್ನಾಗಿ ಮಾಡಿಕೊಳ್ಳುವಾಗ ಅಂತರ್ಯದಲ್ಲಿ ವಾಸಿಸುವ ಕ್ರಿಸ್ತನಿಂದ ನೀವು ನಿಯಂತ್ರಿಸಲ್ಪಡುವಿರಿ. **ಹೌದು, ನೀತಿವಂತನು ನಂಬಿಕೆಯಿಂದಲೇ ಜೀವಿಸುವನು.** (ರೋಮಾಪುರ1:17; ಗಲಾತ್ಯ 3:11; ಇಬ್ರಿಯ 10:38). ಪರಲೋಕದಲ್ಲಿರಲಿ, ನೀವು ಇನ್ನೂ ಭೂಲೋಕದಲ್ಲಿರಲಿ, ನೀವು ನಂಬಿಕೆಯಿಂದ ಜೀವಿಸತಕ್ಕದ್ದು - ದೇವರನ್ನು ಮತ್ತು ಆತನ ವಾಗ್ದನಗಳನ್ನು ನಂಬುವದರಿಂದ, ಮತ್ತು ನಿಮ್ಮ ಮುಖಾಂತರವಾಗಿ ಆತನು ತನ್ನ ಕಾರ್ಯವನ್ನು ಮಾಡುವದಕ್ಕಾಗಿ ನಾವು ಲಭ್ಯವಿರುವದರಿಂದ ಜೀವಿಸತಕ್ಕದ್ದು. ನೀವು ಪರಲೋಕಕ್ಕೆ ಹೋಗುವಾಗಲೂ, ನಿಮ್ಮ ನಂಬಿಕೆಯು, ಪ್ರೀತಿಯ ದೇವರ ನಿತ್ಯವಾದ ಉದ್ದೇಶಗಳಲ್ಲಿ ಸಂತೋಷದಿಂದಲೂ ಕೃತಜ್ಞತೆಯಿಂದಲೂ ನೀವು ಆನಂದಿಸುವಂತೆ ನಿಮ್ಮ ನಂಬಿಕೆಯು ಮಾರ್ಗ ವಾಗಿರುವುದು, ಅದು ನಿಮ್ಮ ವಿಮೋಚಿತ ಮನಸ್ಸು ಗ್ರಹಿಸಿಕೊಳ್ಳಲು ಶಕ್ತವಾಗುವಂಥದ್ದಕ್ಕಿಂತ ಎಷ್ಟೋ ದೂರ ಹೋಗುವುದು.

ನೀವು ಇನ್ನೂ ಭೂಲೋಕದಲ್ಲಿರುವಾಗ, ನಿಜವಾದ ವಿಶ್ವಾಸವು, ನೀವು ಬೇರೆಯಾಗಿ ಎಂದೂ ಸಾಧಿಸದಂಥದ್ದನ್ನು ನಿನ್ನಲ್ಲಿ ಮತ್ತು ನಿನ್ನ ಮುಖಾಂತರ

ಮಾಡಲಿಕ್ಕೆ ಕರ್ತನಾದ ಯೇಸು ಕ್ರಿಸ್ತನ ಮೇಲೆ ನೀನು ಸತತವಾಗಿ ಅವಲಂಭಿಸಿರತಕ್ಕದ್ದು. ದೇವರ ಮಕ್ಕಳಂತೆ, ನಮ್ಮಲ್ಲಿ ಪ್ರತಿಯೊಬ್ಬರು ವಿಶ್ವಾಸದಲ್ಲಿ ಬೆಳೆಯುವುದು ಅತ್ಯಗತ್ಯ ವಾಗಿದೆ ; ಜೀವವನ್ನು ಕೊಡುವಾತನ ಮೇಲೆ ಮತ್ತು ನಮ್ಮ ಅನುದಿನದ ನಡೆಯನ್ನು ರೂಪಿಸಿದಾತನ ಮೇಲೆ ಅವಲಂಭಿಸುವದನ್ನು ಕಲಿತುಕೊಳ್ಳತಕ್ಕದ್ದು.

ಹೀಗಿದ್ದರೂ, ಬಹಳ ಸಲ, ಯತಾರ್ಥವಾದ ನಂಬಿಕೆಗೆ ಯಾವುದೇ ಸಂಖ್ಯೆಯಲ್ಲಿ ಪರ್ಯಾಯಗಳನ್ನಿಡಲು ಪ್ರಯತ್ನಿಸುವ ನಮ್ಮ ಮಾನವ ವಿವೇಚನೆಗೆ ಅವಲಂಭಿಸುತ್ತೇವೆ. ನಮ್ಮ ಮಾನವ ಸ್ವಾತಂತ್ರ್ಯವು ನಂಬಿಕೆಯ ಬದಲಾಗಿ ಕರ್ತನಿಗಾಗಿ ಆಸಕ್ತಿಯುಳ್ಳ, ತ್ಯಾಗ ಮಾಡುವ ಸೇವೆಯನ್ನು ಇಡುವುದಕ್ಕಾಗಿ ಪ್ರಯತ್ನಿಸುತ್ತದೇ. ಆದಾಗ್ಯೂ, ನಿಜವಾದ ಸಜೀವ ನಂಬಿಕೆಯು, ಒಂದು ಕಾರ್ಯಕ್ರಮಕ್ಕೆ ಕ್ರೈಸ್ತನ ನಿಷ್ಠೆಯಿಂದಲೂ, ಒಬ್ಬ ಪ್ರಸಂಗಿಗೆ ಅವನ ಒಪ್ಪಿಸಿಕೊಡುವಿಕೆಯಿಂದಲೂ, ಇಲ್ಲವೇ ಬೈಬಲಿನ ಅಡಕಗಳ ಸವಿಸ್ತಾರವಾದ ಜ್ಞಾನವನ್ನು ಪಡೆಯುವಿಕೆಗೆ ಅವನ ಪ್ರತಿಷ್ಠೆ ಪಡಿಸಿಕೊಳ್ಳುವದರಿಂದಲೂ ಪ್ರತ್ಯಕ್ಷವಾಗುವ ಅಗತ್ಯತೆ ಇರುವದಿಲ್ಲ. ಅಂಥ ಸಮರ್ಪಣೆಗಳು ಕೆಲವು ಸಲ ಯತಾರ್ಥವಾದ ನಂಬಿಕೆಯನ್ನು ಪ್ರತಿಬಿಂಬಿಸಿದರೂ, ಅವುಗಳು ಉದ್ದೇಶಪೂರ್ವಕವಾಗಿ ಇಲ್ಲವೇ , ಶಕ್ತಿಶಾಲಿ ಮತ್ತು ವೈಯಕ್ತಿಕ ವಿಶ್ವಾಸಕ್ಕಾಗಿ, ಮಾರಕವಾದ ಸ್ವಯಂಚಾಲಿತ ಪರ್ಯಾಯಗಳಾಗಿ ಉಪಯೋಗಿಸಲ್ಪಡಬಹುದು.

ನಿಜವಾದ ವಿಶ್ವಾಸವು ಉತ್ಥಾನವಾದ ಕರ್ತನಾದ ಯೇಸು ಕ್ರಿಸ್ತನ ಮೇಲೆ ನಮ್ಮ ನಿರೀಕ್ಷಿತ ಅವಲಂಭನೆಯ ಮೇಲೆ ನೇರವಾಗಿ ಸಂಬಂಧಿಸಿರುತ್ತದೆ. ದುರ್ದೈವದಿಂದ, ಅನೇಕ ಕ್ರೈಸ್ತರು ತಮ್ಮ ತಲಾಂತುಗಳನ್ನು ಉಪಯೋಗಿಸುವದರಿಂದ, ಇಲ್ಲವೇ ತಮ್ಮ ಯುಕ್ತಿಯುಳ್ಳ ವ್ಯಕ್ತಿತ್ವಗಳನ್ನು ಉಪಯೋಗಿಸುವದರಿಂದ, ಇಲ್ಲವೇ ತಮ್ಮ ಬ್ಯಾಂಕ ಖಾತೆಯಲ್ಲಿರುವ ಮೂಲಗಳ ಮೇಲೆ ಅವಲಂಭಿಸುವದರಿಂದ ಜೀವನದಲ್ಲಿ ಯಶಸ್ವಿ ಯಾಗಬಹುದೆಂದು ಯೋಚಿಸುತ್ತಾರೆ. ಆದರೆ ಹೊಸದಾಗಿ ಹುಟ್ಟಿದ ವಿಶ್ವಾಸಿಗಳಂತೆ, ಯಶಸ್ವಿಯಾಗಲು, ನಮ್ಮ ಜೀವಿತಗಳು ಪವಿತ್ರಾತ್ಮನಿಂದ

ನಿಯಂತ್ರಿಸಲ್ಪಡ ಬೇಕೆಂದು ಬೈಬಲು ಸ್ಪಷ್ಟವಾಗಿ ಹೇಳುತ್ತದೆ. ದೇವರಲ್ಲಿ ಅವಲಂಭಿತ ವಿಶ್ವಾಸವನ್ನು ನಾವು ರೂಢಿಸದಿದ್ದರೆ ಆತನ ಕಾರ್ಯ ಸಾಧಿಸುವ ಬಲಕ್ಕಾಗಿ ಪರ್ಯಾಯವಾಗಿ ಹುಚ್ಚುತನ ದಿಂದ ಇಡುವ ಎಲ್ಲಾ ಕಾರ್ಯಗಳು ಕ್ರಮೇಣವಾಗಿ ಕಳೆದು ಹೋಗುವವು ಪರಿಶುದ್ಧ ಬರಹಗಳು ಘೋಷಿಸುತ್ತವೆ. ಕ್ರೈಸ್ತರಂತೆ ನಮ್ಮ ಪರಿಣಾಮವು ನಮ್ಮಷ್ಟಕ್ಕೆ ನಾವೇ ಮಾಡುವದರಲ್ಲಿ ನಾವು ಎಷ್ಟು ಆಸಕ್ತರಾಗಿರುವೆವು ಎಂಬುದರಿಂದ ತೀರ್ಮಾನಗೊಳ್ಳುವ ದಿಲ್ಲ, ಆದರೆ ನಮ್ಮ ಎಲ್ಲಾ ಚಟುವಟಿಕೆಗಳನ್ನು ಪ್ರೇರೇಪಿಸುವ ಮೂಲವು ನಿಜವಾದ ನಂಬಿಕೆಯಾಗಿರುವುದೋ ಇಲ್ಲವೋ ಎಂಬುದರ ಮೇಲೆ ತೀರ್ಮಾನಿಸಲ್ಪಡುತ್ತದೆ.

ನಿನ್ನ ಜೀವನದಲ್ಲಿ ದೇವರ ಪ್ರೀತಿಯನ್ನು ಹೊರತು ಪಡಿಸಿ, ನಿನಗೆ ಭದ್ರತೆಯ ಇಲ್ಲವೇ ಮಹತ್ವದ ಭಾವನೆ ಕೊಡುವ ಯಾವುದೇ ಸಂಗತಿಯು - ಅದು ನಿನ್ನ ಹಣವಾಗಿರ ಬಹುದು, ಇಲ್ಲವೇ ನಿನ್ನ ಶಿಕ್ಷಣವಾಗಿರಬಹುದು, ಇಲ್ಲವೇ ನಿನ್ನ ಸ್ನೇಹಿತರಾಗಿರಬಹುದು, ಇಲ್ಲವೇ ನಿನ್ನ ಬಲವಾಗಿರಬಹುದು, ಇಲ್ಲವೇ ನಿನ್ನ ಕೆಲಸವಾಗಿರಬಹುದು, ಇಲ್ಲವೇ ನಿನ್ನ ದೈಹಿಕ ನೋಟವಾಗಿರಬಹುದು - ನೀನು ನಂಬಿಕೆಯಿಂದ ಜೀವಿಸುತ್ತಿರುವದಿಲ್ಲ ವೆಂಬುದನ್ನು ಸೂಚಿಸುತ್ತದೆ. ಜೀವನದಲ್ಲಿ ನಿಮ್ಮ ನಿಜವಾದ ಭದ್ರತೆಯು ಹಾಗೂ ಮಹತ್ವವು ನಿಮ್ಮ ದೇವರಲ್ಲಿ ಮತ್ತು ವಿಮೋಚಕನಲ್ಲಿ ಕಂಡುಕೊಳ್ಳಲ್ಪಡತಕ್ಕದ್ದು. ನಿಮ್ಮ ಭೂಲೋಕದ ಯಾತ್ರೆಯಲ್ಲಿ ನಂಬಿಕೆಯಿಂದ ನೀವು ಹಾಗೆ ಜೀವಿಸದಿದ್ದರೆ, ನಿಮ್ಮ ಜೀವಿತ ದಲ್ಲಿ ದೇವರ ಪ್ರಸನ್ನತೆಯ ಹಾಗೂ ನಿಮ್ಮ ಮುಖಾಂತರ ಪ್ರೀತಿಯ ಆತನ ಸೇವೆಯ ಸತತವಾದ ಆನಂದವನ್ನು ಕಳೆದು ಕೊಂಡವರಾಗಿರುವಿರಿ. ಯಾಕಂದರೆ, ''**ಯಾವುದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ**'' (ರೋಮಾಪುರ 14:23).

ನಿಜವಾಗಿಯೂ, ಜಿ. ಕೀತ್ ಅವರು, ನಂಬಿಕೆಯನ್ನು ಪ್ರಚೋದಿಸಲು ದೇವರ ವಾಕ್ಯವನ್ನು ಭುಜಿಸುವದರ ಮಹತ್ವದ ಬಗ್ಗೆ ತನ್ನ ತಿಳುವಳಿಕೆಯನ್ನು ಹೀಗೆ ಬರೆದಾಗ ವ್ಯಕ್ತಪಡಿಸಿದ್ದಾರೆ :

ಎಷ್ಟು ಭದ್ರವಾದ ಆಸ್ತಿವಾರ,
ಕರ್ತನ ಭಕ್ತರೇ,
ನಿಮ್ಮ ನಂಬಿಕೆಗಾಗಿ ಹಾಕಲ್ಪಟ್ಟಿರುವುದು
ಆತನ ಬಹುಶ್ರೇಷ್ಠ ವಾಕ್ಯದಲ್ಲಿ.

ನಮ್ಮ ಹೃದಯಗಳಲ್ಲಿ ಮತ್ತು ಜೀವನಗಳಲ್ಲಿ ದೇವರ ಧ್ವನಿಯನ್ನು ಗ್ರಹಿಸಿಕೊಳ್ಳದೆ, ಆತ್ಮಿಕ ಬೆಳವಣಿಗೆಗಾಗಿ ಆಸ್ತಿವಾರವಿರಲಾರದು, ಮತ್ತು ರಕ್ಷಕನೊಂದಿಗೆ ಏಕಾಂಗಿಯಾಗಿ, ನಿಕಟ ಸಂಬಂಧದಲ್ಲಿ ಮತ್ತು ಅನ್ಯೋನ್ಯತೆಯಲ್ಲಿ ಆತನೊಂದಿಗೆ ಸಮಯ ಕಳೆಯಲು ದೈವೀಯ ಯೋಜನೆಯನ್ನು ನಾವು ಅನುಸರಿಸದಿದ್ದರೆ ಈ ಅಸ್ತಿವಾರಕ್ಕೆ ಗಚ್ಚೂ ಇರುವದಿಲ್ಲ.

## ನಂಬಿಕೆಯು ದೇವರೊಂದಿಗೆ ಸಜೀವ ಅನ್ಯೋನ್ಯತೆಯನ್ನು ಹುಟ್ಟಿಸುವ ಶಕ್ತಿಯಾಗಿದೆ.

ಹಲವಾರು ವರ್ಷಗಳ ಹಿಂದೆ ಯುನೈಟೆಡ್ ಕಿಂಗ್ಡಮ್‌ದಲ್ಲಿ ಕೆಲವು ಒಂದು ನೂರು ಜನ ಸಭಾಪಾಲಕರಿಗೆ ಭಕ್ತಿ ಸಂಜೀವನದ ಮುಖ್ಯ ಪ್ರಸ್ತಾಪದ ಮೇಲೆ ಮಾತಾಡಿದ್ದನ್ನು ಜ್ಞಾಪಿಸಿಕೊಳ್ಳುತ್ತೇನೆ. ಮಹಾ ಬಲದಿಂದಲೂ ಹೃದಯವನ್ನು ಶೋಧಿಸುವದರಿಂದಲೂ ದೇವರು ನಮ್ಮ ಮಧ್ಯದಲ್ಲಿ ಕಾರ್ಯಮಾಡುತ್ತಿದ್ದನು. ಬಹಿರಂಗ ಪ್ರಾರ್ಥನೆಯ ಸಮಯದಲ್ಲಿ, ಒಬ್ಬ ಸಭಾಪಾಲಕನು ಎದ್ದು ನಿಂತುಕೊಂಡು, ಹೃದಯಪೂರ್ವಕವಾಗಿ ಮುರಿಯುವಿಕೆಯಿಂದಲೂ ಕಣ್ಣೀರಿನಿಂದಲೂ ಈ ರೀತಿಯಲ್ಲಿ ಪ್ರಾರ್ಥಿಸಿದನು : ''ದೇವರೇ, ಈ ಸಹೋದರರ ಮುಂದೆ ಪ್ರಾರ್ಥನೆಯಲ್ಲಿ ಹಿಂದೆ ಬಹಳ ಸಾರಿ ನಡಿಸಿದಾಗ, ನಿನ್ನ ಪವಿತ್ರ ಸನ್ನಿಧಿಗಿಂತ ಹೆಚ್ಚಾಗಿ ಅವರ ಬಗ್ಗೆ ಮತ್ತು ದೈವಜ್ಞಾನ ಶಾಸ್ತ್ರದ ಬಗ್ಗೆ ನಾನು ಹೆಚ್ಚು ಅರುಹುವುಳ್ಳವನಾಗಿದ್ದೆನು......''

ನಮ್ಮ ಹೃದಯಗಳು ಮೋಸಕರವಾದವುಗಳಾಗಿರುತ್ತವೆ ; ನಾವು ಪ್ರಾರ್ಥಿಸುವಾಗಲೂ ಸಹ, ಪರಲೋಕದಲ್ಲಿಯ ನಮ್ಮ ತಂದೆಯ ಮುಂದೆ ನಮ್ಮ ನಿಜವಾದ ಹೃದಯಗಳ ಅಗತ್ಯತೆಗಳನ್ನು ತೆರೆದಿಡಲು ಯತಾರ್ಥವಾಗಿ

ಪ್ರಯತ್ನಿಸದೇ ನಮ್ಮ ಸ್ವಂತ ಮಾತುಗಳ ಹಿಂದೆ ನಾವು ಅಡಗಿಕೊಳ್ಳುತ್ತೇವೆ. ಒಂದು ಪ್ರಾರ್ಥನೆಯನ್ನು ಹೇಳುವುದು, ಇಲ್ಲವೇ ''ನಮ್ಮ ಪ್ರಾರ್ಥನೆಗಳನ್ನು ಹೇಳುವುದು'', ನಾವು ನಿಜವಾಗಿ ಪ್ರಾರ್ಥಿಸುವೆವೆಂದು ಅವಶ್ಯಕವಾಗಿ ಅರ್ಥವಾಗಬೇಕಾಗಿಲ್ಲ. ಮತ್ತು ನಾವು ಹೃದಯಗಳು ಆತನ ನಿತ್ಯವಾದ ಬೆಳಕಿನ ಪಾರದರ್ಶಕತೆಯಲ್ಲಿ ಮತ್ತು ಪರಿಶುದ್ಧತೆಯಲ್ಲಿ ಆತನೊಂದಿಗೆ ಹೊಂದಿಕೊಂಡಿರುವಾಗ, ನಮ್ಮ ಕರ್ತನು ನಮ್ಮ ಅನ್ಯೋನ್ಯತೆಯ ಸಮಯದಿಂದ ದೈವೀಯ ಆನಂದವನ್ನು ಹೊಂದಿಕೊಳ್ಳುವನು.

ಅಗತ್ಯತೆಯಲ್ಲಿರುವ ಒಬ್ಬ ಪಾಪಿಯು ಪವಿತ್ರವಾದ ದೇವರಿಗೆ ಸಂತೃಪ್ತಿಯ ಯಾವುದೇ ಭಾವನೆಯನ್ನು ತರುವನೆಂದು ಯೋಚಿಸುವುದು ಭಯಾನಕವಾದ ವಿಚಾರವಾಗಿದೆ. ಆದರೆ ಆ ಉದ್ದೇಶಕ್ಕಾಗಿಯೇ, ತನಗೆ ಮಹಿಮೆಯನ್ನು ತರುವದಕ್ಕಾಗಿ ದೇವರು ಮಾನವ ಕುಲವನ್ನು ಸೃಷ್ಟಿಸಿದನೆಂದು ಬೈಬಲ್ ನಮಗೆ ಹೇಳುತ್ತದೆ. ನಾವು ಮೆಚ್ಚಲಿ ಇಲ್ಲವೇ ಮೆಚ್ಚದಿರಲಿ, ನಮ್ಮಲ್ಲಿ ಪ್ರತಿಯೊಬ್ಬನೂ ಪವಿತ್ರ ದೇವರ ಮಹಿಮೆಗಾಗಿ ಅಸ್ತಿತ್ವದಲ್ಲಿರುತ್ತೇವೆ.

''.... ಕರ್ತನಿಗೆ ಯೋಗ್ಯರಾಗಿ ನಡೆದು ಎಲ್ಲಾ ವಿಧದಲ್ಲಿ ಆತನನ್ನು ಸಂತೋಷ ಪಡಿಸುವವರಾಗಬೇಕು'' (ಕೊಲೊಸ್ಸೆ 1:10) ಇದು ಕೊಲೊಸ್ಸೆ ಸಭೆಗಾಗಿ ಅಪೊಸ್ತಲ ಪೌಲನ ಯತಾರ್ಥವಾದ ಅಪೇಕ್ಷೆಯಾಗಿತ್ತು. ಬಿಷಪ್ ಹ್ಯಾಂಡ್ಲಿ ಮೌಲ ಎಂಬವರು, ಮಾತುಗಳನ್ನು ''ಆತನ ಚಿತ್ತದ ಪ್ರತಿಯೊಂದು ನಿರೀಕ್ಷೆಗೆ'' ಎಂದು ಪೂರ್ಣವಾಗಿ ಮೆಚ್ಚಿಸುವಂತೆ ಭಾಷಾಂತರಿಸಿದ್ದಾನೆ. ಅದು ಬಹುಶಃ ''ನಿಮ್ಮನ್ನು ಸಂತೋಷಪಡಿಸಿಕೊಳ್ಳಿರಿ'' ಎಂದು ನಾವು ಹೇಳುವಂತಿದೆ. ಈ ವ್ಯಕ್ತಪಡಿಸುವಿಕೆಯಿಂದ, ನಮ್ಮ ಸ್ವಂತ ಚಿತ್ತದ ಮೊದಲು ಬೇರೆಯವರ ಚಿತ್ತವನ್ನು ಮೆಚ್ಚಿಕೊಳ್ಳಲು ಬಯಸುತ್ತೇವೆ.

ನಮ್ಮ ದೇವರನ್ನು ಸಂತೋಷಪಡಿಸುವದಕ್ಕೆ ಹುಡುಕುವುದಕ್ಕಿಂತ ನಮ್ಮನ್ನೇ ಮೆಚ್ಚಿಸಿಕೊಳ್ಳುವುದು ಅಂದರೆ. ನಾವು ಪ್ರತಿಯೊಂದು ಕಲ್ಲಿಗೆ ನಮ್ಮ ಕಾಲ್ಬೆರಳುಗಳಿಂದ ಎಡಹುವುದು, ಪ್ರತಿಯೊಂದು ಗೋಡೆಗೆ ನಮ್ಮ ತಲೆಯನ್ನು ಚಚ್ಚುವುದು, ಜೀವನದ ಮಾರ್ಗದಲ್ಲಿ ಪ್ರತಿಯೊಂದು ಆತಂಕಕ್ಕೆ ಒಳಗಾಗುವುದು ಆಗಿದೆ. ಆದರೆ ಪ್ರತಿಯೊಬ್ಬ ವಿಶ್ವಾಸಿಯ ಹೃದಯದಲ್ಲಿ, ಮತ್ತು ದೇವರ

ಹೃದಯದಲ್ಲಿ, ದೇವರ ಮಗುವು ತನ್ನ ಸೃಷ್ಟಿಕರ್ತನೊಂದಿಗೆ ಆತನ ಮಹಿಮೆಯ ಮತ್ತು ಪ್ರೀತಿಯ ಪಾರದರ್ಶಕ ಬೆಳಕಿನಲ್ಲಿ ಸಂಪರ್ಕದಲ್ಲಿರುವಾಗ ಎಂಥ ಆನಂದ ಇರುವದಲ್ಲವೇ !

''ನಂಬಿಕೆ'' ಮತ್ತು ''ದೇವರನ್ನು ಮೆಚ್ಚಿಸುವುದು'' ಇವುಗಳ ಮಧ್ಯದಲ್ಲಿ ಒಂದು ನಿಶ್ಚಿತವಾದ ಸಂಬಂಧ ಇರುವದೆಂದು ಬೈಬಲು ಸಹಾಯಕವಾಗಿ ಪ್ರಕಟಿಸುತ್ತದೆ. ಈ ವಚನವು ನಕಾರಾತ್ಮಕ ವ್ಯಾಕರಣದ ರಚನೆಯಲ್ಲಿ ಬರೆಯಲ್ಪಟ್ಟಿದ್ದು ನಂಬಿಕೆ ಮತ್ತು ದೇವರನ್ನು ಮೆಚ್ಚಿಸುವದರ ಮಧ್ಯದಲ್ಲಿಯ ಸಂಬಂಧವನ್ನು ಇನ್ನೂ ಮಹತ್ವದನ್ನಾಗಿ ಮಾಡುತ್ತದೆ : **''ನಂಬಿಕೆಯಿಲ್ಲದೆ ಆತನನ್ನು ಮೆಚ್ಚಿಸುವುದು ಸಾಧ್ಯವಿಲ್ಲ....''** ಈ ವಚನವು ಆಗ ಸಕಾರಾತ್ಮಕ ಹೇಳಿಕೆಯಲ್ಲಿ ಬದಲಾಗುವುದು ಮತ್ತು ನಿಶ್ಚಯವಾಗಿ ಪ್ರತಿಯೊಬ್ಬ ಯತಾರ್ಥವಾದ ವಿಶ್ವಾಸಿಗೆ ದೊಡ್ಡ ಪ್ರೋತ್ಸಾಹವನ್ನು ತರುವುದು. ದೇವರೊಂದಿಗೆ ''ಅನ್ಯೋನ್ಯತೆಯು'' ದೇವರಿಂದ ''ಬಹುಮಾನ''ಗಳಲ್ಲಿ ಪರಿಣಾಮ ಗೊಳ್ಳುವುದು ಎಂದು ಅದು ಹೇಳುತ್ತದೆ : ''ದೇವರ ಬಳಿಗೆ ಬರುವವನು ದೇವರು ಇದ್ದಾನೆ ; ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ'' (ಇಬ್ರಿಯ 11:6).

ತನ್ನ ರಕ್ಷಕನೊಂದಿಗೆ ಮತ್ತು ಕರ್ತನೊಂದಿಗೆ ನಿಕಟವಾದ ಅನ್ಯೋನ್ಯತೆಯಲ್ಲಿ ಜೀವಿಸುವ ವ್ಯಕ್ತಿಯ ಮೇಲೆ ಕೃಪೆಯಿಂದ ದೇವರು ಸುರಿಸುವ ಆತ್ಮಿಕ ವರಗಳು ವ್ಯಕ್ತಪಡಿಸಲ್ಪಡದಷ್ಟಿವೆ: ವೈಯಕ್ತಿಕವಾಗಿ ಅನುಭವಿಸುವಾಗ ಮಾತ್ರವೇ ಅವುಗಳನ್ನು ಅರ್ಥ ಮಾಡಿಕೊಳ್ಳಬಹುದು. ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಜೀವಿಸುವದಕ್ಕೆ ಬೀಗದಕ್ಕೈ, ಆತನಿಗೆ ಆನಂದವನ್ನು ಮತ್ತು ಆತನ ಮಕ್ಕಳಿಗೆ ಮಹಾ ಸಂತೋಷವನ್ನು ತರುವಂಥದ್ದು **ನಂಬಿಕೆ** ಆಗಿರುತ್ತದೆ.

**ಹೌದು, ನಂಬಿಕೆಯು ದೇವರ ಮಗುವಿಗೆ ಉತ್ಥಾನವಾದ ಕರ್ತನ ಜಯವನ್ನು ಪವಿತ್ರಾತ್ಮನು ಹಸ್ತಾಂತರಿಸುವ ಸಾಧನವಾಗಿದೆ.**

ನಾವು ಗಮನಿಸಿದಂತೆ, ದೇವರ ವಾಗ್ದಾನಗಳಿಗೆ, ಒಬ್ಬ ಪ್ರಸಂಗಿಗೆ ಕಿವಿಗೊಡುವ ದರಿಂದಲೂ ಇಲ್ಲವೇ. ದೇವರ ವಾಕ್ಯವನ್ನು ಓದುವದರಿಂದಲೂ

ಬಹಿರಂಗ ಪಡಿಸಲ್ಪಡುವುದು ಸಾಧ್ಯವಾಗಿರುತ್ತದೆ, ಆದರೂ ಅದರಿಂದ ಆತ್ಮಿಕ ಲಾಭವಾಗುವದಿಲ್ಲ ಎಂದು ಹೇಳುವುದು ದುಃಖಕರವಾದದ್ದಾಗಿದೆ: ''ನಂಬದೆ ಹೋದದರಿಂದ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ.'' (ಇಬ್ರಿಯ 4:2).

ದೇವರ ವಾಕ್ಯವು ನಂಬಿಕೆಯೊಂದಿಗೆ ತಲೆಯಿಂದ ಹೃದಯಕ್ಕೆ ಬಂದಾಗ ಮಾತ್ರವೇ ದೇವರ ವಾಕ್ಯವನ್ನು ಓದುವುದು ಲಾಭಕರವಾದದ್ದಾಗುವುದು. ಆ ಹಂತದಲ್ಲಿ ಪವಿತ್ರಾತ್ಮನು ಕರ್ತನಾದ ಯೇಸು ಕ್ರಿಸ್ತನ ಸಾಧ್ಯಗೊಳಿಸುವ ಕೃಪೆಯನ್ನು ನಮ್ಮ ಜೀವಿತಗಳಿಗೆ ಅನ್ವಯಿಸುವನು, ಅದರಿಂದ ಕರ್ತನಿಗೆ ಸೇವೆ ಮಾಡುವ ಪ್ರತಿಯೊಂದು ಅವಕಾಶವನ್ನು ಗ್ರಹಿಸಿಕೊಳ್ಳಲು ಶಕ್ತರಾಗುವೆವು ಮತ್ತು ಅದರಿಂದ ಜೀವನದ ಪ್ರತಿಯೊಂದು ಸಮಸ್ಯೆಯನ್ನು ಎದುರಿಸಲು, ನಾವು ಆತನ ಬಲವನ್ನು ಸಿದ್ಧಪಡಿಸಿ ತೋರಿಸುವೆವು.

ಹೀಗಿದ್ದರೂ ಒಂದು ಸಂಗತಿಯು ನಿಶ್ಚಿತವಾಗಿದೆ : ಪ್ರತಿಯೊಬ್ಬ ನಿಜವಾದ ವಿಶ್ವಾಸಿಯು ತೀವ್ರವಾದ ಹಿಂಸೆಯ ಮತ್ತು ಶೋಧನೆಯ ದಿನಗಳನ್ನು ಅನುಭವಿಸುವನು. ಸೈತಾನನು ತಾನೇ, ನಮ್ಮ ಕರ್ತನೊಂದಿಗೆ ಅನುದಿನದ ಅನ್ಯೋನ್ಯತೆಯ ಜೀವನದಿಂದ ದೂರವಿಡಲು ಮರುಳುಗೊಳಿಸುವ ಕಾರ್ಯಗಳೊಂದಿಗೆ ''ಜಗತ್ತನ್ನು'' ಸತತವಾಗಿ ಉಪಯೋಗಿಸುವನು. ತನ್ನ ವಿಮೋಚಕನೊಂದಿಗೆ ಮತ್ತು ಕರ್ತನೊಂದಿಗೆ ನಿಕಟ ಅನ್ಯೋನ್ಯತೆಯಲ್ಲಿ ಇರುವ ದೇವರ ಮಗುವು ಸೈತಾನನಿಗೆ ಹೆಚ್ಚು ಅಸಹ್ಯವಾದದ್ದು ಬೇರೆ ಯಾವುದೂ ಇರುವದಿಲ್ಲ. ಆದುದರಿಂದ, ಒಂದಾಗಿ ಕೂಡಿ ಬರುವಿಕೆಯ ಸಮಯದ ವಿಶ್ವಾಸ - ಕಟ್ಟುವಿಕೆಯ ಅನುಭವದಿಂದ ಅವರನ್ನು ದೂರವಿಡಲು ಅವರ ಸೃಷ್ಟಿಕರ್ತನಿಂದ ಹೊಸದಾಗಿ ಹುಟ್ಟಿದ ಕ್ರೈಸ್ತರನ್ನು ದಾರಿ ತಪ್ಪಿಸಲು ದುಷ್ಟನಾದಾತನು ಎಷ್ಟೋ ದೂರಕ್ಕೂ ಹೋಗುವದು ಆಶ್ಚರ್ಯಕರವಾದದ್ದಾಗಿರುವ ದಿಲ್ಲ.

ಆತ್ಮಿಕವಾಗಿ ಮುಗ್ಧನಾಗಿರುವ ವ್ಯಕ್ತಿಗೆ ಪ್ರಾಪಂಚಿಕ ಜಗತ್ತು ಜೀವನದ ಕೇವಲ ವಾಸ್ತವಿಕತೆಯಾಗಿ ತೋರುವುದು. ಆದರೆ ಅದಕ್ಕೆ ವಿರುದ್ಧವಾದದ್ದು

ಸತ್ಯವಾಗಿರುವುದು ; ಆದರೆ ಆತ್ಮಿಕ ಜಗತ್ತು ಅಂತಿಮ ವಾಸ್ತವಿಕತೆಯನ್ನು ಒಳಗೊಂಡಿರುವುದು. ''**ಲೋಕದಲ್ಲಿರುವ ಶರೀರದಾಶೆ. ಕಣ್ಣಿನಾಶೆ ಬದುಕು ಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗ ಳಾಗಿವೆ**'' (1 ಯೋಹಾನ 2:16). ಜನರು ಅಷ್ಟು ಸುಲಭವಾಗಿ ಮೋಸಪಡಿಸಲ್ಪಡ ಬಹುದವರಾಗಿದ್ದುದರಿಂದ, ಕ್ರೈಸ್ತರನ್ನು ಭ್ರಷ್ಠನನಾಗಿ ಮಾಡಲು ಹೇಡಿತನದ ತಂತ್ರಗಳನ್ನು ಉಪಯೋಗಿಸುವಲ್ಲಿ ಸೈತಾನನಿಗೆ ಕಷ್ಟವಿರುವದಿಲ್ಲ.

ನಾವು ಶರೀರದಾಶೆಯ ಮುಖಾಂತರ (ಜವಾಬ್ದಾರಿಕೆಯಿಲ್ಲದ ಸುಖ), ಕಣ್ಣಿನಾಶೆಯ ಮುಖಾಂತರ (ಜವಾಬ್ದಾರಿಕೆಯಿಲ್ಲದ ಸ್ವಾಸ್ತಗಳು), ಮತ್ತು ಬದುಕು ಬಾಳಿನ ಡಂಭದ (ಜವಾಬ್ದಾರಿಕೆಯಿಲ್ಲದ ಬಲ) ಮುಖಾಂತರ ನಾವು ಶೋಧಿಸಲ್ಪಡುತ್ತೇವೆಂದು ಬೈಬಲ್ ಹೇಳುತ್ತದೆ. ದೇವರು ನಮಗಾಗಿ ಯೋಜಿಸಿದ್ದರೊಂದಿಗೆ ಮಧ್ಯೆಪ್ರವೇಶಿಸುವ ಎಲ್ಲಾ ಕುಯುಕ್ತಿಗಳನ್ನು ಸೈತಾನನು ತಿಳಿದುಕೊಂಡಿರುತ್ತಾನೆ; ನಮ್ಮ ಕರ್ತನೊಂದಿಗೆ ಇರುವದರಿಂದ ನಮ್ಮನ್ನು ದೂರ ಮಾಡಲಿಕ್ಕೆ ಅವನು ಏನನ್ನಾದರೂ ಮಾಡುತ್ತಾನೆ. ನಾವು ನಮ್ಮ ದೇವರೊಂದಿಗೆ ಅತೀ ನಿಕಟ ಸಂಬಂಧದಲ್ಲಿರುವಾಗ ನಾವು ಆತ್ಮೀಕವಾಗಿ ಬೆಳೆಯುವೆವು ಮತ್ತು ಅದರಿಂದ ನಮ್ಮ ಪರಲೋಕದ ತಂದೆಗೆ ಇನ್ನೂ ಹೆಚ್ಚಿನ ಆನಂದವನ್ನು ತರುವೆವು ಎಂಬುದನ್ನು ಸೈತಾನನು ಬಲ್ಲವನಾಗಿದ್ದಾನೆ.

**ಶರೀರದಾಶೆ :** ಇಂದಿನ ಹೀನವಾದ ಅನೈತಿಕ ಜಗತ್ತಿನ ಮುಖಾಂತರ, ಲೈಂಗಿಕ ಹೊಲೆಯಾಗುವಿಕೆಯಿಂದ ತುಂಬಿಕೊಂಡಂಥದ್ದರಿಂದ, ಸೈತಾನನು ಶರೀರದ ಅತೀ ಭೋಗದ ಆಶೆಯ ಹಸಿವನ್ನು ಪ್ರಚೋದಿಸುತ್ತಾನೆ. ಭೋಗಾಸಕ್ತಿ, ದೈಹಿಕ ಮತ್ತು ಭೌತಿಕ ಸಂಗತಿಗಳಿಂದ ತುಂಬಿರುವ ಜನರನ್ನು ಸೆಳೆದುಕೊಳ್ಳಲು ನಮ್ಮ ವೈರಿಯು ಸುಲಭವಾದ ಮಾರ್ಗವನ್ನು ಕಂಡುಕೊಳ್ಳುತ್ತಾನೆ. ಸೈತಾನನ ದುಷ್ಟ ಸೂಚನೆಗಳಿಂದ ಮೋಸ ಗೊಳಿಸಲ್ಪಟ್ಟವರು ಎಲ್ಲರೂ ಪಾಪದ ಆನಂದದ ಗುಳ್ಳೆಗಳು ಬೇಗನೇ ಒಡೆದು ಬರಿದಾದ ಮತ್ತು ನಾಚಿಕೆಯ ಭಾವವನ್ನು ಬಿಟ್ಟಿರುವುದೆಂದು ಕಂಡುಕೊಳ್ಳುವರು.

**ಕಣ್ಣಿನಾಶೆ:** ವ್ಯಾಪಾರದ ಜಾಗತಿಕ ಮೋಸಕರವಾದ ಸಂಗತಿಗಳಿಂದ ನಾವು

ಆಕರ್ಷಿಸಲ್ಪಟ್ಟಿದೆ ಮತ್ತು ಇತರ ಜನರು ಹೊಂದಿಕೊಂಡದ್ದರ ಬಗ್ಗೆ ನಾವು ಅಸೂಯ ಪಟ್ಟರೆ, ಸೈತಾನನು ತನ್ನ ಕ್ರೂರ ಹೆಜ್ಜೆಗಳನ್ನಿಡಲು ಶಕ್ತನಾಗುವನು. ''ನಿನಗೆ ಒಂದು ಹೊಸ ವಾಚ ಮಾತ್ರ ಇದ್ದರೆ, ಒಂದು ಎಕರೆ ಜಮೀನು ಇದ್ದರೆ. ಇಲ್ಲವೇ ಒಂದು ದೊಡ್ಡ ಮನೆಯಿದ್ದರೆ, ನೀನು ಸುಖವಾಗಿ ಇರುವಿ'' ಎಂದು ಮಹಾ ಮೋಸಗಾರನು ಉಸುರುತ್ತಾನೆ. ಆದರೆ, ''...... ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತನಿಂದಲೂ ಬದುಕುವನು'' (ಮತ್ತಾಯ 4:4) ಎಂಬುದರಿಂದ, ನಮ್ಮ ಇತ್ತೀಚಿನ ವಿಚಾರ ವಿಷಯ ಗಳಲ್ಲಿ ನಮ್ಮನ್ನು ತೊಡಗಿಸಿದ ನಂತರ, ನಾವು ಹೊಸದಾಗಿ ಹೊಂದಿಕೊಂಡದ್ದರಿಂದ ನಿರಂತರವಾಗಿ ಉಳಿಸುವ ಸಂತೃಪ್ತಿಯು ನಮಗೆ ತರಲ್ಪಡುವದಿಲ್ಲ ಎಂಬುದನ್ನು ಕಂಡು ಕೊಳ್ಳುತ್ತೇವೆ.

**ಜೀವನದ ಗರ್ವ :** ನಮ್ಮ ಹಟಮಾರಿತನದಿಂದ, ಸ್ವಾರ್ಥ ಮನೋಭಾವನೆ ಯಿಂದ ಹಾಗೂ ಸ್ವತೃಪ್ತಿಯ ಸುಳ್ಳು ಅರ್ಥದಿಂದ ಸೈತಾನನ ನಾಶನಕರವಾದ ಕುಯುಕ್ತಿಗಳಿಗೆ ಬಾಗಿಲವು ತೆರೆಯಲ್ಪಡುತ್ತದೆ. ದೇವರು ಯಾವುದೇ ರೂಪದಲ್ಲಿಯ ಗರ್ವವನ್ನು ದ್ವೇಷಿಸುತ್ತಾನೆ.

ಎಲ್ಲಕ್ಕಿಂತಲೂ ಹೆಚ್ಚಾಗಿ, ನಮ್ಮ ಅಂತಿಮ ಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಲು ನಮ್ಮ ಸ್ವಂತ ಬಲದಲ್ಲಿ ಭರವಸೆಯುಳ್ಳವರಾಗಿರುವುದು ನಂಬಿಕೆಯ ವಿರೋಧ ವಾದದ್ದಾಗಿದೆ - ಯಾಕಂದರೆ ನಂಬಿಕೆಯು ಕರ್ತನಾದ ಯೇಸುವಿನಲ್ಲಿ ಭರವಸೆ ಯಾಗಿದೆ. ನಾವು ಆಗಲೇ ಗಮನಿಸಿದಂತೆ, ಜೀವನದ ಗರ್ವಕ್ಕೆ ಒಂದೇ ಒಂದು ಉತ್ತರವು. **''ಕರ್ತನ ದೃಷ್ಟಿಯಲ್ಲಿ ನಿಮ್ಮನ್ನು ತಗ್ಗಿಸಿಕೊಳ್ಳಿರಿ''** (ಯಾಕೋಬ 4:10) ಸರ್ವಶಕ್ತನಾದ ದೇವರ ಮೇಲೆ ನಿಮ್ಮ ಅವಲಂಭಿಸುವಿಕೆಯನ್ನು ದೀನತೆಯಿಂದ ಒಪ್ಪಿಕೊಳ್ಳುವುದು, ನೀನು ಸ್ವಯಂ - ಸಂತೃಪ್ತನಾಗಿದ್ದೀ ಎಂದು ನಿನಗೆ ಖಂಡಿತವಾಗಿ ಸೈತಾನನು ಸೂಚಿಸುವಾಗ ಸೈತಾನನಿಗೆ ಬಾಗಿಲನ್ನು ಮುಚ್ಚುವುದು ಒಂದು ಮಾರ್ಗವಾಗಿರುತ್ತದೆ ಮತ್ತು ನಿಮ್ಮ ಅವಲಂಭನೆಯು - ಅದು ನಂಬಿಕೆಯಾಗಿದೆ - ನಿನಗೆ ಜಯವನ್ನು ಕೊಡುವುದು, ಯಾಕಂದರೆ ''ಲೋಕವನ್ನು ಜಯಿಸುವಂಥದ್ದು ನಿಮ್ಮ ನಂಬಿಕೆಯೇ'' (1 ಯೋಹಾನ 5:4).

ಆದರೆ, ಜಯಿಸುವ ನಂಬಿಕೆಯ ಜಯದೊಳಗೆ ನೀವು ಪೂರ್ಣವಾಗಿ ಪ್ರವೇಶಿಸುವ ಮೊದಲು (ಲೋಕದಲ್ಲಿ ಇರುವ ಎಲ್ಲರ ಮುಖಾಂತರ ಸೈತಾನನು ನಿನ್ನನ್ನು ಸಂಧಿಸುವಾಗ), ಕರ್ತನಾದ ಯೇಸುವು ತನ್ನ ಶಿಷ್ಯರಿಗೆ ಕಲಿಸಿದ ಪಾಠವನ್ನು ಕಲಿಯುವುದು ನಿಮಗೂ ಮಹತ್ವದ್ದಾಗಿದೆ. ಯತಾರ್ಥವಾದ ನಂಬಿಕೆಗೆ ಇನ್ನೊಂದು ದೊಡ್ಡ ಆತಂಕದ ಬಗ್ಗೆ ಆತನು ಅವರನ್ನು ಎಚ್ಚರಿಸಿದನು. ''ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಗೊಬ್ಬರು ಮಾನವನ್ನು ಅಂಗೀಕರಿಸುವರಾದ ನೀವು ಹೇಗೆ ನಂಬೀರಿ!'' ಎಂದು ಯೇಸು ಕೇಳಿದನು. (ಯೋಹಾನ 5:44). ಕರ್ತನಾದ ಯೇಸುವಿನ ಈ ಮಾತುಗಳಲ್ಲಿ, ಕರ್ತನಾದ ಯೇಸುವು ತನ್ನ ಶಿಷ್ಯರಿಗೆ ನಂಬಿಕೆಯು, ಇತರ ಜನರ ಸ್ತೋತ್ರವನ್ನೂ ಹೊಗಳುವಿಕೆಯನ್ನು ಸ್ವೀಕರಿಸುವ ಸೂಕ್ಷ್ಮವಾದ ಅಪೇಕ್ಷೆಯೊಂದಿಗೆ ಒಂದಾಗಿ ಎಂದೂ ಅಸ್ತಿತ್ವದಲ್ಲಿರುವ ದಿಲ್ಲ ಎಂದು ಗಂಭೀರವಾಗಿ ತೋರಿಸಿದನು. ವಿಷಯಾಭಿಲಾಷೆಗೆ ಒಪ್ಪಿಕೊಳ್ಳುವುದು ಅನೇಕ ಕ್ರೈಸ್ತ ಜನರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಹೀಗಿದ್ದರೂ ಕ್ರಿಸ್ತನನ್ನು ತಿರಸ್ಕರಿಸುವ ಸಮಾಜದ ಮನ್ನಣೆಯು ಯತಾರ್ಥವಾದ ಕ್ರೈಸ್ತ ಶಿಷ್ಯತ್ವದ ಗುರುತಾಗಿರುವದಿಲ್ಲ.

ನಿನ್ನ ಅನುದಿನದ ಒಂದಾಗಿ ಕೂಡಿ ಬರುವ ಸಮಯವನ್ನು ನೀನು ಆನಂದಿಸುವಾಗ, ನಿನ್ನ ನಂಬಿಕೆಯು ಬೆಳೆಯುವುದು. ಅನಂತರದಲ್ಲಿ, ಜೀವನದ ಪರೀಕ್ಷೆಗಳನ್ನು ಅವಕಾಶಗಳನ್ನೂ ಎದುರಿಸುವಾಗ, ಆ ಚುರುಕಾದ ಮತ್ತು ಜಯಿಸುವ ನಂಬಿಕೆಯನ್ನು ಹೇಗೆ ಉಪಯೋಗಿಸುವುದು ಎಂಬುದನ್ನು ನೀನು ತಿಳಿದುಕೊಂಡಿರುವಿ.

**ಆತ್ಮಿಕ ತಪಾಸಣೆ**

1. ನನ್ನ ಅನುದಿನದ ಚಟುವಟಿಕೆಗಳಲ್ಲಿ, ಕಾರ್ಯ ಮಾಡುವ ನಂಬಿಕೆಯನ್ನು ಅನುಭವಿಸುತ್ತಿರುವೆನೋ?

2. ಪ್ರತಿಯೊಂದು ಅವಕಾಶದಲ್ಲಿ ಇಲ್ಲವೇ ಒಂದು ಅವಕಾಶದಲ್ಲಿ, ಪ್ರತಿಯೊಂದು ಸಮಸ್ಯೆಯಲ್ಲಿ, ಕ್ರಿಸ್ತನ ಪರಿಪೂರ್ಣತೆಯನ್ನು ರುಜುವಾತು ಪಡಿಸುವಲ್ಲಿ ಒಂದು ಸಮಸ್ಯೆಯನ್ನು ನಾನು ನೋಡುತ್ತಿರುವೆನೋ ?

3. ದೇವರ ಕಾರಣವು ಪ್ರಗತಿಯಾಗುವದನ್ನು ನಾನು ಬಯಸುವೆನೋ ಇಲ್ಲವೇ ಆತನ ಕಾರಣವನ್ನು ನಾನೇ ಪ್ರಗತಿ ಪಡಿಸುವುದು ನನ್ನ ಅಪೇಕ್ಷೆಯಾಗಿದೆಯೋ ?

4. ದಿನದಿನವೂ ಕರ್ತನ ಮೇಲಿನ ಅವಲಂಭನೆಯನ್ನು ಪ್ರತಿಬಿಂಬಿಸುವದರಿಂದ ನನ್ನ ಜೀವಿತವು ಗಲಿಬಿಲಿಗೊಳ್ಳದ್ದಾಗಿದೆಯೋ ?

*ಕರ್ತನೇ, ನಾನು ಮಾತಾಡಲಿಕ್ಕಾಗುವಂತೆ, ನನ್ನೊಂದಿಗೆ ಮಾತಾಡು,*
*ನಿನ್ನ ಸ್ವರದ ಸಜೀವ ಪ್ರತಿಧ್ವನಿಗಳಲ್ಲಿ,*
*ನೀನು ಹುಡುಕಿದಂತೆ, ಹುಡುಕಲು ನನ್ನನ್ನು ಬಿಡು,*
*ಕಳೆದು ಹೋದ, ಏಕಾಂಗಿಗಳಾದ, ತಪ್ಪು ಮಾಡುವ ನಿನ್ನ ಮಕ್ಕಳನ್ನು.*

*ನಾನು ಬೋಧಿಸಲಿಕ್ಕಾಗುವಂತೆ, ಕರ್ತನೇ, ನನಗೆ ಬೋಧಿಸು,*
*ನೀನು ಕೊಡುವ ಅಮೂಲ್ಯ ಸಂಗತಿಗಳನ್ನು ;*
*ಕೊಡು ರೆಕ್ಕೆಗಳನ್ನು ನನ್ನ ಮಾತುಗಳಿಗೆ, ಅವು ತಲಪಲಿಕ್ಕಾಗುವಂತೆ,*
*ಅನೇಕ ಹೃದಯಗಳಲ್ಲಿ ಅಡಗಿದ ಆಳಗಳನ್ನು.*

*ಕರ್ತನೇ, ತುಂಬಿಸು ನನ್ನ, ನಿನ್ನ ಪೂರ್ಣತೆಯಿಂದ,*
*ನನ್ನ ಹೃದಯವು ತುಂಬಿ ಹೊರಸೂಸುವ ವರೆಗೆ*
*ಹೊತ್ತಿ ಕೊಳ್ಳುವ ವಿಚಾರದಲ್ಲಿ, ಜ್ವಲಿಸುವ ಶಬ್ದದಲ್ಲಿ,*
*ನಿನ್ನ ಪ್ರೀತಿಯನ್ನು ಹೇಳಲು, ನಿನ್ನ ಸ್ತುತಿಯನ್ನು ತೋರಿಸಲು.*

Frances Ridley Havergal.

# ಅಧ್ಯಾಯ 6

# ಹೇಳುವದಕ್ಕೆ ಸಮಯ

ಒಂದು ರಾತ್ರಿ ಒಂದು ಆರಾಧನೆಯಲ್ಲಿ ನಾನು ಮಾತಾಡಿದ ನಂತರ, ಒಬ್ಬ ತಂದೆ ನನ್ನ ಬಳಿಗೆ ಬಂದನು ಮತ್ತು ತನಗಾಗಿ ನಾನು ಪ್ರಾರ್ಥಿಸಬಹುದೋ ಎಂದು ಕೇಳಿದನು. ಅಸಾಮಾನ್ಯವಾದ ಬಲದಲ್ಲಿ ದೇವರು ನಮ್ಮೊಂದಿಗಿದ್ದನು. ತನ್ನ ಜೊತೆ ಕೆಲಸದವರಿಗೂ ಸ್ನೇಹಿತರಿಗೂ ಸಾಕ್ಷಿಕೊಡುವದರಲ್ಲಿ ತನಗೆ ಸಮಸ್ಯೆಯಿದೆಯೆಂದು ತಂದೆಯು ಹೇಳಿದನು. ಯಾರಿಗಾದರೂ ಸಹಾಯ ಮಾಡಲು ಹುಡುಕುವಾಗ ನಾನು ಮಾಡುವಂತೆ, ಮೌನವಾಗಿದ್ದು, ಈ ಮನುಷ್ಯನ ಜೀವನದಲ್ಲಿ ನಿಜವಾದ ಅಗತ್ಯತೆಯು ಯಾವುದು ಎಂಬುದನ್ನು ಅರಿತುಕೊಳ್ಳುವದಕ್ಕಾಗಿ ಕರ್ತನನ್ನು ಕೇಳಿಕೊಂಡೆನು. ''ಅದು ಅವನ ನಿಜವಾದ ಸಮಸ್ಯೆಯೆಂದು ನಾವು ಯೋಚಿಸುವದಿಲ್ಲ. ಈಗ ನೀನು ನನ್ನೊಂದಿಗೆ ಮೊಣಕಾಲೂರಿಕೊಂಡು ಸಾಕ್ಷಿ ಕೊಡುವದರ ಬಗ್ಗೆ ನಿನಗೆ ಯಾಕೆ ಸಮಸ್ಯೆ ಇರುವುದು ಎಂಬುದನ್ನು ತೋರಿಸಲು ದೇವರನ್ನು ಕೇಳಿಕೋ ?'' ಎಂದೆನು. ಯಾವ ಹಿಂಜರಿಯುವಿಕೆ ಇಲ್ಲದೇ ತಂದೆಯು ಮೊಣಕಾಲೂರಿದನು ಮತ್ತು ಪ್ರಾರ್ಥಿಸಿದನು.

ಅವನು ಹಾಗೆ ಮಾಡಿದಂತೆ. ಕರ್ತನು ಮೌನ ತುಟಿಗಳಿಗಿಂತ ಹೆಚ್ಚು ಆಳವಾದ ಸಮಸ್ಯೆಯನ್ನು ಕರ್ತನು ತಾನೇ ಬಹಿರಂಗ ಪಡಿಸುತ್ತಿದ್ದನೆಂದು ನನಗೆ

ತೋರಿತು. ಮಹಾ ಮುರಿಯುವಿಕೆಯೊಂದಿಗೆ ಅವನು ತನ್ನ ಮನೆಯಲ್ಲಿ ಎಂಥಾ ಕ್ರೂರಿಯಾಗಿದ್ದನು ಮತ್ತು ಪ್ರತ್ಯೇಕವಾಗಿ ತನ್ನ ಮಕ್ಕಳನ್ನು ಕುರಿತು ಹೇಗೆ ಸರ್ವಾಧಿಕಾರಿ ಯಂತೆ ವರ್ತಿಸುತ್ತಿದ್ದನು ಎಂಬುದನ್ನು ಕರ್ತನಿಗೆ ಹೇಳಿದನು. ಹೃದಯ ಪೂರ್ವಕವಾದ ಮಾನಸಾಂತರದಿಂದ ಕ್ಷಮೆಗಾಗಿ ಕರ್ತನನ್ನು ಬೇಡಿಕೊಂಡನು.

ಆ ರಾತ್ರಿ, ಸಾಕ್ಷಿ ಕೊಡುವದರಲ್ಲಿಯ ಅವನ ಸಮಸ್ಯೆಯನ್ನು ಎಂದೂ ಚರ್ಚಿಸಲಿಲ್ಲ, ಯಾಕಂದರೆ ಯೇಸುವು ಈ ತಂದೆಗೆ ಒಂದು ಹೊಸದಾದ ಹಾಗೂ ಜೀವಿಸುವ ಮಾರ್ಗದಲ್ಲಿ ತನ್ನನ್ನು ಪ್ರಕಟಿಸಿಕೊಂಡಿದ್ದನು. ಮರುದಿನ ರಾತ್ರಿ, ಅವನು ಹೊಳೆಯುವ ಮುಖದೊಂದಿಗೆ ಕೂಟಕ್ಕೆ ಬಂದನು. ''ಇಡೀ ದಿನ ಯೇಸುವಿನ ಬಗ್ಗೆ ಇತರರಿಗೆ ಹೇಳದೇ ಮೌನವಾಗಿರಲು ನಾನು ಶಕ್ತನಾಗಲಿಲ್ಲ'' ಎಂದು ಸಂತೋಷದಿಂದ ನನಗೆ ಹೇಳಿದನು.

ಬೈಬಲಿನಲ್ಲಿ ಎಲ್ಲಿಯೂ ಮಾರ್ಪಾಟ ಹೊಂದದ ಜನರಿಗೆ ಕಾಲ್ಪನಿಕ ''ರಕ್ಷಣೆಯ ಯೋಜನೆಯನ್ನು'' ಕೊಡಬೇಕೆಂದು ನಮಗೆ ಹೇಳಲ್ಪಟ್ಟಿರುವದಿಲ್ಲ : ಹೀಗಿದ್ದರೂ, ಕರ್ತನಾದ ಯೇಸು ಕ್ರಿಸ್ತನೊಂದಿಗೆ ಸತತವಾದ ಅನ್ಯೋನ್ಯತೆಯಲ್ಲಿ ನಡೆಯಬೇಕೆಂದು ಬೋಧಿಸಲ್ಪಟ್ಟಿದ್ದೇವೆ, ಅದರಿಂದ, ಅವರೊಂದಿಗೆ ನಾವು ಸುವಾರ್ತಾ ಸಂದೇಶವನ್ನು ಹಂಚಿಕೊಳ್ಳುವಾಗ, ನಮ್ಮ ಮೂಲಕವಾಗಿ ಆತನ ಪ್ರೀತಿಯು ಉಕ್ಕಿ ಹರಿಯುವಿಕೆಯು ಅವರ ಹೃದಯಗಳು ದೇವರ ವಾಕ್ಯದ ಸತ್ಯವನ್ನು ಕೇಳಲು ಪ್ರೇರಿಸುವವು.

ಹೀಗಿದ್ದರೂ, ಸಜೀವ ಅನ್ಯೋನ್ಯತೆಯಲ್ಲಿ ಆತನೊಂದಿಗೆ ನಮ್ಮ ಹೃದಯಗಳು ಸಂಪರ್ಕದಲ್ಲಿ ಇಲ್ಲದೇ ಇರುವ ದಿನಗಳಲ್ಲಿ ನಮ್ಮ ಸಾಕ್ಷಿಯು ಮಹತ್ವವಲ್ಲದ್ದೂ ಫಲವಿಲ್ಲದ್ದೂ ಆಗಿರುವುದನ್ನು ನಾವು ಕಂಡುಕೊಳ್ಳುತ್ತೇವೆ. ಅಂಥ ದಿನಗಳಲ್ಲಿ ನಮ್ಮ ತುಟಿಗಳು ಇತರ ಜನರೊಂದಿಗೆ ದೇವರ ವಾಕ್ಯವನ್ನು ಹಂಚದಂತೆ ಬಂದು ಮಾಡಲ್ಪಟ್ಟಿರುತ್ತವೆ. ಮತ್ತು ನಮ್ಮ ಸುತ್ತಲಿರುವ ಕ್ರಿಸ್ತನನ್ನು ತಿರಸ್ಕರಿಸುವ ಜಗತ್ತಿಗೆ ಕರ್ತನನ್ನು ಸತತವಾಗಿ ಪ್ರಕಟಿಸುವದಕ್ಕೆ ನಾವು ಅಶಕ್ತರಾಗುತ್ತೇವೆ.

ಒಂದಾಗಿ ಕೂಡಿ ಬರುವ ಸಮಯದಲ್ಲಿ ದೇವರೊಂದಿಗೆ ಪ್ರತಿ ದಿನವನ್ನು ಪ್ರಾರಂಭಿಸುವುದು ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಮಾರ್ಪಾಟ ಹೊಂದದ ಜನರಿಗೆ ಹೇಳುವ ಅವಕಾಶ ನಿಮಗಿದ್ದಾಗ ಸುಲಭವಾಗಿ ಅಡ್ಡ ಬರುವ ಆತಂಕಗಳನ್ನು ತಪ್ಪಿಸಲು ಸಹಾಯ ಮಾಡುವ ಪ್ರಥಮ ಹೆಜ್ಜೆಯಾಗಿದೆ. ದೇವರಿಲ್ಲದ ಜಗತ್ತಿನಲ್ಲಿ ಆತ್ಮಿಕವಾಗಿ ಫಲಭರಿತ ಜೀವಿತವನ್ನು ಯತಾರ್ಥವಾಗಿ ಅನುಭವಿಸುವದರ ಹಾಗೂ ''ಸುವಾರ್ತೆಯ ಮಾರಾಟಗಾರನಾಗಿರುವದರ'' ಮಧ್ಯದಲ್ಲಿ ಬಹಳ ಭಿನ್ನತೆಯಿರುತ್ತದೆ. ವಿಶ್ವಾಸಿಯು ಜಗತ್ತಿನಲ್ಲಿ ಎದ್ದು ನಿಂತುಕೊಂಡು, ಕ್ರಿಸ್ತನಿಗೆ ಸಾಕ್ಷಿ ಕೊಡುವಂತೆ ತೋರುವ ಕೆಲವು ಮಾತುಗಳನ್ನು ಹೇಳಲಿಕ್ಕೆ ನೇಮಕ ಮಾಡಲ್ಪಟ್ಟಿರುವದಿಲ್ಲ. ಅದರ ಬದಲು, ಹೊಸದಾಗಿ ಹುಟ್ಟಿದ ಕ್ರೈಸ್ತನು ಈಗಾಗಲೇ ಕ್ರಿಸ್ತನಲ್ಲಿ ತಾನು ಇರುವನೆಂಬ ಭರವಸೆ ಹೊಂದಿಕೊಂಡಿರ ಬೇಕು ಮತ್ತು ಆ ಸ್ಥಾನದಿಂದ ಅವನು ಯೇಸುವಿನ ಬಗ್ಗೆ ಸಂತೋಷದಿಂದ ಮಾತಾಡುವನು.

ಕರ್ತನು ತನ್ನ ಶಿಷ್ಯರಿಗೆ ಹೀಗೆ ಹೇಳಿದ್ದಾನೆ : **''ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ, ಅವನೇ ಬಹಳ ಫಲಕೊಡುವನು ; ನೀವು ನನ್ನನ್ನು ಬಿಟ್ಟು ಏನನ್ನು ಮಾಡಲಾರಿರಿ'' (ಯೋಹಾನ 15:5)** ಆತನಲ್ಲಿ ನೆಲೆಗೊಳ್ಳುವುದು ಮತ್ತು ಆತನ ಬಗ್ಗೆ ಇತರರಿಗೆ ಹೇಳುವುದು ನಿಮ್ಮ ಜವಾಬ್ದಾರಿಕೆಯಾಗಿದೆ ; ಫಲವು ಆತನ ಜವಾಬ್ದಾರಿಕೆಯಾಗಿದೆ !

ಪಂಚಾಶತ್ತಮ ದಿನದ ನಂತರ, ಶಿಷ್ಯರು ಆಗಲೇ ವೈಯಕ್ತಿಕವಾಗಿ ತಮ್ಮ ಕರ್ತನೊಂದಿಗೆ ನಡೆದಾಡಿದ್ದು ಹಾಗೂ ಮಾತನಾಡಿದ್ದು, ಆಸಕ್ತಿಯನ್ನು ಆನಂದವನ್ನೂ ಹಿಡಿದಿಟ್ಟುಕೊಳ್ಳಲಾರದವರಾಗಿದ್ದರು. ಅವರು ಹೋದಲ್ಲೆಲ್ಲಾ ಜನರಿಗೆ - ಕ್ರಿಸ್ತನಿಗೆ ವಿರುದ್ಧವಾದವರಿಗೂ ಸಹ **ದೇವರ ಅದ್ಭುತಕಾರ್ಯಗಳ ಬಗ್ಗೆ ಹೇಳಿದರು** (ಅ.ಕೃ. 2:11). ಅವರ ಕೇಳುಗರ ಕುತೂಹಲವು ಕೆರಳಿಸಲ್ಪಟ್ಟಿತು, ಮತ್ತು ಅದರ ಪರಿಣಾಮವಾಗಿ ಸಾವಿರಾರು ಜನರು ಕ್ರಿಸ್ತನ ಒಡೆತನದ ಪ್ರಸ್ತಾಪದ ಮೇಲೆ ಪೇತ್ರನು ಬಹಿರಂಗವಾಗಿ ಪ್ರಸಂಗಿಸುವದನ್ನು ಕೇಳಲು ಕೂಡಿಬಂದರು. ಅವನು ಪ್ರಸಂಗಿಸಿದಂತೆ, ವೈಯಕ್ತಿಕ ಪಾಪದ ಆಳವಾದ ಅರುಹು ಜನಸಮೂಹದ ಮೇಲೆ ಬಿತ್ತು. ಇತ್ತೀಚೆಗೆ ಕ್ರಿಸ್ತನನ್ನು ಶಿಲುಬೆಗೆ

ಹಾಕುವದಕ್ಕೆ ಜವಾಬ್ದಾರರಾಗಿದ್ದ ಅದೇ ಜನರು **''ಸಹೋದರರೇ, ನಾವೇನು ಮಾಡಬೇಕು ?''** ಎಂದು ಗೋಳಿಟ್ಟರು. (ಅ.ಕೃ. 2:37). ಆ ದಿನದಂದು ಶಿಷ್ಯರು ವೈಯಕ್ತಿಕ ಸಾಕ್ಷಿ ಮತ್ತು ಪೇತ್ರನ ಬಹಿರಂಗ ಪ್ರಸಂಗವು ಪ್ರಾಣಗಳ ಮಹಾ ಸುಗ್ಗಿಯನ್ನು ಮಾಡಲು ಒಂದುಗೂಡಿಸಲ್ಪಟ್ಟವು.

ಅನಂತರದಲ್ಲಿ, ವಿರೋಧವಾಗಿದ್ದ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾಗ, ಶಿಷ್ಯರು ಒಂದು ವಿಶೇಷವಾದ ಪ್ರಾರ್ಥನಾ ಕೂಟದಲ್ಲಿ ದೇವರೊಂದಿಗೆ ಕೂಡಿಬಂದರು. ''ಧಾರ್ಮಿಕ'' ಜನರು, ಶಿಷ್ಯರನ್ನು ಮತ್ತು ಅವರ ಸಂದೇಶವನ್ನು ದ್ವೇಷಿಸಿದ ಜನರು ಯೇಸುವಿನ ಬಗ್ಗೆ ಮಾತನಾಡಬಾರದೆಂದು ಶಿಷ್ಯರನ್ನು ಪ್ರತಿಬಂಧಿಸಿದ್ದರು. ಈ ಮೊದಲು, ಕರ್ತನಾದ ಯೇಸುವು ಮೇಲಂತಸ್ತಿನ ಕೊಠಡಿಯಲ್ಲಿ ಹೇಗೆ ಸಾಕ್ಷಿ ಕೊಡ ಬೇಕೆಂದು ಶಿಷ್ಯರಿಗೆ ಬೋಧಿಸಿರಲಿಲ್ಲ ; ಹೀಗಿದ್ದರೂ, ಈಗ ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟವರಾಗಿ, ಈ ಆಸಕ್ತಿಯುಳ್ಳ ಕ್ರೈಸ್ತರು ಸ್ವಪ್ರೇರಣೆಯಿಂದ ಪ್ರತಿಕ್ರಿಯೆ ತೋರಿಸಿದರು : **''ನಾವಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು''.** (ಅ.ಕೃ.4:20) ಅವರು ಪುನಃ ದೇವರ ಸನ್ನಿಧಿಯಲ್ಲಿ ಇದ್ದರು. ಉತ್ಥಾನವಾದ ಕ್ರಿಸ್ತನ ವಾಸ್ತವಿಕೆಯೊಂದಿಗೆ ಅವರ ಹೃದಯಗಳು ಉರಿಯುತ್ತಿದ್ದವು. ಅವರು ಸುಮ್ಮನಿರಲಿಕ್ಕಾಗಲಿಲ್ಲ.

ಅರವತ್ತರ ದಶಕದ ಪ್ರಾರಂಭದಲ್ಲಿ ಡೊರೊತಿ ಮತ್ತು ನಾನು ಆಗ " The Iron Curtain" ಎಂದು ಕರೆಯಲ್ಪಡುತ್ತಿದ್ದರ ಹಿಂದೆ ಸೇವೆ ಮಾಡುತ್ತಿದ್ದೆವು. ಸರ್ವಾಧಿಕಾರಿ ಆಳಿಕೆಯ ಅಧೀನತೆಯಲ್ಲಿ ಸಭಾಪಾಲನೆಯ ಸೇವೆ ಮಾಡುವವರ ಕಷ್ಟಗಳ ಬಗ್ಗೆ ಪ್ರಶ್ನಿಸಿದ್ದಕ್ಕೆ ಉತ್ತರವಾಗಿ ಒಬ್ಬ ನಂಬಿಗಸ್ಥ ಸಭಾಪಾಲಕನು ಹೀಗೆ ಉತ್ತರ ಕೊಟ್ಟನು : ''ನಾವು ಈಗ ಸಂಖ್ಯೆಯಲ್ಲಿ ಅಲ್ಪರಾಗಿದ್ದೇವೆ, ಆದರೆ ನಾವು ಯಾರಾಗಿದ್ದೇವೆ ಎಂಬದನ್ನಾದರೂ ತಿಳಿದಿದ್ದೇವೆ. ಉಳಿದಿರುವ ನಾವು ಉತ್ಥಾನವಾದ ಕ್ರಿಸ್ತನನ್ನು ಬಲ್ಲವರಾಗಿದ್ದೇವೆ ಮತ್ತು ನಾವು ಅಜೇಯರಾಗಿದ್ದೇವೆ'' (ಅಂಥ ಪರೀಕ್ಷೆಗಳು ನನ್ನ ಕೆಲವು ವಾಚಕರ ಅನುಭವವಾಗಿದೆ. ಆದರೆ ಸಂಗತಿಗಳು ಸಂಭವಿಸುತ್ತಿರುವ ರೀತಿಯು ಕರ್ತನಾದ ಯೇಸುವು ಬೇಗನೇ ಹಿಂದಿರುಗದಿದ್ದರೆ, ನಮ್ಮಲ್ಲಿ ಉಳಿದ ಅನೇಕರು ಸಹ

ನಾವೆಂದೂ ಸಾಧ್ಯವೆಂದು ವಿಚಾರಿಸದ ರೀತಿಯಲ್ಲಿ ಕ್ರಿಸ್ತನಿಗಾಗಿ ಎಲ್ಲಾ ಸಾಹಸ ಕಾರ್ಯಗಳಿಗೆ ಕರೆಯಲ್ಪಡುವೆವು).

ಡೊರೊತಿಯು ತನ್ನ ಒಂದಾಗಿ ಕೂಡಿ ಬರುವ ಸಮಯದ ನೋಟ ಪುಸ್ತಕದಲ್ಲಿ ಹೀಗೆ ದಾಖಲೆ ಮಾಡಿರುವಳು: ''ಆತನ ಆತ್ಮವು ನನ್ನ ಮುಖಾಂತರ ಹರಿಯ ಬೇಕೆಂದಿದ್ದರೆ, ಆತನ ಮರಣವು ಮೌಲ್ಯವು ಪ್ರತಿಯೊಂದು ಉಸುರಿನೊಂದಿಗೆ ಹರಿಯಲ್ಪಡಬೇಕು.'' ನಿಜವಾಗಿಯೂ ಪೂರ್ವದ ಶಿಷ್ಯರು ತಮ್ಮ ಧೈರ್ಯದ ಸಾಕ್ಷಿಗಾಗಿ ದೊಡ್ಡ ಬೆಲೆಯನ್ನು ಕೊಟ್ಟರು. ಆದರೆ ಯೇಸುವಿನ ಬಗ್ಗೆ ಮಾತಾಡಿದ್ದಕ್ಕಾಗಿ ಸೆರೆಮನೆಗೆ ಹಾಕಲ್ಪಡುವಂತೆ ಭಯಪಡಿಸಲ್ಪಟ್ಟಾಗ, ಅವರು ಪ್ರಾರ್ಥನೆಗಾಗಿ ಕೂಡಿ ಬಂದರು. ''ಅವರೆಲ್ಲರು ಪವಿತ್ರಾತ್ಮಭರಿತರಾಗಿ ದೇವರ ವಾಕ್ಯವನ್ನು ಧೈರ್ಯದಿಂದ ಹೇಳುವವರಾದರು.'' (ಅ.ಕೃ.4:31) ಎಂದು ಓದುತ್ತೇವೆ.

**ಪರಿಣಾಮಕಾರಿಯಾದ ಸುವಾರ್ತಾ ಸೇವೆಯು ಹೊರ ಸೂಸುವಿಕೆಯಿಂದ - ಆತ್ಮನಿಂದ ತುಂಬಿಸಲ್ಪಟ್ಟ ವಿಶ್ವಾಸಿಯ ಜೀವನದಿಂದ ಪವಿತ್ರಾತ್ಮನ ಹೊರನಿಸೂಸುವಿಕೆ ಯಿಂದ ಪರಿಣಾಮಗೊಳ್ಳುತ್ತದೆ, ಹೀಗೆ ಆಂತರ್ಯದಲ್ಲಿ ವಾಸಿಸುವ ಕ್ರಿಸ್ತನ ವಾಸ್ತವಿಕತೆಯನ್ನು ಇತರರಿಗೆ ಪ್ರಕಟಿಸುತ್ತದೆ.**

ನಾವು ಹೊಸ ಒಡಂಬಡಿಕೆಯನ್ನು ಓದುವಂತೆ ಆದಿ ಸಭೆಯಲ್ಲಿ ಸುವಾರ್ತಾ ಸೇವೆಯೂ ಆಕರ್ಷಿಸುವ ವೇದಿಕೆಯ ವ್ಯಕ್ತಿತ್ವದ ಪರಿಣಾಮ ಮಾತ್ರವೇ ಆಗಿರಲಿಲ್ಲ ಎಂಬುದನ್ನು ಗಮನಿಸುತ್ತೇವೆ. ಪಂಚಾಶತ್ತಮ ದಿನದಂದು, ಶಿಷ್ಯರು **ದೇವರ ಅದ್ಭುತಕರವಾದ ಕಾರ್ಯಗಳನ್ನು** (ಅ.ಕೃ. 2:11) ವೈಯಕ್ತಿಕವಾಗಿ ಮೊದಲು ಪ್ರಸಂಗಿಸಲು ಶಿಷ್ಯರು ಹೋಗಿರದಿದ್ದರೆ, ಪೇತ್ರನು ಪ್ರಸಂಗಿಸಿದ್ದನ್ನು ಕೇಳಲು ಜನರ ಗುಂಪುಗಳು ಇರುತ್ತಿದ್ದಿಲ್ಲ.

ಯೇಸು ಕ್ರಿಸ್ತನ ಶುದ್ಧತೆ, ಜೀವ ಮತ್ತು ಪ್ರೀತಿಯು ನಿರಾಶೆಯುಳ್ಳ ಜಗತ್ತಿಗೆ ವಿಶ್ವಾಸಿಯ ಹೃದಯದಿಂದ ಹರಿದು ಬರುವಾಗ, ಜನರು ಮೃದುವಾಗಿ ಮಾಡಲ್ಪಡುವರು ಮತ್ತು ದೇವರ ಸತ್ಯವನ್ನು ಕೇಳಲು ತುಂಬಿಸಲ್ಪಡುವರು ಮತ್ತು ದೇವರ ಸತ್ಯವನ್ನು ಕೇಳಲು ಸಿದ್ಧರಾಗುವರು. ಆದುದರಿಂದ, ಸತತವಾಗಿ

**''ಆತ್ಮನಿಂದ ತುಂಬಿಸಲ್ಪಡಲು''** (ಎಫೆಸ 5:18) ಆತನ ವಾಕ್ಯದ ಬೆಳಕಿನಲ್ಲಿ ಪ್ರತೀ ದಿನ ಕರ್ತನನ್ನು ಸಂದರ್ಶಿಸುವ ಅಗತ್ಯತೆ ನಮಗಿದೆ.

# ಸುವಾರ್ತೆಯ ಹೊರಸೂಸುವಿಕೆ

ನನ್ನ ಕ್ರೈಸ್ತ ಜೀವನದ ಮೊದಲ ದಿನಗಳಲ್ಲಿ, ನಾವು ಯುವ ಜನರ ಅನ್ಯೋನ್ಯತೆಯ ಭಾಗವಾಗಿದ್ದೆನು. ನಾವು ''ಜ್ಞಾನಕ್ಕಿಂತ'' ಹೆಚ್ಚು ''ಆಸಕ್ತಿ'' ಯನ್ನು ನಿಶ್ಚಯವಾಗಿ ಹೊಂದಿಕೊಂಡಿದ್ದೆವು. ಇದಿದ್ದರೂ ಸಹ, (ಇಲ್ಲವೇ ಇದರ ಕಾರಣದಿಂದ) ಮಾರ್ಪಡದಿದ್ದ ನಮ್ಮ ಸ್ನೇಹಿತರ ಮಧ್ಯದಲ್ಲಿ ನಮ್ಮನ್ನು ಉಪಯೋಗಿಸಲು ಯೋಗ್ಯರೆಂದು ದೇವರು ನೋಡಿದನು. ಯುವ ವಿಶ್ವಾಸಿಗಳಂತೆ, ನಾವು ಒಳಗೊಂಡಿದ್ದ ಈ ಕೆಲವು ಅನುಭವಗಳನ್ನು ಇಲ್ಲಿ ಹೇಳುವೆನು.

**ಔದ್ಯೋಗಿಕ ಜೀವನ :** ನನ್ನ ಮಾರ್ಪಡುವಿಕೆಯ ಸಮಯದಲ್ಲಿ, ನಾನು ಟೌನ ಕೌನ್ಸಿಲಿನ ಸಿವಿಲ್ ಎಂಜಿನಿಯರನ ಆಫೀಸಿನಲ್ಲಿ ನಾನು ಕೆಲಸ ಮಾಡುತ್ತಿದ್ದೆನು ಮತ್ತು ಅಧ್ಯಯನ ಮಾಡುತ್ತಿದ್ದೆನು. ಟೌನ ಹಾಲಿನಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ಒಂದು ದಿನ ಟೌನ ಕ್ಲೆರ್ಕನ ಆಫೀಸುಗಳಿಂದ ಕರೆ ಬಂದಿತು. ಅಲ್ಲಿ ನಾನು ಕಠಿಣವಾಗಿ ಎಚ್ಚರಿಸಲ್ಪಟ್ಟೆನು : ''ನಿನ್ನ ಹೆಚ್ಚಿನ ಕಾರ್ಯಕಲಾಪಗಳ ಬಗ್ಗೆ ಕೇಳಿದ್ದೇನೆ'' ಎಂದು ಅಧಿಕಾರಿಗಳ ಅಧಿಕಾರಿ ಹೇಳಿದನು. ಯುವಕರಾದ ನಾವು ಮಾಡುತ್ತಿದ್ದ ಸುವಾರ್ತಾ ಸೇವೆಗೆ ಸಂಬಂಧಿಸಿ ಅವನು ಈ ಮಾತುಗಳನ್ನು ಹೇಳಿದ್ದನು. ಪ್ರತಿ ರಾತ್ರೀ ವ್ಯಾಪಾರ ಕೇಂದ್ರಗಳು ಮುಚ್ಚಿದ ನಂತರ ಪ್ರಸಿದ್ಧ ಕೂಟಗಳು ನಡೆಯುವ ಸ್ಥಳದಲ್ಲಿ ಬಹಿರಂಗ ಸುವಾರ್ತಾ ಕೂಟಗಳನ್ನು ನಡಿಸುತ್ತಿದ್ದೆವು. ಪ್ರಾರಂಭಿಸುವಾಗ ಹಾದು ಹೋಗುತ್ತಿದ್ದವರು ಸುಲಭವಾಗಿ ಬರುತ್ತಿರಲಿಲ್ಲ. ಬೇರೆ ಬೇರೆ ರೀತಿಯಲ್ಲಿ ಜನರನ್ನು ಆಕರ್ಷಿಸಿದ ಮೇಲೆ ಜನರು ಕೂಡಿ ಬರುತ್ತಿದ್ದರು. ಕೆಲವು ರಾತ್ರಿಗಳಲ್ಲಿ ಒಬ್ಬರಾಗಲೀ, ಇಬ್ಬರಾಗಲೀ ತಾವು ರಕ್ಷಕನ ಬಳಿಗೆ ಬರುವ ಅರಿಕೆ ಮಾಡುತ್ತಿದ್ದರು. ಅಂಥ ''ಧರ್ಮಾಂಧತೆಯನ್ನು'' ಬಿಟ್ಟು ಬಿಡಬೇಕೆಂದೂ ಟೌನ' ಹಾಲಿನ ಔದ್ಯೋಗಿಕ ಗೌರವ ದೊಂದಿಗೆ ಅಂಥ ಕಾರ್ಯಗಳನ್ನು

ಸಂಬಂಧಿಸಬಾರದೆಂದೂ ಟೌನ ಕ್ಲರ್ಕನು ಎಚ್ಚರಿಸಿದನು, ಅಂಥ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸಬೇಕೆಂದು ಎಚ್ಚರಿಸಿದನು. ಆದರೆ ಬಹಿರಂಗ ಕೂಟಗಳು ಫಲಕೊಡುತ್ತಿರುವಂತೆ ತೋರಿದ್ದರಿಂದ, ನಾವೆಲ್ಲಾ ಯುವ ಜನರು ಮುಂದುವರಿಯಲು ಯೋಚಿಸಿದೆವು.

ಅನಂತರದಲ್ಲಿ, ಬೈಬಲ್ ಕಾಲೇಜನಲ್ಲಿದ್ದಾಗ, ನಮ್ಮ ಕಾಲೇಜಿನ ಪ್ರೆಸಿಡೆಂಟರು ವಾರದ ಚಾಪಲ್ ಆರಾಧನೆಯಲ್ಲಿ ಹೀಗೆ ಹೇಳುತ್ತಿದ್ದ ಮಾತುಗಳನ್ನು ಜ್ಞಾಪಿಸಿ ಕೊಳ್ಳುತ್ತೇನೆ: ''ಬಹಿರಂಗದಲ್ಲಿ ಜನಸಮೂಹವನ್ನು ನಿಯಂತ್ರಿಸದಿದ್ದರೆ, ದೇವಾಲಯ ದಲ್ಲಿಯ ಶ್ರೋತೃಗಳ ಮನಸ್ಸುಗಳನ್ನು ಸೆರೆಹಿಡಿಯಲಾರಿರಿ.'' ನಾನು ಇದನ್ನು ಕೇಳಿದಾಗ, ನಾವು ಯುವ ಜನರು ಬಹಿರಂಗ ಸುವಾರ್ತಾ ಕೂಟಗಳನ್ನು ಮುಂದುವರಿಸಿದ್ದರ ಬಗ್ಗೆ ನಾನು ಕೃತಜ್ಞತೆ ಸಲ್ಲಿಸಿದೆನು.

ನಾನು ಮಾರ್ಪಾಟ ಹೊಂದಿದ ಕೂಡಲೇ, ನಾನು ಕ್ರಿಸ್ತನಲ್ಲಿ ಕಂಡುಕೊಂಡ ನನ್ನ ಹೊಸ ವಿಶ್ವಾಸದ ಬಗ್ಗೆ ಎಲ್ಲಾ ಔದ್ಯೋಗಿಕ ಸಹಪಾಠಿಗಳಿಗೆ ಸಾಕ್ಷಿ ಕೊಟ್ಟೆನು. ಆಗ ಸಾಕ್ಷಿ ಕೊಡಲು ಅವಕಾಶವಿಲ್ಲದ, ಆಫೀಸಿಗೆ ಸಂಬಂಧಿಸಿದ ಒಬ್ಬ ವ್ಯಕ್ತಿಯನ್ನು ಜ್ಞಾಪಿಸಿ ಕೊಂಡೆನು. ಪ್ರತಿ ರಾತ್ರಿ ಹೊಲಸು ನೆಲಗಳನ್ನು ಸ್ವಚ್ಛ ಮಾಡಲು ಬರುತ್ತಿದ್ದ ಮಹಿಳೆ ಆಕೆಯಾಗಿದ್ದಳು. ಒಂದು ರಾತ್ರಿ ನನ್ನ ಜೊತೆ ಕೆಲಸದವರು ಹೊರಟು ಹೋದ ಮೇಲೆ, ನೆಲತಿಕ್ಕುವ ಬ್ರಶ್‌ಗಳನ್ನು ಬಕೇಟನ್ನು ಕಂಡುಕೊಂಡೆನು. ಬೇಗನೇ ನೆಲಗಳು ಸ್ವಚ್ಛವಾದವು: ಆ ಮಹಿಳೆ ಬರುವದನ್ನು ಕಾದುಕೊಂಡಿದ್ದೆನು. ''ನಿನ್ನ ಕೆಲಸವು ಮಾಡಲ್ಪಟ್ಟಿದೆ'' ಎಂದು ಸಂತೋಷದಿಂದ ಉದ್ಗರಿಸಿದೆನು. ಆಶ್ಚರ್ಯದ ಮೌನದ ನಂತರ, ಟೀ ಕುಡಿಯಲು ಆಕೆ ನನ್ನೊಂದಿಗೆ ಕೂತುಕೊಂಡಳು. ನಮ್ಮ ಸಂವಾದದಲ್ಲಿ ಆಕೆಗೆ ಯೇಸುವಿನ ಬಗ್ಗೆ ಹೇಳಲು ಶಕ್ತನಾದೆನು. ನಾವು ನಡೆದು ಹೋಗಿ ಒಂದಾಗಿ ಪ್ರಾರ್ಥಿಸಿದಂತೆ ಆಕೆಯ ಕಣ್ಣುಗಳಿಂದ ಸುರಿದ ಕಣ್ಣೀರನ್ನು ನಾವು ಯಾವಾಗಲೂ ಜ್ಞಾಪಿಸಿಕೊಳ್ಳುತ್ತೇನೆ.

**ಸಾಮಾಜಿಕ ಜೀವನ:** ನಾನು ನನ್ನ ಇಪ್ಪತ್ತೊಂದನೆಯ ಜನ್ಮ ದಿನವನ್ನೂ ಜ್ಞಾಪಿಸಿಕೊಳ್ಳುತ್ತೇನೆ. ಅದು ಆ ದಿನಗಳಲ್ಲಿ ಇಂಗ್ಲಂಡಿನಲ್ಲಿ ಬಹಳ ವಿಶೇಷವಾದ

ಸಂದರ್ಭವಾಗಿತ್ತು ಅಂಥ ಸಂಗತಿಯು ದೊಡ್ಡ ಔತಣದಿಂದಲೂ ಅನಂತರ ಡಾನ್ಸಿನಿಂದಲೂ ಆಚರಿಸಲ್ಪಡುತ್ತಿತ್ತು. ಆದರೆ ನಾನು ಇಪ್ಪತ್ತೊಂದು ವರ್ಷದವನಾದಾಗಲೇ, ದೇವರು ನರ್ತನವನ್ನು ನನ್ನ ಪಾದಗಳಿಂದ ತೆಗೆದು ನನ್ನ ಹೃದಯದಲ್ಲಿ ಇಟ್ಟಿದ್ದನು. ಹೀಗೆ ನನ್ನ ತಂದೆ ತಾಯಿಗಳು ಪ್ರೀತಿಯಿಂದ ಒದಗಿಸಿದ, ನನ್ನ ಇಪ್ಪತ್ತೊಂದನೆಯ ಜನ್ಮದಿನಾಚರಣೆಯ ಔತಣವನ್ನು ನೋಡಿದೆನು ಮತ್ತು ನನ್ನ ಸ್ನೇಹಿತರನ್ನು ಕ್ರಿಸ್ತನಿಗೆ ಗೆದ್ದುಕೊಳ್ಳಲು ಇನ್ನೊಂದು ಅವಕಾಶವಾಗಿ ಪಡೆದುಕೊಂಡೆನು. ಅದಕ್ಕಾಗಿ ಆ ಸಂದರ್ಭಕ್ಕೆ ಒಬ್ಬ ಸುವಾರ್ತಿಕರನ್ನು ನಾನು ಆಮಂತ್ರಿಸಿದ್ದೆನು. ಮಾರ್ಪಡದ ನನ್ನ ವ್ಯವಹಾರದ ಜೊತೆಗಾರನಿಗೆ ಮತ್ತು ಸ್ನೇಹಿತರಿಗೆ ಕಳುಹಿಸಲ್ಪಟ್ಟ ಆಮಂತ್ರಣ ಪತ್ರಿಕೆಯಲ್ಲಿ, ಊಟದ ನಂತರ ನನ್ನ ಒಬ್ಬ ಸ್ನೇಹಿತನು ಒಂದು ಭಾಷಣವನ್ನು ಮಾಡುವನು ಎಂದು ತಿಳಿಸಿದ್ದೆನು. ''ನಿಮ್ಮ ಬಹುಮಾನಗಳನ್ನಲ್ಲ ಆದರೆ ನೀವು ಹಾಜರಿರುವದನ್ನು ಕೇಳಿಕೊಳ್ಳಲಾಗಿದೆ'' ಎಂದು ಆಮಂತ್ರಣ ಕಾರ್ಡಿನ ಮೇಲೆ ಸೂಚಿಸಲಾಗಿತ್ತು. ಆ ರಾತ್ರಿಯಲ್ಲಿ ನನ್ನ ಸ್ನೇಹಿತರುಗಳಲ್ಲಿ ಒಬ್ಬನು, ಅದ್ಭುತವಾದ ರೀತಿಯಲ್ಲಿ ಮಾರ್ಪಾಟು ಹೊಂದಿದನು.

ಅನಂತರದಲ್ಲಿ, ಲಂಡನ್ನಿನಲ್ಲಿ ಒಂದು ಬಾಪ್ಟಿಸ್ಟ ಚರ್ಚಿನಲ್ಲಿ ಸಹಾಯಕ ಸಭಾಪಾಲಕನಾದಾಗ, ಯುವ ಜನರು, ಸಂದರ್ಭವನ್ನು ಮಾರ್ಪಾಟು ಹೊಂದದ ಸ್ನೇಹಿತರನ್ನು ಆಮಂತ್ರಿಸಲು ಆಕರ್ಷಕವಾದದ್ದನ್ನಾಗಿ ಮಾಡದೇ, ಎಂದೂ ನದಿಯ ಕಡೆಗೆ ಪ್ರವಾಸವನ್ನು ಗ್ರಾಮಗಳಲ್ಲಿ ಸಂಚರಿಸುವದನ್ನು ಇಲ್ಲವೆ ಪಂದ್ಯಾಟ ಸಾಯಂಕಾಲ ವನ್ನು ಸಂಘಟಿಸಲಿಲ್ಲ. ವ್ಯತ್ಯಾಸವಿಲ್ಲದೇ, ಅಂಥ ಪ್ರತಿಯೊಂದು ಚಟುವಟಿಕೆಯನ್ನು ಮುಗಿಸುತ್ತಿದ್ದರು. ಯಾಕೆ ಬೇಡ? ಯುವ ಜನರು ತಮ್ಮ ಯಂಗ ಪೀಪಲ್ಸ ಫೆಲೋಶಿಪ್‌ದ ಅಸ್ತಿತ್ವಕ್ಕಾಗಿ ಉದ್ದೇಶವು ಮೊದಲನೆಯದಾಗಿ ಕರ್ತನಲ್ಲಿ ತಮ್ಮನ್ನು ಬೆಳಿಸಿಕೊಳ್ಳುವುದು ಮತ್ತು ಎರಡನೆಯದಾಗಿ ತಮ್ಮ ಸ್ನೇಹಿತರು ಕ್ರಿಸ್ತನ ಕಡೆಗೆ ಮಾರ್ಪಾಟ ಹೊಂದುವಂತೆ ನೋಡಿಕೊಳ್ಳುವುದು ಎಂಬುದನ್ನು ಗುರುತಿಸಿದ್ದರು. ಯಂಗ ಪೀಪಲ್ಸ ಪೆಲೋಶಿಪ್ ದೇವರ ಆಶೀರ್ವಾದದಿಂದ ಅಭಿವೃದ್ಧಿಗೊಂಡಿದ್ದು ಆಶ್ಚರ್ಯಕರವಾದದ್ದಾಗಲಿಲ್ಲ.

**ಆತ್ಮಿಕ ಜೀವನ:** ಹತ್ತೊಂಭತ್ತನೆಯ ವಯಸ್ಸಿನಲ್ಲಿ ನಾನು ಮಾರ್ಪಾಟ ಹೊಂದುವ ಮೊದಲು ಬೈಬಲನ್ನು ಗಂಭೀರವಾಗಿ ಅಧ್ಯಯನ ಮಾಡಲು ನಾನು ಎಂದೂ ಗಂಭೀರನಾಗಿರಲಿಲ್ಲ. ಅದರ ಪರಿಣಾಮವಾಗಿ, ಆ ವಯಸ್ಸಿನಲ್ಲಿ ದೇವರ ವಾಕ್ಯದ ಬಗ್ಗೆ ಬಹಳ ಅಲ್ಪವಾದದ್ದನ್ನು ತಿಳಿದುಕೊಂಡಿದ್ದೆನು. ಆದರೆ ಕ್ರಿಸ್ತನನ್ನು ನನ್ನ ಕರ್ತನು ಮತ್ತು ರಕ್ಷಕನೆಂದು ಸ್ವೀಕರಿಸಿದ ನಂತರ, ಪ್ರತೀ ಸೋಮವಾರ ರಾತ್ರಿ ಹೊಸದಾಗಿ ಮಾರ್ಪಾಟ ಹೊಂದಿದ ನಮ್ಮಲ್ಲಿ ಕೆಲವರು ಒಂದಾಗಿ ಬೈಬಲ್ ಅಧ್ಯಯನ ಮಾಡಲು ಒಂದು ಮನೆಯಲ್ಲಿ ಒಂದಾಗಿ ಕೂಡಿ ಬರುತ್ತಿದ್ದೆವು. ನಮ್ಮ ಆಸಕ್ತಿಯು ಸಾಧ್ಯವಾದಷ್ಟು ಬೇಗನೇ ದೇವರ ವಾಕ್ಯವನ್ನು ನಮ್ಮ ಕೈಗಳ ಮುಖಾಂತರ ನಮ್ಮ ಹೃದಯಗಳೊಳಗೆ ಸ್ವೀಕರಿಸಿಕೊಳ್ಳುವದಾಗಿತ್ತು. ಆ ಪ್ರಾರಂಭದ ದಿನಗಳಲ್ಲಿಯೂ ಈ ಪುಸ್ತಕದಲ್ಲಿ ನಾನು ಸೂಚಿಸಿರುವ ಮೂಲ ವಿಧದಲ್ಲಿ ನಮ್ಮ ಬೈಬಲ್ ಅಧ್ಯಯನವನ್ನು ನಡಿಸುತ್ತಿದ್ದೆವು. ದೇವರ ವಾಕ್ಯವನ್ನು ನಾವು ಒಂದು ಧಾರ್ಮಿಕ ಪಠ್ಯಪುಸ್ತಕದಂತೆ ನೋಡಲಿಲ್ಲ, ಆದರೆ ನಮ್ಮ ಜೀವನದಲ್ಲಿ ನಮಗೆ ಮಾರ್ಗದರ್ಶನ ಮಾಡುವ ದಿಕ್ಸೂಚಿಯಂತೆ ಅದನ್ನು ಗಣನೆಗೆ ತಂದುಕೊಂಡೆವು.

ಆ ಸರಳವಾದ ಬೈಬಲ್ ಅಧ್ಯಯನಗಳ ನೇರ ಪರಿಣಾಮವಾಗಿ ಇತರ ಕೆಲವು ಯುವ ಜನರು ಮಾರ್ಪಾಟ ಹೊಂದಿದರು ಮತ್ತು ಸುವಾರ್ತಾ ಸಂದೇಶವನ್ನು ಹೆಚ್ಚಿನ ಕಡೆಗೆ ತಿಳಿಸಲು ವಿಚಾರ ಹುಟ್ಟಿಸಿಕೊಂಡೆವು. ನಮ್ಮಲ್ಲಿ ಯಾರಲ್ಲಿಯೂ ಕಾರು ಇಲ್ಲದ್ದರಿಂದ, ಬೈಸಿಕಲ್ ಟ್ರೇಲರನ್ನು ಮಾಡಿಕೊಳ್ಳುವ ವಿಚಾರವನ್ನು ಹೊಂದಿಕೊಂಡೆವು. ಯಾಂತ್ರಿಕತೆಯ ಮನಸ್ಸುಳ್ಳ ನಮ್ಮಲ್ಲಿ ಕೆಲವರು ಧ್ವನಿವರ್ಧಕ ಪದ್ಧತಿಯನ್ನೂ ತಿರುಗಿಸುವ ''ಗ್ರಾಮೊಫೋನನ್ನು'' ಉಪಯೋಗಿಸುವದನ್ನು ಹುಡುಕಿದರು. ನಮ್ಮ ವಾರಾಂತ್ಯದಲ್ಲಿ ಸುತ್ತಲಿನ ಗ್ರಾಮಗಳಿಗೆ, ನಮ್ಮ ಟ್ರೇಲರನ್ನು ಮತ್ತು ಧ್ವನಿವರ್ಧಕಗಳನ್ನು ಎಳೆದುಕೊಂಡು ಹೋಗುತ್ತಿದ್ದೆವು.

ಒಂದು ಪ್ರತ್ಯೇಕವಾದ ಗ್ರಾಮವನ್ನು ನಾನು ಚೆನ್ನಾಗಿ ಜ್ಞಾಪದಲ್ಲಿಟ್ಟು ಕೊಂಡಿದ್ದೇನೆ. ಅಲ್ಲಿ ಮೆಥೋಡಿಸ್ಟ ದೇವಾಲಯವು ಮುಚ್ಚಲ್ಪಟ್ಟಿದ್ದು ಅದರ ಬಾಗಿಲುಗಳಿಗೆ ಭದ್ರವಾಗಿ ಬೀಗಹಾಕಲ್ಪಟ್ಟಿತ್ತು. ಸುವಾರ್ತೆಯನ್ನು ಪ್ರಸಾರ

ಮಾಡುವ ನಮ್ಮ ಆಸಕ್ತಿಯಲ್ಲಿ, ಬೀಗದ ಕೈಗಳನ್ನು ನಾವು ಪಡೆದುಕೊಂಡೆವು, ಕಟ್ಟಡವನ್ನು ಉಪಯೋಗಿಸಲು ಅಪ್ಪಣೆಯನ್ನು ಪಡೆದುಕೊಂಡೆವು, ಬೆಂಚುಗಳ ಮೇಲಿನ ಧೂಳನ್ನು ಒರೆಸಿದೆವು, ನಮ್ಮ ಧ್ವನಿವರ್ಧಕದೊಂದಿಗೆ ವಿಲ್ಲೇಜ ಗ್ರೀನದೊಳಗೆ ಹೋದೆವು. ''ವಿಲ್ಲೇಜ ಪಬ್''ದ ಹೊರಗೆ ನಮ್ಮ ಪೀಠವನ್ನು ಸ್ಥಾಪಿಸಿದೆವು ಮತ್ತು ಅಮೇರಿಕದ ಹಾಡುಗಾರನಾದ ಬೆವ್ ಶೀಯಾನ ಅಚ್ಚ ಹೊಸ ರೆಕಾರ್ಡನ್ನು ನುಡಿಸುವದರಿಂದ ಬಹಿರಂಗ ಕೂಟವನ್ನು ಪ್ರಾರಂಭಿಸಿದೆವು. ಆ ಹಾಡುಗಾರನು ಇತ್ತೀಚೆಗೆ, ದೇಶದಲ್ಲಿ ಮೊದಲು ಕಾಣಿಸಿಕೊಂಡ ಬಿಲ್ಲಿ ಗ್ರಾಹಾಂ ಎಂಬ ಹೆಸರಿನ ಒಬ್ಬ ಯುವಕನೊಂದಿಗೆ ಇಂಗ್ಲಂಡನ್ನು ಸಂದರ್ಶಿಸಿದ್ದನು. ಸುವಾರ್ತಾ ಹಾಡುಗಳ ಮಧ್ಯದಲ್ಲಿ, ಸೋಪ ಬಾಕ್ಸಗಳ ಮೇಲೆ ನಿಂತುಕೊಂಡು ಒಬ್ಬೊಬ್ಬರಾಗಿ, ರಕ್ಷಕನಂತೆ ಮತ್ತು ಕರ್ತನಂತೆ ಕ್ರಿಸ್ತನಲ್ಲಿ ನಮ್ಮ ನಂಬಿಕೆಯ ಬಗ್ಗೆ ವೈಯಕ್ತಿಕ ಸಾಕ್ಷಿಗಳನ್ನು ಕೊಟ್ಟೆವು, ಸ್ವಲ್ಪ ಸಮಯದ ನಂತರ ನಮ್ಮ ಮಾತುಗಳನ್ನು ಕೇಳಲು ಪಬ್‌ದಿಂದ ಹೊರಗೆ ಬಂದ ಕುತೂಹಲ ಭರಿತ ಜನರಿಗೆ ಪ್ರಸಂಗಿಸಲು ಪ್ರಯತ್ನಿಸಿದೆವು. ಗ್ರಾಮದವರು ಆಶ್ಚರ್ಯಪಡುವಂತೆ ವಾರಾಂತ್ಯದ ಅಂತ್ಯದೊಳಗೆ ದೇವಾಲಯವು ಚೆನ್ನಾಗಿ ತುಂಬುವಂತೆ ಕರ್ತನು ನೋಡಿದನು. ಭವಿಷ್ಯದ ಸಂಡೇ ಸ್ಕೂಲ ಟೀಚರ ಕ್ರಿಸ್ತನನ್ನು ಕಂಡುಕೊಂಡಳು ಮತ್ತು ಅನಂತರದಲ್ಲಿ ಆಕೆಯ ಸಹೋದರಿಯೂ ಸಹ ರಕ್ಷಕನ ಬಳಿಗೆ ಬಂದಳು. ಇನ್ನು ಮುಂದೆ ಬಾಗಿಲುಗಳಿಗೆ ಬೀಗಗಳು ಹಾಕಲ್ಪಡಲಿಲ್ಲ ಮತ್ತು ಚಿಕ್ಕ ಸಂಡೇ ಸ್ಕೂಲ ಹಾಗೂ ವಾರದ ಆರಾಧನೆಗಳು ನಡಿಸಲ್ಪಟ್ಟವು.

**''ದೇವರ ವಾಕ್ಯವನ್ನು ಸಾರು ; ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು''** (2 ತಿಮೊಥೆ 4:2) ಎಂದು ಪೌಲನು ತಿಮೊಥೆಯನಿಗೆ ಆಜ್ಞಾಪಿಸಿದ್ದನು. ಒಂದು ವೇಳೆ ಪೌಲನು ಇಂದು ಸೇವೆ ಮಾಡುತ್ತಿದ್ದರೆ, ಈ ರೀತಿಯ ಮಾತುಗಳಲ್ಲಿ ತಿಮೊಥೆಯನಿಗೆ ಆಜ್ಞಾಪಿಸುತ್ತಿದ್ದನು: ''ದೇವರ ವಾಕ್ಯವನ್ನು ಹಂಚಲು ಅವಕಾಶವಿದ್ದರೆ, ಅದನ್ನು ತೆಗೆದುಕೋ : ಒಂದು ಅವಕಾಶವಿಲ್ಲದಿದ್ದರೆ, ಅದನ್ನು ಮಾಡು ! ವಾಕ್ಯವನ್ನು ಸಾರುವದಕ್ಕೆ ಅವಕಾಶವಿಲ್ಲದ ಕಾಲವೇ ಇರುವದಿಲ್ಲ''. ವಿದ್ಯಾರ್ಥಿಯು ತಾನು ಹೊಂದಿದ ಜ್ಞಾನಕ್ಕೆ ಅನಂತರದಲ್ಲಿ ಪ್ರೀತಿಯ ಮತ್ತು ಧೈರ್ಯದ ಮಾರ್ಗದಲ್ಲಿ

ವಿಸ್ತರಿಸಿದ ಯಾವುದೇ ರೀತಿಯ ಬೈಬಲ್ ಅಧ್ಯಯನವನ್ನು ಮೆಚ್ಚಿಕೆಯಿಂದ ಪೌಲನು ನೋಡುವುದಿಲ್ಲವೆಂದು ನನಗೆ ನಿಶ್ಚಿತತೆ ಇರುತ್ತದೆ.

ನಿನ್ನ ತಲೆಯಿಂದ ನಿನ್ನ ಹೃದಯಕ್ಕೆ ದೇವರ ವಾಕ್ಯವನ್ನು ಹೊಂದಿಕೊಳ್ಳುವ ರಹಸ್ಯವನ್ನು ನೀನು ಕಲಿತುಕೊಳ್ಳುವಾಗ, ದೇವರ ವಾಕ್ಯವು, ಯೆರಮೀಯನ ಮಾತುಗಳಲ್ಲಿ ''ನಿನ್ನ ಎಲುಬುಗಳಲ್ಲಿ ಬೆಂಕಿ'' ಆಗುವದಕ್ಕೆ ಬಹಳ ಸಮಯ ತೆಗೆದು ಕೊಳ್ಳಲ್ಪಡುವದಿಲ್ಲ ಎಂಬುದನ್ನು ಕಂಡುಕೊಳ್ಳುವಿ.

ಬೈಬಲು ಕೇವಲ ನಿನ್ನ ತಲೆಯಲ್ಲಿ ಉಳಿದುಕೊಂಡರೆ, ನೀನು ಆತ್ಮನ ಮನುಷ್ಯ ನಾಗದೇ ವಾಕ್ಯದ ಮನುಷ್ಯನಾಗಿಯೇ ಉಳಿಯುವ ಗಂಡಾಂತರದ ಸಾಧ್ಯತೆಯಿದೆ. ನಿನ್ನ ಎಲುಬುಗಳಲ್ಲಿ ಯಾವ ಬೆಂಕಿಯೂ ಇರುವದಿಲ್ಲ. ಆದರೆ ನಿನ್ನ ಕ್ರಮಪ್ರಕಾರವಾದ ಒಂದಾಗಿ ಕೂಡಿ ಬರುವಿಕೆಯ ಸಮಯದಲ್ಲಿ, ವಾಕ್ಯದ ಮನುಷ್ಯನಾಗಿ ಒಂದೇ ಸಮಯದಲ್ಲಿ ಇರದೇ ಆತ್ಮನ ಮನುಷ್ಯನಾಗಿ ಇರುವುದು ನಿನಗೆ ಅಸಾಧ್ಯ ಎಂದು ನೀನು ಹೆಚ್ಚು, ಹೆಚ್ಚಾಗಿ ಅರ್ಥ ಮಾಡಿಕೊಳ್ಳುವಿ.

ಹೌದು, ಆತನ ವಾಕ್ಯವನ್ನು ನಾವು ಓದುವಾಗ, ದೇವರು ನಮ್ಮೊಂದಿಗೆ ಮಾತಾಡುವನು, ಮತ್ತು ಆತನು ಹೇಳುವದನ್ನು ನಾವು ಇತರರೊಂದಿಗೆ ಹಂಚಿಕೊಳ್ಳ ಬೇಕೆಂದು ಆತನು ನಿರೀಕ್ಷಿಸುವನು. **''ನೀನು ನನ್ನ ಬಾಯಿಂದ ಹೊರಡುವ ಮಾತನ್ನು ಕೇಳಿ ನನ್ನ ದೂತನಾಗಿ ಅವರನ್ನು ಎಚ್ಚರಪಡಿಸು''** (ಯೆಹೆಜ್ಕೇಲ 33:7) ಎಂದು ದೇವರು ಯೆಹೆಜ್ಕೇಲನಿಗೆ ಹೇಳಿದನು. ಆದರೆ ನಾವು ಮೊದಲು ಕೇಳಿಸಿಕೊಂಡು ಆಮೇಲೆ ಆತನ ಬಾಯಿಂದ ಬರುವ ಮಾತುಗಳಿಗೆ ವೈಯಕ್ತಿಕವಾಗಿ ಉತ್ತರ ಕೊಡದಿದ್ದರೆ, ಇತರರಿಗೆ ಮಾತಾಡುವದರಲ್ಲಿ ಪ್ರಯೋಜನವಿಲ್ಲ.

ಕ್ರೈಸ್ತತ್ವದ ಅನೇಕ ''ಪ್ರತಿಪಾದಕರು'' ಇದ್ದಾರೆ, ಆದರೆ, ದುರ್ದೈವದಿಂದ, ಜೀವಿಸುವ ದೇವರೊಂದಿಗೆ ತಮ್ಮ ವೈಯಕ್ತಿಕ ಸಂಬಂಧದ ಬಗ್ಗೆ ಯತಾರ್ಥವಾದ ಸಾಕ್ಷಿ ಹೇಳುವವರು ಅತ್ಯಲ್ಪ ಸಂಖ್ಯೆಯಲ್ಲಿ ಇದ್ದಾರೆ.

ಅನಂತರದಲ್ಲಿ, ತನ್ನ ಸ್ವಂತ ಅನುಭವದಿಂದ ಅಪೊಸ್ತಲ ಯೋಹಾನನು ಕ್ರಿಸ್ತ ನೊಂದಿಗೆ ತನ್ನ ಸಜೀವ ಅನ್ಯೋನ್ಯತೆಯ ವಾಸ್ತವಿಕತೆಗೆ ಆನಂದದಿಂದ

ಸಾಕ್ಷಿ ಕೊಡಲು ಶಕ್ತನಾದನು. ಆದುದರಿಂದ, ನಾವು ನಿರೀಕ್ಷಿಸುವಂತೆ, ಆತನು ಆಗ ಈ ನಿಕಟವಾದ ಅನ್ಯೋನ್ಯತೆಯಲ್ಲಿ ತನ್ನೊಂದಿಗೆ ಸೇರಲು ಇತರರನ್ನು ಆಹ್ವಾನಿಸಿದನು: ''....ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ, ನಮಗಿರುವ ಅನ್ಯೋನ್ಯತೆಯ ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡಲೂ ಇರುವಂಥದು''. (1 ಯೋಹಾನ 1:3).

## ಆತ್ಮಿಕ ತಪಾಸಣೆ

1. ನಾನು ಕೆಲಸ ಮಾಡುವ ಮತ್ತು ನಾನು ವಾಸಿಸುವ ಎರಡೂ ಸ್ಥಳಗಳನ್ನು ನನ್ನ ವೈಯಕ್ತಿಕ ಮಿಶನ್ ಫೀಲ್ಡ ಎಂದು ಗುರುತಿಸಿರುವೆನೋ ?
2. ಜನರನ್ನು ಮಾರ್ಪಾಟಿಗಾಗಿ ಅಭ್ಯರ್ಥಿಗಳಂತೆ ಮಾತ್ರವೇ ನೋಡುತ್ತೇನೆಯೋ ಇಲ್ಲವೇ ಕ್ರಿಸ್ತನಲ್ಲಿ ನೂತನ ಜೀವಿತಕ್ಕೆ ಅವರನ್ನು ಪ್ರೀತಿಸಲು ಪ್ರಾರ್ಥನಾ ಪೂರ್ವಕವಾಗಿ ಹುಡುಕುತ್ತೇನೆಯೋ ?
3. ವ್ಯಾವಹಾರಿಕ ಮಾರ್ಗದಲ್ಲಿ ಯಾರಿಗಾದರೂ ಸಹಾಯ ಮಾಡುವದರಿಂದ ಕ್ರಿಸನಿಗಾಗಿ ಸಾಕ್ಷಿ ಕೊಡಲು ಹಿಂದೆ ಯಾವಾಗ ಹಕ್ಕನ್ನು ಸಂಪಾದಿಸಿಕೊಂಡೆನು ?
4. ಯೇಸುವಿನ ಬಗ್ಗೆ ಧೈರ್ಯದಿಂದ ಮಾತಾಡದಂತೆ. ನನ್ನ ತುಟಿಗಳಿಗೆ ಮುದ್ರೆ ಹಾಕಲ್ಪಟ್ಟಿವೆ. ಯಾಕಂದರೆ

ನನ್ನ ಜೀವಿತ ಸಂಧಾನ ಮಾಡಿಕೊಳ್ಳಲ್ಪಟ್ಟಿದೆ ?
ನನ್ನ ಕೆಲಸವು ಗಂಡಾಂತರದಲ್ಲಿರುತ್ತದೆ ?

ನನ್ನ ಗರ್ವವು ಹೀನೈಸಲ್ಪಟ್ಟ ಮತ್ತು ತಿರಸ್ಕರಿಸಲ್ಪಟ್ಟ ನಜರೇತಿನ ಯೇಸುವಿನೊಂದಿಗೆ ಒಂದಾಗಿರಲು ಒಪ್ಪಿಕೊಳ್ಳುವದಿಲ್ಲ ?

## ನಿತ್ಯವಾದ ಬೆಳಕು

*ನಿತ್ಯವಾದ ಬೆಳಕು ! ನಿತ್ಯವಾದ ಬೆಳಕು !*
*ಪ್ರಾಣವು ಎಷ್ಟು ಶುದ್ಧವಾಗಿರತಕ್ಕದ್ದು,*
*ನಿನ್ನ ಹುಡುಕುವಿಕೆಯ ನೋಟದಲ್ಲಿ ಇಡಲ್ಪಟ್ಟಾಗ,*
*ಅದು ಸಂಕುಚಿತಗೊಳ್ಳದು, ಆದರೆ ಇರುವುದು ಶಾಂತಿ, ಸಂತಸದಿಂದ*
*ಜೀವಿಸುವುದು ಮತ್ತು ನಿನ್ನ ಕಡೆಗೆ ನೋಡುವುದು !*

*ನಿನ್ನ ಸಿಂಹಾಸನವನ್ನು ಸುತ್ತುವರಿಯುವ ಆತ್ಮಗಳು*
*ಉರಿಯುವ ಅತ್ಯಾನಂದವನ್ನು ಹೊರಲಿ ;*
*ಆದರೆ ಅದು ನಿಜವಾಗಿ ಅವುಗಳದೇ ಆಗಿರುವುದು,*
*ಅವು ಎಂದೆಂದಿಗೂ, ಎಂದೆಂದಿಗೂ ತಿಳಿದಿರುವದಿಲ್ಲ,*
*ಇಂಥ ಬಿದ್ದು ಹೋದ ಜಗತ್ತನ್ನು.*

*ನನ್ನ ಹುಟ್ಟಿನಿಂದ ಬಂದ ವಲಯ ಕತ್ತಲಾಗಿದೆ,*
*ನನ್ನ ಮನಸ್ಸು ಮಂಕಾಗಿದೆ,*
*ಶ್ರೇಷ್ಠನಾದಾತಾನ ಮುಂದೆ*
*ನಾನು ಹೇಗೆ ಕಾಣಿಸಿಕೊಳ್ಳಲಿ*
*ಮತ್ತು ನನ್ನ ನಗ್ನ ಆತ್ಮದ ಮೇಲೆ*
*ಸೃಷ್ಟಿಸಲ್ಪಡದ ತೊಲೆಯನ್ನು ಹೇಗೆ ಹೊರಲಿ ?*

*ಮಾನವನಿಗೆ ಇರುವುದು ಒಂದು ಮಾರ್ಗ ಮೇಲೇರಲು,*
*ಆ ಶ್ರೇಷ್ಠವಾದ ನಿವಾಸ ಸ್ಥಾನಕ್ಕೆ :*
*ಒಂದು ಕಾಣಿಕೆ ಮತ್ತು ಒಂದು ಯಜ್ಞ,*
*ಒಬ್ಬ ಪವಿತ್ರಾತ್ಮನ ಸಾಮರ್ಥ್ಯಗಳು*
*ದೇವರೊಂದಿಗೆ ಒಬ್ಬ ಪ್ರತಿಪಾದಕ.*

*ಇವು, ಇವು, ಸಿದ್ಧಪಡಿಸುವವು ನಮ್ಮನ್ನು*
*ಮೇಲಿನ ಪವಿತ್ರತೆಯ ನೋಟಕ್ಕಾಗಿ ;*
*ಅಜ್ಞಾನದ ಮತ್ತು ರಾತ್ರಿಯ ಮಕ್ಕಳು*
*ನಿತ್ಯವಾದ ಬೆಳಕಿನಲ್ಲಿ ವಾಸಿಸಲಿ*
*ನಿತ್ಯವಾದ ಪ್ರೀತಿಯ ಮುಖಾಂತರ !*

Thomas Binney (1798-1874)

## ಅಧ್ಯಾಯ 7

# ಫಲ ಇಲ್ಲವೆ ಬೆಂಕಿ

ಬೆಂಗ್ಟ ಎಂದು ಕರೆಯಲ್ಪಡುವ ನನ್ನ ಸ್ನೇಹಿತನು ಸ್ವೀಡಿಶ್ - ಅಮೇರಿಕನ್ನನಾಗಿದ್ದು ಯುನೈಟೆಡ್ ಸ್ಟೇಟ್ಸ್‌ಗೆ ವಲಸೆ ಬಂದಿದ್ದನು. ಅಲ್ಲಿ ಅವನು ಯಶಸ್ವೀ ಕ್ರೈಸ್ತ ವ್ಯವಹಾರಸ್ಥನಾದನು. ಅಲ್ಲಿ ಅವನ ಹಲವಾರು ಸೇವೆಗಳಲ್ಲಿ, ಬೆಂಗ್ಟನು ಮಿಶನರಿ ಏರಪ್ಲೇನಗಳನ್ನು ಮಿಶನ್ ಫೀಲ್ಡಗಳಲ್ಲಿ ಅವುಗಳ ಅಂತಿಮ ಸ್ಥಳಕ್ಕೆ ಮುಟ್ಟಿಸುವದರಲ್ಲಿ ಆನಂದ ಪಡುತ್ತಿದ್ದನು. ಒಂದು ವರ್ಷ, ಅವನು ಮತ್ತು ಅವನ ಒಬ್ಬ ಸ್ನೇಹಿತನು ಒಂದು ಚಿಕ್ಕ ವಿಮಾನವನ್ನು ಮಿಶನ್ ಏವಿಯೇಶನ್ ಫೆಲೋಶಿಪ್ (M.A.F.) ಗಾಗಿ ಅಲಾಸ್ಕಾಕ್ಕೆ ಒಯ್ಯಲು ಹೇಳಲ್ಪಟ್ಟರು. ಅವರ ಪ್ರಯಾಣದ ಹೆಚ್ಚಿನ ಭಾಗವನ್ನು ಮುಗಿಸಿದ ನಂತರ, ಅವನ ಸ್ನೇಹಿತನು ಅವನನ್ನು ಫೇರಬ್ಯಾಂಕ್ಸ ಏರಪೋರ್ಟಿನಲ್ಲಿ ಅವನನ್ನು ಬಿಟ್ಟು ಹೋದನು, ಮತ್ತು ಬೆಂಗ್ಟನು ಒಬ್ಬಂಟಿಗನಾಗಿ ಅಂತಿಮ ಭಾಗದ ಪ್ರಯಾಣಕ್ಕೆ ಸಿದ್ಧನಾದನು.

ಬಿಟ್ಟು ಹೋಗುವದಕ್ಕಿಂತ ಮೊದಲು ಬೆಂಗ್ಟನ ಸ್ನೇಹಿತನು ಚಿಕ್ಕ ವಿಮಾನದಲ್ಲಿ ಒಂದು ತುರ್ತು ಪರಿಸ್ಥಿತಿಯ ಪ್ಯಾಕನ್ನು ತಳ್ಳಿದನು. ಅದು ಒಂದು ಚಾಕಲೇಟ ಬಾರನ್ನು ಮತ್ತು ಒಂದು ಬೆಚ್ಚಗಿನ ಕಂಬಳಿಯನ್ನು ಒಳಗೊಂಡಿತ್ತು. ಈ ವಾಯುಯಾನದ ಕೊನೆಯ ಭಾಗದ ಅವಧಿಯಲ್ಲಿ ಅನಿರೀಕ್ಷಿತವಾಗಿ ಒಂದು ಬಿರುಗಾಳಿ ಎದ್ದಿತು. ಅಲಾಸ್ಕಾ ಪರ್ವತ ಶ್ರೇಣಿಯಲ್ಲಿ ಗಂಡಾಂತರಕಾರಿಯಾದ

ಬಿರುಗಾಳಿಗಳು, ಚಿಕ್ಕ ವಿಮಾನವನ್ನು ಕೆಳಗಿನ ದಿನ್ನೆಯ ಮೇಲೆ ಎಳೆದುಕೊಂಡವು. ವಿಮಾನವು ಒಂದು ಪರ್ವತದ ತುದಿಯ ಅಂಚಿನಲ್ಲಿ ಬುಡಮೇಲಾಗಿ ನಿಂತುಕೊಂಡಿತು. ಮುಂದಿನ ಮೂರು ದಿನಗಳಲ್ಲಿ ಹಿಮವು ಬೀಳುತ್ತಲೇ ಇತ್ತು. ಆದರೆ ದೇವರ ಒಳ್ಳೆಯತನದಲ್ಲಿ, ಗಾಳಿ ಬೀಸಿ ವಿಮಾನದ ಕೆಳಭಾಗವನ್ನು ಮುಚ್ಚದಂತೆ ಹಿಮವನ್ನು ಜಾರಿಸಿತು. ಹೀಗಿದ್ದದರೂ ಬಿಳಿಯಾದ ವಿಮಾನದ ಕೆಳಭಾಗವು ಸುತ್ತಲೂ ಹಿಮವು ಇದ್ದುದರಿಂದ, ಯು.ಎಸ್. ಕೋಸ್ಟ ಗಾರ್ಡ ಏರ್ ಸರ್ಚ ರೆಸ್ಕ್ಯೂ ಟೀಮುಗಳು ಮೇಲೆ ಹಾರಾಡಿದಾಗ, ಬೆಂಗ್ಟನ ಚಿಕ್ಕ ವಿಮಾನವು ಗಮನಿಸಲ್ಪಡಲಿಲ್ಲ.

ರೆಸ್ಕ್ಯೂ ಟೀಮುಗಳನ್ನು ಮಿಲಿಟರಿಯು ಹಿಂದಿರುಗಿ ಕರೆಸಿದ ತರುವಾಯ, ಬೆಂಗ್ಟನ ಮಗ ಬ್ರೂಸನು, ಒಬ್ಬ ಉತ್ತಮ ಕ್ರೈಸ್ತ ಮನುಷ್ಯನು, ಒಬ್ಬ M.A.F. ಪೈಲಟ್ ನೊಂದಿಗೆ, ತಮ್ಮನ್ನು ಬೆಂಗ್ಟನ ಕಡೆಗೆ ನಡಿಸಬೇಕೆಂದು ಪ್ರಾರ್ಥಿಸಿದನು. ಈ ಮಧ್ಯದಲ್ಲಿ ಭೂಮಿಯ ಮೇಲೆ, ಬೆಂಗ್ಟನು ಬಹಳ ಬಲಹೀನನಾಗಿದ್ದನು. ತನ್ನ ಕಾರ್ಯದ ಫೋಟೋಗ್ರಾಫನ್ನು ತಾನೇ ತೆಗೆದಿದ್ದನು, ಅದು ನಿರಾಶೆಯಿಂದ ತನ್ನ ಪ್ರಿಯರ ಕಡೆಗೆ ಕೈ ಬೀಸುವಂತೆ, ಗುಡ್‌ಬೈ ಹೇಳುವಂತೆ ತೋರಿಸುವಂಥದ್ದಾಗಿತ್ತು. ಹಾಗಿದ್ದರೂ ದೇವರಿಗೆ ಬೇರೆ ಯೋಜನೆಯಿತ್ತು. ಬ್ರುಸ ಮತ್ತು ಅವನ ಸ್ನೇಹಿತನು ಕೆಳಗಿನ ಪ್ರದೇಶದ ಮೇಲೆ ಹಾರಾಡಿದಾಗ ವಿಮಾನದ ಬಿಳೀ ಭಾಗದ ಮೇಲೆ ಸೂರ್ಯನ ಪ್ರಕಾಶದಿಂದ ಪ್ರತಿಬಿಂಬವು ಬೆಂಗ್ಟನ್ ಸ್ಥಳವು ಹುಡುಕುತ್ತಿದ್ದವರಿಗೆ ಕಂಡಿತು.

ನಾನು ಯಾಕೆ ಈ ಕಥೆಯನ್ನು ಪುನಃ ಹೇಳುತ್ತಿದ್ದೇನೆ ? ಅನಂತರದಲ್ಲಿ ಬೆಂಗ್ಟನು, ಆ ಹತ್ತು ದಿನಗಳಲ್ಲಿ ಕ್ರಿಸ್ತನ ನ್ಯಾಯಾಸನಕ್ಕೆ ಅತೀ ಸಮೀಪದಲ್ಲಿ ತಾನು ಜೀವಿಸಿದೆನೆಂದು ಹೇಳಿದನು. ಅವನನ್ನು ನಾನು ಮತ್ತೊಮ್ಮೆ ಕಂಡಾಗ, ಆ ಹಿಮಾಚ್ಛಾದಿತ ಪರ್ವತ ಶಿಖರದ ಮೇಲೆ ದೇವರೊಂದಿಗೆ ಏಕಾಂಗಿಯಾಗಿದ್ದಾಗ ದೇವರ ಸನ್ನಿಧಿಗೆ ಬೇಗನೇ ಕರೆಯಲ್ಪಡುವ ತನ್ನ ನಿರೀಕ್ಷೆಯಲ್ಲಿದ್ದಂತೆ, ಭೂಲೋಕದಲ್ಲಿಯ ತನ್ನ ಜೀವಿತವನ್ನು ಪುನರಾವಲೋಕಿಸುವಂತೆ ಪವಿತ್ರಾತ್ಮನು ಬಿಟ್ಟನೆಂದು ನನಗೆ ಹೇಳಿದನು. ಸಮಯಕ್ಕಿಂತ ಮೊದಲೇ ''ವಿಶ್ವಾಸಿಗಳ ನ್ಯಾಯಾಸನವು'' ಬಂದಂತೆ ಆಗಿತ್ತೆಂದು ಅವನು ಹೇಳಿದನು. ತನ್ನ ಮುಂದೆ ತನ್ನ

ಜೀವಿತವು ಹರವಲ್ಪಟ್ಟಾಗ, ಬೆಂಗ್ಟನು ಸಮರ್ಪಿತ ಕ್ರೈಸ್ತ ಸೇವೆಯ ತನ್ನ ವರ್ಷಗಳ ಮೇಲೆ ಪ್ರತಿಬಿಂಬಿಸಿಕೊಂಡನು ಮತ್ತು ಅದರಲ್ಲಿ ಎಷ್ಟು ಭಾಗವು ನಿಜವಾಗಿಯು ನಿತ್ಯತ್ವಕ್ಕಾಗಿ ಎಣಿಸಲ್ಪಡುವದೆಂದು ಆಶ್ಚರ್ಯಪಟ್ಟನು.

ಮಹಾ ಗಂಭೀರತೆಯಿಂದ, ಬೆಂಗ್ಟನು, ನನಗೆ ಹೇಳಿದನು. ಚರ್ಚ ಬೋರ್ಡ ಕೂಟಗಳು, ಮಿಶನರಿ ಕೌನ್ಸಿಲ್ ಕೂಟಗಳು ಮತ್ತು ತನ್ನ ಅನೇಕ ಸಭಾ ಚಟುವಟಿಕೆಗಳು, ಸಂತೋಷದಿಂದ ತೆಗೆದುಕೊಳ್ಳಲ್ಪಟ್ಟಿದ್ದರೂ, ಅವನು ನಿಜವಾಗಿಯೂ ತನ್ನ ದೇಹದ ಸಾಮರ್ಥ್ಯದಿಂದ ಮಾಡಿದ್ದನು, ತನ್ನ ತಲಾಂತುಗಳ ಮತ್ತು ಸಾಮರ್ಥ್ಯಗಳ ವ್ಯಕ್ತಪಡಿಸುವಿಕೆಯಲ್ಲಿ ಮಾಡಿದ್ದನು, ಆದರೆ ಪವಿತ್ರಾತ್ಮನ ಪೂರ್ಣತೆಯ ಹೊರ ಸೂಸುವಿಕೆಯ ಪರಿಣಾಮವಾಗಿ ಅಲ್ಲ ಎಂದು ತಿಳಿದುಕೊಂಡನು ಎಂದು ಹೇಳಿದನು.

ಆ ಹತ್ತು ದಿನಗಳಲ್ಲಿ ದೇವರು ತನಗೆ ಅಂಥ ''ಬೆಳೆಯುಳ್ಳ'' ಚಟುವಟಿಕೆಗಳು 'ಕಟ್ಟಿಗೆ ಹುಲ್ಲು ಅಪು ಮುಂತಾದವುಗಳಿಗೆ' ಸಮಾನವಾಗಿದ್ದವೆಂದು ತೋರಿಸಿದ್ದನೆಂದು ಬೆಂಗ್ಟ' ಹೇಳಿದನು. (ಇವು ಬೈಬಲಿನಲ್ಲಿ ಉಪಯೋಗಿಸಲ್ಪಟ್ಟ ರೂಪಾಲಂಕಾರಗಳು. ವಿಶ್ವಾಸಿಗಳಿಗಾಗಿ ನ್ಯಾಯಾಸನದ ಮುಂದೆ ಸುಟ್ಟು ಹಾಕಲ್ಪಡುವ ಆ ದಿನಗಳಿಗೆ ಮತ್ತು ನಮ್ಮ ಜೀವಿತಗಳಲ್ಲಿಯ ಕೃತ್ಯಗಳಿಗೆ ಸೂಚನೆಗಳಾಗಿವೆ. ಅವು ನಿತ್ಯತ್ವಕ್ಕಾಗಿ ಎಣಿಸಲ್ಪಡುವದಿಲ್ಲ.)

ಬೆಂಗ್ಟನಿಗಾಗಿ ಆ ಭಯಭಕ್ತಿಯ ಅನುಭವವು ಅವನ ಜೀವನದಲ್ಲಿ ನಿಜವಾಗಿಯೂ ಒಂದು ಭಕ್ತಿಸಂಜೀವನದ ಅನುಭವವಾಗಿತ್ತು, ಆತನನ್ನು ಪ್ರೀತಿಸಿದ ಮತ್ತು ಬಹಳ ದಿನಗಳಿಂದ ತಿಳಿದುಕೊಂಡ ಹಾಗೂ ದೇವರ ಕಾರ್ಯದಲ್ಲಿ ಆಸಕ್ತಿಯಿಂದ ಕಾರ್ಯದಲ್ಲಿ ತೊಡಗಿಸಿಕೊಂಡವನನ್ನು ಅರಿತುಕೊಂಡ ನಾವು ಅನಂತರದಲ್ಲಿ ಅವನ ಅರ್ಥವೇನಾಗಿತ್ತೆಂಬುದನ್ನು ಅರ್ಥ ಮಾಡಿಕೊಂಡೆವು, ಯಾಕಂದರೆ ಅವನ ಉಳಿದ ಕೆಲವು ವರ್ಷಗಳು ಅವನ ಸ್ವಂತ ಸಾಮರ್ಥ್ಯ ಮತ್ತು ಬಲದಲ್ಲಿ ಅಲ್ಲ, ಆದರೆ ಅವನು ಎಲ್ಲೆಲ್ಲಿ ಸಾಕ್ಷಿಕೊಟ್ಟನೋ ಅಲ್ಲಿ ಅವನ ಜೀವನದ ಬಲ ಹಾಗೂ ದೇವರ ಆಶೀರ್ವಾದಗಳು ಹರಿದು ಬರುವ ನೂತನ ಅಲೆಗಳ ಮಾತುಗಳಲ್ಲಿ ವಿವರಿಸಲ್ಪಟ್ಟವು.

ಎಲ್ಲಾ ವಿಶ್ವಾಸಿಗಳಿಗಾಗಿ ಸಿದ್ಧಪಡಿಸಲ್ಪಟ್ಟ ನ್ಯಾಯಾಸನದ ಮುಂದೆ ನಾವು ಕಾಣಿಸಿಕೊಳ್ಳುವೆವು ಎಂದು ಜ್ಞಾಪಕ ಮಾಡಿಕೊಳ್ಳುವುದು ಕ್ರೈಸ್ತರಿಗೆ ಯೋಗ್ಯವಾದ ವಿಚಾರವಾಗಿದೆ, ನ್ಯಾಯ ವಿಚಾರಣೆಯ ಆಸನವು ನ್ಯಾಯ ವಿಚಾರಣೆಯ ಮಹಾ ಬಿಳಿಯ ಸಿಂಹಾಸನಕ್ಕಿಂತ ಭಿನ್ನವಾದದ್ದಾಗಿರಬೇಕು. ಮಹಾ ಬಿಳಿಯ ಸಿಂಹಾಸನವು ಎಲ್ಲಾ ಅವಿಶ್ವಾಸಿಗಳು ಕಳೆದುಹೋದ, ನಿತ್ಯತ್ವಕ್ಕೆ ತೀರ್ಪು ಹೊಂದಿದವರ ಮತ್ತು ದಂಡಿಸಲ್ಪಟ್ಟವರಸ್ಥಳವಾಗಿರುವುದು, ಆದರೆ ವಿಶ್ವಾಸಿಗಳ ನ್ಯಾಯಾಸನವು ವಿಶ್ವಾಸಕ್ಕೆ ಸಂಬಂಧ ಪಡದೇ ಇರುವಂಥದ್ದು ಸುಡಲ್ಪಡುವ ಮತ್ತು ನಂಬಿಕೆಯಾಗಿರುವ ಪ್ರತಿಯೊಂದೂ ದೇವರ ಮಹಿಮೆಗೆ ಸದಾ ಕಾಲವು ಜೀವಿಸುವ ಸ್ಥಳವಾಗಿರುವುದು, ಯಾಕಂದರೆ ಆತನು ತಾನೇ ಕಾರ್ಯ ಮಾಡಿದ್ದಾನೆ. ಆ ದಿನದಲ್ಲಿ ಅನೇಕ ಕ್ರೈಸ್ತರು ತಾವು ಸಭೆಯಲ್ಲಿ ಕಾರ್ಯ ನಿರತರಾದದ್ದು ಧಾರ್ಮಿಕ ವಲಯಗಳಲ್ಲಿ ಪ್ರಸಿದ್ಧರಾದದ್ದೂ, ಅವರ ಜೀವನದ ಸಮಯದಲ್ಲಿ ಅವರಿಗೆ ಬಹಳ ಸಂತೃಪ್ತಕರವಾದದ್ದು, ದೇವರ ಮನಸ್ಸಿನಲ್ಲಿ ಯತಾರ್ಥವಾದ ಆತ್ಮಿಕ ಸೇವೆಯಂತೆ ಎಣಿಸಲ್ಪಡಲಿಲ್ಲ ಎಂಬುದನ್ನು ಕಂಡುಕೊಳ್ಳುವರು.

## ಬಿಳಿ ಪುಟಗಳು

ನನ್ನ ಮುಂದೆ ಸ್ವಚ್ಛವಾದ ಎರಡು ಬಿಳಿ ಪೇಪರುಗಳು ಇರುತ್ತವೆ. ಎರಡೂ ಖಾಲಿಯಾಗಿವೆ, ಯಾರೂ ಅವುಗಳ ಮೇಲೆ ಬರೆದಿಲ್ಲ ಇಲ್ಲವೇ ಚಿತ್ರಿಸಿಲ್ಲ. ಅವುಗಳ ಕಡೆಗೆ ನೀವು ನೋಡುವುದಾದರೆ ಯಾರ ವಿಚಾರಗಳು ಬರೆದಿರುವದನ್ನಾಗಲೀ. ಇಲ್ಲವೇ ಯಾವುದೇ ಸುಂದರವಾದ ಚಿತ್ರವನ್ನಾಗಲೀ ನೀವು ನೋಡುವದಿಲ್ಲ. ಆದರೆ ಅದೇ ಸಮಯದಲ್ಲಿ, ಯಾರೊಬ್ಬರ ತಪ್ಪುಗಳನ್ನು ನೋಡುವದಿಲ್ಲ. ಅಲ್ಲಿ ಸೌಂದರ್ಯವು ಇಲ್ಲದಿರುವಂತೆಯೇ ಅಲ್ಲಿ ಕೊಳೆಯಾಗಲೀ ಇಲ್ಲವೇ ಕಲೆಗಳಾಗಲೀ ಇರುವದಿಲ್ಲ. **ಕೇವಲ ಬಿಳಿ ಪುಟಗಳು ; ಹೆಚ್ಚು ಇಲ್ಲ, ಕಡಿಮೆಯೂ ಇಲ್ಲ.**

ಆ ಬಿಳಿ ಪುಟಗಳಂತೆ ನನ್ನ ಮತ್ತು ನಿನ್ನ ಜೀವನದ ಅನೇಕ ದಿನಗಳಿರಬಹುದು. ಒಂದು ಸಲ ಪಾಪದಿಂದ ಕಳಂಕಿಸಲ್ಪಟ್ಟಿದ್ದರೂ, ಈಗ, ದೇವರ ಅದ್ಭುತಕರವಾದ ದಯೆಯಿಂದ, ಮತ್ತು ಯೇಸುವಿನ ವಿಮೋಚಿಸುವ

ರಕ್ತದಿಂದ ಜೀವನದ ಪ್ರತಿಯೊಂದು ಪುಟವೂ ವಿಶ್ವಾಸಿಗಾಗಿ ಶುದ್ಧಿಕರಿಸಲ್ಪಟ್ಟಿದೆ. ಯಾವುದೂ ಉಳಿದಿರುವದಿಲ್ಲ ಆದರೆ ಅದು ಹಿಮದಂತೆ, ಬೆಳ್ಳಗಿರುವುದು. (ಯೆಶಾಯ 1:18). ಕ್ರೈಸ್ತನಂತೆ ನನ್ನ ಜೀವಿತದ ಪುಟಗಳನ್ನು ನಾನು ಹಿಂದಿರುಗಿ ನೋಡುವಾಗ, ತಿಳುವಳಿಕೆಯಿಂದಾಗಲೀ, ತಿಳುವಳಿಕೆ ಯಿಲ್ಲದಾಗಲೀ, ಮನಃಪೂರ್ವಕವಾಗಿಯಾಗಲೀ, ಇಲ್ಲವೇ ಬಲಹೀನತೆಯಿಂದಾಗಲೀ, ನಾನು ಪಾಪ ಮಾಡಿದ್ದೇನೆ ಮತ್ತು ಪವಿತ್ರಾತ್ಮನನ್ನು ದುಃಖಪಡಿಸಿದ್ದೇನೆ ಎಂದು ದುಃಖದೊಂದಿಗೆ ಜ್ಞಾಪಿಸಿಕೊಳ್ಳುತ್ತೇನೆ. ಯೇಸುವಿನ ರಕ್ತವು ಇಲ್ಲದಿದ್ದರೆ, ಆ ಬಿಳಿ ಪುಟಗಳ ಪಾಪದ ಕುರೂಪದ ಕಲೆಗಳಿಂದಲೂ ಮತ್ತು ಸ್ವಾರ್ಥತೆಯ ಕೇಂದ್ರದಿಂದಲೂ ತುಂಬಿ ಕೊಂಡಿರುತ್ತಿದ್ದವು. ಒಮ್ಮೆ ಪಾಪದ ಕಲೆಗಳಿಂದ ತುಂಬಿದ್ದ ಆ ಪುಟಗಳು ಈಗ ಹಿಮದಂತೆ ಬೆಳ್ಳಗಾಗಿರುವಂತೆ ದೇವರು ನನಗೆ ಅದ್ಭುತವಾದ ದಯೆಯನ್ನು ಕೃಪೆಯನ್ನೂ ನನಗೆ ಅನುಗ್ರಹಿಸಿದ್ದಾನೆ ! **ಬಿಳೀ ಪುಟಗಳು ; ಆದರೆ, ದೇವರಿಗೆ ಸ್ತೋತ್ರವಾಗಲಿ, ಕಲೆಗಳಾಗಲೀ ಇಲ್ಲವೇ ಕೊಳೆಯಾಗಲೀ ಇರುವದಿಲ್ಲ.**

ಹೀಗಿದ್ದರೂ, ನನ್ನ ಮುಖಾಂತರವಾಗಿ ಪವಿತ್ರಾತ್ಮನು ಮಾಡದೇ ಇರುವಂಥದ್ದು ನಿತ್ಯತ್ವಕ್ಕೆ ಎಣಿಸಲ್ಪಡುವದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ನನಗಾಗಿ ಯೋಗ್ಯವಾದ ವಿಚಾರವಾಗಿದೆ. ಅಪೊಸ್ತಲ ಪೌಲನ ಮಾತುಗಳಲ್ಲಿ, ಜೀವನದ ಆ ದಿನಗಳನ್ನು ರಕ್ಷಿಸಲ್ಪಟ್ಟವರಾಗಿದ್ದು ಆದಾಗ್ಯೂ ಬೆಂಕಿಯೊಳಗಿಂದ ಎಳೆಯಲ್ಪಟ್ಟಂ ತಿರುವುದು ಎಂದು ವಿವರಿಸಬಹುದು. (1 ಕೊರಿಂಥ3:15) ನನ್ನ ಜೀವನದಿಂದ ಪವಿತ್ರಾತ್ಮನ ಹೊರಸೂಸುವಿಕೆ ಇಲ್ಲದಿದ್ದಾಗ, ನನ್ನ ಪಾಪಗಳು ಕ್ಷಮಿಸುವ ನನ್ನ ಕರ್ತನಿಂದ ಅಳಿಸಿ ಹಾಕಲ್ಪಟ್ಟದ್ದರೂ, ನಿತ್ಯತ್ವಕ್ಕಾಗಿ ಎಣಿಸಲ್ಪಡುವ ಯಾವುದೂ ಸಾಧಿಸಲ್ಪಟ್ಟಿರುವದಿಲ್ಲ. **ಬಿಳೀ ಪುಟಗಳು ; ಆದರೆ, ದುಃಖಕರವಾಗಿ, ಹೆಚ್ಚೇನೂ ಇರುವದಿಲ್ಲ !**

ಜೀವನದ ಕೆಲವು ಪುಟಗಳು ಎಂದೆಂದಿಗೂ ಬಿಳಿಯವಾಗಿ ಉಳಿದರೂ, ಇತರ ಪುಟಗಳ ಮೇಲೆ ಅಳಿಸಿ ಹಾಕಲಾರದ ಉತ್ಕೃಷ್ಠವಾದ ಸುಂದರವಾದ ಚಿತ್ರಗಳು ಇರುವವು. ಪುಟಗಳು ಮೊಳೆಗಳಿಂದ ಚುಚ್ಚಲ್ಪಟ್ಟ ಆತನ ಸ್ವಂತ ಪ್ರೀತಿಯ ಕೈಗಳಿಂದ ಚಿತ್ರಸಲ್ಪಟ್ಟಿರುವವು. ಪ್ರತಿಯೊಬ್ಬ ವಿಶ್ವಾಸಿಗೆ, ಈ ಮಹಿಮೆಯುಳ್ಳ ಪುಟಗಳು,

ನಿತ್ಯನಾದ ದೇವರು ತನ್ನ ನಿತ್ಯನಾದ ಕಾರ್ಯವನ್ನು ಮಾಡಲು ನಾವು ಲಭ್ಯವಿದ್ದು ಪಾತ್ರೆಗಳಾಗಿದ್ದಾಗಿನ ದಿನಗಳ ದಾಖಲೆಗಳಾಗಿವೆ. **ಹೌದು, ಬಿಳಿ ಪುಟಗಳು; ಆದರೆ ದೇವರಿಗೆ ಸ್ತೋತ್ರವಾಗಲಿ, ಇನ್ನೂ ಎಷ್ಟೋ ಹೆಚ್ಚಾದದ್ದು.**

## ವ್ಯರ್ಥವಾಗಿ ಹೋದ ವರ್ಷಗಳು

ತಮ್ಮ ಕರ್ತನೊಂದಿಗೆ ಸದಾಕಾಲ ಆಳವಾಗುತ್ತಿರುವ ಆನಂದದಲ್ಲಿ ಮತ್ತು ರಕ್ಷಕನಿಗೆ ಸಂತೋಷವನ್ನು ತರುವಲ್ಲಿ ತಮ್ಮ ಜೀವಿತವನ್ನು ಕಳೆಯದೇ, 'ಬಂದು, ಊಟ ಮಾಡಿರಿ' ಎಂದು ದಿನ ದಿನವೂ ದೇವರಿಂದ ಆಮಂತ್ರಿಸಲ್ಪಡುವ ಜನರು ತಮ್ಮ ಜೀವಿತವನ್ನು ವ್ಯರ್ಥವಾಗಿ ಕಳೆಯುವುದು ಎಷ್ಟು ದುಃಖಕರವಾದದ್ದಾಗಿರುವದಲ್ಲವೇ.

ಕಳೆದುಕೊಂಡ ಅವಕಾಶಗಳಿಂದ ಮತ್ತು ಮೇಲ್ನೋಟದ ಆನಂದಗಳಿಂದ ವರ್ಷ ಗಳನ್ನು ಕಳೆದುಕೊಂಡಿದ್ದ ಕಾರಣಗಳಿಂದ ತನ್ನ ರಕ್ಷಣೆಯನ್ನೇ ಕಳಂಕಗೊಳಿಸಿಕೊಂಡಿದ್ದ ಒಬ್ಬ ಪ್ರಾಯಸ್ಥನ ಬಗ್ಗೆ ಜ್ಞಾಪಿಸಿಕೊಳ್ಳುವಾಗ ನನ್ನ ಹೃದಯವು ದುಃಖದಿಂದ ತುಂಬಿಕೊಳ್ಳುತ್ತದೆ. ನಾನು ಮಾರ್ಪಾಟ ಹೊಂದಿದ ನಂತರ, ಆಗಲೇ ಯೇಸು ಕ್ರಿಸ್ತನನ್ನು ಸ್ವೀಕರಿಸಿಕೊಂಡ ಇತರ ಕೆಲವು ಯುವಜನರೊಂದಿಗೆ ಸೇವೆ ಮಾಡಲು ಒಂದು ಸ್ಥಳಿಕ ಆಸ್ಪತ್ರೆಗೆ ಹೋದೆನು. ಪ್ರತೀ ಶನಿವಾರ ರಾತ್ರಿ, ಆಸ್ಪತ್ರೆಯ ತಮ್ಮ ವಾರ್ಡುಗಳಿಂದ ಬಿಟ್ಟು ಹೋಗದ ಪ್ರಾಯದ ಕೆಲವು ಜನರೊಂದಿಗೆ ಸುವಾರ್ತೆಯ ಸಂದೇಶವನ್ನು ಹಂಚಿ ಕೊಳ್ಳುತ್ತಿದ್ದೆವು ಮತ್ತು ಪ್ರಾರ್ಥಿಸುತ್ತಿದ್ದೆವು. ಒಂದು ಸಾಯಂಕಾಲ, ಒಬ್ಬ ವೃದ್ಧನ ಹಾಸಿಗೆಯ ಬಳಿಗೆ ಹೋದೆನು. ನಮ್ಮ ಮುಂದಿನ ಶನಿವಾರಕ್ಕಿಂತ ಮೊದಲು ಅವನು ಸಾಯುವನೆಂದು ತಿಳಿದು ಬಂದಿತು.

ಬೈಬಲಿನ ನಮ್ಮ ಸಂಕ್ಷಿಪ್ತ ಸಂದೇಶವನ್ನು ಕೇಳಿದ ನಂತರ, ಅವನು ಆಕರ್ಷಿತ ನಾಗಿ, ತನ್ನ ಮುಖದ ಮೇಲೆ ಕಣ್ಣೀರು ಸುರಿಸುತ್ತ, ತೊದಲು ನುಡಿಯಿಂದ ಹೀಗೆ ಬಹಿರಂಗಪಡಿಸಿದನು: ''ನಾನು ರಕ್ಷಿಸಲ್ಪಟಿರುವೆನು'' ಎಂದು ಹೇಳಿದನು. ''ಅದು ಅದ್ಭುತಕರವಾದದ್ದು'' ಎಂದು ಹೇಳಿದನು. ನಾನು ಯಾವುದೇ ಹೆಚ್ಚಿನದನ್ನು ಹೇಳುವ ಮೊದಲು ತಡೆಯಲಾರದ ಆನಂದದಿಂದ ಅಲ್ಲ, ಆದರೆ ಹೃದಯದ

ಆಂತರಿಕ ನೋವಿನಿಂದ ಅಳಲಿಕ್ಕೆ ಪ್ರಾರಂಭಿಸಿದನು. ''ಹೌದು - ಆದರೆ ಸಂಪೂರ್ಣವಾಗಿ ಅಲ್ಲ - ಈಗ ನಾನು ಎಪ್ಪತ್ತೊಂದು ವರ್ಷ ಪ್ರಾಯದವನೆಂದು ನೀವು ನೋಡುತ್ತೀರಿ ಮತ್ತು ನನ್ನ ಜೀವನದ ಎಪ್ಪತ್ತು ವರ್ಷಗಳು ವ್ಯರ್ಥವಾಗಿ ಹಾಳು ಮಾಡಲ್ಪಟ್ಟಿವೆ'' ಎಂದು ಬಲಹೀನ ಧ್ವನಿಯಲ್ಲಿ ಉಸುರಿದನು.

ಯುವನಕನಾಗಿದ್ದ, ನಾನು ಯಾವ ಉತ್ತರ ಕೊಡಲಿ ? ಅವನನ್ನು ಆದರಿಸಲು ನಾನು ಹೇಗೆ ಪ್ರಯತ್ನಿಸಿದೆನೆಂಬ ನೆನಪು ನನಗಿರುವದಿಲ್ಲ. ಆದರೆ ಆ ದಿನ ಮನೆಗೆ ಹೋಗಿ, ನನ್ನ ಮೊಣಕಾಲೂರಿ, ಈ ರೀತಿಯಲ್ಲಿ ಕರ್ತನಿಗೆ ಹೇಳಿದೆನೆಂಬುದರ ಜ್ಞಾಪಕವಿದೆ : ''ಕರ್ತನೇ, ಈಗಲೂ ನಾನು ಒಂದು ದಿನ ನಾನು ಹಿಂದಿರುಗಿ ನೋಡುವ ಭವಿಷ್ಯದ ಜೀವನದೊಳಗೆ ನಾನು ಮುನ್ನೋಡುತ್ತಿದ್ದೇನೆ. ಪರಲೋಕಕ್ಕೆ ಬರುವದು ನನ್ನ ಸಮಯವಾಗಿರುವಾಗ, ನನ್ನ ಪ್ರಾಣವು ರಕ್ಷಿಸಲ್ಪಟ್ಟಿದ್ದಾಗಿ ಆದರೆ ನನ್ನ ಜೀವಿತ ವ್ಯರ್ಥವಾಗಿ ಕಳೆಯಲ್ಪಟ್ಟಿದ್ದಾಗಿ ಬರಲು ನಾನು ಬಯಸುವದಿಲ್ಲ. ಈ ರಾತ್ರಿ ನನ್ನ ಜೀವಿತವನ್ನು ಪುನಃ ನಿನಗಾಗಿ ಸಮರ್ಪಿಸುತ್ತೇನೆ. ನೀನು ನಿಜವಾಗಿಯೂ ಅದನ್ನು ನಿತ್ಯತ್ವಕ್ಕಾಗಿ ಎಣಿಸುವಂತೆ ಮಾಡುವಿಯೆಂದು ನಾನು ಪ್ರಾರ್ಥಿಸುತ್ತೇನೆ.

ಹಳೇ ಒಡಂಬಡಿಕೆಯಲ್ಲಿ, ಹಬ್ಬಕ್ಕೂಕನು, ಬಹಳ ಶಕ್ತಿಯನ್ನು ವ್ಯಯಮಾಡಿ ಅನಂತರದಲ್ಲಿ ನಾವು ಮಾಡಿದ್ದೆಲ್ಲವೂ ಲೆಕ್ಕಕ್ಕೆ ಬರುವದಿಲ್ಲ ಎಂದು ಕಂಡುಕೊಳ್ಳುವ ಸಾಧ್ಯತೆಯ ಬಗ್ಗೆ ಎಚ್ಚರಿಸಿದ್ದಾನೆ. ಅವನು ತನ್ನ ದಿನದ ಜನರಿಗೆ, **''ನೀತಿವಂತನೋ ನಂಬಿಕೆಯಿಂದಲೇ ಬದುಕುವನು''** (ಹಬಕ್ಕೂಕ 2:4) ಎಂದು ತಿಳಿಸಿದಾಗ, ಜೀವನದ ಚಟುವಟಿಕೆಗಳಿಗೆ ದೇವರ ಮೇಲೆ ಸಂಪೂರ್ಣ ಅವಲಂಭನೆಯ ವಿಶ್ವಾಸದ ತತ್ವವನ್ನು ಅನ್ವಯಿಸದವರು, **ಬೆಂಕಿಗೆ ತುತ್ತಾಗುವದಕ್ಕೆ ಕೆಲಸ ಮಾಡುವರು** ಎಂದೂ ಸಹ ಎಚ್ಚರಿಸಿದನು. (ಹಬಕ್ಕೂಕ 2:13). ಆ ಜನರು ತಮ್ಮ ಪಟ್ಟಣವನ್ನು ಸಂಪೂರ್ಣವಾಗಿ ದೇವರಿಂದ ಸ್ವತಂತ್ರರಾಗಿ ಸ್ಥಾಪಿಸಿದ್ದರಿಂದ ಬೂದಿಯಲ್ಲದೇ ಮತ್ತೇನೂ ಉಳಿಯುವ ದಿಲ್ಲ. ಹಾಗೆಯೇ, ಕರ್ತನಾದ ಯೇಸು ಕ್ರಿಸ್ತನ ಮೇಲೆ ಸಂಪೂರ್ಣವಾಗಿ ಅವಲಂಭಿಸದೇ ಇರುವಂಥದ್ದು ಒಂದು ದಿನ ದೇವರ ದಹಿಸುವ ಸನ್ನಿಧಿಯಲ್ಲಿ ನಶ್ವರವಾಗಿ ಮಾಡಲ್ಪಡುವುದು.

ಆನಂತರದಲ್ಲಿ ಹೊಸ ಒಡಂಬಡಿಕೆಯಲ್ಲಿ ಪೌಲನು ಅದರಂತೆ ಎಚ್ಚರಿಸುತ್ತಾನೆ :

''ಆ ಆಸ್ತಿವಾರದ ಮೇಲೆ (ಕರ್ತನಾದ ಯೇಸು ಕ್ರಿಸ್ತನ ಅಸ್ತಿವಾರ) ಚಿನ್ನ ಬೆಳ್ಳಿ, ರತ್ನ ಕಟ್ಟಿಗೆ ಹುಲ್ಲು ಆಪು ಮುಂತಾದವುಗಳಲ್ಲಿ ಯಾವದರಿಂದ ಕಟ್ಟಿದರೂ ಅವನವನ ಕೆಲಸವು ವ್ಯಕ್ತವಾಗುವುದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವುದು ; ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವುದು. ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳ ಬರುವುದು. ಒಬ್ಬನು ಕಟ್ಟಿದ್ದು ಸುಟ್ಟು ಹೋದರೆ ; ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು''. (1 ಕೊರಿಂಥ 3:15-15).

ಎಪ್ಪತ್ತೊಂದು ವರ್ಷ ಪ್ರಾಯದ ಒಬ್ಬ ಮನುಷ್ಯನು ನರ್ಸಿಂಗ ಹೋಮ ದಲ್ಲಿದ್ದಾಗ ತಾನು ರಕ್ಷಿಸಲ್ಪಟ್ಟದ್ದಕ್ಕೆ ಸಂತೋಷಪಟ್ಟನು, ಆದರೆ ಬೆಂಕಿಯ ಮುಖಾಂತರ ದಿಂದ ಎಂಬಂತೆ - ರಕ್ಷಿಸಲ್ಪಟ್ಟಿದ್ದಕ್ಕಾಗಿ ಅವನು ಬಹಳ ದುಃಖಗೊಂಡನು, ತನ್ನ ಜೀವಿತ ಕಟ್ಟಿಗೆ, ಹುಲ್ಲು, ಆಪನ್ನು ಸುಡುವ ಬೆಂಕಿಯು ಬಂಗಾರವನ್ನು ಬೆಳ್ಳಿಯನ್ನು ಮತ್ತು ಅಮೂಲ್ಯ ಹರಳುಗಳನ್ನು ಶುದ್ಧೀಕರಿಸುವ ಬೆಂಕಿಯಾಗಿರುವುದು. ಪವಿತ್ರಾತ್ಮನು ದೇವರ ಸ್ವಂತವಾದ ನಾಶವಾಗದ ಕಟ್ಟಡಗಳನ್ನು ಕಟ್ಟಲು ಸ್ವತಂತ್ರನಾಗಿರುವನು.

## ನಿತ್ಯವಾದ ಬೆಳಕು

ನಿತ್ಯವಾದ ದೇವರು ತನ್ನ ನಿತ್ಯವಾದ ಕಾರ್ಯವನ್ನು ಕ್ರಿಸ್ತನಲ್ಲಿ ವಾಸಿಸುವ, ತನ್ನ ವಿಶ್ವಾಸವನ್ನು ಪೋಷಿಸುವ ಮತ್ತು ತನ್ನ ಜೀವಿತಕ್ಕೆ ದೇವರ ವಾಕ್ಯವನ್ನು ಅನ್ವಯಿಸಿ ಕೊಳ್ಳುವ ಪ್ರತಿಯೊಬ್ಬ ಕ್ರೈಸ್ತನ ಮುಖಾಂತರ ಮಾಡುವನು. ಅಂಥ ವಿಶ್ವಾಸಿಗಳು ಭರವಸೆ ಯಿಂದ ಸಂತೋಷದ ನಿರೀಕ್ಷೆಯೊಂದಿಗೆ ಸಾಕ್ಷಿ ಕೊಡುವಂತೆ ಪ್ರತಿಯೊಂದು ಹೊಸ ದಿನವನ್ನು ಎದುರಿಸಲು ಶಕ್ತರಾಗುವರು : ''ಆದ ಕಾರಣ

ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕ ವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ'' (ಇಬ್ರಿಯ 12:28). ಪರಿಣಾಮಕಾರಿಯಾದ, ಕ್ರಮಪ್ರಕಾರವಾದ ಒಂದಾಗಿ ಕೂಡಿಬರುವ ಸಮಯವು, ನಮ್ಮ ಶರೀರದ ಶಕ್ತಿಯಲ್ಲಿ ಅಲ್ಲ, ಆದರೆ ಪವಿತ್ರಾತ್ಮನ ಬಲದಲ್ಲಿ ನಡೆಯಲು ನಮ್ಮನ್ನು ಪ್ರೋತ್ಸಾಹಿಸುವುದು.

ಒಂದು ದಿನ, ದೇವರ ಪವಿತ್ರ ಸನ್ನಿಧಿಯ ಎಲ್ಲವನ್ನು ಹುಡುಕುವ ಬೆಳಕಿನಲ್ಲಿ, ಜೀವಿಸುವ ದೇವರ ಕಾರ್ಯಕ್ಕಾಗಿ ಲಭ್ಯವಾಗಿರುವ ಪಾತ್ರೆಗಳಾದ ಆ ಜನರು ಅತಿಶಯ ವಾದ ಸಂತೋಷದಿಂದ ಆನಂದಿಸುವರು. ಹೌದು, ದಿನ ದಿನವೂ ಆತನ ಔತಣದ ಯೋಜನೆ ನಾವು ಸಮೀಪಿಸುವಾಗ, ಬೆಳಕಿನ ಮತ್ತು ಪ್ರೀತಿಯ ದೇವರು ತನ್ನೊಂದಿಗೆ ಪಾರದರ್ಶಕವಾದ ಅನ್ಯೋನ್ಯತೆಯನ್ನು ಅನುಭವಿಸಲು ಆಮಂತ್ರಿಸುವನು. ಈ ರೀತಿಯಲ್ಲಿ, ಕತ್ತಲೆಯ ಮತ್ತು ಸ್ವಾರ್ಥದ ಲೋಕಕ್ಕೆ ಬೆಳಕಿನ ಮತ್ತು ಪ್ರೀತಿಯ ಆತನ ಸಾಧನಗಳಾಗುವೆವು.

**ಆತ್ಮಿಕ ತಪಾಸಣೆ**

1. ನಾನು ಈಗ ಜೀವಿಸುತ್ತಿರುವಂತೆ ಜೀವಿಸಲು ಮುಂದುವರಿದರೆ, ಕ್ರಿಸ್ತನ ನ್ಯಾಯಾಸನದ ಮುಂದೆ ನನ್ನ ಜೀವನದಿಂದ ಯಾವುದೇ ಫಲವಿರುವುದೋ ?
2. ನಾನು ಪ್ರಾರ್ಥಿಸುವಾಗ, ದೇವರನ್ನು ನಿತ್ಯವಾದ ಬೆಳಕಿನಂತೆ, ಸಮೀಪಿಸುತ್ತೇನೋ ಇಲ್ಲವೇ ಆತನನ್ನು ಪರಲೋಕದಲ್ಲಿ ನನ್ನ ವೈಯಕ್ತಿಕ ಪೋಷಕನಂತೆ ಮಾತ್ರ ತಿಳಿದುಕೊಳ್ಳುವೆನೋ ?
3. ಈಗ, ನಾನು ದಾವೀದನ ಪ್ರಾರ್ಥನೆಯನ್ನು ಪ್ರಾರ್ಥಿಸುವ ಅಗತ್ಯತೆಯಿದೆಯೋ : ''ನಿನ್ನ ವಾಕ್ಯಕ್ಕನುಸಾರವಾಗಿ ನನ್ನನ್ನು ಉಜ್ಜೀವಿಸ ಮಾಡು.'' (ಕೀರ್ತನೆ 119:25)

ಜೀವದ ರೊಟ್ಟಿಯನ್ನು ನೀನು ಮುರಿ,
ಪ್ರಿಯ ಕರ್ತನೆ ನನಗಾಗಿ,
ನೀನು ರೊಟ್ಟಿಗಳನ್ನು ಮುರಿದಂತೆ
ಸಮುದ್ರದ ಬಳಿಯಲ್ಲಿ :
ಪವಿತ್ರ ಪುಟವನ್ನು ದಾಟಿ
ಕರ್ತನೇ, ನಿನ್ನನ್ನು ನಾನು ಹುಡುಕುವೆನು ;
ನನ್ನ ಆತ್ಮವು ನಿನಗಾಗಿ ಉಸಿರು ಬಿಡುವುದು
ಸಜೀವ ವಾಕ್ಯವೇ.

ನೀನಾಗಿರುವಿ ಜೀವದ ರೊಟ್ಟಿ,
ಓ ಕರ್ತನೆ, ನನಗೆ ;
ನಿನ್ನ ಪವಿತ್ರ ವಾಕ್ಯವು ಸತ್ಯವು
ನನ್ನನ್ನು ರಕ್ಷಿಸುವುದು ;
ಉಣ್ಣಲು ಮತ್ತು ಜೀವಿಸಲು ನನಗೆ ಕೊಡು
ನಿನ್ನೊಂದಿಗೆ ಮೇಲೆ ;
ನಿನ್ನ ಸತ್ಯವನ್ನು ಪ್ರೀತಿಸಲು ಪ್ರೀತಿಸಲು ಬೋಧಿಸು ನನಗೆ,
ಯಾಕಂದರೆ ನೀನು ಪ್ರೀತಿಯಾಗಿರುವಿ.

ಕರ್ತನೇ ನಿನ್ನ ಆತ್ಮನನ್ನು
ಈಗ ಕಳುಹಿಸು ನನಗೆ,
ನನ್ನ ಕಣ್ಣುಗಳನ್ನು ಆತನು ಮುಟ್ಟಲಿ
ನನ್ನನ್ನು ನೋಡಲು ಮಾಡುವಂತೆ ;
ನಿನ್ನ ವಾಕ್ಯದೊಳಗೆ,
ಆಡಗಿರುವ ಸತ್ಯವನ್ನು ತೋರಿಸು ನನಗೆ,
ಮತ್ತು ನಿನ್ನ ಪುಸ್ತಕದಲ್ಲಿ ಪ್ರಕಟಿಸಲ್ಪಟ್ಟ
ಕರ್ತನನ್ನು ನಾನು ನೋಡುವೆನು.

Mary Ann Lathbury

## ಅಧ್ಯಾಯ 8

# ಬಂದು, ಊಟ ಮಾಡಿರಿ

ಗಲಿಲಾಯ ಸರೋವರದ ಉಸುಕಿನ ದಢದಲ್ಲಿ ಉತ್ಥಾನವಾದ ದೇವರ ಕುಮಾರನು ಒಬ್ಬಂಟಿಗನಾಗಿ, ಯಾರ ಗಮನ ಸೆಳೆಯದೆ ನಿಂತು ಕೊಡಿದ್ದನು. ದಣಿದ ಆತನ ಶಿಷ್ಯರ ಕಣ್ಣಗಳಿಗೆ ಪ್ರಾಥಃಕಾಲದ ಮಂಜು ಆತನ ಭವ್ಯವಾದ ಸಾನ್ನಿಧ್ಯವನ್ನು ಮಸುಕುಗೊಳಿಸಿತ್ತು. ಬಹುಶಃ ಅವರ ಆತ್ಮಿಕ ಕಣ್ಣುಗಳು ಯೇಸುವಿನ ಶಿಲುಬೆಯ ಮೇಲಿನ ಕ್ರೂರ ಮರಣದ ನಂತರ ಮೊಬ್ಬಾಗಿದ್ದಿರಬೇಕು.

ದಢದಿಂದ ಅನತಿ ದೂರದಲ್ಲಿ ನಿರಾಶೆಯುಳ್ಳ ಶಿಷ್ಯರು ಮೀನು ಹಿಡಿಯುವ ಚಿಕ್ಕ ದೋಣಿಯಲ್ಲಿ ಒಂದಾಗಿ ಕೂಡಿಕೊಂಡಿದ್ದರು. ಮೀನು ಹಿಡಿಯುವದರಲ್ಲಿ ನಿರಾಶೆಗೊಂಡ ಒಂದು ರಾತ್ರಿಯನ್ನು ಈಗ ಅವರು ಕಳೆದಿದ್ದರು ; ಅವರಿಗೆ ಏನೂ ಸಿಕ್ಕಿರಲಿಲ್ಲ. ಅವರ ನೋವಿಗೆ ಅಪಮಾನವನ್ನು ಕೂಡಿಸುವಂತೆ ಯಾರೋ ಒಬ್ಬರು, ''ಮಕ್ಕಳಿರಾ, ಊಟಕ್ಕೆ ನಿಮಗೆ ಏನೂ ಇಲ್ಲವೇ?'' ಎಂದು ಕೇಳಿದರು. ಆಗ ದಢದ ಮೇಲೆ ದೂರದಲ್ಲಿದ್ದ ಆ ವ್ಯಕ್ತಿಯ ತುಟಿಗಳಿಂದ ಸ್ಪಷ್ಟವಾದ, ಎಲ್ಲರಿಗೂ ತಿಳಿದ ಆಜ್ಞೆಯು ಹೊರ ಬಂದಿತು : ದೋಣಿಯ ಬಲಗಡೆಯಲ್ಲಿ ಬಲೆಯನ್ನು ಬೀಸಿರಿ, ನೀವು ಕೆಲವನ್ನು ಕಂಡುಕೊಳ್ಳುವಿರಿ.

ತನ್ನ ದುಃಸ್ವಪ್ನದ ಮಂಪರಿನಿಂದ ಎಚ್ಚತ್ತುಕೊಂಡು, ಯೋಹಾನನು ಪರಿಚಿತ ಧ್ವನಿಗೆ ಉತ್ತರಿಸಿ, ಆನಂದದಿಂದ, ''ಅವರು ಸ್ವಾಮಿಯವರು!'' ಎಂದು ಹೇಳಿದನು. ಹೊಸ ನಿರೀಕ್ಷೆಯೊಂದಿಗೆ ಶಿಷ್ಯರು ತಮ್ಮ ಕರ್ತನ ನಿರ್ದೇಶನಗಳಿಗೆ ವಿಧೇಯರಾದರು, ಮತ್ತು ಕೂಡಲೇ ಬಹಳ ಮೀನುಗಳಿಂದ ಬಲೆಯು ತುಂಬಿಹೋಯಿತು. ಆಗ, ತನ್ನ ಉತ್ಸಾಹದಲ್ಲಿ, ಪೇತ್ರನು ಸಮುದ್ರದಲ್ಲಿ ಧುಮುಕಿದನು ಮತ್ತು ಕುತೂಹಲದಿಂದ ತನ್ನ ಒಡೆಯನ ಬಳಿಗೆ ಈಜಿಕೊಂಡು ಹೋದನು. (ಯೋಹಾನ 21:11).

ದಡದಲ್ಲಿ, ಉತ್ಥಾನವಾದ ಮಹಿಮೆಯುಳ್ಳ ಕರ್ತನು ತಾನೇ ಬೆಂಕಿಯನ್ನು ಹಚ್ಚಿ ಕೆಂಡಗಳನ್ನಿಟ್ಟಿದ್ದನು. ಎಲ್ಲಾ ಶಿಷ್ಯರು ಒಂದುಗೂಡಿ ಬಂದಾಗ, ಯೇಸು ಮೀನುಗಳನ್ನು ತರಲು ಹೇಳಿದನು ಮತ್ತು ಪೋಷಕವಾದ ಊಟವನ್ನು ಬೇಯಿಸಿ ಸಿದ್ಧಪಡಿಸಿದನು. ಹಸಿದ ಆದರೆ ಸಂತೋಷದಿಂದ ಇದ್ದ ಆ ಜನರಿಗೆ, ಯೇಸುವು ತನ್ನ ಕೃಪಾಪೂರ್ಣವಾದ ಆಮಂತ್ರಣ ಕೊಟ್ಟನು : **ಬಂದು, ಊಟ ಮಾಡಿರಿ.** (ಯೋಹಾನ 21:12).

ಇದೇ ಕೃಪಾಪೂರ್ಣವಾದ ಆಮಂತ್ರಣವು ಎರಡು ಸಹಸ್ರಮಾನಗಳಿಂದ ಕೇಳಿಸಲ್ಪಡುತ್ತಲೇ ಇದೆ, ಪ್ರಾತಃಕಾಲದ ನಂತರ ಪ್ರಾತಃಕಾಲದಲ್ಲಿ, ಯೇಸುವು ನಿತ್ಯತ್ವದ ದಡಗಳಲ್ಲಿ ನಿಂತುಕೊಂಡು, ತಾನು ಜಾಗರೂಕತೆಯಿಂದ ಸಿದ್ಧಪಡಿಸಿರುವ ಪರಲೋಕದ ಔತಣಕ್ಕೆ ಇನ್ನೂ ಆಹ್ವಾನಿಸುತ್ತಿದ್ದಾನೆ. ಹೌದು, ದೇವರು ತಾನೇ, ನಮ್ಮ ಕರ್ತನೂ ರಕ್ಷಕನೂ ಆದ ಯೇಸುವು ತಾನೇ, ನಮಗಾಗಿ ಪ್ರತಿಯೊಂದು ದಿನದ ಆಹಾರವನ್ನು ಜಾಗರೂಕತೆಯಿಂದ ಸಿದ್ಧಪಡಿಸಿರುವನು. ಅದು ನಮ್ಮ ವಿಶ್ವಾಸಕ್ಕಾಗಿ ಆಹಾರವಾಗಿರುವುದು ; ಅದು ದೇವರ ವಾಕ್ಯ ; ಅದು ಬೈಬಲ್ ಆಗಿರುತ್ತದೆ.

ಒಂದೆರಡು ಕ್ಷಣಗಳಲ್ಲಿ, ನನ್ನ ಒಂದಾಗಿ ಕೂಡಿ ಬರುವ ಸಮಯದಲ್ಲಿ ತೊಡಗಲು ವಾಕ್ಯಕ್ಕೆ ನಾನು ತಿರುಗುವಾಗ ''ಕೇಳುವದಕ್ಕೆ'' ನಿಮ್ಮನ್ನು ಆಹ್ವಾನಿಸುವೆನು. ಈ ವೈಯಕ್ತಿಕ ಪ್ರಾರ್ಥನಾ ಸಮಯವನ್ನು ದಾಖಲೆ ಮಾಡುತ್ತೇನೆ, ಯಾಕಂದರೆ ''ಬಂದು, ಊಟ ಮಾಡಿರಿ'' ಎಂದು ನಿಮ್ಮ

ಒಡೆಯನ ಕೃಪಾಪೂರ್ಣವಾದ ಆಮಂತ್ರಣಕ್ಕೆ ನೀವು ಕ್ರಮಪ್ರಕಾರವಾಗಿ ಉತ್ತರ ಕೊಡುವಾಗ ಇದು ನಿಮಗೆ ವ್ಯಾವಹಾರಿಕವಾದ ಪ್ರೋತ್ಸಾಹವೂ ಅಮೂಲ್ಯವಾದ ಸಹಾಯವೂ ಆಗಬಹುದು. ಎರಡು ಸಂಪೂರ್ಣವಾಗಿ ಭಿನ್ನವಾದ ಮೂಲಗಳಿಂದ ನಿಜವಾದ- ಜೀವನ ''ಒಂದು ಗೂಡಿ ಬರುವ ಸಮಯ'' ವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಾನು ಪ್ರೋತ್ಸಾಹಿಸಲ್ಪಟ್ಟಿದ್ದೇನೆ.

**ಮೊದಲನೆಯದು :** ಹಿಂದಿನ ಅಧ್ಯಾಯಗಳ ಕೈಬರಹದ ಪ್ರತಿಯನ್ನು ಓದಿದ ನನ್ನ ಒಬ್ಬ ಸ್ನೇಹಿತನು ಇದನ್ನು ಈ ಪುಸ್ತಕಕ್ಕೆ ಯೋಗ್ಯವಾದ ಮುಕ್ತಾಯದಂತೆ ಮಾಡಲು ಒತ್ತಾಯಿಸಿದನು.

**ಎರಡನೆಯದು :** ಕಾಲಕಾಲಕ್ಕೆ, ಅನೇಕ ವರ್ಷಗಳ ಅವಧಿಯಲ್ಲಿ, ಒಂದು ಸಾಂಘಿಕ ''ಒಂದಾಗಿ ಕೂಡಿ ಬರುವ ಸಮಯ'' ದಲ್ಲಿ ನಾನು ಭಿನ್ನವಾದ ಗುಂಪುಗಳನ್ನು ಮತ್ತು ಸಭೆಗಳನ್ನು ವಿಶೇಷವಾದ ರೀತಿಯಲ್ಲಿ ನಡಿಸಿದಾಗ ದೇವರು ಜನರನ್ನು ಹೇಗೆ ನಡಿಸಿದನು ಎಂಬುದಕ್ಕೆ ಸಾಕ್ಷಿಯಾಗಿರುವ ಅವಕಾಶ ಹೊಂದಿದ್ದೆನು.

ಅಂಥ ಸಂದರ್ಭಗಳಲ್ಲಿ, ಅಲ್ಲಿರುವ ಯಾವುದೇ ವ್ಯಕ್ತಿಯು ಭಾಗವಹಿಸಬಹುದು ; ಪವಿತ್ರಾತ್ಮನಿಗೆ ಮೌನ ಪ್ರಾರ್ಥನೆಯಲ್ಲಿ ಬಿಟ್ಟು ಯಾವುದೇ ಪ್ರಶ್ನೆಯನ್ನು ಕೇಳಬಾರದು ; ಮತ್ತು ಯಾವುದೇ ಪ್ರಸಂಗವು ಪ್ರಸಂಗಿಸಲ್ಪಡಬಾರದು ! ಪವಿತ್ರಾತ್ಮನು ನಮ್ಮ ಬೋಧಕನಾಗಿರಬೇಕೆಂದು ಒಂದಾಗಿ ಪ್ರಾರ್ಥಿಸುವದರಿಂದ ಅನ್ಯೋನ್ಯತೆಯ ಪ್ರತಿಯೊಂದು ಸಮಯವನ್ನು ನಾವು ಪ್ರಾರಂಭಿಸಿದೆವು. ಆಮೇಲೆ ಎಲ್ಲರೂ ಒಂದೇ ಧ್ವನಿಯಲ್ಲಿ ಆಯ್ದುಕೊಂಡ ಪರಿಶುದ್ಧ ಬರಹದ ಪರಿಚ್ಛೇದವನ್ನು ಗಟ್ಟಿಯಾಗಿ, ಓದುತ್ತೇವೆ. ಅದರ ನಂತರ, ಆ ಪರಿಶುದ್ಧ ಬರಹದ ಪ್ರಾರಂಭಕ್ಕೆ ಹಿಂದಿರುಗುತ್ತೇವೆ ಮತ್ತು ಮೊದಲನೆಯ ವಚನವನ್ನು ಒಂದಾಗಿ ಗಟ್ಟಿಯಾಗಿ ಓದುತ್ತೇವೆ. ಮುಂದಿನ ವಚನವನ್ನು ಒಂದಾಗಿ ಗಟ್ಟಿಯಾಗಿ ಓದುತ್ತೇವೆ. ಮುಂದಿನ ವಚನಕ್ಕೆ ಹೋಗುವ ಮೊದಲು, ಮೌನವಾಗಿದ್ದು ಮೂವತ್ತು ಸೆಕೆಂಡುಗಳನ್ನು ಕಳೆಯುತ್ತೇವೆ. ಆ ಮೌನ ಸಮಯದಲ್ಲಿ, ಪ್ರತಿಯೊಬ್ಬ ವ್ಯಕ್ತಿಯು ನಾವು ಆಗಲೇ ಓದಿದ ವಚನದ ಮೇಲೆ

ಪ್ರಾರ್ಥನಾ ಪೂರ್ವಕವಾಗಿ ಧ್ಯಾನ ಮಾಡಬೇಕು, ಈ ಅಧ್ಯಾಯದ ನಂತರ ಯಾದಿ ಮಾಡಿದ ಪ್ರಶ್ನೆಗಳಿಗೆ ಉತ್ತರಿಸಲು ಸಹಾಯವಾಗುವುದೋ ಎಂಬುದನ್ನು ತೀರ್ಮಾನಿಸಿ ಕೊಳ್ಳಬೇಕು, ಧ್ಯಾನದ ಮತ್ತು ಪ್ರಾರ್ಥನೆಯ ಮೌನ ಸಮಯದ ನಂತರ, ಪವಿತ್ರಾತ್ಮನು ತನ್ನ ಹೃದಯಕ್ಕೆ ಆ ವಚನವನ್ನು ಹೇಗೆ ಅನ್ವಯಿಸಿದನೆಂಬುದನ್ನು ಇತರರೊಂದಿಗೆ ಹಂಚಿಕೊಳ್ಳಬಹುದು, ಇದರ ನಂತರ ಹಂಚಿಕೊಂಡವನಿಂದ ಇಲ್ಲವೇ ಅಲ್ಲಿದ್ದವರಲ್ಲಿ ಒಬ್ಬರಿಂದ ಉತ್ತರವಾಗಿ ಪ್ರಾರ್ಥನೆಯು ಮಾಡಲ್ಪಡಬೇಕು.

**ಈ ವಿಧಾನವು ಸಾಂಘಿಕ ''ಒಂದಾಗಿ ಕೂಡಿಬರುವಿಕೆಯ ಸಮಯ''ವನ್ನು ನಡಿಸಲು ಅತೀ ಹೆಚ್ಚು ಲಾಭಕರವಾದ ಮಾರ್ಗವಾಗಿದೆ ಎಂದು ನಾನು ನಂಬುತ್ತೇನೆ. ಈ ಸಮಯದಲ್ಲಿ, ಒಂದು ಗುಂಪು ಅಧ್ಯಯನದಲ್ಲಿ ಈ ಪುಸ್ತಕವನ್ನು ಉಪಯೋಗಿಸುತ್ತಿರುವ ನಾಯಕರನ್ನು, ಮೇಲಿನ ಸೂಚನೆಗಳನ್ನು ಅನ್ವಯಿಸುವ ಉದ್ದೇಶಕ್ಕಾಗಿ ಮುಂದಿನ ಹಲವಾರು ಕೂಟಗಳನ್ನು ಉಪಯೋಗಿಸಬೇಕೆಂದು ಒತ್ತಾಯಪಡಿಸುತ್ತೇನೆ. (ಪುರವಣಿ A ದಲ್ಲಿಯ ಪ್ರಶ್ನೆಗಳು ಹೆಚ್ಚಿನ ಸಹಾಯಕ್ಕಾಗಿ ಕೊಡಲ್ಪಟ್ಟಿವೆ.)**

ಸಾಂಘಿಕ ''ಒಂದಾಗಿ ಕೂಡಿ ಬರುವಿಕೆಯ ಸಮಯ''ದ ವಿಚಾರವನ್ನು ನನಗೆ ಪರಿಚಯ ಮಾಡಿದವರು ದಿವಂಗತ ಥೊಮಸ್ ಬಿ. ರೀಜ ಎಂಬ ಬ್ರಿಟಿಶ್ ಸುವಾರ್ತಿಕರು. ಕ್ರಿಸ್ತನಿಗಾಗಿ ನಾನು ಮಾರ್ಪಾಟ'ಹೊಂದಿದ, ಯಂಗ ಪೀಪಲ್ಸ ಹೊಲಿಡೇ ಕಾನ್ಫರನ್ಸ ಸೆಂಟರದಲ್ಲಿ ಅದನ್ನು ನನಗೆ ಹೇಳಿದರು. ನಾವು ಉತ್ತರ ಹೇಳಲು ಟೊಮ್ ಅವರು ಕೇಳಿದ ಪ್ರಶ್ನೆಗಳು **''ಒಂದಾಗಿ ಕೂಡಿಬರುವ ಸಮಯ''** ಎಂಬ ಅಧ್ಯಾಯದಲ್ಲಿ ಈಗಾಗಲೇ ಸೂಚಿಸಿದವುಗಳಿಗೆ ವ್ಯತ್ಯಾಸವುಳ್ಳವುಗಳಾಗಿದ್ದವು.

ಅಂದಿನಿಂದ ಅನೇಕ ವರ್ಷಗಳಲ್ಲಿ, ಈ ರೀತಿಯಲ್ಲಿ ನಾನು ನಡಿಸಿದ ಅನೇಕ ಕೂಟಗಳು ದೇವರ ಸನ್ನಿಧಿಯ ಅಸಾಮಾನ್ಯವಾದ ಅನಿಸುವಿಕೆಗಳಿಂದ ಮತ್ತು ಹೃದಯ ಗಳಿಗೆ ಹಾಗೂ ಜೀವಿತಗಳಿಗೆ ಪವಿತ್ರಾತ್ಮನ ಮಾತನಾಡುವಿಕೆಯಿಂದ ಹಿಂಬಾಲಿಸಿಕೊಂಡು ಬಂದಿವೆ. ಅಂಥ ಒಂದು

ಆರಾಧನೆಯ ನಂತರ, ಕ್ಯಾನಡಾದಲ್ಲಿಯ ವಿಕ್ಟೋರಿಯಾ ದಲ್ಲಿಯ ಬ್ಯಾಪ್ಟಿಸ್ಟ ಚರ್ಚಿನ ಸಭಾಪಾಲಕರು ಹೀಗೆ ಹೇಳಿದರು : ''ನನ್ನ ಇಡೀ ಸೇವಾ ವಧಿಯಲ್ಲಿ ನಾನು ಭಾವವಹಿಸಿದ ಆರಾಧನೆಯಲ್ಲಿ ಅದು ಹೆಚ್ಚು ಆಶೀರ್ವಾದಕರವಾದದ್ದೂ ಮತ್ತು ಗಮನಾರ್ಹವಾದದ್ದು ಆಗಿದ್ದ ಆರಾಧನೆಯಾಗಿತ್ತು''.

ಅದರಂತೆ, ಯೆರೂಸಲೇಮಿನ ಹಳೇ ಪಟ್ಟಣದಲ್ಲಿ ಕ್ರಿಶ್ಚನ್ ಆ್ಯಂಡ ಮಿಶನರಿ ಅಲ್ಲಾಯನ್ಸ ಚರ್ಚ ಘಾರ ಅರಾಬ್ಸದಲ್ಲಿ ಹಲವಾರು ದಿನಗಳ ಸೇವೆಯ ನಂತರ (ಆ ಸಮಯದಲ್ಲಿ ಈ ತತ್ವಗಳನ್ನು ಬೋಧಿಸುವದರಲ್ಲಿ ಮತ್ತು ಇತರ ದಿನಗಳಲ್ಲಿ ಸಾಂಘಿಕ ''ಒಂದಾಗಿ ಕೂಡಿ ಬರುವ ಸಮಯಗಳನ್ನು'' ನಡಿಸುತ್ತ ಕೆಲವು ದಿನಗಳನ್ನು ಕಳೆದೆನು), ಕ್ಯಾನೇಡಿಯನ್ ಬೈಬಲ್ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರು, ಆಗ ಅವರು ಪುರಾತನ ಪಟ್ಟಣದಲ್ಲಿ ಜೀವಿಸುತ್ತಿದ್ದರು, ಹೀಗೆ ಹೇಳಿದರು: ''ಯೆರೂಸಲೇಮಿನಲ್ಲಿ ಈ ರೀತಿಯ ನಿಜವಾದ ಆತ್ಮಿಕ ಪರಿಣಾಮಕ್ಕೆ ನಾವೆಂದೂ ಇಷ್ಟು ನಿಕಟವಾಗಿರಲಿಲ್ಲ''.

ಸಭಾಕೂಟಗಳಲ್ಲಿ, ಮನೆಯ ಅನ್ಯೋನ್ಯತೆಗಳಲ್ಲಿ, ಬೈಬಲ್ ಕಾನ್ಫರನ್ಸಗಳಲ್ಲಿ ಮತ್ತು ಯುವ ಜನರ ಅನ್ಯೋನ್ಯ ಕೂಟಗಳಲ್ಲಿ, ಒಂದೇಯಾಗಿ ದೇವರು ಈ ಜನರನ್ನು ಆಶೀರ್ವದಿಸಿದ್ದಾನೆ, ಆದಾಗ್ಯೂ ಅದೇ ಸಮಯದಲ್ಲಿ ದೇವರ ವಾಕ್ಯವನ್ನು ವೈಯಕ್ತಿಕವಾಗಿ ಸಂದರ್ಶಿಸಿದ್ದನು ಆಶೀರ್ವದಿಸಿದ್ದಾನೆ.

ಹೀಗಿದ್ದರೂ, ನನ್ನ ವೈಯಕ್ತಿಕ ಒಂದುಗೂಡಿ ಬರುವ ಸಮಯದ ಬಗ್ಗೆ ಬರೆಯಲು ಪ್ರಯತ್ನಿಸಿದಾಗ, ಕರ್ತನೊಂದಿಗಿನ ನನ್ನ ವೈಯಕ್ತಿಕ ಅನ್ಯೋನ್ಯತೆಯ ಸಮಯದ ವಾಸ್ತವಿಕತೆ, ಬೆಳವಣಿಗೆ ಮತ್ತು ಪ್ರೇರಣೆಯನ್ನು ಹಿಡಿದುಕೊಳ್ಳುವುದು, ಅಂಥ ಅನುಭವವನ್ನು ಏಕಾಂತದಲ್ಲಿ ಆನಂದಿಸುವದಕ್ಕಿಂತ ಇಲ್ಲವೇ ಬಹಿರಂಗ ಕೂಟದಲ್ಲಿ ಅನುಭವಿಸುವದಕ್ಕಿಂತ ಹೆಚ್ಚು ಕಠಿಣವಾದದ್ದಾಗಿದೆ ಎಂದು ಕಂಡು ಕೊಂಡೆನು.

ಕರ್ತನೊಂದಿಗೆ ಒಂದಾಗಿ ಕೂಡಿ ಬರುವ ನನ್ನ ಸಮಯದ ಈ ಕೆಳಗಿನ ಕೆಲವು ಪ್ರಮುಖ ವಿಷಯಗಳನ್ನು ನಿಮಗಾಗಿ ದಾಖಲೆ ಮಾಡಲು ನನಗೆ ಸಹಾಯ ಮಾಡಲು, ಕೆಲವು ಮೂಲ ನಿಯಮಗಳನ್ನು ನನಗಾಗಿ ಇಟ್ಟುಕೊಂಡೆನು.

**ಮೊದಲನೆಯದು :** ನನಗೆ ಮೆಚ್ಚಿಕೆಯಾದ ಹಾಗೂ ಬಹಳವಾಗಿ ಪರಿಚಿತವಾಗಿರುವ ಬೈಬಲಿನ ಪರಿಚ್ಛೇದಗಳಲ್ಲಿ ಒಂದನ್ನು ನಾನು ಆಯ್ಕೆ ಮಾಡಿಕೊಂಡಿರುವ ದಿಲ್ಲ. ನನ್ನ ಅನುದಿನದ ಒಂದಾಗಿ ಕೂಡಿಬರುವಿಕೆಯಲ್ಲಿ, ಪೌಲನು ಕೊರಿಂಥದವರಿಗೆ ಬರೆದ ಎರಡನೆಯ ಪತ್ರಿಕೆಯನ್ನು ಓದುತ್ತಿರುವೆನು.

**ಎರಡನೆಯದು :** ಪರಿಶುದ್ಧ ಬರಹದ ಇಂದಿನ ಭಾಗದ ಈ ಕೆಳಗಿನ ದಾಖಲೆಯು ವಚನ ವಚನವಾಗಿ ವ್ಯಾಖ್ಯಾನಿಸುವ ಉದ್ದೇಶ ಹೊಂದಿರುವದಿಲ್ಲ.

**ಮೂರನೆಯದು :** ನನ್ನ ಒಂದಾಗಿ ಕೂಡಿ ಬರುವಿಕೆಯ ಈ ವರದಿಯನ್ನು ಸಾಧ್ಯವಾದಷ್ಟು ಸ್ವಾಭಾವಿಕವಾದದ್ದನ್ನಾಗಿ (ಅಲೌಕಿಕವಾದದ್ದನ್ನಾಗಿ) ಮಾಡಲು, ಇಂದು ಪವಿತ್ರಾತ್ಮನು ನನ್ನ ಹೃದಯಕ್ಕೆ ಜೀವಿಸುವವುಗಳನ್ನಾಗಿ ಮಾಡಿದ ವಚನಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

**ನಾಲ್ಕನೆಯದು :** ಈಗಾಗಲೇ ಸೂಚಿಸಲ್ಪಟ್ಟ ಕೆಲವು ಪ್ರಶ್ನೆಗಳನ್ನು ಉಪಯೋಗಿಸುವದರಿಂದ ಪ್ರಾರ್ಥನಾ ಪೂರ್ವಕವಾಗಿ ದೇವರ ವಾಕ್ಯದ ಮೇಲೆ ಧ್ಯಾನಿಸಿದಾಗ, ದೇವರ ಸ್ವರವು ವೈಯಕ್ತಿಕ ಕೇಂದ್ರವಾಗಿ ತರಲ್ಪಟ್ಟಿದ್ದನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ನನ್ನ ಧ್ಯಾನಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವಂತೆ, ಯಾವುದೇ ಒಂದಾಗಿ ಕೂಡಿ ಬರುವಿಕೆಯು ಉದ್ದೇಶಪೂರ್ವಕವಾಗಿ ವೈಯಕ್ತಿಕ ಅನುಭವ ಎಂದು ನೀವು ಅರ್ಥ ಮಾಡಿಕೊಳ್ಳುವಿರಿ. ಇಂದು ನಿಮ್ಮ ಪರಿಸ್ಥಿತಿಗಳು ನನ್ನ ಪರಿಸ್ಥಿತಿಗಳಂತೆ ಇರುವದಿಲ್ಲ ಎಂಬುದರ ಅರುಹು ನನಗಿರುತ್ತದೆ. ನನ್ನ ಇಂದಿನ ಪರಿಸ್ಥಿತಿಗಳು ಆರು ತಿಂಗಳುಗಳ ನಂತರ ಇರುವ ಪರಿಸ್ಥಿಗಳಂತೆ ಇರುವುದಿಲ್ಲ ಎಂಬುದರ ಅರುಹೂ ಇರುತ್ತದೆ. ತನ್ನ ಮಹಾ ಪ್ರೀತಿಯಲ್ಲಿ, ನಾವಿದ್ದ ಕಡೆಯಲ್ಲಿ ಅಲ್ಲ, ಆದರೆ ನಾವಿರುವಲ್ಲಿ, ನಾವು ಮುಂದೆ ಇರುವಲ್ಲಿ ಅಲ್ಲ, ಬೇರೆ ಇತರರೂ ಇರುವಲ್ಲಿ ಅಲ್ಲ, ಆದರೆ ನಾವಿರುವಲ್ಲಿಯೇ ದೇವರು ನಮ್ಮನ್ನು ಸಂದರ್ಶಿಸುತ್ತಾನೆ ಮತ್ತು ನಮ್ಮೊಂದಿಗೆ ಮಾತಾಡುತ್ತಾನೆ. ಈ ಕೆಳಗಿನ ದಾಖಲೆಯನ್ನು ನೀವು ಓದಿದಾಗ, ನನ್ನಿಂದ ಸಂಪೂರ್ಣವಾಗಿ ಭಿನ್ನವಾದ ಪರಿಸ್ಥಿತಿಗಳನ್ನು ನೀವು ಎದುರಿಸುವಿರಿ, ನಿಮ್ಮ ಸ್ವಂತ ಅಗತ್ಯತೆಗಳ ಮತ್ತು ಪರಿಸ್ಥಿಗಳ

ಸಂಬಂಧ ದಲ್ಲಿ ದೇವರು ಮಾತಾಡುವದರಿಂದ, ನೀವು ವೈಯಕ್ತಿಕವಾಗಿಯೂ ಅನುದಿನವೂ ಬಂದು, ಊಟ ಮಾಡಲು ಕರ್ತನಿಂದ ನಿಮ್ಮ ಸ್ವಂತ ಆಮಂತ್ರಣವು ಕೊಡಲ್ಪಡುವುದು.

ನಿಶ್ಚಯವಾಗಿಯೂ ಬೈಬಲು ನಮ್ಮ ಹೃದಯಗಳಿಗೆ ದೇವರ **ಸಜೀವಾದ** ಹಾಗೂ **ಬಲವಾದ** ವಾಕ್ಯ ಆಗಿರುವದಷ್ಟೇ ಅಲ್ಲ, ಆದರೆ ಅದು ನಮ್ಮೊಬ್ಬೊರಿಗೆ ಆತನ **ವೈಯಕ್ತಿಕ** ವಾಕ್ಯವೂ ಆಗಿದೆ. ''**ಯಾಕಂದರೆ ದೇವರ ವಾಕ್ಯವು ಸಜೀವವಾದದ್ದೂ ಕಾರ್ಯ ಸಾಧಕ ವಾದದ್ದೂ..... ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನು ವಿವೇಚಿಸು ವಂಥದ್ದು ಆಗಿದೆ.** (ಇಬ್ರಿಯ 4:12). ಅದಕ್ಕಿಂತ ಹೆಚ್ಚು ವೈಯಕ್ತಿಕವಾದದ್ದು ಯಾವುದು ?

ಇಂದು ನನ್ನ ಬೈಬಲ್ ಧ್ಯಾನದಲ್ಲಿ, ನ್ಯೂ ಕಿಂಗ ಜೇಮ್ಸ ಆವೃತ್ತಿಯಿಂದ ನಾನು ಓದುತ್ತೇನೆ. ಈಗ , ನನ್ನ ಬೈಬಲನ್ನು 2 ಕೊರಿಂಥ, ಅಧ್ಯಾಯ 1ಕ್ಕೆ ತೆರೆಯುವಂತೆ, ಕೇಳುವದಕ್ಕೆ ನಾನು ಆಮಂತ್ರಿಸುವೆನು. ದಯವಿಟ್ಟು ನನ್ನೊಂದಿಗೆ ನಿಮ್ಮ ಸ್ವಂತ ಬೈಬಲನ್ನು ತೆರೆಯಿರಿ.

**ಬೆಳಿಗ್ಗೆ 5-00 ಗಂಟೆಯಾಗಿದೆ - ನಾನು ನನ್ನ ಬಾಗಿಲನ್ನು ಮುಚ್ಚಿದ್ದೇನೆ ಮತ್ತು ದೇವರೊಂದಿಗೆ ಏಕಾಂಗಿಯಾಗಿರಲು ನನ್ನ ಬೈಬಲನ್ನು ತೆರೆದಿದ್ದೇನೆ.**

ತೆರೆದ ಬೈಬಲಿನೊಂದಿಗೆ ಮತ್ತು ತೆರೆದ ಹೃದಯದೊಂದಿಗೆ ದೇವರ ಸನ್ನಿಧಿ ಯಲ್ಲಿ ನಾನು ಬರುವಂತೆ ಇಂದು ನನ್ನ ಜೀವನದ ಸುತ್ತ ಕೆಲವು ಪರಿಸ್ಥಿತಿಗಳು ಇರುತ್ತವೆ:

★ ಡೊರೊತಿಯು ಸಹಿಸುತ್ತಿರುವ ಸತತವಾದ ಮತ್ತು ಹೆಚ್ಚುತ್ತಿರುವ ನೋವಿನ ಬಗ್ಗೆ ನಾನು ಪ್ರತ್ಯೇಕವಾಗಿ ಚಿಂತಿತನಾಗಿರವೆನು. ಕಳೆದ ಈ ವಾರಗಳಲ್ಲಿ ಅದು ಹೆಚ್ಚು ತೀಕ್ಷ್ಣವಾಗಿರುತ್ತದೆ.

★ ಈ ಶರತ್ಕಾಲದಲ್ಲಿ ನಮ್ಮ ಸೇವಾ ಸಂಚಾರಕ್ಕಾಗಿ ಯೋಜನೆಗಳನ್ನು ಅಂತಿಮ ಗೊಳಿಸುವಲ್ಲಿ ಆಕೆಯ ಆರೋಗ್ಯದ ಸ್ಥಿತಿಯು ನಿರ್ಣಾಯಕವಾಗುವುದೋ ಇಲ್ಲವೋ ಎಂಬುದನ್ನು ಕುರಿತು

ಚಿಂತಿಸುತ್ತಿದ್ದೇನೆ. ಹಿಂದಿನ ನಮ್ಮ ದೀರ್ಘವಾದ ಹೆಚ್ಚು ಆಯಾಸ ಪಡಿಸುವ ಮಿಶನರಿ ಪ್ರಯಾಣಗಳಲ್ಲಿ ಅಸಾಮಾನ್ಯವಾದ ರೀತಿಯಲ್ಲಿ ಡೊರೊತಿಯು ಕಷ್ಟಪಟ್ಟದ್ದನ್ನು ನೋಡಿ, ''ಡೊರೊತಿ, ಇಂಥ ಪರಿಸ್ಥಿತಿಗೆ ನಿನ್ನನ್ನು ಪುನಃ ಎಂದೂ ಬಹಿರಂಗ ಗೊಳಿಸುವದಿಲ್ಲ'' ಎಂದು ಆಕೆಗೆ ಹೇಳಿದ್ದೆನು. ಆದರೆ. ಒಂದಿಲ್ಲಾ ಒಂದು ರೀತಿಯಲ್ಲಿ ನಮ್ಮ ಅನ್ಯೋನ್ಯ ಸೇವೆಯಲ್ಲಿ ದೇವರು ತನ್ನ ಆಶೀರ್ವಾದವನ್ನು ಸುರಿಸಿದ್ದನು, ಮತ್ತು ನಾವು ಒಂದಾಗಿ, ''ಇದು ಮಹಿಮೆಯುಳ್ಳ ಯೋಗ್ಯವಾದದ್ದಾಗಿದೆ'' ಎಂದು ಹೇಳಿದ್ದೇವೆ. ಕರ್ತನೇ, ಈ ಸಮಯದ ಬಗ್ಗೆ ಏನು ?

★ ಇಂದು ಕೀನ್ಯಾದಲ್ಲಿಯ ಪರಿಸ್ಥಿತಿಯು ನನ್ನ ಹೃದಯದ ಮೇಲೆ ಬಹು ಭಾರವಾದದ್ದಾಗಿದೆ, ಹಿಂದಿನ ದಿನಗಳಲ್ಲಿ ದೇವರು ಅಲ್ಲಿ ನಮ್ಮ ಸೇವೆಯನ್ನು ಆಶೀರ್ವದಿಸಿದ್ದನು. ದೇಶದಲ್ಲಿಯ ಇಡೀ ಪರಿಸ್ಥಿತಿಯು ಸ್ಥಿರವಾಗಿರುವದಿಲ್ಲ, ಹಣದುಬ್ಬರವು ನಿಯಂತ್ರಣವಿಲ್ಲದೇ ಓಡುತ್ತಿದೆ. ಅಲ್ಲಿ ಕ್ರಿಸ್ತನಿಗೆ ನಂಬಿಗಸ್ಥಕೆಯಿಂದ ಸೇವೆ ಮಾಡುತ್ತಿರುವ ಅನೇಕ ಸ್ಥಳೀಯರಿಗೆ ಇನ್ನೂ ಹೆಚ್ಚಾದದ್ದನ್ನು ನಾವು ಮಾಡಬೇಕೆಂದು ಬಯಸುತ್ತೇನೆ.

★ ಅಕಾಲಿಕ ವಿಯೋಗ ದುಃಖಕ್ಕೊಳಗಾದ ಇಲ್ಲವೇ ಮರಣಾಂತಿಕ ಅಸ್ವಸ್ಥತೆ ಯಲ್ಲಿರುವ ಡೊರೊತಿಯ ಹಾಗೂ ನನ್ನ ಪರ ಎರಡೂ ಕಡೆಗಳಲ್ಲಿ ಕುಟುಂಬ ಸದಸ್ಯರಿದ್ದಾರೆ. ನಮ್ಮ ನಿಯಂತ್ರಣವಿಲ್ಲದ ಮತ್ತು ಅನಿರೀಕ್ಷಿತ ಕಾರ್ಯಕ್ರಮಗಳ ನಿಮಿತ್ತವಾಗಿ, ಡೊರೊತಿಯ ದೈಹಿಕ ಆರೋಗ್ಯದ ಮಿತಿಗಳ ನಿಮಿತ್ತವಾಗಿ, ನಾವು ಅವರ ಬಗ್ಗೆ ಚಿಂತಿಸುತ್ತೇವೆಂದು ತಿಳಿಸಲು ಆಸಕ್ತರಾಗಿದ್ದೇವೆ.

## ಪ್ರಾರ್ಥನೆ

ತಂದೆಯೇ, ಈ ಪ್ರಾತಃಕಾಲ ಅಸಾಮಾನ್ಯವಾಗಿ ಬೇಗನೇ ಎಬ್ಬಿಸಿದ್ದಕ್ಕಾಗಿ ನಿನಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನೀನು ವಿಶೇಷವಾದ ರೀತಿಯಲ್ಲಿ ನನ್ನ

ಹೃದಯಕ್ಕೆ ಮಾಡಲು ಬಯಸುವುದು ನಿನ್ನ ಉದ್ದೇಶವೆಂದು ನಾನು ನಂಬುತ್ತೇನೆ, ಅಷ್ಟೇ ಅಲ್ಲ, ಅನಂತರದಲ್ಲಿ ನಿನ್ನ ವಾಕ್ಯದ ಮುಖಾಂತರ ನೀನು ನನಗೆ ಹೇಳುವದನ್ನು ನಾನು ಇತರರೊಂದಿಗೆ ಹಂಚಿಕೊಳ್ಳುವಾಗ ಅದನ್ನು ಕೇಳುವವರೆಲ್ಲರನ್ನೂ ಆಶೀರ್ವದಿಸುತ್ತೀ ಎಂದು ನಂಬುತ್ತೇನೆ.

ಕರ್ತನೇ, ನೀನು ತಿಳಿದಿರುವಿ, ನಿನ್ನ ಬಗ್ಗೆ ಮಾತ್ರವೇ ಅರುಹುವುಳ್ಳವನಾಗಿರು ವಂತೆ ಮುಂದೆ ಈ ದಾಖಲೆಯನ್ನು ಓದುವ ಜನರನ್ನು ನನ್ನ ಮನಸ್ಸಿನಿಂದ ಹೊರಗೆ ಹಾಕುವದು ನನಗೆ ಸುಲಭವಾಗಿರುವದಿಲ್ಲ. ಆದುದರಿಂದ, ನೀನು ನನ್ನ ಹೃದಯವನ್ನು, ನನ್ನ ಮನಸ್ಸನ್ನು ಮತ್ತು ನನ್ನ ಪೆನ್ಸಿಲನ್ನು ಪಾರದರ್ಶಕತೆಯಿಂದ, ವಾಸ್ತವಿಕತೆಯಿಂದ ಮತ್ತು ನಿನ್ನೊಂದಿಗೆ ವೆಯ್ಯಕ್ತಿಕ ನಿಕಟತೆಯ ನಿಜವಾದ ಭಾವನೆಯಿಂದ ನನ್ನ ಹೃದಯ ವನ್ನು ಅಭಿಷೇಕಿಸೆಂದು ಪ್ರಾರ್ಥಿಸುತ್ತೇನೆ.

**ನನ್ನ ಜೀವಿತವು ದೇವರಲ್ಲಿ ಕ್ರಿಸ್ತನಿಂದ ಅಡಗಿಸಡಲ್ಪಟ್ಟಿದೆ ಎಂದು ನಿನ್ನ ಸನ್ನಿಧಿ ಯಲ್ಲಿ ಪುನಃ ಒಪ್ಪಿಕೊಳ್ಳುತ್ತೇನೆ. ಅಂಥ ಅದ್ಭುತಕರವಾದ ಭರವಸೆಗಾಗಿ ನಿನಗೆ ಉಪಕಾರ ಹೇಳುತ್ತೇನೆ. ಪ್ರೀತಿಯುಳ್ಳ ಕರ್ತನೇ, ನಿನ್ನನ್ನು ನಾನು ಕೊಂಡಾಡುವೆನು, ನನ್ನ ಕೈಗಳಿಂದ ಬರೆಯುತ್ತಿರುವ ಭೂಲೋಕದ ಮೇಲಿನ ಈ ದಾಖಲೆಯು ದುಃಖಕರವಾಗಿ ನನ್ನ ಸ್ವಂತ ದೃಷ್ಟಿಕೋನದಿಂದ ತುಂಬಲ್ಪಟ್ಟಿದ್ದರೂ, ಪರಲೋಕದಲ್ಲಿ ನೀನು ನನ್ನ ದೊಡ್ಡ ಮಹಾಯಾಜಕನಾಗಿರುವಿ ಮತ್ತು ನನ್ನ ಪ್ರಾರ್ಥನೆಗಳನ್ನೂ ಸ್ತೋತ್ರಗಳನ್ನು ತಂದೆಯ ಸಿಂಹಾಸನದ ಮುಂದೆ ನಿನ್ನ ಪರಿಪೂರ್ಣ ಜ್ಞಾನದಿಂದಲೂ ಚಿತ್ತದಿಂದಲೂ ಇಡುವಿಯೆಂದು ನಂಬುತ್ತೇನೆ. ಆದುದರಿಂದ ಸಂತೋಷದ ನಿರೀಕ್ಷೆಯಿಂದ ಈ ಪ್ರಾತಃಕಾಲದಲ್ಲಿ ನಾನು ನಿನ್ನ ವಾಕ್ಯದ ಕಡೆಗೆ ತಿರುಗಿಕೊಳ್ಳುತ್ತೇನೆ. ನಿನ್ನ ವಾಕ್ಯದಲ್ಲಿ ಅದ್ಭುತಕರವಾದ ಸಂಗತಿಗಳನ್ನು ನಾನು ನೋಡಲಿಕ್ಕಾಗುವಂತೆ ಈ ದಿನ ನನ್ನ ಕಣ್ಣುಗಳನ್ನು ತೆರೆ.**

ಪ್ರಿಯ ವಾಚಕನೇ, ಇಂದು, ನಾನು 2 ಕೊರಿಂಥ ಅಧ್ಯಾಯ 1ಕ್ಕೆ ತಿರುಗುತ್ತೇನೆ ಮತ್ತು ಇಡೀ ಅಧ್ಯಾಯವನ್ನು ನಿಧಾನವಾಗಿ ಗಟ್ಟಿಯಾಗಿ ಓದುತ್ತೇನೆ. ಇದನ್ನು ಸ್ಪಷ್ಟವಾದ ಧ್ವನಿಯಿಂದ ಓದುತ್ತೇನೆ ಮತ್ತು ಬಹಳವಾಗಿ

ತಡೆಯುವದಿಲ್ಲ. ನೀನೂ ಅದನ್ನು ಮಾಡಬೇಕೆಂದು ಆಮಂತ್ರಿಸುತ್ತೇನೆ.

ಈ ರೀತಿಯಲ್ಲಿ ಒಂದೆರಡು ಕ್ಷಣಗಳ ಹಿಂದೆ ಅಧ್ಯಾಯವನ್ನು ಓದಿದ ಮೇಲೆ ಕ್ರಿಸ್ತನ ಸೇವಕನಂತೆ ಪೌಲನ ಆದರ್ಶವಾದ ನಡತೆಯ ಬಗ್ಗೆ ನಾನು ಅರುಹುವುಳ್ಳವ ನಾದೆನು. ಕರ್ತನೊಂದಿಗಿನ ಹೆಚ್ಚಿನ ಸಮಯವು ಈ ಪ್ರಶ್ನೆಗೆ ಉತ್ತರ ಕೊಡುವುದೆಂದು ನನಗೆ ಸ್ಪಷ್ಟವಾಯಿತು. **ಈ ವಚನದಲ್ಲಿ ಅನುಸರಿಸಬೇಕಾದ ಒಂದು ಉದಾಹರಣೆಯು ಇರವುದೋ ?**

ಇಡೀ ಅಧ್ಯಾಯದ ನನ್ನ ಮೊದಲನೆಯ ಓದುವಿಕೆಯಿಂದ, ನನ್ನ ಹೃದಯವು ಆಗಲೇ, ಪೌಲನ ಶ್ರೇಷ್ಠವಾದ ಉದಾಹರಣೆಗಳನ್ನು ಅನುಸರಿಸಲಿಕ್ಕೆ ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಟ್ಟಿತು. ನಾನು ನನ್ನ ಕರ್ತನ ಹೆಚ್ಚು ಉತ್ತಮ ಸೇವಕನಾಗಿರಲು ಬಯಸುತ್ತೇನೆ. ಅಧ್ಯಾಯದ ವಚನದಿಂದ ವಚನವನ್ನು ಅಧ್ಯಯನ ಮಾಡಲು ಮುಂದುವರಿಯುವ ಮೊದಲು, ನಾನು ಆತನಿಗೆ ಅದನ್ನು ಹೇಳುವೆನು.

## ಪ್ರಾರ್ಥನೆ

ಕರ್ತನಾದ ಯೇಸುವೇ, ನಾನು ಈಗಲೇ ಓದಿದ ಪೌಲನ ಸಾಕ್ಷಿಯಲ್ಲಿ ನಾನು ತಿಳಿದುಕೊಂಡ ಅಂಥದೇ ತೃಪ್ತಿಯೊಂದಿಗೆ, ನಿನಗೆ ಸೇವೆಯ ನನ್ನ ಜೀವಿತದ ಮೇಲೆ ಪ್ರತಿಬಿಂಬಿಸಲು ಶಕ್ತನಾಗುವಂತೆ ನಾನು ಯತಾರ್ಥವಾಗಿ ಬಯಸುತ್ತೇನೆ. ಸಾವಿರ ವಿಧಗಳಲ್ಲಿ ನಿನ್ನ ಆಶೀರ್ವಾದಗಳನ್ನು ನನ್ನ ಜೀವಿತದಲ್ಲಿ ನೀನು ಸುರಿದಿರುವಿ ಮತ್ತು ಬಹಳ ಸಲ ಅದು ಒಂದೇ ದಿಸೆಯ ಮಾರ್ಗವಾಗಿತ್ತೆಂದು ನನಗೆ ದುಃಖವಾಗುತ್ತದೆ. ನಿನ್ನೊಂದಿಗಿನ ಅನ್ಯೋನ್ಯತೆಗಾಗಿ ನನ್ನ ಅಪೇಕ್ಷೆಯನ್ನು ಯತಾರ್ಥವಾಗಿ ವ್ಯಕ್ತಪಡಿಸಿ ನನ್ನ ಹೃದಯವು ಆಯಾಸಗೊಳ್ಳುತ್ತದೆ. ಆದರೆ, ಆಗ, ನಿನ್ನ ಶ್ರಮೆಗಳ ಅನ್ಯೋನ್ಯತೆಯನ್ನು ಹಂಚಿಕೊಳ್ಳುವ ಅವಕಾಶವನ್ನು ನೀನು ನನಗೆ ಕೊಡುವಾಗ, ನಾನು ಒಬ್ಬ ಹೇಡಿಯಂತೆ. ಓಡಿಹೋಗುತ್ತೇನೆ. ನಾನು ಪುನಃ ಈ ವಚನಗಳ ಮೇಲೆ ಧ್ಯಾನ ಮಾಡಲಿಕ್ಕಿರುವಾಗ, ದಯವಿಟ್ಟು ನಿನ್ನ ಸನ್ನಿಧಿಯಿಂದ, ಮತ್ತು ನಿನ್ನ ಬಲದಿಂದ ತುಂಬಿಸು ಮತ್ತು ನನ್ನ ಜೀವಿತವನ್ನು ಜೀವ ಮಾರ್ಪಡಿಸುವ ಮಾರ್ಗದಲ್ಲಿ

ನನ್ನನ್ನು ಸ್ಪರ್ಷಿಸು. ಅದರಿಂದ ನನ್ನ ಸ್ವಾರ್ಥಪರ ವಿಧಾನಗಳು ನಿನ್ನ ಸ್ವಂತ ಪ್ರಿಯ ಹೆಸರಿನ ನಿಮಿತ್ತವಾಗಿ ಸಂಪೂರ್ಣವಾಗಿ, ಅಮೂಲಾಗ್ರವಾಗಿ ಬದಲಾಯಿಸಲ್ಪಡಲಿ.

ಈಗ, ನಾನು ಹಿಂದಿರುಗುವೆನು ಮತ್ತು ಅದೇ ಅಧ್ಯಾಯವನ್ನು ವಚನದಿಂದ ವಚನವನ್ನು ಮತ್ತು ವಿಚಾರದಿಂದ ವಿಚಾರವನ್ನು ಓದುವೆನು. ನಾನು ಹಾಗೆ ಮಾಡುವಾಗ, ನನ್ನ ಪ್ರಾರ್ಥನೆಗೆ ಉತ್ತರವಾಗಿ ನನ್ನ ಹೃದಯಕ್ಕೆ ದೇವರು ಕೂಡ ಬಯಸುವ ಸಂದೇಶವನ್ನು ನಾನು ತಪ್ಪಿಸಿಕೊಳ್ಳದಂತೆ ಪವಿತ್ರಾತ್ಮನಿಗೆ ಸತತವಾಗಿ ಪ್ರಾರ್ಥಿಸುವೆನು. ಈ ರೀತಿಯಲ್ಲಿ ದೇವರೊಂದಿಗೆ ನನ್ನ ದ್ವಿವಿಧ ಸಂಭಾಷಣೆಯು ಪ್ರಾರಂಭವಾಗುವುದು. ನಾನು ಧ್ಯಾನ ಮಾಡುವಂತೆ ಅವಸರದಿಂದ ಯಾವ ವಚನವನ್ನು ಬಿಡದಂತೆ ನೋಡಿ ಕೊಳ್ಳುವೆನು. ಇಂದು ದೇವರು ಆ ವಚನವನ್ನು ಒಂದು ಹೊಸದಾದ, ವಿಶೇಷವಾದ ರೀತಿಯಲ್ಲಿ ಸಜೀವವಾದದ್ದನ್ನಾಗಿ ಮಾಡಬಹುದು. ಆದುದರಿಂದ ನಾನು ಕೇಳುವೆನು : **''ಈ ಪರಿಚ್ಛೇದದಲ್ಲಿ ತಂದೆಯಾದ ದೇವರ ಬಗ್ಗೆ ಹೊಸ ವಿಚಾರ ವಿರುವುದೋ ?''**

## ಓದುವುದು.

## ವಚನ 3 : ಕನಿಕರವುಳ್ಳ ತಂದೆಯು ಮತ್ತು ಸಕಲವಿಧವಾಗಿ ಸಂತೈಸುವ ದೇವರು.

ದೇವರ ಪಿತೃತ್ವದ ಬಗೆಗಿನ ಈ ಹೇಳಿಕೆಯು ವಚನ 2 ರಲ್ಲಿ ಕಂಡು ಬರುವ ದೇವರ ಪಿತೃತ್ವದ ಇನ್ನೊಂದು ಉಲ್ಲೇಖದ ನಂತರ ಬರುವದನ್ನು ಇಂದು ನಾನು ಪ್ರತ್ಯೇಕವಾಗಿ ಗಮನಿಸುತ್ತೇನೆ. ನನ್ನ ಮಾರ್ಜಿನ್ ಉಲ್ಲೇಖದ ಕಡೆಗೆ ನೋಡುವಂತೆ. ವಚನ 2 ಈ ರೀತಿಯಲ್ಲಿ ಭಾಷಾಂತರಿಸಲ್ಪಡಬಹುದು ಎಂದು ನಾನು ಓದುತ್ತೇನೆ : **ದೇವರು ಹಾಗೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯು.** ಅದನ್ನು ಯೋಚಿಸಿರಿ : ದೇವರು ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯು, ಕನಿಕರದ ಮತ್ತು ಸಂತೈಸುವಿಕೆಯ ನನ್ನ ತಂದೆಯೂ ಆಗಿದ್ದಾನೆ. ನನ್ನ ಸಂತೈಸುವಿಕೆಗಾಗಿ ಪರಲೋಕದಲ್ಲಿರುವ ನನ್ನ ತಂದೆಯು ತನ್ನ ಕೃಪೆಯನ್ನು ಸಮಾಧಾನವನ್ನು ನನಗೆ ವಿಸ್ತರಿಸಿದ್ದಾನೆ.

## ಪ್ರಾರ್ಥನೆ

**ತಂದೆಯೇ, ಕೃತಜ್ಞತೆಯಿಂದಲೂ ಸ್ತೋತ್ರದಿಂದಲೂ ನಿನ್ನ ಮುಂದೆ ತಲೆ ಬಾಗಿಸುತ್ತೇನೆ. ನಿನ್ನ ಕೃಪೆಗಾಗಿ ನಿನಗೆ ಉಪಕಾರ ಸಲ್ಲಿಸುತ್ತೇನೆ. ನಿತ್ಯವಾಗಿ ನಿನ್ನದಾದಂಥದ್ದನ್ನು - ನಿನ್ನ ''ಸಮಾಧಾನವನ್ನು'' ನನ್ನ ಹೃದಯಕ್ಕೆ ಅನುಗ್ರಹಿಸಿದ್ದೀ. ನಿನ್ನ ಕೃಪೆಯ ಮುಖಾಂತರ ನೀನಿರುವಂಥದ್ದರಲ್ಲಿ ಎಂದೆಂದಿಗೂ ಅಸ್ತಿತ್ವದಲ್ಲಿದ್ದ ಸಮಾಧಾನ, ಶಾಂತಿ, ಸಾಮರಸ್ಯಗಳು ಇಂದು ನನ್ನವುಗಳಾಗಿವೆ. ಹಲ್ಲೇಲೂಯ! ನಿನ್ನ ಪವಿತ್ರಾತ್ಮನಿಂದ, ನನ್ನ ಗಲಿಬಿಲಿಗೊಂಡ ಹೃದಯಕ್ಕೆ ಸೇವೆ ಮಾಡೆಂದು ಪ್ರಾರ್ಥಿಸುತ್ತೇನೆ. ನಿನ್ನ ಪವಿತ್ರ ಸನ್ನಿಧಿಯಲ್ಲಿ ನಾನು ತಲೆಬಾಗಿರುವಂತೆ, ನಿನ್ನ ಸ್ವಂತ ಆಂತರ್ಯ ವಾಸದ ಸಮಾಧಾನ ಮತ್ತು ಶಾಂತಿಯಿಂದ ನನ್ನ ಜೀವಿತವನ್ನು ತುಂಬಿಸು ಎಂದು ಪ್ರಾರ್ಥಿಸುತ್ತೇನೆ.**

## ಓದುವುದು

**ವಚನ 4 : ''ನಮಗೆ ಸಂಭವಿಸುವ ಎಲ್ಲಾ ಸಂಕಟಗಳಲ್ಲಿ ನಮ್ಮನ್ನು ಸಂತೈಸುತ್ತಾನೆ ; ಹೀಗೆ ದೇವರಿಂದ ನಮಗಾಗುವ ಆದರಣೆಯ ಮೂಲಕ ನಾವು ನಾನಾ ವಿಧವಾದ ಸಂಕಟಗಳಲ್ಲಿ ಬಿದ್ದಿರುವವರನ್ನು ಸಂತೈಸುವದಕ್ಕೆ ಶಕ್ತರಾಗುತ್ತೇವೆ.**

ಪೌಲನ ಈ ಸಾಕ್ಷಿಯ ಮೇಲೆ ಧ್ಯಾನ ಮಾಡಿದಂತೆ, ''ಆದರಣೆಯ'' ಹಿನ್ನೆಲೆಯಲ್ಲಿ ಅವನು ಉಪಯೋಗಿಸಿದ ಕೆಲವು ಇತರ ಮಾತುಗಳನ್ನು ನಾನು ಗಮನಿಸುತ್ತೇನೆ. ಅವುಗಳನ್ನು ಅವನು ತನ್ನ ಪರಲೋಕದ ತಂದೆಯಿಂದ ಹೊಂದಿಕೊಂಡಿದ್ದನು. ಅವು ಹೀಗಿವೆ : 'ಹಿಂಸೆ', ''ಶ್ರಮೆ ಪಡುವುದು'', ''ತೊಂದರೆ'', ''ಬಾಧೆಗಳು'' ಮತ್ತು ''ಮರಣದ ದಂಡನೆ''. ಪವಿತ್ರಾತ್ಮನು ನನ್ನ ಗಮನವನ್ನು ''ಆದರಣೆಯ'' ಸಾಮಾನ್ಯವಾದ ತತ್ವದಿಂದ ತೆಗೆದು ಹಾಕಲ್ಪಟ್ಟ ಈ ಅನುಭವಕ್ಕೆ ಸೆಳೆಯುತ್ತಿದ್ದಾನೆ ಎಂಬಂತೆ ತೋರುತ್ತದೆ.

ನಾನು ಓದುತ್ತಿದ್ದಂತೆ, ಪೌಲನೂ ಸಹ ಜೀವನದ ಎಲ್ಲಾ ತೊಂದರೆಗಳು ಒಂದು ಸ್ಪಷ್ಟವಾದ ಉದ್ದೇಶಕ್ಕಾಗಿ ದೇವರಿಂದ ಬಿಡಲ್ಪಟ್ಟಿವೆ ಎಂಬುದಕ್ಕೆ ಸಾಕ್ಷಿ ಕೊಟ್ಟದ್ದನ್ನು ನಾನು ಗಮನಿಸುತ್ತೇವೆ: **''ನಾವು ನಮ್ಮಲ್ಲಿ ನಂಬತಕ್ಕದ್ದಲ್ಲ, ಆದರೆ**

ಸತ್ತವರನ್ನು ಎಬ್ಬಿಸುವ ದೇವರಲ್ಲಿ ನಂಬಬೇಕು''. ದೇವರು ಪೌಲನಿಗೆ ತನ್ನ ಆದರಣೆಯನ್ನು ಕೊಟ್ಟದ್ದು ಅವನು ನೆಮ್ಮದಿಯಾಗಿರಬೇಕೆಂದಲ್ಲ, ಆದರೆ ಅವನು ಇತರರಿಗೆ ಆದರಣೆ ಯನ್ನು ಕೊಡುವವನು ಆಗಿರುವದಕ್ಕಾಗಿತ್ತು. ಇದರ ಮುಖಾಂತರ ನಾನು ಪ್ರಾರ್ಥಿಸ ತಕ್ಕದ್ದು.

## ಪ್ರಾರ್ಥನೆ

**ಹೌದು ಕರ್ತನೇ, ನೋವು ಅನುಭವಿಸುವ ಜನರಿಗೆ ಆದರಣೆಯನ್ನೂ ಉಪಶಮನವನ್ನೂ ತರಲು ನಾನು ಯತಾರ್ಥವಾಗಿ ಬಯಸಿದ ಸಮಯಗಳು ನನ್ನ ಜೀವನದಲ್ಲಿ ಇದ್ದುದನ್ನು ನೀನು ಬಲ್ಲವನಾಗಿರುತ್ತೀ, ಡೊರೊತಿಯು ಸತತವಾಗಿ ಮತ್ತು ಆಳವಾಗಿ ತನ್ನ ದೇಹದಲ್ಲಿ ಶ್ರಮೆ ಪಡುವುದಕ್ಕೆ ನಿನ್ನ ಆದರಣೆಯ ಸೇವೆ ಮಾಡಲು ನಾನು ಬಯಸಿದೆನು.**

**ಬಹಳ ಸಲ, ಆಕೆಯಿಂದ ಬಹಳವಾದದ್ದನ್ನು ನಾನು ತೆಗೆದುಕೊಳ್ಳುವಂತೆ ತೋರುತ್ತದೆ ಮತ್ತು ಆಕೆಯ ಆದರಣೆಗಾಗಿ, ಉಪಶಮನಕ್ಕಾಗಿ ನಿನ್ನ ಕೃಪೆಯ ಮತ್ತು ಸಮಾಧಾನದ ಸೇವೆಯನ್ನು ಕ್ವಚಿತವಾಗಿ ಮಾಡುತ್ತೇನೆ. ನನ್ನ ಸ್ವಾರ್ಥದ ಮಾರ್ಗಗಳನ್ನು ಕ್ಷಮಿಸು, ಸೇವೆ ಮಾಡಿಸಿಕೊಳ್ಳುವದಕ್ಕಲ್ಲ ಆದರೆ ಸೇವೆ ಮಾಡುವದಕ್ಕೆ ಹೊಸದಾಗಿ ಅಪೇಕ್ಷೆಯಿಂದ ನನ್ನನ್ನು ತುಂಬಿಸು.**

**ಮತ್ತು ಹಸಿವೆಯೂ, ರೋಗವೂ ಮತ್ತು ಮರಣವೂ ಇರುವ ಪರಿಸ್ಥಿತಿಗಳಲ್ಲಿ ಹಾಗೂ ಉದಾಸೀನತೆಯಲ್ಲಿ ನೋವನ್ನು ಅನುಭವಿಸುತ್ತಿರುವ ಮಿಲಿಯಗಟ್ಟಲೆ ಜನರ ಬಗ್ಗೆ ಯೋಚಿಸುತ್ತೇನೆ. ಅಂಥ ಭಯಾನಕವಾದ ಪರಿಸ್ಥಿತಿಗಳಲ್ಲಿ ಜೀವಿಸುತ್ತಿರುವ ಜನರನ್ನು ಆದರಿಸಲು ಮತ್ತು ಇತರರ ಭಾರಗಳನ್ನು ತೆಗೆದು ಹಾಕಲು ಉಪಯೋಗಿಸುವ ದಕ್ಕಾಗಿ ನನ್ನ ಜೀವಿತದಲ್ಲಿ, ನನ್ನ ಹೃದಯದಲ್ಲಿ ನಿನ್ನ ಕೃಪೆ ಮತ್ತು ಸಮಾಧಾನಗಳು ಇರುವಂತೆ ಮಾಡೆಂದು ಬೇಡಿ ಕೊಳ್ಳುತ್ತೇನೆ.**

**ಕರ್ತನಾದ ಯೇಸುವೇ, ಜೀವನದ ಪ್ರತಿಯೊಂದು ತೊಂದರೆಯು ಎಷ್ಟೋ ಕಠಿಣವಾದದ್ದಾಗಿದ್ದರೂ ನೀನು ಅದನ್ನು ಪರಿಹರಿಸುತ್ತೀ ಎಂಬುದನ್ನು**

**ಅರ್ಥ ಮಾಡಿಕೊಳ್ಳುವಾಗ, ಅದು ನಿನ್ನ ಪ್ರೀತಿಯ ಹೃದಯದಿಂದ ಬಂದಿರುವುದೆಂದು ತಿಳಿದು ಕೊಳ್ಳುವಾಗ, ನಾನು ನನ್ನಲ್ಲಿ ಭರವಸವಿಟ್ಟುಕೊಳ್ಳದೇ ನಿನ್ನಲ್ಲಿ ಭರವಸೆವಿಡುವಂತೆ ಮಾಡೆಂದು ನಿನ್ನನ್ನು ಪ್ರಾರ್ಥಿಸುತ್ತೇನೆ.**

ಈ ಹಂತದಲ್ಲಿ ದೇವರ ವಾಕ್ಯವು ನನ್ನ ಹೃದಯಕ್ಕೆ ಬಲವಾಗಿ ತೋರಿ ಬರುತ್ತದೆ. ಭರವಸೆಯನ್ನು ತೆಗೆದು ಹಾಕಲು ಪೌಲನು ಕಷ್ಟಗಳಿಗೆ ನಡಿಸಲ್ಪಟ್ಟಾಗಲೂ ಅವನು ಬಲಪಡಿಸಲ್ಪಟ್ಟನು, ನನ್ನ ಗರ್ವದೊಂದಿಗೆ ವ್ಯವಹರಿಸುವಲ್ಲಿ ಚಂಚಲತೆಯನ್ನೂ ವಿರೋಧ ಸಂಗತಿಗಳನ್ನು ನನ್ನ ಪ್ರಾರ್ಥನೆಗೆ, ತನ್ನ ಪ್ರೀತಿಯಲ್ಲಿ, ದೇವರು ಆಯ್ಕೆ ಮಾಡಿಕೊಳ್ಳುವಾಗ, ನಾನು ಯಾಕೆ ದೂರಬೇಕು ?

## ಪ್ರಾರ್ಥನೆ

**ಹೌದು, ಕರ್ತನೇ, ನನ್ನ ಜೀವನದಲ್ಲಿ ನಿನ್ನ ಪ್ರೀತಿಯ ಸೇವೆಗಾಗಿ ನಿನಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇತರ ಜನರು ಓದಲಿಕ್ಕಾಗಿ ನಾನು ಈ ಪ್ರಾರ್ಥನೆಯನ್ನು ದಾಖಲಿಸುವುದು ಕಷ್ಟಕರವಾದದ್ದಾಗಿದ್ದರೂ, ಪೌಲನು ತಾನು ಪ್ರೀತಿಸಿದವರ ಮುಂದೆ ತನ್ನ ಕಠಿಣವಾದ ಹಿಂಸೆಗಳ ಬಗ್ಗೆ ಯತಾರ್ಥತೆಯಿಂದ ಇದ್ದನು ಎಂಬುದು ನನ್ನನ್ನು ಪ್ರೋತ್ಸಾಹಿಸುತ್ತದೆ. ಜೀವನದ ಒಳ್ಳೆ ಸಂಗತಿಗಳನ್ನು ಹೇಳುವದಕ್ಕಾಗಿ ಮಾತ್ರವೇ ಅವನು ತನ್ನ ಸಾಕ್ಷಿಯನ್ನು ಇಡಲಿಲ್ಲ. ಅದುದರಿಂದ ನಿನಗಾಗಿರುವ ನನ್ನ ಸೇವೆಯಲ್ಲಿಯ ಪ್ರತಿಯೊಂದು ಏಕಾಂತವಾದ ಸಮಯಕ್ಕಾಗಿಯೂ ನನ್ನ ಮಾರ್ಗದಲ್ಲಿ ನೀನು ಬರ ಮಾಡಿದ ಪ್ರತಿಯೊಂದು ಹೃದಯದ ನೋವಿಗಾಗಿಯೂ, ನಾನು ತಪ್ಪಾಗಿ ತಿಳಿದುಕೊಂಡ ಪ್ರತಿಯೊಂದು ಸಮಯಕ್ಕಾಗಿಯೂ ನನ್ನ ಜೀವನದ ಪ್ರತಿಯೊಂದು ಮೂರ್ಖತನದ ಮತ್ತು ತಪ್ಪ ಮಾಡಿದ ಸಂಗತಿಗಳಿಗಾಗಿಯೂ ನಿನ್ನಲ್ಲಿ ನಂಬಿಕೆಯಿಡದೇ ನನ್ನಲ್ಲಿ ನಂಬಿಕೆಯಿಟ್ಟುಕೊಂಡದ್ದರಿಂದ ಆಶ್ಚರ್ಯಕರವಾದ ಪರಿಸ್ಥಿತಿಗೂ ನಿನ್ನನ್ನು ಹೃದಯ ಪೂರ್ವಕವಾಗಿ ಸ್ತುತಿಸುತ್ತೇನೆ. ಈಗ, ಕರ್ತನಾದ ಯೇಸುವೇ, ನಿನ್ನ ಪವಿತ್ರ ಸನ್ನಿಧಿಯಲ್ಲಿ, ನನ್ನಲ್ಲಿ ಅಲ್ಲ ಆದರೆ ನಿನ್ನಲ್ಲಿ ನಂಬಿಕೆಯಿಡುವೆನೆಂದು ಪೌಲನೊಂದಿಗೆ ಒಪ್ಪಿಕೊಳ್ಳುತ್ತೇನೆ.**

**ದೇವರು ನಮ್ಮ ಸಂತೃಪ್ತಿಯಾಗಿದ್ದಾನೆ ಎಂಬ ಪೌಲನ ಮಾತುಗಳನ್ನು ಒಂದು ದಿನ ನಾನು ಓದಿದೆನು. ನೀನು, ನೀನು ಮಾತ್ರವೇ ನನ್ನ ಸಂತೃಪ್ತಿಯೆಂದು ಈ ಪ್ರಾತಃಕಾಲ ನಾನು ಒಪ್ಪಿಕೊಳ್ಳುತ್ತೇನೆ. ಪ್ರಿಯ ಕರ್ತನೇ ನನ್ನ ಮುಂದೆ ಇರುವ ನಿನ್ನ ವಾಕ್ಯದ ಮಾತುಗಳು ತೆರೆದಿಡಲ್ಪಟ್ಟಿವೆ ; ನಾನು ನಿನ್ನನ್ನು ಕೊಂಡಾಡುತ್ತೇನೆ – ನೀನು ನನ್ನನ್ನು ವಿಮೋಚಿಸಿದ್ದೀ ; ಮತ್ತು ನೀನು ನನ್ನನ್ನು ವಿಮೋಚಿಸುತ್ತೀ, ಅದು ನನ್ನನ್ನು ನನ್ನಿಂದ. ಅಂಥಾ ಮಹಾ ರಕ್ಷಣೆಗಾಗಿ ಕರ್ತನಾದ ಯೇಸುವೇ ನಿನಗೆ ಉಪಕಾರ. ಈಗ, ಕರ್ತನೆ, ನಿನ್ನ ಆದರಣೆಯಿಂದ ಪವಿತ್ರಾತ್ಮನು ನನ್ನ ಹೃದಯ ಬಲಪಡಿಸುವಂತೆ, ನಿನ್ನ ಪ್ರೀತಿಯ ಅಗತ್ಯತೆಯುಳ್ಳ ನಾನು ಇಂದು ಭೇಟಿಯಾಗುವ ಜನರಿಗೆ ನಿನ್ನ ಆದರಣೆಯನ್ನು ಸಹಾಯವನ್ನು ತರಲು ನನ್ನನ್ನು ವ್ಯಾವಹಾರಿಕವಾದ ಹಾಗೂ ಪ್ರೀತಿಯ ಮಾರ್ಗಗಳಲ್ಲಿ ನನ್ನನ್ನು ಉಪಯೋಗಿಸು ಎಂದು ನಿರೀಕ್ಷೆಯಿಂದ ಬೇಡಿಕೊಳ್ಳುತ್ತೇನೆ''**

## ಓದುವುದು.

**ವಚನ 11 : ''ನೀವು ನಮಗೋಸ್ಕರ ಪ್ರಾರ್ಥನೆ ಮಾಡುವವರಾಗಿ ಸಹಕಾರಿಗಳಾಗಿರುವದರಿಂದ.... ಅನೇಕರ ವಿಜ್ಞಾಪನೆಗಳಿಂದ..''**

ಪೌಲನ ಪರವಾಗಿ ಅನೇಕ ಮುಖಗಳು ದೇವರ ಕಡೆಗೆ ಎತ್ತಲ್ಪಟ್ಟಿರದಿದ್ದರೆ ಅವನ ಸೇವೆಯು ಹೇಗೆ ಇರುತ್ತಿತ್ತೋ ಎಂದು ನಾನು ಆಶ್ಚರ್ಯಪಡುತ್ತೇನೆ ಹಾಗೆಯೇ ಪ್ರಾರ್ಥನೆಯಲ್ಲಿ ಒಂದಾಗಿ ಸಹಾಯ ಮಾಡುವ ಅನೇಕ ಸ್ನೇಹಿತರು ಇಲ್ಲದಿದ್ದರೆ ನಾನು ಎಲ್ಲಿ ಇರುತ್ತಿದ್ದೆನೋ ಎಂದು ಆಶ್ಚರ್ಯಪಡುತ್ತೇನೆ.

## ಪ್ರಾರ್ಥನೆ

**ತಂದೆಯೇ, ಡೊರೊತಿಗಾಗಿಯೂ ನನಗಾಗಿಯೂ ಪ್ರಾರ್ಥಿಸಲು ನಿನ್ನ ಪ್ರಿಯ ಮಕ್ಕಳಲ್ಲಿ ಅನೇಕರ ಹೃದಯಗಳಲ್ಲಿ ಭಾರವನ್ನಿಟ್ಟಿರುವ ನನಗಾಗಿರುವ ನಿನ್ನ ಮಹಾ ಪ್ರೀತಿಯನ್ನು ನಾನು ಗ್ರಹಿಸಲಾರೆನು. ಅಂಥ ಅದ್ಭುತವಾದ ಪ್ರೀತಿಗಾಗಿ ನಿನಗೆ ನನ್ನ ಕೃತಜ್ಞತೆಗಳನ್ನು ಹೇಗೆ ವ್ಯಕ್ತಪಡಿಸಲಿ ?**

ಈಗ, ಪದಾರ್ಥ ಪ್ರಾರ್ಥನೆಯ ಸಮಯದಲ್ಲಿ ನಾನು ವಿಶೇಷವಾಗಿ ನನ್ನ

ಈ ಸ್ನೇಹಿತರುಗಳಲ್ಲಿ ಕೆಲವರಿಗಾಗಿ ದೇವರನ್ನು ಬೇಡಿಕೊಳ್ಳುತ್ತೇನೆ. ನಾನು ಹಾಗೆ ಮಾಡುವಾಗ, ನನ್ನ ಸ್ವಂತ ಹೃದಯ ಮತ್ತು ಜೀವಿತದ ಮೇಲೆ ಪವಿತ್ರಾತ್ಮನು ಪ್ರಭಾವ ಬೀರಿದಂತೆ ಪರಿಶುದ್ಧ ಬರಹದ ಬೆಳಕಿನಲ್ಲಿ ಅವರಿಗಾಗಿ ಪ್ರಾರ್ಥಿಸುತ್ತೇನೆ. ಅವರು ತಮ್ಮ ಪೂರ್ಣ ನಂಬಿಕೆಯನ್ನು ಇಡುವಂತೆ ದೇವರು ತನ್ನ ಸ್ವಂತ ಆದರಣೆಯನ್ನು (ಬಲವನ್ನು) ಅವರ ಹೃದಯಗಳಿಗೆ ತರುವಂತೆ - ಬೇಡಿಕೊಳ್ಳುತ್ತೇನೆ. ★

## ಓದುವುದು

**ವಚನಗಳು 15, 17-18 : ''ನಾನು ಮೊದಲು ನಿಮ್ಮ ಬಳಿಗೆ ಬರಬೇಕೆಂದು ಯೋಚಿಸಿದ್ದೆನು.... ನಾನು ಯೋಚಿಸುವದನ್ನು ಕೇವಲ ಮಾನುಷ ಬುದ್ಧಿಯಿಂದ ಯೋಚಿಸಿ ಹೌದು ಹೌದು ಅಂದ ಮೇಲೆ ಅಲ್ಲ ಅಲ್ಲ ಅನ್ನುವನಾಗಿದ್ದೆನೋ ?**

ಈ ವಿಚಾರ ಸರಣಿಯ ಮೇಲೆ ನಾನು ಧ್ಯಾನ ಮಾಡುತ್ತೇನೆ. ಎರಡನೆಯ ಸಲ ತಾನು ಕೊರಿಂಥಕ್ಕೆ ಹೋಗುವದರ ಉದ್ದೇಶವು ತಾನು ಪ್ರೀತಿಸಿದ ಭಕ್ತಜನರಿಗೆ ''ಆದರಣೆಯ'' ''ಧೈರ್ಯ ಪಡಿಸುವಿಕೆಯ'' ಮತ್ತು ''ಲಾಭ''ದ ಸೇವೆ ಮಾಡುವ ದಾಗಿತ್ತು ಎಂದು ಪೌಲನು ಸಾಕ್ಷಿ ಕೊಟ್ಟನು. ಅವರಿಂದ ಪಡೆದುಕೊಳ್ಳುವದಕ್ಕಾಗಿ ಅಲ್ಲಿಗೆ ಹೋಗಲು ಅವನು ಅಪೇಕ್ಷಿಸಲಿಲ್ಲ ; ಅದಕ್ಕೆ ವಿರುದ್ಧವಾಗಿ ಅವನು ಕೊಡುವದನ್ನು ಬಯಸಿದನು. ತನ್ನ ಪ್ರಯಾಣದ ಯೋಜನೆಗಳನ್ನು ಹಗುರವಾಗಿ ಮಾಡಿರುವದಿಲ್ಲ ಎಂಬುದಕ್ಕೆ ಸಾಕ್ಷಿ ಕೊಟ್ಟನು. (ಯಾರು ಪ್ರಯಾಣದ ಖರ್ಚನ್ನು ವಹಿಸಿಕೊಳ್ಳುವರು ಎಂಬುದು ನಮೂದಿಸಲ್ಪಡದೇ ಇರುವದನ್ನು ಗಮನಿಸುತ್ತೇನೆ ಹಾಗೂ ಅವನು ಹೋಗುವದರಲ್ಲಿ ಹಣವು ಯಾವ ಪಾತ್ರ ವಹಿಸಲಿಲ್ಲ.) ನಿಶ್ಚಯವಾಗಿಯೂ, ಕೊರಿಂಥಕ್ಕೆ ಹೋಗುವ ಅವನ ತೀರ್ಮಾನದಲ್ಲಿ ವೈಯಕ್ತಿಕ ಲಾಭವು ಯಾವ ಪಾತ್ರ ವಹಿಸಲಿಲ್ಲ.

---

★ *ಪರಾರ್ಥ ಪ್ರಾರ್ಥನೆಯಲ್ಲಿ ನಿಮಗೆ ಸಹಾಯ ಮಾಡಲು ಹೆಚ್ಚಿನ ಸಲಹೆಗಳಿಗಾಗಿ ಪುರವಣಿ C ನೋಡಿರಿ.*

## ಪ್ರಾರ್ಥನೆ

ಪ್ರಿಯ ಕರ್ತನೇ, ನಿನ್ನ ವಾಕ್ಯದ ಮತ್ತು ನಿನ್ನ ಆತ್ಮನ ಮುಖಾಂತರ, ಬರಲಿರುವ ಶರತ್ಕಾಲದಲ್ಲಿ ಎಲ್ಲಿ ಸೇವೆ ಮಾಡಬೇಕೆಂದನ್ನು ನಿರ್ಧರಿಸುವಾಗ ನಿನ್ನ ಪವಿತ್ರಾತ್ಮನ ಕಾರ್ಯವನ್ನು ನಂದಿಸುವಂಥ ಯಾವುದೇ ತಪ್ಪಾದ ಉದ್ದೇಶವು ನನ್ನಲ್ಲಿ ಇದ್ದರೆ ಅದನ್ನು ತೋರಿಸು. ಕೊರಿಂಥದಲ್ಲಿಯ ಕ್ರೈಸ್ತರು ಪೌಲನು ತನ್ನ ಪ್ರಯಾಣದ. ಯೋಜನೆಗಳನ್ನು ಬದಲಾಯಿಸುವ ಅಸಾಮಾನ್ಯವಾದ ಬದಲಾವಣೆ ಮಾಡಿದಾಗ ಅವನ ಉದ್ದೇಶವನ್ನು ತಪ್ಪಾಗಿ ತಿಳಿದುಕೊಂಡಾಗ್ಯೂ, ನಿನ್ನ ಆತ್ಮನ ನಡಿಸುವಿಕೆಗೆ ಅನುಗುಣವಾಗಿ ನಡೆದನು. ಪೌಲನು ಹೌದು ಎಂದು ಹೇಳಿ ತನ್ನ ಉತ್ತರವನ್ನು ತನ್ನ ಪ್ರಯಾಣ ಯೋಜನೆಗೆ ಇಲ್ಲ ಎಂದು ಬದಲಾಯಿಸಿದರೂ, ಅವನು ಪ್ರಸಂಗಿಸಿದ ವಾಕ್ಯವು ಎಂದಾದರೂ ಹೌದು ಎಂದೂ ಆನಂತರ ಅಲ್ಲ ಎಂದೂ ಇರಲಿಲ್ಲ. ಯಾಕಂದರೆ ಕ್ರಿಸ್ತನಲ್ಲಿ ಅದು ಯಾವಾಗಲೂ ಹೌದು ಎಂದೂ, ಬದಲಾಗದ್ದೂ ಮತ್ತು ನಿತ್ಯವಾದದ್ದೂ ಆಗಿತ್ತು. ಕರ್ತನೇ ನಿನ್ನ ಹೃದಯದಲ್ಲಿ ಬದಲಾವಣೆಗಳಿರುವದಿಲ್ಲ ; ಪೌಲನು ಪ್ರಸಂಗಿಸಿದ ದೇವರ ವಾಕ್ಯವು ನಿನ್ನಿಂದ ನಿತ್ಯವಾಗಿ ದೃಢಪಡಿಸಲ್ಪಟ್ಟಿದೆ. ಸಂದರ್ಭಗಳು ಬೇಗನೇ ಬದಲಾಗುವ, ಯೋಜನೆಗಳು ಮಾಡಲ್ಪಡುವ ಹಾಗೂ ಕೆಲವು ಸಲ ಬದಲಾಯಿಸಲ್ಪಡುವ ನನ್ನ ಜಗತ್ತಿನಲ್ಲಿ - ಕರ್ತನೇ, ನನ್ನ ಜಗತ್ತಿನಲ್ಲಿ ಗಟ್ಟಿಯಾದ ಬಂಡೆಯಾಗಿರುವದಕ್ಕೆ, ನಿನಗೆ ಕೃತಜ್ಞತೆಗಳು. ಕರ್ತನೇ, ನನಗೆ ನಿನ್ನ ಯೋಜನೆಗಳನ್ನು ತಿಳಿಸು. ಅವಸರದಿಂದ, ಇಲ್ಲವೇ ಅವಕಾಶ ಹೊಂದುವದರಿಂದ ಹರಿದು ಬರುವ ತೀರ್ಪುಗಳಿಂದ ನನ್ನನ್ನು ರಕ್ಷಿಸು. ಪ್ರತಿದಿನ ನಿನ್ನೊಂದಿಗೆ ಐಕ್ಯತೆಯಲ್ಲಿ ನಡೆಯುವಂತೆ ಮಾಡೆಂದು ಪ್ರಾರ್ಥಿಸುವೆನು.

## ಓದುವುದು.

**ವಚನ 20: ''ನಿಶ್ಚಯವಾಗಿ ದೇವರ ವಾಗ್ದಾನಗಳು ಎಷ್ಟಿದ್ದರೂ ಕ್ರಿಸ್ತನಲ್ಲೇ ದೃಢವಾಗುತ್ತವೆ. ಆದ ಕಾರಣ ದೇವರ ಪ್ರಭಾವವು ಪ್ರಕಾಶವಾಗುವದಕ್ಕೋಸ್ಕರ ಆತನ ಮೂಲಕವಾಗಿ ನಾವು ಆಮೆನ್ ಎಂದು ಹೇಳುತ್ತೇವೆ.**

''ನಮ್ಮ ಮುಖಾಂತರವಾಗಿ'' ದೇವರ ವಾಗ್ದಾನಗಳು ವೈಯಕ್ತಿಕವಾಗಿ ಮಾಡಲ್ಪಡುವದನ್ನು ನಾನು ಗಮನಿಸುವಂತೆ, ''ಈ ಪರಿಚ್ಛೇದದಲ್ಲಿ ನನಗಾಗಿ ಕೇಳಿಕೊಳ್ಳಲು ಒಂದು ವಾಗ್ದಾನವಿದೆಯೋ ?'' ಎಂದು ಕೇಳುವೆನು.

## ಪ್ರಾರ್ಥನೆ

**ನಮ್ಮ ಮುಖಾಂತರವಾಗಿ, ಕರ್ತನೇ ? ದೇವರ ವಾಗ್ದಾನಗಳು - ನಮ್ಮ ಮುಖಾಂತರವಾಗಿ! ಕ್ರಿಸ್ತನಲ್ಲಿ ದೇವರ ವಾಗ್ದಾನಗಳು ? ಕ್ರಿಸ್ತನಲ್ಲಿ ದೇವರ ಎಲ್ಲಾ ವಾಗ್ದಾನಗಳು, ಕರ್ತನೇ ? ಹೌದು ಕರ್ತನೆ, ನಿನಗೆ ಉಪಕಾರ, ಈ ಪ್ರಾತಃಕಾಲ ನಿನ್ನ ಪವಿತ್ರ ಸನ್ನಿಧಿಯಲ್ಲಿ, ಕರ್ತನೇ, ಅದಕ್ಕೆ ನನ್ನ ಸ್ವಂತ ಹೌದು ಎಂಬುದನ್ನೂ ಆಮೇನ ಎಂಬುದನ್ನೂ ದಾಖಲೆ ಮಾಡಲು ಬಯಸುವೆನು. ದೇವರೇ, ಕ್ರಿಸ್ತನಲ್ಲಿ ನೀನು ನನಗೆ ಕೊಟ್ಟಿರುವ ಎಲ್ಲವನ್ನೂ ನಾನು ಗ್ರಹಿಸಲಾರೆನು. ಪ್ರೀತಿಯುಳ್ಳ ಕರ್ತನೆ, ನೀನು ಇಲ್ಲದೇ ನನ್ನ ಜೀವಿತವು ಹೇಗೆ ಖಾಲಿಯಾಗಿರುತ್ತದೆ ಎಂಬುದನ್ನು ನಾನು ಕಲ್ಪಿಸಲಾರೆನು. ಕರ್ತನಾದ ಯೇಸುವೇ, ಇಂದು, ಅದರ ಎಲ್ಲಾ ಅವಕಾಶಗಳೊಂದಿಗೆ, ಅದರ ಪರೀಕ್ಷೆ ಗಳೊಂದಿಗೆ ಮತ್ತು ಅದರ ತೀರ್ಮಾನಗಳೊಂದಿಗೆ ಇಂದಿನ ಬೇಡಿಕೆಗಳನ್ನು ನಾನು ಎದುರಿಸುವಂತೆ ನೀನು ಮಾತ್ರವೇ ನನಗೆ ಅಗತ್ಯ ಎಂದು ತೀರ್ಮಾನಿಸುವೆನು.**

ಈಗ ನಾನು, ಆತನ ಸಮಾಧಾನವು ನನ್ನ ಪ್ರಾಣದಲ್ಲಿ ಉಕ್ಕಿ ಬರುವಂತೆ ಕೆಲವೊಂದು ಸಮಯವನ್ನು ನನ್ನ ಕರ್ತನನ್ನು ಆರಾಧಿಸುತ್ತ, ಸ್ತುತಿಸುತ್ತ ಕಳೆಯುವೆನು. ನನ್ನ ಪ್ರಾರ್ಥನಾ ಭಿನ್ನಹಗಳಿಗೆ ಸ್ಪಷ್ಟವಾದ ಉತ್ತರಗಳನ್ನು ನಾನು ತಿಳಿದಿರುವದಿಲ್ಲ, ಆದರೆ ಅದು ನನಗೆ ಪ್ರಾಮುಖ್ಯವಾದದ್ದಾಗಿರುವದಿಲ್ಲ, ಯಾಕಂದರೆ ನನ್ನ ಹೃದಯದಲ್ಲಿ ದೇವರ ಸಮಾಧಾನವು ಇರುವುದು, ನನ್ನ ಅಮೂಲ್ಯ ಸಮಯವನ್ನು ನನ್ನ ಕರ್ತನೊಂದಿಗೆ ಒಂದಾಗಿ ಕೂಡಿ ಬರುವ ಸಮಯದಲ್ಲಿ ಕಳೆದಿರುವೆನು. ಆತನನ್ನು ಕೊಂಡಾಡಿರಿ ! ಈಗ, ಈ ದಿನದಲ್ಲಿ ಹೋಗುವಂತೆ, ದೇವರು ತನ್ನ ವಾಕ್ಯದಿಂದ ಅಮೂಲ್ಯವಾದ ಆಹಾರವನ್ನು ನನಗೆ ಕೊಟ್ಟಿರುವನು, ಅದರ ಮೇಲೆ ನನ್ನ ಮನಸ್ಸು ಮತ್ತು ಹೃದಯವು ನಾನು ಅನಂತರದಲ್ಲಿ ದಿನದ ಬೇಡಿಕೆಗಳನ್ನು ಎದುರಿಸುವಾಗ ಅದರ ಮೇಲೆ ಪ್ರತಿಬಿಂಬಿಸುವವು.

ಆದುದರಿಂದ, ನಮ್ಮಲ್ಲಿ ಪ್ರತಿಯೊಬ್ಬರು ಪ್ರತಿ ಪ್ರಾತಃಕಾಲ ಕೈಕೊಳ್ಳತಕ್ಕ ಪ್ರಮುಖವಾದ ಮತ್ತು ಪ್ರಾಥಮಿಕವಾದ ಕರ್ತವ್ಯವು ''ದೇವರ ಎದುರಿನಲ್ಲಿ ನಮ್ಮ ಪ್ರಾಣವು ಆನಂದದಲ್ಲಿರುವಂತೆ ಮಾಡುವಂಥದ್ದಾಗಿದೆ'' ಎಂಬುದನ್ನು ಸತತವಾಗಿ ನಾವು ಜ್ಞಾಪಿಸಿಕೊಳ್ಳೋಣ.

ಪ್ರತಿದಿನ ಕರ್ತನಾದ ಯೇಸುವು ತನ್ನ ಸ್ವಂತ ವೈಯಕ್ತಿಕವಾದ ಆಮಂತ್ರಣವನ್ನು ನಿನಗೆ ಕೊಡುತ್ತಿರುವುದನ್ನು ತಿಳಿಯುವುದು ಹೇಗೆ ಅದ್ಭುತಕರವಾದದ್ದಾಗಿದೆಯಲ್ಲವೇ. ಹೆಸರಿನಿಂದ ನಿನ್ನನ್ನು ಕರೆಯುವದರಿಂದ, ಆತನು ಕೃಪೆಯಿಂದ ನಿನ್ನನ್ನು **ಬಂದು, ಊಟ ಮಾಡಿರಿ** ಎಂದು ಆಮಂತ್ರಿಸುತ್ತಾನೆ!

ನಿನ್ನ ಬದಲಾಗದ ಸತ್ಯ ಎಂದೆಂದಿಗೂ ನಿಂತಿರುವುದು ;
ನಿನ್ನನ್ನು ಕರೆಯುವವರನ್ನು ನೀನು ರಕ್ಷಿಸುತ್ತೀ ;
ನಿನ್ನನ್ನು ಹುಡುಕುವವರಿಗೆ ನೀನು ಒಳ್ಳೇಯವನಾಗಿರುತ್ತೀ ;
ನಿನ್ನನ್ನು ಕಂಡುಕೊಳ್ಳುವವರಿಗೆ, ಎಲ್ಲದರಲ್ಲಿ ಎಲ್ಲವೂ ಆಗಿರುವಿ.

ಜೀವಿಸುವ ರೊಟ್ಟಿಯಾದಾತನೇ ನಿನ್ನನ್ನು ರುಚಿ ನೋಡುವೆನು,
ಇನ್ನೂ ನಿನ್ನೊಂದಿಗೆ ಔತಣ ಮಾಡಲು ಬಯಸುವೆವು.
ಬುಗ್ಗೆಯಾಗಿರುವಾತನೇ, ನಿನ್ನಲ್ಲಿ ಕುಡಿಯುವೆವು.
ನಿನ್ನಿಂದ ನಮ್ಮ ಪ್ರಾಣಗಳ ಬಾಯಾರಿಕೆಯನ್ನು ತೀರಿಸುವೆವು.

Bernard of Cairvaux.

**ಟಿಪ್ಪಣಿ :** ಕ್ರಮ ಬದ್ಧವಾದ ಬೈಬಲ್ ಅಧ್ಯಯನವು ಪ್ರತೀ ದಿನ ಅತ್ಯವಶ್ಯಕವಾಗಿರದಿದ್ದರೂ. ಅನುದಿನವೂ ಒಂದಾಗಿ ಕೂಡಿಬರುವ ಸಮಯವು ನಿಮ್ಮ ಆತ್ಮಿಕ ಬೆಳವಣಿಗೆಗೆ ಅತ್ಯಗತ್ಯವಾದದ್ದಾಗಿದೆ.

# ಬೈಬಲ್ ಅಧ್ಯಯನ

ನಿಮಗೆ ನಿಜವಾಗಿಯೂ ಲಾಭದಾಯಕವಾದ ಕ್ರಮಬದ್ಧವಾದ ಬೈಬಲ್ ಅಧ್ಯಯನವಿರಲಿಕ್ಕಾಗುವಂತೆ, ನೀವು ಓದುವ ಬೈಬಲ್ ಪರಿಚ್ಛೇದಗಳಿಗೆ ಸಂಬಂಧಿಸಿ. ನೀವು ಕೇಳಲು ಕೆಲವು ಪ್ರಶ್ನೆಗಳು ಇಲ್ಲಿರುತ್ತವೆ :

ಯಾರ ಬಗ್ಗೆ ಪರಿಚ್ಛೇದವು ಮಾತಾಡುತ್ತಿದೆ ?
ಯಾರಿಗೆ ಪರಿಚ್ಛೇದವು ನಿರ್ದೇಶಿಸಲ್ಪಟ್ಟಿದೆ ?
ಯಾವ ನಿರ್ಧಿಷ್ಟವಾದ ಶಬ್ದಗಳನ್ನು ಬರಹಗಾರನು ಉಪಯೋಗಿಸಿದ್ದಾನೆ ?
ಯಾವ ಸಮಯದಲ್ಲಿ ಪರಿಚ್ಛೇದವು ಬರೆಯಲ್ಪಟ್ಟಿತು ?
ಎಲ್ಲಿಂದ ಪರಿಚ್ಛೇದವು ಬರೆಯಲ್ಪಟ್ಟಿತು ?
ಯಾವ ಉದ್ದೇಶಕ್ಕಾಗಿ ಪರಿಚ್ಛೇದವು ಬರೆಯಲ್ಪಟ್ಟಿತು ?
ಯಾವ ಪರಿಸ್ಥಿತಿಯಲ್ಲಿ ಪರಿಚ್ಛೇದವು ಬರೆಯಲ್ಪಟ್ಟಿತು ?
ಅದರ ಮೊದಲು ಹೋಗುವುದರೊಳಗೆ ಮತ್ತು ಅದನ್ನು ಹಿಂಬಾಲಿಸುವದರೊಂದಿಗೆ ಪರಿಚ್ಛೇದವು ಹೇಗೆ ಹೊಂದಿಕೊಳ್ಳುತ್ತದೆ ?

**''ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು'' (2 ತಿಮೊಥೆ 2:15)**

## ಒಂದುಗೂಡಿ ಬರುವ ಸಮಯ

ನೀವು ಅನುದಿನ ಓದುವ ಪರಿಶುದ್ಧ ಬರಹದಲ್ಲಿ ಪ್ರತಿಯೊಂದು ವಚನದ ಮೇಲೆ ನೀವು ಧ್ಯಾನ ಮಾಡುವಂತೆ ನೀವು ಕೇಳುವುದಕ್ಕಾಗಿ ಕೆಲವು ಪ್ರಶ್ನೆಗಳು ಇಲ್ಲಿರುತ್ತವೆ :

ಈ ವಚನದಲ್ಲಿ ಇದು ಇರುವುದೋ ;

ತಪ್ಪಿಸಿಕೊಳ್ಳಲು ಒಂದು ಪಾಪ ?
ಗಮನಿಸಲು ಒಂದು ಎಚ್ಚರಿಕೆ ?
ವಿಧೇಯನಾಗಲು ಒಂದು ಆಜ್ಞೆ ?
ಅನುಸರಿಸಲು ಒಂದು ಒಳ್ಳೇ ಉದಾಹರಣೆ ?
ತಳ್ಳಿಬಿಡಲು ಒಂದು ಕೆಟ್ಟ ಉದಾಹರಣೆ ?
ತಂದೆಯಾದ ದೇವರ ಬಗ್ಗೆ ಒಂದು ಹೊಸ ವಿಚಾರ ?
ಕುಮಾರನಾದ ದೇವರ ಬಗ್ಗೆ ಒಂದು ಹೊಸ ವಿಚಾರ ?
ಪವಿತ್ರಾತ್ಮನಾದ ದೇವರ ಬಗ್ಗೆ ಒಂದು ಹೊಸ ವಿಚಾರ ?
ಸೈತಾನನ ವ್ಯಕ್ತಿತ್ವದಲ್ಲಿ ಒಂದು ಹೊಸ ಒಳನೋಟ ?
ಸೈತಾನನ ಕ್ರೂರ ಗುರಿಗಳಲ್ಲಿ ಒಂದು ಹೊಸ ಒಳನೋಟ ?
ಸೈತಾನನ ಸೂಕ್ಷ್ಮವಾದ ತಂತ್ರಗಳಲ್ಲಿ ಒಂದು ಹೊಸ ಒಳನೋಟ ?

**''ವಾಕ್ಯದ ಪ್ರಕಾರ ನಡೆಯುವವರಾಗಿರಿ ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ... ಆದರೆ ಬಿಡುಗಡೆಯನ್ನುಂಟು ಮಾಡುವ ಸರ್ವೋತ್ತಮ ಧರ್ಮ ಪ್ರಮಾಣವನ್ನು ಲಕ್ಷ್ಯಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು''  (ಯಾಕೋಬ 1:22, 25)**

# ದೈನಂದಿನ ಪ್ರಾರ್ಥನಾ ಮಾರ್ಗದರ್ಶಿ

ಸುಮಾರು ಐವತ್ತು ವರ್ಷಗಳ ಹಿಂದೆ ನಾನು ಕ್ರಿಸ್ತನಿಗಾಗಿ ಮಾರ್ಪಾಟು ಹೊಂದಿದ ನಂತರದಿಂದ ಸುವಾರ್ತಿಕರಾದ ಥೊಮಸ್ ಬಿ. ರೀಜ ಅವರಿಂದ ಮೊದಲು ನಮಗೆ ಸೂಚಿಸಲ್ಪಟ್ಟ ಅನುದಿನದ ಸರಣಿ ಯನ್ನು ನಮ್ಮ ಅನುದಿನದ ಪರಾರ್ಥ ಪ್ರಾರ್ಥನೆಯಲ್ಲಿ ನಾನು ಮತ್ತು ಡೊರೊತಿ ಸಹಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ.

ದೇವರ ವಾಕ್ಯದ ಮೇಲೆ ನಮ್ಮ ಪ್ರಾಣಗಳಿಗೆ ಉಣ್ಣಿಸಿದ ನಂತರ ಮತ್ತು ತಲೆಯಿಂದ ಹೃದಯಕ್ಕೆ ಪ್ರಾರ್ಥಿಸಿದ ಮೇಲೆ, ಬೇಡಿಕೆಯ ಪ್ರಾರ್ಥನೆಯು ಸಚೇತನಗೊಳ್ಳುತ್ತದೆ. ಹುರುಳಿಲ್ಲದ ಅನುದಿನದ ವಾಡಿಕೆಯ ಬದಲು, ಇತರರಿಗಾಗಿ ಬೇಡಿಕೊಳ್ಳುವುದು ಕೃತಜ್ಞತಾ ಸ್ತುತಿಯ, ಅವರಿಗಾಗಿ ಆಸಕ್ತಿಯ ಮತ್ತು ಪರಾರ್ಥ ವಿಜ್ಞಾಪನೆಯ ಸಮಯವಾಗುವುದು, ಈ ರೀತಿಯಲ್ಲಿ ನಮಗೆ ಪ್ರಾರ್ಥನಾ ಚಿಂತನೆಗಳ ದಾಖಲೆಯ ಯಾದಿಯು ಇಲ್ಲದಿದ್ದರೂ, ಯಾವುದೇ ಇರಲಿ ಎಲ್ಲಾ ತಕ್ಷಣದ ಪ್ರಾರ್ಥನಾ ಅಗತ್ಯತೆಗಳನ್ನು ಒಳಗೊಂಡಿರು ವಂತೆ ನಮ್ಮ ಪ್ರಾರ್ಥನೆಯ ಸಮಯವನ್ನು ಪವಿತ್ರಾತ್ಮನು ವಿಸ್ತರಿಸುವ ನೆಂದು ನಾವು ನಂಬುತ್ತೇವೆ,

> **''ಯಾವ ಸಂಬಂಧವಾಗಿಯೂ ಚಿಂತೆ ಮಾಡಿದ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನು ಪ್ರಾರ್ಥನೆ ವಿಜ್ಞಾಪನೆ ಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯ ಪಡಿಸಿರಿ'' (ಪಿಲಿಪ್ಪಿ 4:6)**

**ಟಿಪ್ಪಣಿ** : ಮುಂದಿನ ದೈನಂದಿನ ಪ್ರಾರ್ಥನಾ ಮಾರ್ಗದರ್ಶಿಯು ವೈಯಕ್ತಿಕ ಸ್ವಭಾವದ ಚಿಂತನೆಗಳಿಗಾಗಿ ಇಲ್ಲವೇ ಅನುದಿನವೂ ಉದ್ಭವಿಸುವ ವಿಷಯಗಳಿಗಾಗಿ ಪ್ರಾರ್ಥಿಸುವದನ್ನು ಕೂಡಿಸಿಕೊಳ್ಳಬೇಕು.

| | | |
|---|---|---|
| **ಸೋಮವಾರ**<br>*ಮಿಶನರಿಗಳಿಗಾಗಿ* | : | ದೇವರಿಗೆ ಆಸಕ್ತಿಯಿರುವ ಮತ್ತು ನಾವು ಒಳಗೊಂಡಿರುವ ಸೇವೆಗಳಲ್ಲಿಯ ಮಿಶನರಿಗಳಿಗಾಗಿ. |
| **ಮಂಗಳವಾರ**<br>*ಕೃತಜ್ಞತಾ ಸ್ತುತಿ* | : | ಆತನಿರುವ ಎಲ್ಲದಕ್ಕಾಗಿ ; ಆತನು ಮಾಡಿದ ಎಲ್ಲದಕ್ಕಾಗಿ, ಆತನು ಮಾಡುವ ಎಲ್ಲದಕ್ಕಾಗಿ ಮತ್ತು ಆತನು ಕೊಟ್ಟ ಎಲ್ಲದಕ್ಕಾಗಿ ಕೃತಜ್ಞತಾ ಸ್ತುತಿ ಸಲ್ಲಿಸುವ ಮತ್ತು ಆರಾಧಿಸುವ ಸಮಯ. |
| **ಬುಧವಾರ**<br>*ಸೇವಕರಿಗಾಗಿ* | : | ಸಭಾಪಾಲಕರು ; ಸುವಾರ್ತಿಕರು ; ಬೈಬಲ್ ಬೋಧಕರು ಮತ್ತು ಕ್ರೈಸ್ತ ಸೇವಕರು. |
| **ಗುರುವಾರ**<br>*ಕರ್ತವ್ಯಗಳಿಗಾಗಿ* | : | ಮನೆತನದ ಜವಾಬ್ದಾರಿಕೆಗಳು ; ಸೇವಾ ಕರ್ತವ್ಯಗಳು ; ಹಣಕಾಸಿನ ಜವಾಬ್ದಾರಿಕೆಗಳು ಇತ್ಯಾದಿ. |
| **ಶುಕ್ರವಾರ**<br>*ಕುಟುಂಬಕ್ಕಾಗಿ* | : | ನಮ್ಮ ಸ್ವಂತ ಚಿಕ್ಕ ಕುಟುಂಬಕ್ಕಾಗಿ ಮತ್ತು ನಮ್ಮ ಬಂಧುಗಳೂ ಡೊರೊತಿಗೂ ನನಗೂ ನಮ್ಮ ಮಕ್ಕಳಂತೆ, ಮೊಮ್ಮಕ್ಕಳಂತೆ ತಮ್ಮನ್ನು ಸಂಬಂಧಿಸಿಕೊಂಡಿರುವ ಎಲ್ಲರೂ ಒಳಗೊಂಡ ಹೆಚ್ಚು ದೊಡ್ಡ ಕುಟುಂಬಕ್ಕಾಗಿ. |
| **ಶನಿವಾರ**<br>*ಪಾಪಿಗಳಿಗಾಗಿ* | : | ಜಗತ್ತಿನಲ್ಲೆಲ್ಲಾ Your Quest for God ದ ಸೇವೆಗಾಗಿ ; ಬೀದಿಗಳಲ್ಲಿ ನಾವು ಭೇಟಿಯಾಗಿ ಸಾಕ್ಷಿಕೊಟ್ಟವರಿಗಾಗಿ, ಕ್ರಿಸ್ತನ ಹೊರಗಿರುವ ಕುಟುಂಬದ ಸದಸ್ಯರಿಗಾಗಿ, ಇತ್ಯಾದಿ. |
| **ಭಾನುವಾರ**<br>*ಭಕ್ತರಿಗಾಗಿ* | : | ಇತ್ತೀಚೆಗೆ ರಕ್ಷಕನನ್ನು ಕಂಡುಕೊಂಡ ನಮಗೆ ಪರಿಚಿತರಾಗಿರುವ ಜನರಿಗಾಗಿ ; ನಮ್ಮ ಜೀವಿತ ಗಳನ್ನು ದೇವರ ಮುಖಾಂತರ ವೃದ್ಧಿಗೊಳಿಸಿದ ಪ್ರಾರ್ಥನಾ ಸಹಭಾಗಿಗಳಿಗಾಗಿ ; ಹಿಂಸಿ ಸಲ್ಪಡುತ್ತಿರುವ ಸಭೆಗಾಗಿ - ಅವರ ಬಗ್ಗೆ ವಿವರವಾದ ಮಾಹಿತಿಯನ್ನು ಆಸಕ್ತಿಯಿಂದ ಹುಡುಕುತ್ತಿದ್ದೇವೆ, ಮತ್ತು ಇಂದು ಸಭೆಯಲ್ಲಿ ಭಕ್ತಿ ಸಂಜೀವನಕ್ಕಾಗಿ. |




ರಕ್ಷಣೆಯ ದೇವರ ಮಾರ್ಗದ
ಹೆಚ್ಚು ಸಂಪೂರ್ಣ ವಿವರಣೆಯನ್ನು
ನೀನು ಅಪೇಕ್ಷಿಸಿದರೆ,
ಗ್ರಂಥಕರ್ತನು ಒಂದು
ಪುಸ್ತಕವನ್ನು ಬರೆದಿರುವನು.

# ದೇವರಿಗಾಗಿ ನಿನ್ನ ಅನ್ವೇಷಣೆ

**ದೇವರಿಗಾಗಿ ನಿನ್ನ ಅನ್ವೇಷಣೆಯು ಸುವಾರ್ತಾ ಸೇವೆಗಾಗಿ ನಿನ್ನ ಉಪಕರಣವಾಗಿರುವುದು**

**''ಇಪ್ಪತ್ತು ವರುಷಗಳಿಂದ ಈ ಪುಸ್ತಕಕ್ಕಾಗಿ ನಾನು ಪ್ರಾರ್ಥಿಸುತ್ತಿದ್ದೆನು''**

- ಜಾರ್ಜ್ ವೆರ್ವರ,

ಸಂಸ್ಥಾಪಕರು. ಓಪರೇಶನ್ ಮೊಬಿಲಿಜೇಶನ್.

**www.ccim-media.com**